ರಾಷ್ಟ್ರ ಜಾಗೃತಿಯ ದೈನಿಕ

# ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಹುಬ್ಬಳ್ಳಿ
ಶುಕ್ರವಾರ, 26 ಜೂನ್ 2026
ಸಂಪುಟ 16, ಸಂಚಿಕೆ 93, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

15ರ ವೈಭವಕ್ಕೆ ಕಾಯುತ್ತಿದೆ ಇತಿಹಾಸ!



• ಪುಟ ೪

ಸೂಪರ್ ಎಲ್ ನೀನೋ ಎದುರಿಸಲು ಸಜ್ಜಾಗಿ | ೦೫

ಖಾಲಿ ಹುದ್ದೆಗಳಿಗೆ ತ್ವರಿತ ನೇಮಕಾತಿ | ೦೫

## ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ದಕ್ಷಿಣಾಯನ, ಗ್ರೀಷ್ಮ ಋತು, ನಿಜ ಜ್ಯೇಷ್ಠ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ವಿಶಾಖೆ

## ದಿನದ ಮಾತು

ಅಪಾಯದ ಪರಿಸ್ಥಿತಿಯಲ್ಲಿ ತೋರಿಸುವ ಧೈರ್ಯವೇ ಅರ್ಧ ಗೆಲುವನ್ನು ತಂದು ಕೊಡುತ್ತದೆ.
▲ ನಾಣ್ನುಡಿ

## ಕಿರುಸುದ್ದಿ

ಆ್ಯಪ್ ಮೂಲಕ ಅನರ್ಹ ಪಿಂಚಣಿದಾರರ ಪರಿಶೀಲನೆ
• ಪುಟ ೫

ದಂಗೆ ಎದ್ದ ಪಿಒಕೆಗೆ ಪಾಕಿಸ್ತಾನ ದಿಗ್ಬಂಧನ
• ಪುಟ ೭

ವೆನೆಜುವೆಲಾ ಭೂಕಂಪನ: 164 ಮಂದಿ ಸಾವು
• ಪುಟ ೭

ಪೋಲಿಯೊ ಮುಕ್ತ ಭಾರತ ಸಾಧನೆ ನಿರಂತರ
• ಪುಟ ೫

ಒಮ್ಮತದ ಐತಿಹಾಸಿಕ ತೀರ್ಮಾನ: ಡಿಕೆಶಿ
• ಪುಟ ೫

ವಾರ್ತಾ ಆಯುಕ್ತರಾಗಿ ಅನುಚೇತ್ ಅಧಿಕಾರ ಸ್ವೀಕಾರ
• ಪುಟ ೫

### ತುಂಗಭದ್ರಾ ಡ್ಯಾಂ ನೂತನ 33 ಕ್ರಸ್ಟ್ ಗೇಟ್‌ಗಳ ಲೋಕಾರ್ಪಣೆ

### ದೇಶದ ಅಣೆಕಟ್ಟುಗಳ ನೀರು ಸಂಗ್ರಹ ಹೆಚ್ಚಿಸಲು ಕೇಂದ್ರ ಸಿದ್ಧತೆ

# ಹೂಳೆತ್ತಲು ಯೋಜನೆ



ನವಲಿ ಡ್ಯಾಂ ನಿರ್ಮಾಣ ಇರಬಹುದು ಅಥವಾ ಜಲಾಶಯದಲ್ಲಿ ಶೇಖರಣೆಯಾಗಿರುವ ಹೂಳನ್ನು ತೆಗೆದು ನೀರನ್ನು ಸಂರಕ್ಷಿಸುವ ವಿಚಾರವಾಗಿರಬಹುದು. ಇವೆಲ್ಲದರ ಬಗ್ಗೆ ಗಂಟೆಗಳ ಕಾಲ ಸುದೀರ್ಘವಾಗಿ ಹಾಗೂ ವ್ಯಾಪಕವಾಗಿ ಚರ್ಚೆ ನಡೆಸಲಾಗಿದೆ. ರೈತರ ಹಿತವನ್ನು ಕಾಯಲು ಮತ್ತು ಅವರ ರಕ್ಷಣೆ ಮಾಡಲು ನಾವೆಲ್ಲರೂ ಸೇರಿ ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದೇವೆ.
■ ಡಿ.ಕೆ.ಶಿವಕುಮಾರ್, ಮುಖ್ಯಮಂತ್ರಿ

• **ಕೊಪ್ಪಳ:** ದೇಶದಾದ್ಯಂತ ಇರುವ ಬಹುತೇಕ ಅಣೆಕಟ್ಟುಗಳಲ್ಲಿ ಶೇ.15ಕ್ಕಿಂತಲೂ ಹೆಚ್ಚು ಹೂಳು ತುಂಬಿಕೊಂಡಿದ್ದು, ಇದರಿಂದ ಜಲಾಶಯಗಳ ನೀರು ಸಂಗ್ರಹಣಾ ಸಾಮರ್ಥ್ಯ ಗಣನೀಯವಾಗಿ ಕುಸಿದಿದೆ. ದೇಶದ ಅಣೆಕಟ್ಟುಗಳಿಂದ ಹೂಳು ತೆಗೆಯುವ ಬೃಹತ್ ಯೋಜನೆಯೊಂದನ್ನು ಕೇಂದ್ರ ಸರ್ಕಾರ ಸಿದ್ಧಪಡಿಸುತ್ತಿದೆ ಎಂದು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಹೇಳಿದರು.

ಜಲಸಂಪನ್ಮೂಲ ಇಲಾಖೆ ಹಾಗೂ ತುಂಗಭದ್ರಾ ಮಂಡಳಿಯ ಸಹಯೋಗದಲ್ಲಿ ಮುನಿರಾಬಾದ್‌ನ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಲಾಗಿದ್ದ ತುಂಗಭದ್ರಾ ಜಲಾಶಯದ ನೂತನ 33 ಕ್ರಸ್ಟ್ ಗೇಟುಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜಲಶಕ್ತಿ ಸಚಿವಾಲಯವು ಹೂಳು ತೆಗೆಯುವ ವಿಶೇಷ ಯೋಜನೆಯನ್ನು ರೂಪಿಸುತ್ತಿದೆ. ಈ ಯೋಜನೆಯ ತಾಂತ್ರಿಕ ಸಹಯೋಗವನ್ನು ಕೇಂದ್ರ ಸರ್ಕಾರ ನೀಡಲಿದ್ದು, ಅನುಷ್ಠಾನದ ಜವಾಬ್ದಾರಿಯನ್ನು ಆಯಾ ರಾಜ್ಯ ಸರ್ಕಾರಗಳು ಹೊರಬೇಕಾಗುತ್ತದೆ. ಈ ಯೋಜನೆ ಯಶಸ್ವಿಯಾದರೆ ತುಂಗಭದ್ರಾ ಜಲಾಶಯದ ನೀರು ಸಂಗ್ರಹಣಾ ಸಾಮರ್ಥ್ಯವನ್ನು ಶೇ.25ರಿಂದ 30ರಷ್ಟು ಹೆಚ್ಚಿಸಬಹುದಾಗಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ➡ ಪುಟ ೪

### ಗೋದಾವರಿ-ಕಾವೇರಿ ನದಿಗಳ ಜೋಡಣೆ: ಆಂಧ್ರ ಸಿಎಂ ನಾಯ್ಡು

ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು ಮಾತನಾಡಿ, ಕೇಂದ್ರ ಸರ್ಕಾರವು ಈಗಾಗಲೇ ಉತ್ತರ ಪ್ರದೇಶ ಮತ್ತು ಮಧ್ಯಪ್ರದೇಶದ ನಡುವಿನ 'ಕೆನ್-ಬೆತ್ವಾ' ಯೋಜನೆ ಹಾಗೂ ರಾಜಸ್ಥಾನ ಮತ್ತು ಮಧ್ಯಪ್ರದೇಶದ ನಡುವಿನ 'ಪಾರ್ವತಿ- ಕಾಳಿಸಿಂಧು-ಚಂಬಲ್' ನದಿ ಜೋಡಣೆ ಯೋಜನೆಗಳನ್ನು ಯಶಸ್ವಿಯಾಗಿ ಕೈಗೆತ್ತಿಕೊಂಡಿದೆ. ಇದೇ ಮಾದರಿಯಲ್ಲಿ, ದಕ್ಷಿಣ ಭಾರತದ ಪ್ರಮುಖ ನದಿಗಳಾದ ಗೋದಾವರಿ ಮತ್ತು ಕಾವೇರಿ ನದಿಗಳ ಜೋಡಣೆ ಯೋಜನೆ ಯನ್ನು ಕೇಂದ್ರವು 'ರಾಷ್ಟ್ರೀಯ ಯೋಜನೆ'ಯಾಗಿ ಪರಿಗಣಿಸಿ ಅನುಷ್ಠಾನಕ್ಕೆ ತರಬೇಕು ಎಂದು ಕೇಂದ್ರಕ್ಕೆ ಮನವಿ ಮಾಡಿದರು.

### ತಲೆಮಾರುಗಳ ಸಮಸ್ಯೆಗೆ ಮುಕ್ತಿ: ತೆಲಂಗಾಣ ಸಿಎಂ

ಬಳ್ಳಾರಿ, ಅನಂತಪುರ, ಕರ್ನೂಲ್ ಹಾಗೂ ಪಾಲಮೂರು ಜಿಲ್ಲೆಗಳ ವಲಸೆ ಸಮಸ್ಯೆಗಳು ಮತ್ತು ರೈತರ ಸಂಕಷ್ಟಗಳ ಸರ್ಕಾರಗಳಿಗೆ ಸಂಪೂರ್ಣ ಅರಿವಿದೆ. ಜಲಾನಯನ ಪ್ರದೇಶದ ಮೂರು ತಲೆಮಾರುಗಳ ಸಮಸ್ಯೆಗೆ ಈ 33 ಗೇಟುಗಳ ನೂತನ ಅಳವಡಿಕೆ ಮತ್ತು ಆಧುನೀಕರಣವು ಮುಕ್ತಿ ನೀಡಲಿದೆ. ಲಕ್ಷಾಂತರ ರೈತರ ಕಣ್ಣೀರು ಒರೆಸುವ ನಿಟ್ಟಿನಲ್ಲಿ ಇದೊಂದು ದೊಡ್ಡ ಪರಿಹಾರವಾಗಲಿದೆ ಎಂದು ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಹೇಳಿದರು.



## ಖರ್ಗೆ ಕುಟುಂಬದಿಂದ ಭೂ ಕಬಳಿಕೆ: ಆರೋಪ

• **ಹೊಸದಿಲ್ಲಿ:** ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಅವರ ಪುತ್ರ, ಗೃಹ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಬಿಜೆಪಿ ಗಂಭೀರ ಭೂ ಹಗರಣದ ಆರೋಪಗಳನ್ನು ಮಾಡಿದೆ.

**ಸಿದ್ಧಾರ್ಥ್ ವಿಹಾರ್ ಟ್ರಸ್ಟ್ ಮೂಲಕ ಅಕ್ರಮ: ಬಿಜೆಪಿ**



ಬಿಜೆಪಿ ರಾಷ್ಟ್ರೀಯ ವಕ್ತಾರ ಪ್ರದೀಪ್ ಭಂಡಾರಿ ಬುಧವಾರ ಹೊಸದಿಲ್ಲಿಯಲ್ಲಿ ಸುದ್ದಿಗೋಷ್ಠಿ ನಡೆಸಿ, ಖರ್ಗೆ ಕುಟುಂಬದೊಂದಿಗೆ ಸಂಬಂಧ ಹೊಂದಿರುವ ಸಿದ್ಧಾರ್ಥ್ ವಿಹಾರ್ ಟ್ರಸ್ಟ್ ಮೂಲಕ ಕರ್ನಾಟಕದಲ್ಲಿ ಹಲವು ಜಮೀನುಗಳನ್ನು ಅಕ್ರಮವಾಗಿ ಪಡೆದುಕೊಳ್ಳಲಾಗಿದೆ ಎಂದು ಆರೋಪಿಸಿದರು.

2024ರಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ(ಕೆಐಎಡಿಬಿ) ವತಿಯಿಂದ ಏರೋಸ್ಪೇಸ್ ಮತ್ತು ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಉದ್ದೇಶಕ್ಕಾಗಿ ಮೀಸಲಿಡಲಾಗಿದ್ದ ಸುಮಾರು 100 ಕೋಟಿ ರೂ. ಮೌಲ್ಯದ ಐದು ಎಕರೆ ಭೂಮಿಯನ್ನು ಸಿದ್ಧಾರ್ಥ್ ವಿಹಾರ್ ಟ್ರಸ್ಟ್‌ಗೆ ಹಂಚಿಕೆ ಮಾಡಲಾಗಿದೆ. ಆದರೆ, ಆ ಭೂಮಿಯಲ್ಲಿ ಉದ್ದೇಶಿತ ಸಂಶೋಧನಾ ಚಟುವಟಿಕೆಗಳನ್ನು ನಡೆಸಲಾಗುತ್ತಿಲ್ಲ ಎಂದು ಅವರು ದೂರಿದರು. ➡ ಪುಟ ೪

## ಸಂವಿಧಾನದ ಮೇಲಿನ ನೇರ ದಾಳಿ: ಮೋದಿ

• **ಹೊಸದಿಲ್ಲಿ:** ನಾಗರಿಕರ ಸ್ವಾತಂತ್ರ್ಯಗಳನ್ನು ಅಮಾನತುಗೊಳಿಸಿದ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕತ್ತರಿ ಹಾಕಿದ, ರಾಜಕೀಯ ನಾಯಕರು, ಪತ್ರಕರ್ತರು, ಸಾಮಾಜಿಕ ಕಾರ್ಯಕರ್ತರನ್ನು ಅನ್ಯಾಯವಾಗಿ ಬಂಧಿಸಿ ಸೆರೆಮನೆಗೆ ನೂಕಿದ ಮತ್ತು ಭಾರತೀಯ ಪ್ರಜಾಸತ್ತೆಯ



ಅಡಿಗಲ್ಲಾಗಿರುವ ಸಂಸ್ಥೆಗಳಿಗೆ ಮಾರಕ ಹಾನಿ ಎಸಗಿದ ತುರ್ತು ಪರಿಸ್ಥಿತಿಯು ಸಂವಿಧಾನದ ಮೇಲಿನ ನೇರ ದಾಳಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಆರೋಪಿಸಿದ್ದಾರೆ. ಭಾರತದ ಚರಿತ್ರೆಯಲ್ಲೇ ಅತ್ಯಂತ ಕರಾಳ ಅಧ್ಯಾಯವಾಗಿರುವ ತುರ್ತು ಪರಿಸ್ಥಿತಿ ವಿರೋಧಿಸಿ ನಿರಂತರ ದಿಟ್ಟತನದಿಂದ ಪ್ರಜಾತಾಂತ್ರಿಕ ಮೌಲ್ಯಗಳ ರಕ್ಷಿಸಿದವರೆಲ್ಲರಿಗೂ ನಮನ ಸಲ್ಲಿಸಿದ ಮೋದಿ, ತುರ್ತು ಪರಿಸ್ಥಿತಿ ನಮ್ಮ ಘನ ಸಂವಿಧಾನ ಮೇಲಾದ ನೇರ ದಾಳಿ. ➡ ಪುಟ ೪

**೯ನೇ ತರಗತಿ ಸಮಾಜ ವಿಜ್ಞಾನದಲ್ಲಿ ತುರ್ತು ಪರಿಸ್ಥಿತಿ ಪಾಠ** • ಪುಟ ೭

## ಕಿರುಸುದ್ದಿ

### ಆದೇಶ ಹಿಂಪಡೆಯಿರಿ

**ಹುಬ್ಬಳ್ಳಿ:** ರಾಜ್ಯ ಸರ್ಕಾರ ಕರ್ನಾಟಕ ಸಾಮಾನ್ಯ ಸೇವೆಗಳು (ಪದವಿ ಪೂರ್ವ ಶಿಕ್ಷಣ ನೇಮಕಾತಿ ತಿದ್ದುಪಡಿ ಕರುಡು ನಿಯಮಗಳು- 2026) ಆದೇಶವನ್ನು ಮಾಡಿದ್ದು ಖಂಡನೀಯ. ಕೂಡಲೇ ಈ ಆದೇಶವನ್ನು ಹಿಂಪಡೆಯಬೇಕು ಎಂದು ಧಾರವಾಡ ಜಿಲ್ಲಾ ಪ್ರಾಚಾರ್ಯರ ಸಂಘದ ಅಧ್ಯಕ್ಷ ಆರ್.ಕೆ. ರಂಗಣ್ಣವರ ಹೇಳಿದರು.

ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದು ವಾರದೊಳಗಾಗಿ ಸರ್ಕಾರ ಆದೇಶ ಹಿಂಪಡೆದಿದ್ದಲ್ಲಿ ಬೆಂಗಳೂರಿನ ಫ್ರಿಡಂ ಪಾರ್ಕ್ ನಲ್ಲಿ ಜುಲೈ ಮೊದಲ ವಾರ ಹೋರಾಟ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು. ರಾಜ್ಯ ಸರ್ಕಾರ ಪದವಿಪೂರ್ವ ಉಪನ್ಯಾಸಕರಿಗೆ ಮುಂಬಡ್ತಿ ನೀಡುವ ಬದಲಾಗಿ ಹಿಂಬಡ್ತಿ ನೀಡುವ ಕಾರ್ಯಕ್ಕೆ ಮುಂದಾಗಿದ್ದು, 9 ಮತ್ತು 10ನೇ ತರಗತಿಗಳಿಗೆ ಪಿಯು ಉಪನ್ಯಾಸಕರು ಪಾಠ ಮಾಡಬೇಕೆಂದು ಆದೇಶ ಮಾಡಿದೆ. ಈ ಆದೇಶಕ್ಕೆ ವಿರೋಧಗಳಿದ್ದರೆ ಒಂದು ವಾರದಲ್ಲಿ ತಿಳಿಸಲು ಸರ್ಕಾರ ಸೂಚನೆ ನೀಡಿದೆ. ಈಗಾಗಲೇ ಸುಮಾರು ಐದು ಲಕ್ಷಕ್ಕೂ ಅಧಿಕ ವಿರೋಧ ಅರ್ಜಿಗಳನ್ನು ನಾವು ಸಲ್ಲಿಸಿದ್ದೇವೆ. ಇದು ಸಂಪೂರ್ಣವಾಗಿ ಏಕಪಕ್ಷೀಯ ನಿರ್ಧಾರವಾಗಿ ಸರ್ಕಾರ ಆದೇಶ ಮಾಡಿದ್ದು, ಕೂಡಲೇ ಈ ಆದೇಶವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಸಂದೀಪ ಬೂದಿಹಾಳ ಮಾತನಾಡಿ, ರಾಜ್ಯ ಸರ್ಕಾರ ಪಿಯುಸಿ ಉಪನ್ಯಾಸಕರಿಗೆ ಹಿಂಬಡ್ತಿ ನೀಡಿದಂತೆ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ಬೋಧಿಸಬೇಕೆಂದು ಹೇಳುತ್ತಿದ್ದು ಮುಂದಿನ ದಿನ ಎಲ್ ಕೆಜಿ ವಿದ್ಯಾರ್ಥಿಗಳಿಗೆ ಬೋಧಿಸಿ ಎಂದು ಹೇಳಿದರೂ ಅಚ್ಚರಿ ಪಡಬೇಕಾಗಿಲ್ಲ ಎಂದರು. ಡಾ. ಮಲ್ಲಿಕಾರ್ಜುನ ಅಂಗಡಿ, ಡಿ. ಹನುಮಂತಪ್ಪ, ಮಂಜುನಾಥ ಅರಬಘಟ್ಟಿ, ಗಾಯತ್ರಿ ಹುದ್ದಾರ, ಶಾಂತೇಶ ಕೆಂಚಣ್ಣವರ ಇದ್ದರು.

### ಸೊಸೈಟಿಗೆ ದಂಡ

**ಧಾರವಾಡ:** ಸೊಸೈಟಿಯಲ್ಲಿ ಠೇವಣಿ ಇರಿಸಿದ ಹಣ ಕೊಡದೆ ಗ್ರಾಹಕರಿಗೆ ಮೋಸ ಮಾಡುವ ಮೂಲಕ ಸೇವಾ ನ್ಯೂನ್ಯತೆ ಎಸಗಿರುವ ಡಾ. ವಿ.ಎಸ್.ಸಾಧುನವರ ಸೊಸೈಟಿಗೆ ಜಿಲ್ಲಾ ಗ್ರಾಹಕ ಆಯೋಗ ದಂಡ ಹಾಗೂ ಪರಿಹಾರ ನೀಡುವಂತೆ ಘೋಷಿಸಿದೆ. ಧಾರವಾಡದ ವಿಜಯಲಕ್ಷ್ಮಿ ಮತ್ತು ಬಸನಗೌಡ ಪಾಟೀಲ, ಶ್ರೀದೇವಿ ದೇಸಾಯಿ ಮತ್ತು ಕಸ್ತೂರಿ ಚಂದನಗೌಡರ ಎಂಬುವರು ಡಾ.ವಿ.ಎಸ್.ಸಾಧುನವರ ಸೊಸೈಟಿ ಸದಸ್ಯರಾಗಿ ವಿವಿಧ ಮೊತ್ತಗಳ ಠೇವಣಿಗಳ ಜೊತೆಗೆ ಉಳಿತಾಯ ಖಾತೆ ಕೂಡ ಹೊಂದಿದ್ದರು. ವೈಯಕ್ತಿಕ ಅಡಚಣೆಗೆ ಹಣ ಬೇಕಾದ ಹಿನ್ನೆಲೆ ದಂಪತಿ ಠೇವಣಿ ಹಣವನ್ನು ವಾಪಸ್ ಕೇಳಿದ್ದು, ಹಣ ನೀಡದೆ ಸತಾಯಿಸುತ್ತ ಮೋಸ ಮಾಡಲು ಯತ್ನಿಸುತ್ತಿದ್ದಾರೆ ಎಂದು ಆರೋಪಿಸಿ ಸೊಸೈಟಿ ಅಧ್ಯಕ್ಷ ವಿ.ಎಸ್.ಸಾಧುನವರ ಮೇಲೆ ಗ್ರಾಹಕ ಆಯೋಗಕ್ಕೆ ದೂರು ನೀಡಿದ್ದರು. ವಿಚಾರಣೆ ನಡೆಸಿದ ಜಿಲ್ಲಾ ಗ್ರಾಹಕರ ಆಯೋಗದ ಅಧ್ಯಕ್ಷ ಈಶಪ್ಪ ಭೂತೆ ಮತ್ತು ಸದಸ್ಯರಾದ ವಿಶಾಲಾಕ್ಷಿ ಬೋಳಶೆಟ್ಟಿ ಹಾಗೂ ಪ್ರಭು ಹಿರೇಮಠ, ಸೊಸೈಟಿಯಲ್ಲಿ ಎಫ್ ಡಿ, ಉಳಿತಾಯ ಖಾತೆ ಜೊತೆಗೆ ಮೊತ್ತ ಇರುವುದನ್ನು ಕೂಡ ಆಯೋಗಕ್ಕೆ ದೃಢಪಟ್ಟಿದೆ. ಗ್ರಾಹಕರಿಗೆ ಠೇವಣಿ ಹಣ ನೀಡದ ಸೊಸೈಟಿ ಕಾರ್ಯ ಸೇವಾ ನ್ಯೂನ್ಯತೆ ಎಂದು ಅಭಿಪ್ರಾಯಪಟ್ಟ ಆಯೋಗ, ಗ್ರಾಹಕರ ರೂ.15 ಲಕ್ಷ ರೂಪಾಯಿಗೆ ಬಡ್ಡಿ ಸೇರಿ ತೀರ್ಪು ನೀಡಿದ ತಿಂಗಳೊಳಗಾಗಿ ನೀಡಬೇಕು ಎಂದು ಆಯೋಗವು ತೀರ್ಪು ನೀಡಿದೆ. ಅಲ್ಲದೇ ಗ್ರಾಹಕರಿಗೆ ಮಾನಸಿಕವಾಗಿ ಹಿಂಸೆ ನೀಡಿದಕ್ಕೆ ತಲಾ ರೂ.50 ಸಾವಿರ ಪರಿಹಾರದ ಜೊತೆಗೆ ತಲಾ ರೂ.10 ಸಾವಿರ ಪ್ರಕರಣದ ವೆಚ್ಚವನ್ನು ನೀಡಲು ಸೊಸೈಟಿ ಅಧ್ಯಕ್ಷ ಡಾ. ವಿ.ಎಸ್.ಸಾಧುನವರ ಅವರಿಗೆ ಆಯೋಗ ನಿರ್ದೇಶನ ನೀಡಿದೆ.

### ಸರ್ವರೂ ಸಚಿವರಾಗಲು ಅರ್ಹರು: ಲಾಡ್

**ಹುಬ್ಬಳ್ಳಿ:** ದೇಶದಲ್ಲಿ ಎಸ್ಐಆರ್ ಆರಂಭವಾಗಿದ್ದು, ಪಶ್ಚಿಮ ಬಂಗಾಳ, ಹರಿಯಾಣ, ಒಡಿಸಾ ಸೇರಿದಂತೆ ವಿವಿಧ ರಾಜ್ಯದಲ್ಲಿ ಲಕ್ಷಾಂತರ ಮತದಾರರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಈಗ ರಾಜ್ಯದಲ್ಲಿ ಸುಮಾರು 60 ಲಕ್ಷ ಮತದಾರರನ್ನು ತೆಗೆಯುವ ಹುನ್ನಾರ ನಡೆದಿದೆ ಎಂದು ಶಾಸಕ ಸಂತೋಷ ಲಾಡ್ ಆರೋಪಿಸಿದರು.



ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಿಜೆಪಿಯು ಸಾಮಾಜಿಕ ಜಾಲತಾಣಗಳಲ್ಲಿರುವ ಕಾಂಗ್ರೆಸ್ ನಾಯಕ ಅನುಯಾಯಿಗಳ ಮಾಹಿತಿ ಎಐ ಮಾದರಿಯ ಸಾಫ್ಟವೇರ್ ಮೂಲಕ ಸಂಗ್ರಹಿಸುತ್ತಿದ್ದು, ಅವರ ಹೆಸರು ಮತದಾರರ ಪಟ್ಟಿಯಿಂದ ತೆಗೆಯುವ ಹುನ್ನಾರ ನಡೆಸಿದೆ ಎಂದು ಆರೋಪಿಸಿದರು.

ಮತದಾರರ ಪಟ್ಟಿಯನ್ನು ಡಿಜಿಟಲ್ ಮಾದರಿಯಲ್ಲಿ ನೀಡಲು ಕೇಂದ್ರ ಸರ್ಕಾರಕ್ಕೆ ಏಕೆ ಸಾಧ್ಯವಾಗುತ್ತಿಲ್ಲ ಎಂದು ಪ್ರಶ್ನಿಸಿದ ಅವರು, ಕಾನೂನು ಬದ್ಧವಾಗಿರುವ ಆಧಾರ್ ಕಾರ್ಡ್ ಅನ್ನು ಮತದಾರರ ಪಟ್ಟಿಗೆ ಲಿಂಕ್ ಮಾಡಲು ಯಾಕೆ ಸಾಧ್ಯವಾಗುತ್ತಿಲ್ಲ ಎಂಬುದಕ್ಕೆ ಉತ್ತರಿಸಬೇಕು ಎಂದರು. ಬಿಡದಿಯಲ್ಲಿ ಟೌನ್ ಶಿಪ್ ನಿರ್ಮಾಣ ಯೋಜನೆ ನಿರ್ಧಾರಕ್ಕೂ ಮುನ್ನ ಸರ್ಕಾರ ಸಾಕಷ್ಟು ಅಧ್ಯಯನ ಮಾಡಿರುತ್ತದೆ. ಯೋಜನೆಯ ಸಾಧಕ ಬಾಧಕಗಳನ್ನು ಪರಿಶೀಲಿಸಿ ಮುಖ್ಯಮಂತ್ರಿ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದರು. ಎಲ್ಲ ಶಾಸಕರು ಸಚಿವ ಸ್ಥಾನಕ್ಕೆ ಅರ್ಹರಾಗಿದ್ದಾರೆ. ಅವರಲ್ಲಿ ನಾನೂ ಒಬ್ಬ. ಸಚಿವ ಸಂಪುಟಕ್ಕೆ ಯಾರನ್ನು ಸೇರಿಸಿಕೊಳ್ಳಬೇಕು ಎನ್ನುವುದು ಹೈಕಮಾಂಡ್ ನಿರ್ಧಾರವಾಗಿದ್ದು, ಆದಕ್ಕೆ ಒಪ್ಪಿಕೊಳ್ಳಬೇಕು ಎಂದರು.



ಧಾರವಾಡ: ಮಾಜಿ ಪ್ರಧಾನಿ ಇಂದಿರಾ ಗಾಂಧಿ (1975) ಹೊರಡಿಸಿದ ತುರ್ತು ಪರಿಸ್ಥಿತಿ ವಿರುದ್ಧ ಹೋರಾಡಿ ಸೆರೆವಾಸ ಅನುಭವಿಸಿದ ಕೃಷ್ಣ ಬಾಗಲವಾಡಿ (70) ಹಾಗೂ ಸುರೇಶ ಟೀಕಾರೆ (84) ಅವರನ್ನು ಬಿಜೆಪಿ ಕಾರ್ಯಕರ್ತರು ಸನ್ಮಾನಿಸಿದರು. ಈ ಸಂದರ್ಭದಲ್ಲಿ ಹುಬ್ಬಳ್ಳಿ-ಧಾರವಾಡ ಪ್ರಶ್ಚಿಮ ವಿಧಾನಸಭಾ 74ರ ಬಿಜೆಪಿ ಮುಖಂಡರಾದ ಬಸವರಾಜ ಗರಗ, ಮಂಜುನಾಥ ಮಲ್ಲಿಗವಾಡ, ಪ್ರಮೋದ ಕಾರಕೂನ, ನಾಗರಾಜ ನಾಯಕ, ವಿಜಯ ಸಾಬಳೆ ಇದ್ದರು.

## ಜೂ.28ರಂದು ಹೇಮರೆಡ್ಡಿ ಮಲ್ಲಮ್ಮ ಜಯಂತಿ

**ಹುಬ್ಬಳ್ಳಿ:** ರಡ್ಡಿ ಕ್ಷೇಮಾಭಿವೃದ್ಧಿ ಟ್ರಸ್ಟ್ ವತಿಯಿಂದ ಆರ್.ಎನ್. ಶೆಟ್ಟಿ ಕಲ್ಯಾಣ ಮಂಟಪದಲ್ಲಿ ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ 604ನೇ ಜಯಂತಿ, ಪ್ರತಿಭಾ ಪುರಸ್ಕಾರ ಹಾಗೂ ಸನ್ಮಾನ ಕಾರ್ಯಕ್ರಮ ಜೂ.28ರಂದು ಬೆಳಗ್ಗೆ 10.30ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಫಕೀರಪ್ಪ ತಟ್ಟಿಮನಿ ಹೇಳಿದರು.

ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಕಾರ್ಯಕ್ರಮದಲ್ಲಿ 2025-26ನೇ ಸಾಲಿನಲ್ಲಿ ಧಾರವಾಡ ಜಿಲ್ಲೆಯಲ್ಲಿ ಸರ್ಕಾರಿ ಸೇವೆಯಿಂದ ನಿವೃತ್ತರಾದ ಸಮಾಜದ ಬಾಂಧವರು ಹಾಗೂ ಎಸ್ಎಸ್ಎಲ್‌ಸಿ, ದ್ವಿತೀಯ ಪಿಯುಸಿಯಲ್ಲಿ ಶೇ.75ಕ್ಕಿಂತ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು ಎಂದರು. ಹಾನಗಲ್ಲ ತಾಲೂಕು ಕೂಡಲದ ಮಹೇಶ್ವರ ಶಿವಾಚಾರ್ಯರು ಸಾನ್ನಿಧ್ಯ ವಹಿಸುವರು. ರಡ್ಡಿ ಕ್ಷೇಮಾಭಿವೃದ್ಧಿ ಟ್ರಸ್ಟ್ ಗೌರವ ಅಧ್ಯಕ್ಷ ನಿಂಗನಗೌಡ ಪಾಟೀಲ ಅಧ್ಯಕ್ಷತೆ ವಹಿಸುವರು. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಕಾರ್ಯಕ್ರಮ ಉದ್ಘಾಟಿಸುವರು. ಅತಿಥಿಗಳಾಗಿ ಮಾಜಿ ಸಚಿವ ಸಂತೋಷ ಆಡ್, ಶಾಸಕರಾದ ಜಿ.ಎಸ್. ಪಾಟೀಲ, ಎನ್. ಎಚ್. ಕೋನರಡ್ಡಿ, ಅರವಿಂದ ಬೆಲ್ಲದ, ಪ್ರಸಾದ ಅಬ್ಬಯ್ಯ, ಎಂ.ಆರ್. ಪಾಟೀಲ, ಮಹೇಶ ಟೆಂಗಿನಕಾಯಿ ಭಾಗವಹಿಸುವರು ಎಂದರು. ಟ್ರಸ್ಟ್ ಉಪಾಧ್ಯಕ್ಷ ಬಸವರಾಜ ಕಳಕರೆಡ್ಡಿ, ಪ್ರಧಾನ ಕಾರ್ಯದರ್ಶಿ ಪ್ರಕಾಶ ಬಿದರಣ್ಣವರ, ಮಂಜುನಾಥ ಅಡವಿ, ನಾಗರಾಜ ಗುಡಸಲಮನಿ, ಭರಮರಡ್ಡಿ ಹುಲ್ಲಂಬಿ ಇದ್ದರು.



ಕಲಘಟಗಿ: ತಾಲೂಕಿನ ಬೀರವಳ್ಳಿ ಗ್ರಾಮದ ಪಿಎಂಶ್ರೀ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶಾಲಾ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡರು.

# ಒಟಿಎಸ್ ಜಾರಿಗೆ ಸರ್ವಪಕ್ಷದ ನಿಯೋಗ ಶೀಘ್ರ ಸಚಿವರ ಭೇಟಿ

**ಹುಬ್ಬಳ್ಳಿ:** ಹು-ಧಾ ಮಹಾನಗರ ಪಾಲಿಕೆ ವ್ಯಾಪ್ತಿಯ ನೀರಿನ ಕಂದಾಯ ಬಾಕಿ ಸಂಬಂಧಿದಂತೆ ಒಂದು ಬಾರಿ ಪರಿಹಾರ ಯೋಜನೆ (ಒಟಿಎಸ್) ಜಾರಿಗೆಗೆ ಸರ್ವಪಕ್ಷದ ನಿಯೋಗ ಸರ್ಕಾರ ಹಾಗೂ ನಗರಾಭಿವೃದ್ಧಿ ಸಚಿವರನ್ನು ಜು.4ರ ರೊಳಗೆ ಭೇಟಿ ಮಾಡಿ ಮನವಿ ಮಾಡಲಾಗುವುದು ಎಂದು ಮೇಯರ್ ಜ್ಯೋತಿ ಪಾಟೀಲ ತಿಳಿಸಿದರು.

ಗುರುವಾರ ಹು-ಧಾ ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಒಟಿಎಸ್ ವಿಷಯದ ಮೇಲಿನ ಚರ್ಚೆ ಬಳಿಕ ಈ ಕುರಿತು ಮಾತನಾಡಿದ ಅವರು, ಒಟಿಎಸ್ ಯೋಜನೆ ಜಾರಿಗೆ ಪಾಲಿಕೆಯಲ್ಲಿ ಠರಾವು ಮಾಡಿ ಸರ್ಕಾರಕ್ಕೆ ಈಗಾಗಲೇ ಕಳುಹಿಸಲಾಗಿದೆ. ಸರ್ಕಾರದಿಂದ ಸ್ಪಂದನೆ ದೊರೆಕಿಲ್ಲ. ಆದ್ದರಿಂದ ಸರ್ಕಾರ ಒತ್ತಡ ಹಾಕಲು ನಿಯೋಗ ಭೇಟಿ ಮಾಡಲಿದೆ ಎಂದರು.

ಬಿಜೆಪಿ ಸದಸ್ಯ ತಿಪ್ಪಣ್ಣ ಮಜ್ಜಗಿ ಈ ವಿಷಯ ಪ್ರಸ್ತಾಪಿಸಿ, ನೀರಿನ ಕರ ಬಾಕಿ ಒಂದು ಬಾರಿ ಪರಿಹಾರ ಯೋಜನೆ (ಒಟಿಎಸ್) ಜಾರಿಗೆಗೆ ಸರ್ಕಾರ ಪ್ರಸ್ತಾವ ಸಲ್ಲಿಸಲಾಗಿದ್ದು, ಇಲ್ಲಿಯ ವರೆಗೆ ಯಾವುದೇ ಸ್ಪಂದನೆ ದೊರೆಕಿಲ್ಲ. 324 ಕೋಟಿ ನೀರಿನ ಕರ ಬಾಕಿ ಇದೆ. ಇದರಲ್ಲಿ 195 ಕೋಟಿ ಅಸಲು ಹಾಗೂ 128 ಕೋಟಿ ಬಡ್ಡಿ ಮೊತ್ತವಿದೆ. ಅಸಲು ಪಾವತಿಸಿಕೊಂಡು ಬಡ್ಡಿ ಮನ್ನಾ ಮಾಡಿದರೆ ಗ್ರಾಹಕರಿಗೆ ಅನುಕೂಲ ಆಗುತ್ತದೆ. ಇದರಿಂದ ಪಾಲಿಕೆ ಆದಾಯ ಹೆಚ್ಚಾಗಲಿದ್ದು, ಇನ್ನೂ ಹಲವಾರು ಅಭಿವೃದ್ಧಿ ಕಾರ್ಯ ಮಾಡಲು ಸಾಧ್ಯವಾಗಲಿದೆ ಎಂದರು.

ಮಹಾನಗರ ಪಾಲಿಕೆ ಅಧಿಕಾರಿಗಳು ಇದನ್ನು ಗಂಭೀರವಾಗಿ ಪರಿಗಣಿಸಬೇಕು. ಪಾಲಿಕೆಗೆ ಸಾಕಷ್ಟು ಆರ್ಥಿಕ ಹೊರೆ ಇದೆ. ಈ ಹಣ ಬಂದರೆ ಸ್ವಲ್ಪ ಮಟ್ಟಿಗೆ ಹೊರೆ ಕಡಿಮೆಯಾಗಲಿದೆ. ರಾಜ್ಯ ಸರ್ಕಾರ ಪಾಲಿಕೆ ನೀಡಬೇಕಾದ ಅನೇಕ ಅನುದಾನ ಸ್ಥಗಿತ ಮಾಡುತ್ತಿದೆ. ಗ್ರಾಹಕರು ಹಣ ತುಂಬಲು ಸಿದ್ಧರಿಂದ ಇದಕ್ಕೆ ಅವಕಾಶ ನೀಡಿ ಈ ಸಮಸ್ಯೆ ತಾರ್ಕಿಕ ಅಂತ್ಯ ಹಾಡಬೇಕು ಎಂದರು. ಕಾಂಗ್ರೆಸ್ ಸದಸ್ಯ ಆರೀಫ್ ಭದ್ರಾಪೂರ ಮಾತನಾಡಿ, ನೀರಿನ ಕಂದಾಯ ಬಾಕಿ ಒಟಿಎಸ್ ಮೂಲಕ ಪಡೆಯಲು ಸರ್ಕಾರ ಸ್ಪಂದಿಸದಿದ್ದರೆ ಸರ್ವ ಪಕ್ಷದವರು ಅಲ್ಲಿಗೆ ಹೋಗಿ ಹೋರಾಟ ಮಾಡೋಣ. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಬಡ್ಡಿಯ ಮೇಲೆ ಬಡ್ಡಿ ಬೆಳೆಯುತ್ತಿದೆ. ಇದು ಜನರಿಗೆ ಹೊರೆಯಾಗಲಿದ್ದು, ಬಡ್ಡಿ ಮನ್ನಾ ಮಾಡಬೇಕು. ಅವಳಿ ನಗರ ಜನರಿಗೆ ಅನುಕೂಲ ಆಗಬೇಕು ಎಂದು ಆಗ್ರಹಿಸಿದರು.

ಸಭಾ ನಾಯಕ ಈರೇಶ ಅಂಚಟಗೇರಿ, ಪಾಲಿಕೆ ಅಧಿಕಾರಿಗಳು ಸದ್ಯ ಬಡ್ಡಿ ಬಿಟ್ಟು, ಅಸಲೂ ತುಂಬಿಸಿಕೊಳ್ಳಿ. ಸರ್ಕಾರ ಆದೇಶ ನೀಡಿದ ಮೇಲೆ ಆದರಂತೆ ಹಣ ಸಂಗ್ರಹಿಸಿ. ರಾಧಾಬಾಯಿ ಸಫಾರೆ, ಇಕ್ಬಾಲ್ ನವಲೂರ ಸಹ ಈ ಬಗ್ಗೆ ಧ್ವನಿ ಎತ್ತಿದರು.



> **ಈ ಹಿಂದಿನ ಒಟಿಎಸ್ ಬಗ್ಗೆ ನಗಾರಭಿವೃದ್ಧಿ ಸಚಿವರಿಗೆ ಮನವಿ ಮಾಡಲಾಗಿತ್ತು. ನೂತನ ಸಚಿವರಿಗೆ ಮನವಿ ಸಲ್ಲಿಸಲಾಗಿದ್ದು, ಅವರು ಭರವಸೆ ನೀಡಿದ್ದಾರೆ. ನಿಯೋಗ ಹೋಗಿ ಒಂದು ಸಾರಿ ಭೇಟಿ ನೀಡಿ ಮತ್ತೊಮ್ಮೆ ಮನವಿ ಮಾಡಬೇಕು.**
>
> ■ **ಇಮ್ರಾನ ಯಲಿಗಾರ, ವಿರೋಧ ಪಕ್ಷದ ನಾಯಕ ಎಚ್‌ಡಿಎಂಸಿ**

**ಅಭಿವೃದ್ಧಿಗೆ ಶ್ರಮ**

ಅವಳಿನಗರ ಸ್ವಚ್ಛತೆ, ಕುಡಿಯುವ ನೀರಿನ ಯೋಜನೆ, ಬೀದಿ ದೀಪ ಯೋಜನೆ ಸೇರಿದಂತೆ ಎಲ್ಲ ವಾರ್ಡ್‌ಗಳ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ್ದೇನೆ ಎಂದು ಮೇಯರ್ ಜ್ಯೋತಿ ಪಾಟೀಲ ತಿಳಿಸಿದರು. ಮೇಯರ್ ಅವಧಿಯ ಕೊನೆಯ ಸಾಮಾನ್ಯ ಸಭೆಯಲ್ಲಿ ಭಾಷಣ ಮಾಡಿದ ಅವರು, ಪಾಲಿಕೆ ಮೇಯರ್ ಆಗಿ ಸರ್ವಪಕ್ಷದ ಸದಸ್ಯರ ಸಹಕಾರದಿಂದ ಜನಪರ, ಸ್ವಚ್ಛ ಆಡಳಿತ ನೀಡಿದ್ದೇನೆ. ಮೇಯರ್ ಜೊತೆ ಫೋನ್ ಇನ್, ಪತ್ರಕರ್ತರಿಗೆ ಆರೋಗ್ಯ ವಿಮೆ, ಪಾಲಿಕೆ ಸದಸ್ಯರಿಗೆ ಗೌರವಧನ ಹೆಚ್ಚಳ, ಪಾಲಿಕೆ ವ್ಯಾಪ್ತಿಯ ವಲಯ ಕಚೇರಿಗಳನ್ನು ಜನಸ್ನೇಹಿಯಾಗಿಸಿದ್ದು ಸೇರಿದಂತೆ ಹಲವಾರು ಮಹತ್ವದ ಕಾರ್ಯಗಳನ್ನು ಮಾಡಿದ್ದು. ಖುಷಿ ಇದೆ ಎಂದರು.

## ಖಾಲಿ ಜಾಗ ಸ್ವಚ್ಛತೆಗೆ ಕ್ರಮ ವಹಿಸಲಿ

**ಹುಬ್ಬಳ್ಳಿ:** ಹು-ಧಾ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಖಾಲಿ ಜಾಗಗಳ ಸ್ವಚ್ಛತೆಗೆ ಕ್ರಮ ಕೈಗೊಳ್ಳುವಂತೆ ಪಾಲಿಕೆ ಸರ್ವಪಕ್ಷದ ಸದಸ್ಯರು ಆಗ್ರಹಿಸಿದರು.

ಗುರುವಾರ ಹು-ಧಾ ಮಹಾನಗರ ಪಾಲಿಕೆ ಸಾಮಾನ್ಯ ಸಭೆಯಲ್ಲಿ ಬಿಜೆಪಿ ಸದಸ್ಯ ಶಿವು ಹಿರೇಮಠ ಈ ವಿಷಯ ಪ್ರಸ್ತಾಪಿಸಿ, ಅವಳಿನಗರದಲ್ಲಿ ಖಾಲಿ ಜಾಗ ಕಸ ಕಡ್ಡಿಗಳು ಬೆಳೆದು ಅಕ್ಕಪಕ್ಕದ ಜನರು ಜಗಳ ಆಡುವಂತಾಗಿದೆ. ಪಾಲಿಕೆ ಅಧಿಕಾರಿಗಳು ಖಾಲಿ ಜಾಗದ ತೆರಿಗೆ ಸಂಗ್ರಹಿಸುತ್ತಿದ್ದು, ಸ್ವಚ್ಛತೆಗೆ ಅಗತ್ಯ ಕ್ರಮ ಕೈಗೊಳ್ಳಬೇಕು. ಜನರಿಗೆ ಆಗುತ್ತಿರುವ ಸಮಸ್ಯೆ ತಪ್ಪಿಸಬೇಕು ಎಂದು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಪಾಲಿಕೆ ಆಯುಕ್ತ ಡಾ. ರುದ್ರೇಶ ಘಾಳಿ, ಖಾಲಿ ಜಾಗ ತೆರಿಗೆ ಸಂಗ್ರಹ ಮಾಡುವುದು ನಮ್ಮ ಕೆಲಸ. ಆದರೆ ಸ್ವಚ್ಛತೆ ನಾವು ಮಾಡಲ್ಲ, ಅದು ಸಾರ್ವಜನಿಕರ ಜವಾಬ್ದಾರಿಯಾಗಿದೆ. ಇಂತಹ ಜಾಗ ಮಾಲೀಕರಿಗೆ ನೋಟಿಸ್ ನೀಡಲಾಗುತ್ತಿದೆ. ಸ್ವಚ್ಛ ಮಾಡದಿದ್ದರೆ ದಂಡ ವಿಧಿಸಲಾಗುವುದು ಎಂದು ತಿಳಿಸಿದರು.

ಬಿಜೆಪಿ ಸದಸ್ಯ ಮಂಜುನಾಥ ಭಟ್ಟನವರ ಮಾತನಾಡಿ, ಖಾಲಿ ಜಾಗದಲ್ಲಿ ಹಸಿ ಕಸ ಬೆಳೆಯುತ್ತಿದ್ದು, ಜನರು ಹಲವು ರೋಗಗಳಿಗೆ ತುತ್ತಾಗುತ್ತಿದ್ದಾರೆ. ಇತ್ತೀಚೆಗೆ ನಮ್ಮ ವಾರ್ಡ್‌ನಲ್ಲಿ ಓರ್ವ ಹುಡಗಿ ಡೆಂಗಿ ಜ್ವರದಿಂದ ಮೃತಪಟ್ಟಿದ್ದಾಳೆ. ಆದ್ದರಿಂದ ಪಾಲಿಕೆ ಅಧಿಕಾರಿಗಳು ಅಂತಹ ಜಾಗಗಳ ಗುರುತಿಸಿ ಸ್ವಚ್ಛತೆ ಮಾಡಲು ಮಾಲೀಕರಿಗೆ ಸೂಚಿಸಬೇಕು ಎಂದು ಆಗ್ರಹಿಸಿದರು.

ಸಭಾ ನಾಯಕ ಈರೇಶ ಅಂಚಟಗೇರಿ ಮಾತನಾಡಿ, ಅವಳಿನಗರದಲ್ಲಿ 1 ಲಕ್ಷ ಖಾಲಿ ಪ್ಲಾಟ್‌ಗಳಿವೆ. ಯಾರು ಸ್ವಚ್ಛವಿಡುವುದಿಲ್ಲವೋ ಅವರಿಗೆ ಡಬಲ್ ಟ್ಯಾಕ್ಸ್ ಹಾಕಬೇಕು ಎಂದು ಒತ್ತಾಯಿಸಿದರು.

ಸದಸ್ಯ ಚಂದ್ರಶೇಖರ ಮನಗುಂಡಿ, ಪಾಲಿಕೆ ಎಂಜಿನಿಯರ್ ಸಂತೋಷ ಯರಂಗಳ್ಳಿ ಅವರು ಬೇಜವಾಬ್ದಾರಿಯಿಂದ ಕೆಸಲ ಮಾಡುತ್ತಾರೆ. ಏನಾದರೂ ಹೇಳಿದರೆ ಹಾರೈಕೆ ಉತ್ತರ ನೀಡುತ್ತಾರೆ. ಸೋಮವಾರದ ಒಳಗೆ ಕಸ ತೆಗೆಯದಿದ್ದರೆ ಪಾಲಿಕೆ ಕಚೇರಿ ಎದುರು ತಂದು ಹಾಕಲಾಗುವುದು ಎಂದು ಕಿಡಿಕಾರಿದರು.



- ಬೀದಿ ನಾಯಿ ಹಾಗೂ ಬಿಡಾಡಿ ದನಗಳ ಹಾವಳಿ ತಡೆಯಲು ಕ್ರಮ
- ಪ್ರಸ್ತುತ ವರ್ಷ ಐದು ಸಾವಿರ ಸಸಿ ನೆಡಲು ಕ್ರಮ
- ಪೌರಕಾರ್ಮಿಕರಿಗೆ ಉಪಹಾರ ನೀಡಿ

**ಟ್ಯಾಕ್ಸ್ ಡಬಲ್ ಹಾಕಿ**

ಖಾಲಿ ಪ್ಲಾಟ್‌ಗಳನ್ನು ಸ್ವಚ್ಛತೆ ಮಾಡಿಕೊಳ್ಳಲು ಮಾಲೀಕರಿಗೆ ಸೂಚಿಸಬೇಕು. ಒಂದು ವೇಳೆ ಮಾಡದಿದ್ದರೆ ಅವರಿಗೆ ಡಬಲ್ ಟ್ಯಾಕ್ಸ್ ಹಾಕಬೇಕು ಎಂದು ಮೇಯರ್ ಜ್ಯೋತಿ ಪಾಟೀಲ ಹೇಳಿದರು.



ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಮೇಯರ್ ಜ್ಯೋತಿ ಪಾಟೀಲ ಹಾಗೂ ಉಪಮೇಯರ್ ಸಂತೋಷ ಚವ್ಹಾಣ ಅವರ ಅವಧಿಯ ಕೊನೆಯ ಸಾಮಾನ್ಯ ಸಭೆ ನಡೆದ ಹಿನ್ನೆಲೆ ಪಾಲಿಕೆ ಸರ್ವಪಕ್ಷದ ಸದಸ್ಯರು ಒಳಗೊಂಡ ದೃಶ್ಯ.



ಕಲಘಟಗಿ: ಪಟ್ಟಣದ ಗುಡ್ ನ್ಯೂಸ್ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ವನಮಹೋತ್ಸವ ಕಾರ್ಯಕ್ರಮವನ್ನು ಫಾ. ದೀಪಕ ಜೊಸೆಫ್ ಉದ್ಘಾಟಿಸಿದರು. ಅವರು ಅರಣ್ಯ ಸಂರಕ್ಷಣೆ, ಪರಿಸರ ಸಮತೋಲನ ಕಾಪಾಡುವುದು ಮತ್ತು ಸಾರ್ವಜನಿಕರಿಗೆ ಮರಗಳ ಅರಿವು ಮೂಡಿಸಬೇಕು ಮತ್ತು ವಿದ್ಯಾರ್ಥಿಗಳು ವ್ಯಕ್ತಿ ವಿಕಸನ, ಜೀವನ ಕೌಶಲ್ಯ, ನೈತಿಕ ಮೌಲ್ಯಗಳು, ಸಸಿಗಳನ್ನು ನೆಡುವುದು ಹಾಗೂ ಮೊಬೈಲ್ ಬಳಕೆಯ ಕುರಿತು ಮಾತನಾಡಿದರು. ಈ ಸಂದರ್ಭದಲ್ಲಿ ರೆಬ್ರ ವರ್ಗಿಸ್ ಕೆಜಿ, ನವೀನಾ ರಡ್ಡೇರ, ಜಾಫರ ಭಾವಾನವರ, ಶಂಕರ ಹೊನ್ನಳ್ಳಿ ಸಿಬ್ಬಂದಿ ಇದ್ದರು.

## ನಿವೇಶನ ನೀಡಲು ಮಹಸಭಾ ಮನವಿ

**ಧಾರವಾಡ:** ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕ ವತಿಯಿಂದ ಸಮಾಜದ ಬಡಮಕ್ಕಳ ಅನುಕೂಲಕ್ಕೆ ವಸತಿ ನಿಲಯ ನಿರ್ಮಾಣಕ್ಕೆ ನಿವೇಶನ ನೀಡಲು ಪದಾಧಿಕಾರಿಗಳು ರಾಷ್ಟ್ರೀಯ ಅಧ್ಯಕ್ಷ ಈಶ್ವರ ಖಂಡ್ರೆಗೆ ಮನವಿ ಸಲ್ಲಿಸಿದರು.

ಕರ್ನಾಟಕ ನಗರ ನೀರು ಸರಬರಾಜು-ಒಳಚರಂಡಿ ಮಂಡಳಿ ಅಧ್ಯಕ್ಷೆ ಶಿವಲೀಲಾ ಕುಲಕರ್ಣಿ ಅವರನ್ನು ಭೇಟಿ ಮಾಡಿದ ಮಹಾಸಭಾ ಧಾರವಾಡ ಜಿಲ್ಲಾ ಘಟಕವು, ಮಹಸಬಾದಿಂದ ನಿರ್ಮಿಸುವ ಈ ವಸತಿ ನಿಲಯಕ್ಕೆ ಆರ್ಥಿಕ ನೆರವು ನೀಡಲು ಕೋರಿದರು. ಜಿಲ್ಲಾಧ್ಯಕ್ಷ ಪ್ರದೀಪಗೌಡ ಪಾಟೀಲ, ಕಾರ್ಯದರ್ಶಿ ಶಿವಶರಣ ಕಲಬಶೆಟ್ಟರ ಹಾಗೂ ಪದಾಧಿಕಾರಿಗಳಾದ ಪ್ರಕಾಶ ಬಾವಿಕಟ್ಟಿ, ವಿರೇಶ ಕೆಲಗೇರಿ, ಡಾ. ಸುವರ್ಣಾ ಬಿರಾದಾರ, ಬಸಂತಿ ಹಪ್ಪಳದ, ಸುಧಾ ಕಬ್ಬೂರ ಸೇರಿ ಅನೇಕರು ಇದ್ದರು.



## ವಿವಿಧ ಕಡತಗಳ ಪರಿಶೀಲನೆ



**ನವಲಗುಂದ:** ಪಟ್ಟಣದ ಪುರಸಭೆ ಕಚೇರಿಗೆ ಧಾರವಾಡ ಲೋಕಾಯುಕ್ತ ಡಿವೈಎಸ್ ಪಿ ವೆಂಕನಗೌಡ ಪಾಟೀಲ ನೇತೃತ್ವದ ಅಧಿಕಾರಿಗಳ ತಂಡ ಭೇಟಿ ನೀಡಿ ವಿವಿಧ ಸಾರ್ವಜನಿಕ ಅರ್ಜಿಗಳ ವಿಲೇವಾರಿ ಹಾಗೂ ವಿವಿಧ ಕಡತಗಳನ್ನು ಪರಿಶೀಲಿಸಿದರು. ಪುರಸಭೆಗೆ ಆಗಮಿಸಿದ ಸಾರ್ವಜನಿಕರಿಗೆ ಲೋಕಾಯುಕ್ತ ಅಧಿಕಾರಿಗಳು ಯಾವ ಕೆಲಸದ ಮೇಲೆ ಬಂದಿದ್ದೀರಿ, ಎಷ್ಟು ದಿನಗಳ ಕಾಲ ಕೆಲಸದ ನಿಮಿತ್ತ ಅಲೆದಾಡುತ್ತಿದ್ದೀರಿ ಎಂಬ ಮಾಹಿತಿಗಳನ್ನು ಕಲೆ ಹಾಕಿದರು. ಕುಡಿಯುವ ನೀರಿನ ಘಟಕ, ಕಸವಿಲೇವಾರಿ ಘಟಕ ಪರಿಶೀಲನೆ ನಡೆಸಿದರು.

## ಮಳೆಗಾಗಿ 21 ದಿನಗಳ ಮೌನ ಅನುಷ್ಠಾನ ಕೈಗೊಂಡ ಸ್ವಾಮೀಜಿಗೆ ಸನ್ಮಾನ

**ಕುಂದಗೋಳ:** ಪಟ್ಟಣದ ಹಾಗೂ ಸಮಸ್ತ ನಾಡಿನ ರೈತರ ಒಳಿತಿಗಾಗಿ ಸಮರ್ಪಕ ಮಳೆಯಾಗಿ ಕೃಷಿ ಚಟುವಟಿಕೆ ಚೇತರಿಕೆ ಕಾಣಲೆಂದು 21 ದಿನಗಳು ಮೌನ ಅನುಷ್ಠಾನಕೈಗೊಂಡಿರುವ ಪಟ್ಟಣದ ಪಂಚಗ್ರಹ ಹಿರೇಮಠದ ಪೀಠಾಧೀಶ ಶಿತಿಕಂಠೇಶ್ವರ ಶಿವಾಚಾರ್ಯ ಸ್ವಾಮೀಜಿಗೆ ಆದರ್ಶ ಫೌಂಡೇಶನ್ ವತಿಯಿಂದ ಸನ್ಮಾನಿಸಲಾಯಿತು.

ಆದರ್ಶ ಫೌಂಡೇಶನ್ ಅಧ್ಯಕ್ಷ ಮುತ್ತುರಾಜ ಕೊಪ್ಪದ ಮಾತನಾಡಿ, ಶ್ರೀಗಳ ಸಾಮಾಜಿಕ ಕಳಕಳಿ, ರೈತರ ಹಿತಚಿಂತನೆ ಅವರ ಕಾಳಜಿ ಶ್ಲಾಘನಿಯವಾದುದು. ರೈತ ಸಮುದಾಯ ಸಂಕಷ್ಟದಲ್ಲಿರುವ ಈ ಸಂದರ್ಭದಲ್ಲಿ ಮಳೆಯಾಗಲೆಂದು ಕೈಗೊಂಡಿರುವ ಮೌನ ಅನುಷ್ಠಾನ ಸಮಾಜಕ್ಕೆ ಮಾದರಿಯಾಗಿದೆ ಎಂದರು.



ಆದರ್ಶ ಫೌಂಡೇಶನ್ ಕಾರ್ಯದರ್ಶಿ ಪ್ರವೀಣ ಅಂಗಡಿ, ಸಲೀಂ ಕ್ಯಾಲಕೊಂಡ, ಚನ್ನಪ್ಪ ಹೊಳಗನ್ನವರ, ಅಕ್ಬರ್ ಗುಡವಾಲಾ, ಮಲ್ಲು ಸಂಶಿ, ಬಸವರಾಜ ತಿಮ್ಮಣ್ಣವರ, ಸುರೇಶ ಪಲ್ಲೇದ, ಮಾರುತಿ ಎಸುಗಡೆ, ಕುತುಬುದ್ದೀನ್ ಪಠಾಣ, ಗಣೇಶ ಪವಾರ, ಶಿವು ಪೂಜಾರ, ಮಲ್ಲಿಕಾರ್ಜುನ ಬರದೇಲಿ, ಆನಂದ ಗಾಯಕವಾಡ ಸೇರಿದಂತೆ ಮತ್ತಿತರರಿದ್ದರು.

## ಮ್ಯಾಪಿಂಗ್ ವೇಳೆ ನಿಜವಾದ ಮತದಾರರೇ ಹೊರಕ್ಕೆ: ಬಿ.ಕೆ. ಹರಿಪ್ರಸಾದ

**ಹುಬ್ಬಳ್ಳಿ:** ಕೇಂದ್ರ ಸರ್ಕಾರ ನಡೆಸುತ್ತಿರುವ ಮತದಾರರ ಪಟ್ಟಿ ಪರಿಷ್ಕರಣೆಯಲ್ಲಿ ಬಿಜೆಪಿ ನಕಲಿ ಮತದಾರರೇ ಹೆಚ್ಚಿದ್ದಾರೆ. ನಿಜವಾದ ಮತದಾರರನ್ನು ಮ್ಯಾಪಿಂಗ್ ವೇಳೆ ನಿಜವಾದ ಕೈ ಬಿಡಲಾಗಿದೆ. ಮತದಾರರ ಪಟ್ಟಿಯಲ್ಲಿ ಹೆಸರು ಇದ್ದರೆ ಮಾತ್ರ ಸರ್ಕಾರದ ಸೌಲಭ್ಯ ಸಿಗುತ್ತದೆ ಎಂದು ಸಾರ್ವಜನಿಕರಿಗೆ ತಿಳಿಸಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ ತಿಳಿಸಿದರು.

ಹು-ಧಾ ಮಹಾನಗರ ಜಿಲ್ಲಾ ಹಾಗೂ ಧಾರವಾಡ ಗ್ರಾಮೀಣ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಗುರುವಾರ ನಗರದ ಹಳೇಹುಬ್ಬಳ್ಳಿಯ ಬಾಬು ಜಗಜೀವನರಾಮ್ ಸಮುದಾಯ ಭವನದಲ್ಲಿ ನಡೆದ ಬೆಳಗಾವಿ ವಿಭಾಗ ಮಟ್ಟದ 'ಎಸ್ಐಆರ್ ಜನ ಜಾಗೃತಿ ಸಮಾವೇಶ' ಉದ್ಘಾಟಿಸಿ ಅವರು ಮಾತನಾಡಿದರು. ಜೂನ್ 30ರಿಂದ ಬಿಎಲ್‌ಒಗಳು ಮನೆಗೆ ಬಂದು ಮಾಹಿತಿ ಪಡೆಯಲಿದ್ದು, ಅವರು ನೀಡುವ ಅರ್ಜಿಯನ್ನು ಭರ್ತಿ ಮಾಡಿ ದಾಖಲೆ ಒದಗಿಸಬೇಕು. ಯಾವ್ರೊಬ್ಬ ಮತದಾರರು ಪಟ್ಟಿಯಿಂದ ಹೊರಗುಳಿಯದಂತೆ ನೋಡಿಕೊಳ್ಳಬೇಕು ಎಂದರು.

ಎಸ್ಐಆರ್ ಜಾಗೃತಿ ಸಮಿತಿ ಅಧ್ಯಕ್ಷ ವಿ.ಆರ್. ಸುದರ್ಶನ ಮಾತನಾಡಿ, ನಿಜವಾದ ಮತದಾರರ ಹೆಸರು ಪಟ್ಟಿಯಿಂದ ತೆಗೆಯಲು ಮುಂದಾದರೆ ಪಕ್ಷದ ಮುಖಂಡರು ಇದರ ಬಗ್ಗೆ ಧ್ವನಿ ಎತ್ತಬೇಕು ಎಂದರು. ಶಾಸಕ ಪ್ರಸಾದ ಅಬ್ಬಯ್ಯ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆ ಬುಡಮೇಲು ಮಾಡಲು ಹೊರಟವರಿಗೆ ತಕ್ಕ ಪಾಠ ಕಲಿಸಬೇಕು ಎಂದರು. ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಅಧ್ಯಕ್ಷೆ ಶಿವಲೀಲಾ ಕುಲಕರ್ಣಿ ಮಾತನಾಡಿ, ಕಾಂಗ್ರೆಸ್ ನಾಯಕರನ್ನು ಮಟ್ಟಹಾಕಲು ಬಿಜೆಪಿ ಎಸ್ಐಆರ್ ಬಳಸಿಕೊಳ್ಳುತ್ತಿದೆ. ಕಾಂಗ್ರೆಸ್ ಮುಕ್ತ ಕರ್ನಾಟಕ ಸಿದ್ಧಾಂತವೇ ಅವರ ಉದ್ದೇಶವಾಗಿದೆ ಎಂದರು.

ಶಾಸಕರಾದ ಸಂತೋಷ ಲಾಡ್, ಎನ್. ಎಚ್. ಕೋನರಡ್ಡಿ, ಯು.ಬಿ. ಬಣಕಾರ, ಶ್ರೀನಿವಾಸ ಮಾನೆ, ಬಸವರಾಜ ಶಿವಣ್ಣವರ, ಯಾಸೀರ್‌ಖಾನ್ ಪಠಾಣ್, ಅಜ್ಜಂಪೀರ್ ಖಾದ್ರಿ, ವಿಧಾನ ಪರಿಷತ್ ಸದಸ್ಯ ಎಫ್.ಎಚ್. ಜಕ್ಕಪ್ಪನವರ, ಮೋಹನ ಲಿಂಬಿಕಾಯಿ, ಅಲ್ತಾಫ್ ಕಿತ್ತೂರು, ಅನಿಲಕುಮಾರ ಪಾಟೀಲ, ಬ್ಲಾಕ್ ಅಧ್ಯಕ್ಷ ಅರವಿಂದ ಏಗನಗೌಡರ, ಮುಖಂಡ ಗೌರಮ್ಮ ಬಳೋಗಿ, ರೇಣುಕಾ ಕಳ್ಳಿಮನಿ, ಗಿರೀಶ್ ಕಲ್ಲಾಪುರ, ಕಿಶೋರ ಬಡಿಗೇರ ಸೇರಿ ಅನೇಕರು ಇದ್ದರು.



## ಕಲಾವಿದರಿಗೆ ಹೆಚ್ಚಿನ ಅವಕಾಶ ದೊರೆಯಲಿ

**ಹುಬ್ಬಳ್ಳಿ:** ಉತ್ತರ ಕರ್ನಾಟಕದಲ್ಲಿ ಹೆಚ್ಚು ಸಿನೆಮಾಗಳು ತಯಾರಾಗಲಿ. ಇಲ್ಲಿನ ಕಲಾವಿದರಿಗೆ ಹೆಚ್ಚಿನ ಅವಕಾಶಗಳು ದೊರೆಯಲಿ ಎಂದು ಸ್ವರ್ಣ ಗ್ರೂಪ್ ಆಫ್ ಕಂಪನಿ ಚೇರ್ಮನ್ ಎಚ್ಎಸ್ ವಿಎಸ್‌ವಿ ಪ್ರಸಾದ್ ಹೇಳಿದರು.

ಸಿದ್ಧಾರೂಢ ಮಠದಲ್ಲಿ ನಡೆದ ವಿಸ್ಮಯ ವೆಂಚರ್ಸ್ ನಿರ್ಮಾಣದ ''ಏನಾಯಿತು'' ಸಿನೆಮಾಗೆ ಕ್ಯಾಮೆರಾ ಚಾಲನೆ ನೀಡಿ ಮಾತನಾಡಿದರು. ಏನಾಯಿತು ಈ ಸಿನಿಮಾ ಸಾಹಿತಿಕವಾಗಿದೆ ಇಂಥ ಸಾಹಿತ್ಯಕ್ಕೆ ಚಿತ್ರಗಳು ಬರುತ್ತಿರುವುದು ಅಪರೂಪ. ಇಂತಹ ಒಂದು ಸಿನಿಮಾ ಮೂಡಿ ಬರುತ್ತಿರುವುದು ಹೆಚ್ಚು ಖುಷಿ ನೀಡುವ ವಿಷಯ ಎಂದರು.

ಉತ್ತರ ಕರ್ನಾಟಕದಲ್ಲಿ ಹಲವು ಕಲಾವಿದರು ತಂತ್ರಜ್ಞರು ಇದ್ದಾರೆ. ಇವರಿಗೆಲ್ಲ ಇನ್ನಷ್ಟು ಅವಕಾಶ ಸಿಗಬೇಕಾಗಿದೆ. ಆ ನಿಟ್ಟಿನಲ್ಲಿ ಈ ಭಾಗದಲ್ಲಿ ಸಿನೆಮಾ ಕೆಲಸಗಳು ಹೆಚ್ಚು ನಡೆಯಬೇಕಿದೆ ಎಂದರು.

ಸಿದ್ಧಾರೂಢ ಮಠ ಟ್ರಸ್ಟ್ ಚೇರ್ಮನ್ ಬಾಳು ಮಗಜಿಕೊಂಡಿ ಮಾತನಾಡಿ, ಇಡೀ ಕುಟುಂಬದವರು ಕುಳಿತು ನೋಡುವ ಹಾಗೂ ಸಮಾಜಕ್ಕೆ ಉತ್ತಮ ಸಂದೇಶ ನೀಡುವ ಚಲನಚಿತ್ರಗಳು ಹೊರಬರಲಿ ಎಂದರು. ಮುಖ್ಯ ಅತಿಥಿಗಳಾಗಿ ಎವಿಕೆ ಫೌಂಡೇಶನ್ ವೆಂಕಟೇಶ್ ಕಾಟವೆ, ಹಿರಿಯ ಕವಿ ಮಹಾಂತಪ್ಪ ನಂದೂರ್, ಡಾ. ರಾಮು ಮುಲಗಿ ಹಾಗೂ ನಾಯಕ ನಟ ಇಶಾನ್, ನಟಿ ಚೈತ್ರ ತೋಟದ್, ನಿರ್ದೇಶಕ ತಮನ್ನಾ, ಡಾ.ಪ್ರಭು ಗಂಜಿಹಾಳ, ಡಾ.ವೀರೇಶ, ವಿನಾಯಕ ಶೆಟ್ಟಿ, ನವೀನ ಪಾಟೀಲ ಜೈನ, ರಾಘು ಬುಧಪನವರ್, ಕೃಷ್ಣ ಉಲ್ಲಿಕಾಶಿ, ಚಿತ್ರ ತಂಡದವರು ಇದ್ದರು.



## ವಿಷಯಗಳ ಆಳವಾದ ಜ್ಞಾನ ಸಂಪಾದನೆ ಅವಶ್ಯ

**ಉಪ್ಪಿನಬೆಟಗೇರಿ:** ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಕೆಯ ಹಂಬಲದಿಂದ ವಿಷಯಗಳ ಆಳವಾದ ಜ್ಞಾನ ಸಂಪಾದನೆಗೆ ತೆರೆದುಕೊಳ್ಳದೇ ನಡೆಸುವ ಕೇವಲ ಅಂಕ ಪ್ರಣೀತ ಅಧ್ಯಯನ ವ್ಯರ್ಥಗೊಳ್ಳುತ್ತದೆ ಎಂದು ಹಿರಿಯ ಶಿಕ್ಷಣ ಚಿಂತಕ ಸುರೇಶ ಕುಲಕರ್ಣಿ ಪ್ರತಿಪಾದಿಸಿದರು.

ಅವರು ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಧಾರವಾಡ ಜಿಲ್ಲಾ ಮತ್ತು ತಾಲೂಕು ಘಟಕಗಳ 5 ದತ್ತಿ ಕಾರ್ಯಕ್ರಮಗಳ ಅಂಗವಾಗಿ ಹತ್ತಿರದ ಅಮ್ಮಿನಬಾವಿಯ ಶ್ರೀಶಾಂತೇಶ್ವರ ಪ್ರೌಢ ಶಾಲೆಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ದತ್ತಿ ಉಪನ್ಯಾಸ ನೀಡಿ ಮಾತನಾಡಿದರು. ನಿರ್ದಿಷ್ಟ ಚರ್ಚೆಯೊಂದಿಗೆ ಪಠ್ಯಪೂರಕ ಪ್ರಶ್ನೆಗಳಿಗೆ ನಿಖರ ಉತ್ತರಗಳನ್ನು ಕಂಡುಕೊಂಡಾಗ ವ್ಯಾಸಂಗದ ವಿಷಯಗಳು ನೆನಪಿನಾಳದಲ್ಲಿ ಶಾಶ್ವತವಾಗಿ ಉಳಿಯಲು ಸಾಧ್ಯವಾಗುತ್ತದೆ ಎಂದರು.

ಜಿಲ್ಲಾ ಕಸಾಪ ಅಧ್ಯಕ್ಷ ಡಾ.ಲಿಂಗರಾಜ ಅಂಗಡಿ ಉದ್ಘಾಟಿಸಿ ಮಾತನಾಡಿ, ವಿದ್ಯಾರ್ಥಿಗಳು ಯಾವುದೇ ಋಣಾತ್ಮಕ ಭಾವನೆಗಳ ಹವ್ಯಾಸಗಳತ್ತ ಇಣಿಕಿಹಾಕದೇ ಮೌಲ್ಯಾಧಾರಿತ ಬದುಕನ್ನು ರೂಢಿಸಿಕೊಳ್ಳಬೇಕು ಎಂದರು. ಹವ್ಯಾಸೀ ಪತ್ರಕರ್ತ ಗುರುಮೂರ್ತಿ ಯರಗಂಬಳಿಮಠ ಮಾತನಾಡಿ, ವಿದ್ಯಾರ್ಥಿಗಳು ಪುಸ್ತಕ ಪ್ರೀತಿಯನ್ನು ಬೆಳೆಸಿಕೊಂಡು ನಿರಂತರ ಹೊಸ ಓದಿನೊಂದಿಗೆ ಸಂಪಾದಿಸುವ ಜ್ಞಾನದ ನೆಲೆಯಲ್ಲಿ ಭಾರತ ಬಯಸುವ ಉತ್ಕೃಷ್ಟ ಮಾನವ ಸಂಪನ್ಮೂಲವಾಗಿ ಹೊರಹೊಮ್ಮಲು ಸಾಧ್ಯವಾಗುತ್ತದೆ ಎಂದರು. ಪ್ರೌಢಶಾಲೆಯ ಮುಖ್ಯೋಧ್ಯಾಪಕ ಎನ್.ಬಿ.ಅಮರಗೋಳ ಅಧ್ಯಕ್ಷತೆ ವಹಿಸಿದ್ದರು. ಅತಿಥಿ ಶಿಕ್ಷಕ ಮುಖಂಡ ಗುರು ತಿಗಡಿ, ಪ್ರೌಢಶಾಲಾ ಆಡಳಿತ ಮಂಡಳಿಯ ಉಪಾಧ್ಯಕ್ಷ ಸುನೀಲ ಗುಡಿ, ಕ.ಸಾ.ಪ. ಜಿಲ್ಲಾ ಕಾರ್ಯದರ್ಶಿ ಡಾ.ಜಿನದತ್ತ ಹಡಗಲಿ ಮತ್ತು ಕ.ಸಾ.ಪ. ತಾಲೂಕಾಧ್ಯಕ್ಷ ಮಹಾಂತೇಶ ನರೇಗಲ್ಲ ಮಾತನಾಡಿದರು. ಶಿಕ್ಷಕ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅಜಿತಕುಮಾರ ದೇಸಾಯಿ, ಎಂ.ಜಿ.ಸುಬೇದಾರ, ಉಮಾ ಬಾಗಲಕೋಟ ಇದ್ದರು. ಶಿಕ್ಷಕಿ ಲಲಿತಾ ವೈ.ಎಂ. ನಿರೂಪಿಸಿದರು. ಜಿ.ಎಫ್. ಶಿವಬಸನಗೌಡ್ರ ವಂದಿಸಿದರು. ಎಸ್. ಎಸ್.ವಿದ್ವಾನ್ ಮತ್ತು ಎಸ್.ಗುರುಕುಮಾರ ದತ್ತಿ, ಮಲ್ಲಮ್ಮ ಮೂಲಿಮನಿ ದತ್ತಿ, ದಿ. ಕಾಮಾಕ್ಷಮ್ಮ ಚೆನ್ನವೀರಸ್ವಾಮಿ ಚಿಕ್ಕಮಠ ದತ್ತಿ, ದಿ. ವೇದಮೂರ್ತಿ ಚೆನ್ನವೀರಸ್ವಾಮಿ ಚಿಕ್ಕಮಠ ದತ್ತಿ, ದಿ. ಶಾಂತಾ ಚೆನ್ನಬಸಪ್ಪ ಸುಣಧೋಳಿ ದತ್ತಿ ಅಂಗವಾಗಿ ವಿದ್ಯಾರ್ಥಿನಿಯರಾದ ವಿನೋದಾ ಕಂಬಳಿ, ಅಕ್ಷತಾ ರುದ್ರಪ್ಪನವರ ಹಾಗೂ ಲಕ್ಷ್ಮಿ ಕರಡಿಗುಡ್ಡ ಅವರಿಗೆ ಕ.ಸಾ.ಪ.ದಿಂದ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಯಿತು.



# ನನೆಗುದಿಗೆ ಬಿದ್ದ ಮೊದಲ ಹಂತದ ಕೃಷ್ಣಾ ಯೋಜನೆ!

▸ ರವೀಂದ್ರ, ನಂದೆಪ್ಪನವರ

**ಮುದ್ದೇಬಿಹಾಳ** : 1964 ರಲ್ಲಿ ಪ್ರಾರಂಭವಾದ ಕೃಷ್ಣ ಕಣಿವೆ ಯೋಜನೆ, ದೇಶದ ಅತ್ಯಂತ ದೊಡ್ಡ ನೀರಾವರಿ ಯೋಜನೆಗಳಲ್ಲಿ ಒಂದು. ಕೇವಲ ಕರ್ನಾಟಕದಲ್ಲಿ 1100 ಟಿಎಂಸಿಗಳಷ್ಟು ನೀರು ಸಂಗ್ರಹ, ನೀರಾವರಿ ಮಾಡಬಹುದಾದ ದೊಡ್ಡಹೊಳೆ ಯೋಜನೆ ಎಂಬ ಖ್ಯಾತಿ ಪಡೆದಿದೆ.

ಅದರಲ್ಲಿ ಮುಳುಗಡೆಯಿಂದ ಸಂತ್ರಸ್ತವಾದ ವಿಜಯಪುರ ಜಿಲ್ಲೆಯಲ್ಲಿ ಎ ಸ್ಕೀಂ, 170 ಟಿಎಂಸಿ ನೀರು ಹಂಚಿಕೆ 15.42 ಲಕ್ಷ ಎಕರೆ ನೀರಾವರಿ. ಬಿ ಸ್ಕೀಂ ಅಡಿಯಲ್ಲಿ 130 ಟಿಎಂಸಿ ನೀರು 13.10 ಲಕ್ಷ ಎಕರೆ ಪ್ರದೇಶದ ನೀರಾವರಿ ಮಾಡಬೇಕಾದ ಯೋಜನೆ. ಆರು ದಶಕಗಳಾದರೂ ಯೋಜನೆ ಕೈಗೂಡಿಲ್ಲ. ಪ್ರಾದೇಶಿಕ ಅಸಮಾನತೆ ಎದುರಿಸುತ್ತಿರುವ ವಿಜಯಪುರ ಜಿಲ್ಲೆಯ ಸಂಪೂರ್ಣ ನೀರಾವರಿ ಇನ್ನು ಕನಸಾಗಿ ಉಳಿದಿದೆ.

ತಾಲೂಕಿಗೆ ಸಂಬಂಧಿಸಿದಂತೆ ಮೊದಲ ಹಂತದ ಎಎಲ್ ಬಿಸಿ-1 ಮತ್ತು ಎಎಲ್ ಬಿ ಸಿಎ-2 ಯೋಜನೆ ಸಂತ್ರಸ್ತ ಜಿಲ್ಲೆಗೆ ಮೊದಲು ಕಾಲುವೆ ನಿರ್ಮಾಣ ಆಗಬೇಕಿತ್ತು. ಇದಕ್ಕಾಗಿ ಆಲಮಟ್ಟಿ ನಾರಾಯಣಪುರ ಅಣೆಕಟ್ಟು ನಿರ್ಮಾಣದ ಸುತ್ತಮುತ್ತ ಭೂ ಸ್ವಾಧೀನ ಮಾಡಿದ ರೈತರು ಹಾಗೂ ಸಂತ್ರಸ್ತರು ಸುಮಾರು 27 ಸಾವಿರ ಎಕರೆ ಭೂಮಿಯನ್ನು ಕಳೆದುಕೊಂಡಿದ್ದಾರೆ. ಮತದಾರರ ಕಣ್ಣೊರೆಸುವ ಯೋಜನೆಗಳಿಗೆ ಮಾತ್ರ ರಾಜಕಾರಣಿಗಳ ಸಾಮರ್ಥ್ಯ ನಿಂತು ಹೋಗಿದೆ.

ಇದಕ್ಕಾಗಿ ಜಿಲ್ಲೆಯಲ್ಲಿ ಚಿಮ್ಮಲಗಿ, ಮುಳವಾಡ, ಮಸೂತಿ, ಗುತ್ತಿ ಬಸವಣ್ಣ ಯೋಜನೆ ಅಪೂರ್ಣವಾಗಿವೆ. ಇತ್ತೀಚೆಗೆ ನಾರಾಯಣಪುರ ಹಿನ್ನೀರಿನಿಂದ 10 ಟಿಎಂಸಿ ನೀರು ಬಳಸುವ ನಾಗರಬೆಟ್ಟ ಯೋಜನೆ ಕೂಡ ನನೆಗುದಿಗೆ ಬಿದ್ದಿದೆ. ನ್ಯಾಯವಾಗಿ ನೋಡಿದರೆ ಸಂತ್ರಸ್ತರ ಭೂಮಿಗೆ ಮೊದಲು ನೀರಾವರಿ ಮಾಡಬೇಕಿತ್ತು. ಆದರೆ 28.13 ಸಾವಿರ ಎಕರೆ ಭೂ ಪರಿಹಾರಕ್ಕೆ ನ್ಯಾಯಾಲಯದಲ್ಲಿ ಪ್ರಕರಣಗಳಿಗೆ. ಇನ್ನೂ ಒಂದು ಕಾಲುವೆ ಮತ್ತು ಪುನರ್ವಸತಿಗಾಗಿ 1.33 ಲಕ್ಷ ಎಕರೆ, ಭೂಸ್ವಾಧೀನ ಮಾಡುವುದು, ಪರಿಹಾರ ಬಿಡುಗಡೆಗೆ ಒಂದು ಲಕ್ಷ ಕೋಟಿ ವರೆಗೆ ವೆಚ್ಚದ ಪ್ರಮಾಣ ಹೆಚ್ಚಿದೆ ಆದರೂ ಜಿಲ್ಲೆಯ ಅರ್ಧ ಭೂಭಾಗ ನೀರು ಕಂಡಿಲ್ಲ.

ಯಾವುದೇ ಒಂದು ಯೋಜನೆ ಹತ್ತು ವರ್ಷದಲ್ಲಿ ಪೂರ್ಣಗೊಂಡರೆ ನೂರು ವರ್ಷ ನೀರಾವರಿ ಮಾಡಬಹುದು. ಆದರೆ, ಇಚ್ಛಾಶಕ್ತಿ ಕೊರತೆ ಮತ್ತು ವಿಳಂಬ ನೀತಿಯಿಂದಾಗಿ ಯೋಜನೆ ಇನ್ನೂ ಕೈಗೂಡಿಲ್ಲ. ಇದಕ್ಕಾಗಿ ಪ್ರತಿವರ್ಷ 10 ಸಾವಿರ ಕೋಟಿ ಹಣ ಬಿಡುಗಡೆ ಮಾಡುತ್ತೇವೆ ಎಂಬ ಘೋಷಣೆ ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಅನ್ನುವಂತೆ ಆಗಿದೆ. ಇತ್ತೀಚೆಗೆ ಸರ್ಕಾರ ಮೊದಲ ಹಂತ ಬಿಟ್ಟು ಮೂರನೇ ಹಂತದ ಯೋಜನೆ ಬಗ್ಗೆ ಹಣ ಕೊಟ್ಟಿದೆ. ರಾಜಕಾರಣಿಗಳು ಕೇಂದ್ರ ಸರ್ಕಾರದತ್ತ ಮುಖ ಮಾಡುತ್ತಿದ್ದಾರೆ. ಹೀಗಾಗಿ ಮೊದಲ ಹಂತದ ನೀರಾವರಿ ಮುಗಿಯುವುದು ಎಂದು ಜನ ನಾಯಕರು ಉತ್ತರಿಸಬೇಕಿದೆ.



ಕೆಬಿಜೆಎನ್ಎಲ್ ವ್ಯವಸ್ಥಾಪಕ ನಿರ್ದೇಶಕರು ಬೆಂಗಳೂರು ಇವರಿಗೆ ತೀರ್ಮ ಅನುಮೋದಿಸಿ ತೀವ್ರವಾಗಿ ಬಾಗಲಕೋಟೆ, ಆಲಮಟ್ಟಿ ಭೂಸ್ವಾಧೀನಾಧಿಕಾರಿಗಳು ಅನುಮೋದನೆ ನೀಡಿ, ಭೂ ಪರಿಹಾರ ಒದಗಿಸಿ, ಕೂಡಲೇ ರೈತರ ಸಮಸ್ಯೆಗಳನ್ನು ಪರಿಹರಿಸಿ, ಪೂರ್ಣ ಪ್ರಮಾಣದ ಕಾಮಗಾರಿ ಪ್ರಾರಂಭಿಸಲು ಕೋರಲಾಗಿದೆ. ರೈತರಿಗೆ ನೋಟಿಸ್ ಮತ್ತು ಮನವೊಲಿಸಿ ಕಾಮಗಾರಿ ಮಾಡಲಾಗುವುದು.

■ **ಅಮರೇಗೌಡ**, ಎಎಲ್‌ಬಿಸಿ ಸಹಾಯಕ ಅಭಿಯಂತರರು

ಚಿಮ್ಮಲಗಿ, ಮುಳವಾಡ ನೀರಾವರಿ ಯೋಜನೆಯ ಬಹಳಷ್ಟು ಹೊಲಗಳು ನೀರು ಕಂಡಿಲ್ಲ. ಬಹಳ ದಿನಗಳಿಂದ ನಿರೀಕ್ಷೆ ಇಟ್ಟಿರುವ ಹೊಲ ಕಾಲುವೆಗಳು ಇನ್ನು ನಿರ್ಮಾಣವಾಗಿಲ್ಲ. ಸಂಪೂರ್ಣ ನೀರಾವರಿ ಜಿಲ್ಲೆಯ ಒಂದು ಕನಸು ಆಗಿಯೇ ಉಳಿದಿದೆ. ಜನ ಪ್ರತಿನಿಧಿಗಳು ಶಕ್ತಿವಂತರು ಆಗಬೇಕಿದೆ.

■ **ಶಾಂತಗೌಡ ಪಾಟೀಲ**, ಉಪಾಧ್ಯಕ್ಷರು, ಕರ್ನಾಟಕ ರಾಜ್ಯ ರೈತ ಸಂಘ

ದಿಗಂತ ವಿಶೇಷ

ಮುಂಗಾರು ಮಳೆ ಕಣ್ಣಾ ಮುಚ್ಚಾಲೆ | ಆತಂಕದಲ್ಲಿ ಅನ್ನದಾತರು

# ಮುಗಿಲಿನತ್ತ ಮುಖ ಮಾಡಿದ ರೈತ

▸ ವಾಗೀಶ ವೀ. ಪಾಟೀಲ


**ರಾಯಚೂರು:** ಮುಂಗಾರು ಪೂರ್ವ ಮಳೆ ಉತ್ತಮವಾಗಿದ್ದರಿಂದ ರೈತರು ಮುಂಗಾರು ಬಿತ್ತನೆ ಅವಧಿಗೂ ಪೂರ್ವದಲ್ಲಿ ಅಧಿಕವಾಗಿ ಮಾಡಿದ್ದರು. ಈ ಬಾರಿ ಉತ್ತಮ ಫಸಲನ್ನು ಪಡೆದುಕೊಳ್ಳುವ ನಿರೀಕ್ಷೆಯಲ್ಲಿದ್ದರು. ಆದರೆ, ಎಲ್ ನಿನೋದಿಂದಾಗಿ ಈ ಬಾರಿಯ ಮುಂಗಾರು ಮಳೆ ಕಣ್ಣಾ ಮುಚ್ಚಾಲೆ ಆಡುತ್ತಿರುವುದರಿಂದ ಬಿತ್ತನೆ ಮಾಡಿದ ರೈತರ ಚಿತ್ತ ಮುಗಿಲಿನತ್ತ ಎನ್ನುವಂತಾಗಿದೆ.

ಬಿತ್ತನೆ ಮಾಡಿರುವ ಬೀಜ ಕೆಲವೆಡೆ ಮೊಳಕೆ ಒಡೆದು ಮೇಲೆ ಬಂದಿದ್ದರೆ ಬಿತ್ತನೆ ಕಾರ್ಯ ಹಿಂದಾದ ಬೀಜ ಮೊಳಕೆ ಬರುವುದಕ್ಕೆ ಸಾಧ್ಯವಾಗದೇ ಮಂಡಿ ಊರಿಕೊಂಡು ಮಳೆಗಾಗಿ ಕಾಯುತ್ತಿವೆ. ಒಂದೆರಡು ದಿನಗಳಲ್ಲಿ ಮಳೆ ಆಗದಿದ್ದರೆ ಈ ಕಾಳುಗಳು ಹಳದಿ ಬಣ್ಣವಾಗಿ ಹಾಳಾಗುತ್ತವೆ ಎನ್ನುವ ಆತಂಕದಲ್ಲಿ ರೈತರಿದ್ದಾರೆ.

ಜಿಲ್ಲೆಯಲ್ಲಿ ಜೂನ್ ತಿಂಗಳಲ್ಲಿ ವಾಡಿಕೆಯಂತೆ 67.4 ಮಿಮೀ ಮಳೆಯಾಗಬೇಕಿತ್ತು. ಆದರೆ, 62.2ರಷ್ಟು ಮಳೆ ಆಗುವ ಮೂಲಕ 8 ಮಿಮೀಗಳಷ್ಟು ಕಡಿಮೆಯಾಗಿದೆ. ಮುಂಗಾರು ಪ್ರಾರಂಭಕ್ಕೂ ಪೂರ್ವದಲ್ಲಿ ಹಸನ ಮಾಡಿಟ್ಟುಕೊಂಡಿದ್ದ ಜಮೀನಿನಲ್ಲಿ ಮೊದಲ ಮಳೆಯಾದಾಗ ಈ ಭಾಗದಲ್ಲಿ ಬಿಳಿ ಬಂಗಾರ ಎಂದೇ ಕರೆಯುವ ಹತ್ತಿ ಬಿತ್ತನೆ ಮಾಡಿದ್ದಾರೆ.

ಕೆಲವೆಡೆ ರೈತರು ಹತ್ತಿ ಬಿತ್ತನೆ ಕಾರ್ಯ ಆರಂಭಿಸಿದ್ದಾರೆ.

ಆದರೆ, ಮಳೆ ಕೊರತೆಯಿಂದ ಭೂಮಿ ತಳ ಹಸಿಯಾಗಿಲ್ಲ. ಹೀಗಾಗಿ ಈಗ ಬಿತ್ತನೆ ಸೂಕ್ತವಲ್ಲ ಮಳೆಯಿಂದ ಭೂಮಿ ಸಂಪೂರ್ಣ ತಂಪಾದ ಮೇಲೆ ಬಿತ್ತನೆ ಮಾಡಬೇಕು. ಹತ್ತಿಯನ್ನು ಅವಧಿಗೂ ಪೂರ್ವದಲ್ಲಿ ಬಿತ್ತನೆ ಮಾಡುವುದರಿಂದ ಬೆಳೆಯ ಬೆಳವಣಿಗೆಗೆ ಪರಿಣಾಮ ಬೀಳುವ ಸಾಧ್ಯತೆಗಳಿವೆ ಎನ್ನುವುದು ರೈತರ ಆಂಬೋಣ.



**5.72 ಲಕ್ಷ ಹೆಕ್ಟೇರ್ ಬಿತ್ತನೆ ಗುರಿ**

ಮುಂಗಾರು ಹಂಗಾಮಿನಲ್ಲಿ ಖುಷ್ಕಿ ಹಾಗೂ ನೀರಾವರಿ ಸೇರಿದಂತೆ ಜಿಲ್ಲೆಯಲ್ಲಿ ಒಟ್ಟು 5.72 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ವಿವಿಧ ಬೆಳೆಗಳ ಬಿತ್ತನೆ ಗುರಿ ಹೊಂದಲಾಗಿದೆ. ಭತ್ತ-1.93 ಲಕ್ಷ ಹೆಕ್ಟೇರ್, ತೊಗರಿ-1.50 ಲಕ್ಷ ಹೆಕ್ಟೇರ್, ಹತ್ತಿ-1.87 ಲಕ್ಷ ಹೆಕ್ಟೇರ್ ಹಾಗೂ ಸೂರ್ಯಕಾಂತಿ, ಶೇಂಗಾ, ಹೆಸರು, ಸಜ್ಜೆ, ಎಳ್ಳು ಸೇರಿದಂತೆ ಇನ್ನಿತರ ಬೆಳೆಗಳು ಸೇರಿದಂತೆ ಒಟ್ಟು 5.72 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಲಾಗಿದೆ. ಇದರಲ್ಲಿ ಶೇ.60ರಷ್ಟು ಪ್ರಮಾಣದಲ್ಲಿ ಹತ್ತಿ ಬಿತ್ತನೆ ಕಾರ್ಯವಾಗಿದೆ.

ಜಿಲ್ಲೆಯಲ್ಲಿ ಈಗಾಗಲೇ ರೈತರು ಬಿತ್ತನೆ ಮಾಡಿದ್ದಾರೆ. ಮಳೆ ಕೊರತೆಯಿಂದ ಸಮಸ್ಯೆಯಾಗುತ್ತಿದೆ. ಕೆಲ ದಿನಗಳಲ್ಲಿ ಮಳೆ ಆಗದಿದ್ದರೆ, ಈಗಾಗಲೇ ಬಿತ್ತನೆಯಿಂದ ಬಂದ ಸಸಿಗಳು ಒಣಗಲಾರಂಭಿಸುತ್ತವೆ. ಕೆಲದಿನಗಳಿಂದ ಮಳೆ ಆಗದ ಕಾರಣಕ್ಕೆ ಬಿತ್ತನೆ ಆಗಿದ್ದರೂ ಮೊಳಕೆ ಒಡೆದು ಸಸಿ ಬಂದಿಲ್ಲ. ಪ್ರಸಕ್ತ ಮಳೆಯ ಅವಶ್ಯಕತೆ ಬಹಳವಿದೆ.

■ **ಲಕ್ಷ್ಮಣಗೌಡ ಕಡಗಂದೊಡ್ಡಿ**, ರೈತ ಮುಖಂಡ

ಜಿಲ್ಲೆಯಲ್ಲಿ ಮೇ ತಿಂಗಳಲ್ಲಿ ವಾಡಿಕೆಗಿಂತಲೂ ಹೆಚ್ಚು ಮಳೆಯಾಗಿದ್ದರಿಂದ ಈಗಾಗಲೇ ಬೆಳೆದು ನಿಂತಿರುವ ಬೆಳೆಗಳಿಗೆ ಸಮಸ್ಯೆ ಇಲ್ಲ. ಅರಕೇರಾ, ದೇವದುರ್ಗ ಹಾಗೂ ಸಿಂಧನೂರು ತಾಲೂಕಿನ ಹೆಚ್ಚು ಮಳೆ ಕೊರತೆಯಾಗಿದೆ. ಹವಾಮಾನದ ಪ್ರಕಾರ 3-4 ದಿನಗಳಲ್ಲಿ ಮಳೆಯಾಗುವ ಸಾಧ್ಯತೆಗಳಿವೆ. ಮಳೆಯಾದರೆ ಇತ್ತೀಚೆಗೆ ಬಿತ್ತಿದ ಬಿತ್ತನೆ ಬೀಜಕ್ಕೂ ಸಮಸ್ಯೆ ಆಗದೇ ಮೊಳಕೆ ಒಡೆದು ಮೇಲೆ ಬರುತ್ತವೆ.

■ **ಪ್ರಕಾಶ ಚವ್ಹಾಣ**, ಕೃಷಿ ಜಂಟಿ ನಿರ್ದೇಶಕ

# ಕಲಾದಗಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಡಿಎಚ್‌ಒ ಭೇಟಿ, ಪರಿಶೀಲನೆ

**ಕಲಾದಗಿ:** ಗ್ರಾಮದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಬದಲು ವೈದ್ಯರ ಪತ್ನಿಯೇ ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದಾರೆ ಎಂದು ಸಾರ್ವಜನಿಕರ ಆರೋಪದ ಹಿನ್ನಲೆಯಲ್ಲಿ ಆರೋಪಿತ ವೈದ್ಯಾಧಿಕಾರಿ ಡಾ.ಎಚ್.ವಿ.ಲೇಬಗೇರಿಯನ್ನು ಈ ಸ್ಥಳದಿಂದ ಬಿಡುಗಡೆಗೊಳಿಸಲಾಗಿದ್ದು, ಅವರ ಬದಲಿಗೆ ಈ ಹಿಂದೆ ಇಲ್ಲಿ ಸೇವೆ ಸಲ್ಲಿಸಿದ್ದ ಡಾ.ಅನೀಲ ಬದ್ನೂರ ಅವರನ್ನು ಮರು ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಿಲ್ಲಾಧಿಕಾರಿ ಡಾ.ಡಿ.ಎನ್.ಮಂಜುನಾಥ ಹೇಳಿದ್ದಾರೆ.



ಡಾ.ಎಚ್.ವಿ.ಲೇಬಗೇರಿಯವರ ಕರ್ತವ್ಯ ಲೋಪದ ಬಗ್ಗೆ ಗ್ರಾಮಸ್ಥರ ಆರೋಪದ ಹಾಗೂ ಮಾಧ್ಯಮಗಳಲ್ಲಿ ಬಂದ ಸುದ್ದಿಯನ್ನಾಧರಿಸಿ ಪ್ರಕರಣದ ಪರಿಶೀಲನೆಗಾಗಿ ಗುರುವಾರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಡಾ.ಲೇಬಗೇರಿಯವರದ್ದು ಬೇಜವಾಬ್ದಾರಿ ತನದ ಬೆಳವಣಿಗೆಯಾಗಿದ್ದು ಈಗಾಗಲೇ ಅವರಿಗೆ ಕಾರಣ ಕೇಳಿ ನೋಟೀಸ್ ನೀಡಲಾಗಿದೆ. ಅವರಿಂದ ಉತ್ತರ ಬಂದ ನಂತರ ಅದನ್ನು ಆಧರಿಸಿ ಹಾಗೂ ಇಲ್ಲಿನ ಸಿಬ್ಬಂದಿಗಳಿಂದ ಹೇಳಿಕೆ ಪಡೆದು ವರದಿಯನ್ನು ಆಯುಕ್ತರಿಗೆ ಮುಂದಿನ ಕ್ರಮಕ್ಕಾಗಿ ಕಳಿಸಲಾಗುವುದು ಎಂದು ಸ್ಪಷ್ಟಪಡಿಸಿದರು.

ವೈದ್ಯರ ಪತ್ನಿ ಮೇಲೆಯೂ ಕ್ರಮ: ಡಾ.ಲೇಬಗೇರಿ ಅವರಿಂದ ನೋಟಿಸ್‌ಗೆ ಉತ್ತರ ಬಂದ ನಂತರ ಅದನ್ನು ಹಾಗೂ ನಮ್ಮ ಪರಿಶೀಲನೆಯನ್ನು ಆಧರಿಸಿ ಚಿಕಿತ್ಸೆ ನೀಡಿರುವ ಆರೋಪದ ವೈದ್ಯರ ಪತ್ನಿ ಎಂದಿರುವ ಮಹಿಳೆಯ ಮೇಲೆ ನಿಶ್ಚಿತವಾಗಿ ಪೋಲಿಸ್ ಕ್ರಮಕ್ಕೆ ಮುಂದಾಗಲಾಗುವುದು ಎಂದು ಹೇಳಿದರು.

ವೈದ್ಯಾಧಿಕಾರಿ ಡಾ.ಲೇಬಗೇರಿ ಅವರ ಆರೋಗ್ಯವೇ ಸರಿಯಿಲ್ಲ ಹೀಗಾಗಿ ಅವರ ಪತ್ನಿ ಚಿಕಿತ್ಸೆ ನೀಡುತ್ತಿದ್ದಾರೆ ಎಂಬ ಮಾತು ಕೇಳಿಬಂದಿದೆ. ಜಿಲ್ಲಾ ಆಸ್ಪತ್ರೆಯಲ್ಲಿ ಮೆಡಿಕಲ್ ಬೋರ್ಡ್ ಕಾರ್ಯ ನಿರ್ವಹಿಸುತ್ತಿದ್ದು, ಅದರ ಮೂಲಕ ಅವರ ಆರೋಗ್ಯವನ್ನು ಪರೀಕ್ಷೆ ಮಾಡಿಸಿ ಒಂದು ವಾರದಲ್ಲೇ ವರದಿ ತರಿಸಿಕೊಳ್ಳಲಾಗುವುದು ಎಂದರು. ಈ ಸಂದರ್ಭದಲ್ಲಿ ಬಾಗಲಕೋಟೆ ತಾಲೂಕು ವೈದಾಧಿಕಾರಿ ಡಾ.ಸರಸ್ವತಿ ಮಾಗಿ ಇದ್ದರು.

# ನಿಯಂತ್ರಣ ತಪ್ಪಿ ಆಳಕ್ಕೆ ಬಿದ್ದ ಕಾರು: ಇಬ್ಬರ ಸಾವು, ಇಬ್ಬರಿಗೆ ಗಾಯ

**ಕಬ್ಬೂರ:** ಪಟ್ಟಣದ ನಿಪ್ಪಾನಿ-ಮುಧೋಳ ಹೆದ್ದಾರಿಯಲ್ಲಿ ನಿಯಂತ್ರಣ ತಪ್ಪಿದ ಕಾರೊಂದು ರಸ್ತೆ ಬದಿಯ ಆಳಕ್ಕೆ ಬಿದ್ದ ಪರಿಣಾಮ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದು, ಮತ್ತಿಬ್ಬರು ತೀವ್ರವಾಗಿ ಗಾಯಗೊಂಡಿರುವ ಭೀಕರ ಘಟನೆ ಕಬ್ಬೂರ ಟೋಲ್ ಗೇಟ್ ಬಳಿ ನಡೆದಿದೆ.





ಚಿಕ್ಕೋಡಿ ತಾಲೂಕಿನ ಮಲಿಕವಾಡ ಗ್ರಾಮದ ಕಾರು ಚಾಲಕ ರಾಜೇಂದ್ರ ಶಂಕರ ಪಾಟೀಲ (50) ಮತ್ತು ಶೀಲಾ ಶ್ರೀಪತಿ ಘಾಟೆ (70) ಅಪಘಾತದಲ್ಲಿ ಮೃತಪಟ್ಟ ದುರ್ದೈವಿಗಳಾಗಿದ್ದಾರೆ. ಮಲಿಕವಾಡ ಗ್ರಾಮದ ನಿವಾಸಿಗಳಾದ ಇವರು ತಮ್ಮ ಸೆಂಟ್ರೋ ಕಾರಿನಲ್ಲಿ ಮಲಿಕವಾಡದಿಂದ ಘಟಪ್ರಭಾ ಕಡೆಗೆ ಸಂಬಂಧಿಕರ ಮನೆಗೆ ಪ್ರಯಾಣಿಸುತ್ತಿದ್ದರು. ಕಬ್ಬೂರ ಟೋಲ್ ಗೇಟ್ ಬಳಿ ಚಲಿಸುತ್ತಿದ್ದಾಗ ಚಾಲಕನ ನಿಯಂತ್ರಣ ತಪ್ಪಿದ ಕಾರು ರಸ್ತೆ ಬದಿಯ ತಗ್ಗಿಗೆ ಉರುಳಿ ಬಿದ್ದಿದೆ. ಅಪಘಾತದ ರಭಸಕ್ಕೆ ಕಾರು ಜಖಂಗೊಂಡಿದ್ದು, ಇಬ್ಬರು ಪ್ರಾಣ ಕಳೆದುಕೊಂಡಿದ್ದಾರೆ.

ಕಾರಿನಲ್ಲಿದ್ದ ಮೋಹನ ಗಣಪತಿ ಘಾಟೆ(60) ಹಾಗೂ ಪ್ರದೀಪ ಶ್ರೀಪತಿ ಘಾಟೆ(48) ಅವರಿಗೆ ತೀವ್ರ ಗಾಯಗಳಾಗಿದ್ದು ಅವರನ್ನು ತಕ್ಷಣವೇ ಚಿಕ್ಕೋಡಿಯ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಘಟನಾ ಸ್ಥಳಕ್ಕೆ ಚಿಕ್ಕೋಡಿ ಪಿಎಸ್‌ಐ ಬಸಗೌಡ ನೇರ್ಲಿ, ಸ್ಥಳೀಯ ಠಾಣೆಯ ಎಎಸ್‌ಐ ಮಾರುತಿ ಉಗಾರೆ, ಅರ್ಜುನ ಗಸ್ತಿ ಸೇರಿದಂತೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಈ ಕುರಿತು ಚಿಕ್ಕೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ರಾಜ್ಯದಲ್ಲಿ ಏಕಕಾಲಕ್ಕೆ ಇಡಿ ಕಾರ್ಯಾಚರಣೆ

• **ಬೆಂಗಳೂರು:** ಕರ್ನಾಟಕ ಅಬಕಾರಿ ಇಲಾಖೆಯಲ್ಲಿ ಭ್ರಷ್ಟಾಚಾರ ಮತ್ತು ಅಕ್ರಮ ಆಸ್ತಿ ಗಳಿಕೆ ಆರೋಪಗಳ ಹಿನ್ನೆಲೆಯಲ್ಲಿ ಜಾರಿ ನಿರ್ದೇಶನಾಲಯ (ಇಡಿ) ಅಧಿಕಾರಿಗಳು ರಾಜ್ಯದ ವಿವಿಧೆಡೆ ವ್ಯಾಪಕ ಶೋಧ ಕಾರ್ಯಾಚರಣೆ ನಡೆಸಿದ್ದು, 13.3 ಕೋಟಿ ರೂ. ಮೌಲ್ಯದ ನಗದು, ಚಿನ್ನಾಭರಣ ಹಾಗೂ ವಿದೇಶಿ ಕರೆನ್ಸಿಯನ್ನು ವಶಪಡಿಸಿಕೊಂಡಿದ್ದಾರೆ.

ಬೆಂಗಳೂರು ವಲಯ ಕಚೇರಿಯ ಇಡಿ ಅಧಿಕಾರಿಗಳು ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ), ಅಡಿಯಲ್ಲಿ ಜೂ.24ರಂದು ಬೆಂಗಳೂರು, ಮೈಸೂರು ಹಾಗೂ ಬೆಳಗಾವಿಯ 14 ಸ್ಥಳಗಳಲ್ಲಿ ಏಕಕಾಲದಲ್ಲಿ ದಾಳಿ ನಡೆಸಿದ್ದರು.

ಕರ್ನಾಟಕ ಲೋಕಾಯುಕ್ತ ಪೊಲೀಸರು ದಾಖಲಿಸಿದ್ದ ಎಫ್‌ಐಆರ್ ಆಧರಿಸಿ ತನಿಖೆ ಆರಂಭಿಸಲಾಗಿದ್ದು, ಅಬಕಾರಿ ಇಲಾಖೆಯ ಹಿರಿಯ ಅಧಿಕಾರಿಗಳು ವಿವಿಧ ಪರವಾನಗಿಗಳನ್ನು ಮಂಜೂರು ಮಾಡುವ ಹಾಗೂ ನವೀಕರಿಸುವ ಸಂದರ್ಭದಲ್ಲಿ ಲಂಚ ಪಡೆಯುತ್ತಿರುವ ಆರೋಪ ಕೇಳಿಬಂದಿತ್ತು. ಈ ಅಕ್ರಮ ಹಣವನ್ನು ವೈಯಕ್ತಿಕ ಆಸ್ತಿ ಸಂಪಾದನೆಗೆ ಬಳಸಲಾಗಿದೆ ಎಂಬ ಆರೋಪದ ಮೇಲೆ ಇಡಿ ತನಿಖೆ ಕೈಗೊಳ್ಳಲಾಗಿದೆ ಎಂದು ತಿಳಿಸಿದೆ. ಅಬಕಾರಿ ಇಲಾಖೆಯ ಅಧಿಕಾರಿಗಳಾದ ಜಗದೀಶ್ ನಾಯಕ್, ಕೆ.ಎಂ. ತಮ್ಮಣ್ಣ ಹಾಗೂ ವೈ.ಡಿ. ಮಂಜುನಾಥ್ ಸೇರಿದಂತೆ ಅವರ ಕುಟುಂಬ ಸದಸ್ಯರು, ವ್ಯವಹಾರ ಪಾಲುದಾರರು ಮತ್ತು ಆಪ್ತ ಸಹಚರರ ನಿವಾಸ ಹಾಗೂ ಕಚೇರಿಗಳ ಮೇಲೆ ಶೋಧ ಕಾರ್ಯಾಚರಣೆ ನಡೆಸಲಾಗಿದೆ ಎಂದು ಇಡಿ ಹೇಳಿದೆ.


### 13.3 ಕೋಟಿ ಮೌಲ್ಯದ ಆಸ್ತಿ ವಶ

**ಶೋಧ ಕಾರ್ಯಾಚರಣೆ ವೇಳೆ ಡಿಜಿಟಲ್ ಸಾಧನಗಳು, ಆಸ್ತಿ ದಾಖಲೆಗಳು, ಲಂಚ ವಿತರಣೆಯ ದಾಖಲೆಗಳು ಸೇರಿದಂತೆ ಹಲವು ಮಹತ್ವದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದ್ದು, ವಿಶೇಷವಾಗಿ ವೈ.ಡಿ. ಮಂಜುನಾಥ್ ಅವರ ಚಾಲಕ, ಕುಟುಂಬ ಸದಸ್ಯರು ಹಾಗೂ ಸಹಚರರ ಬಳಿ ಸುಮಾರು 5.5 ಕೋಟಿ ರೂ. ನಗದು, 7.8 ಕೋಟಿ ರೂ. ಮೌಲ್ಯದ ಚಿನ್ನಾಭರಣ ಮತ್ತು 3.3 ಲಕ್ಷ ರೂ. ಮೌಲ್ಯದ ವಿದೇಶಿ ಕರೆನ್ಸಿ ಪತ್ತೆಯಾಗಿದೆ. ಒಟ್ಟಾರೆ ಈ ಪ್ರಕರಣದಲ್ಲಿ ಇದುವರೆಗೆ 13.3 ಕೋಟಿ ರೂ. ಮೌಲ್ಯದ ಅಪರಾಧದ ಆದಾಯ ವಶಪಡಿಸಿಕೊಳ್ಳಲಾಗಿದೆ. ಪ್ರಕರಣದ ಕುರಿತು ಹೆಚ್ಚಿನ ತನಿಖೆ ಮುಂದುವರಿದಿದೆ ಎಂದು ಇಡಿ ತಿಳಿಸಿದೆ.**

**ಭ್ರಷ್ಟಾಚಾರದ ಜಾಲ ಬಯಲು:** ತನಿಖೆಯಲ್ಲಿ ಅಬಕಾರಿ ಇಲಾಖೆ ಅಧಿಕಾರಿಗಳು, ಮಧ್ಯವರ್ತಿಗಳು ಹಾಗೂ ಖಾಸಗಿ ವ್ಯಕ್ತಿಗಳನ್ನು ಒಳಗೊಂಡ ಸಂಘಟಿತ ಜಾಲವೊಂದು ಕಾರ್ಯನಿರ್ವಹಿಸುತ್ತಿರುವುದು ಬೆಳಕಿಗೆ ಬಂದಿದೆ. ರಾಜ್ಯದ ಮದ್ಯ ಮಾರಾಟ ಮಳಿಗೆಗಳಿಂದ ಪ್ರತಿ ತಿಂಗಳು ನಿಗದಿತ ಮೊತ್ತದ ಲಂಚ ಸಂಗ್ರಹಿಸಲಾಗುತ್ತಿತ್ತು. ಪರವಾನಗಿ ನವೀಕರಣ, ಸ್ಥಳಾಂತರ ಹಾಗೂ ಹೊಸ ಪರವಾನಗಿ ಮಂಜೂರಾತಿ ಸಂದರ್ಭಗಳಲ್ಲಿಯೂ ಹಣ ಸಂಗ್ರಹಿಸಲಾಗುತ್ತಿತ್ತು. ಈ ಹಣವನ್ನು ಕೇಂದ್ರೀಕೃತವಾಗಿ ಸಂಗ್ರಹಿಸಿ ಮಧ್ಯವರ್ತಿಗಳ ಮೂಲಕ ವಿವಿಧ ಹಂತಗಳ ಅಧಿಕಾರಿಗಳಿಗೆ ಹಂಚಿಕೆ ಮಾಡಲಾಗುತ್ತಿತ್ತು ಎಂದು ತನಿಖೆಯಲ್ಲಿ ಪತ್ತೆಯಾಗಿದೆ. ಈ ಹಣದ ಲೆಕ್ಕಪತ್ರಗಳನ್ನು ಅನಧಿಕೃತ ನಗದು ಪುಸ್ತಕದಲ್ಲಿ ದಾಖಲಿಸಲಾಗುತ್ತಿತ್ತು. ದಾಳಿ ವೇಳೆ ಅಂತಹ ನಗದು ಲೆಕ್ಕ ಪುಸ್ತಕವನ್ನೂ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ ಎಂದು ಇಡಿ ತಿಳಿಸಿದೆ.

**ಕುಟುಂಬ ಸದಸ್ಯರ ಹೆಸರಲ್ಲಿ ಮದ್ಯ ವ್ಯಾಪಾರ:** ಇಡಿ ತನಿಖೆಯಲ್ಲಿ ಬಹಿರಂಗಗೊಂಡ ಮತ್ತೊಂದು ಮಹತ್ವದ ಅಂಶವೆಂದರೆ, ಹಲವು ಅಬಕಾರಿ ಅಧಿಕಾರಿಗಳು ತಮ್ಮ ಕುಟುಂಬ ಸದಸ್ಯರ ಹೆಸರಿನಲ್ಲಿ ಅಥವಾ ಕುಟುಂಬದ ನಿಯಂತ್ರಣದಲ್ಲಿರುವ ಸಂಸ್ಥೆಗಳ ಹೆಸರಿನಲ್ಲಿ ಮದ್ಯ ಮಾರಾಟ ಪರವಾನಗಿಗಳನ್ನು ಪಡೆದು ವ್ಯವಹಾರ ನಡೆಸುತ್ತಿರುವುದು. ಈ ವ್ಯವಹಾರಗಳಿಂದ ಬಂದ ಆದಾಯವನ್ನು ಕಾನೂನುಬದ್ಧ ಆದಾಯವೆಂದು ತೋರಿಸುವ ಮೂಲಕ ಅಕ್ರಮ ಹಣವನ್ನು ಆರ್ಥಿಕ ವ್ಯವಸ್ಥೆಯಲ್ಲಿ ಬೆರೆಸುವ ಪ್ರಯತ್ನ ನಡೆದಿರುವುದು ಪತ್ತೆಯಾಗಿದೆ ಎಂದು ಇಡಿ ಹೇಳಿದೆ.

ರಾಮ ಬಾಣ




## ಕಿಡಿ ನುಡಿ

• ವಾಸುದೇವರಾವ್ ಕಕ್ಕೇನೇಜಿ

◈ ಶಾಲೆಯಲ್ಲಿ ಎಸ್ ಸಾರ್ ಎಂದು ಹೇಳುವ ಬದಲು ಜೈ ಶ್ರೀರಾಮ್ ಎನ್ನಿ
**- ವಿದ್ಯಾರ್ಥಿಗಳಿಗೆ ಯತ್ನಾಳ್ ಕರೆ**
**- ಶಾಲೆಯಲ್ಲಿ ಹೇಳೋದಕ್ಕೂ ಮೊದಲು ಮನೆಯಲ್ಲಿ ಹೆತ್ತವರು ಅದನ್ನು ಮಕ್ಕಳಿಗೆ ಅಭ್ಯಾಸ ಮಾಡಿಸಬೇಕಿತ್ತು, ಅಲ್ವಾ?**

## ದಿನ ಭವಿಷ್ಯ

**ಮೇಷ**
ವಿಶ್ವಾಸ ಹೆಚ್ಚಿಸುವ ವಿದ್ಯಮಾನ. ಕಾರ್ಯ ಸಕಾಲದಲ್ಲಿ ಪೂರ್ಣ. ಆರೋಗ್ಯ ಸುಧಾರಣೆ. ಕೌಟುಂಬಿಕ ಸಮಸ್ಯೆ ಶೀಘ್ರ ಇತ್ಯರ್ಥ ಕಾಣಲಿದೆ.

**ವೃಷಭ**
ಅತಿಮುಖ್ಯ ಕೆಲಸದ ಹೊಣೆ ನಿಮಗೆ ಬೀಳಬಹುದು. ಸರಿಯಾಗಿ ನಿಭಾಯಿಸಿ. ಶಾಪಿಂಗ್‌ನಲ್ಲಿ ಅಧಿಕ ಕಾಲ ಕಳೆಯದಿರಿ. ಖರ್ಚು ಅಧಿಕವಾದೀತು.

**ಮಿಥುನ**
ದಿನದ ಅಂತ್ಯಕ್ಕೆ ಮಹತ್ವದ ಕಾರ್ಯ ಸಾಧಿಸುವಿರಿ. ಆತ್ಮವಿಶ್ವಾಸ ಹೆಚ್ಚಳ. ಹಣದ ಬಗ್ಗೆ ದುರಾಸೆ ಬೇಡ. ಇತರರ ಕೆಲಸ ಮೆಚ್ಚಲು ಕಲಿಯಿರಿ.

**ಕಟಕ**
ಹಣದ ವಿಚಾರದಲ್ಲಿ ಸಮಸ್ಯೆ ಉಂಟಾದೀತು. ಕೆಲಸದ ಒತ್ತಡದಿಂದ ಅಶಾಂತಿ. ಪ್ರೀತಿಪಾತ್ರರ ಸಂಗದಲ್ಲಿ ಸಮಾಧಾನ ಪಡೆಯುವಿರಿ.

**ಸಿಂಹ**
ಮನಸ್ಸಿನ ಮೇಲೆ ಹತೋಟಿ ಸಾಧಿಸಿ. ಎತ್ತೆತ್ತಲೋ ಹರಿಯಲು ಬಿಡಬೇಡಿ. ಆರ್ಥಿಕ ಸಂಕಷ್ಟಕ್ಕೆ ಪರಿಹಾರ ಸಿಗಲಿದೆ. ಧನಾಗಮ.

**ಕನ್ಯಾ**
ಅಧಿಕ ಒತ್ತಡದ ದಿನ. ಮಧ್ಯಾಹ್ನದ ವೇಳೆ ಎಲ್ಲ ನಿರಾಳವಾಗಲಿದೆ. ಮನೆಯ ಸಮಸ್ಯೆಗೂ ಪರಿಹಾರ ಸಿಗಲಿದೆ. ಕೌಟುಂಬಿಕ ಸಮಾಧಾನ.

**ತುಲಾ**
ಅನ್ಯರ ದೂರುತ್ತಾ ಕೂರಬೇಡಿ. ನಿಮ್ಮ ಕರ್ತವ್ಯ ನೆರವೇರಿಸಿ. ಆಪ್ತರ ಜತೆ ಸಂಘರ್ಷ ನಡೆದೀತು. ವೃತ್ತಿ ಒತ್ತಡ ಆರೋಗ್ಯದ ಮೇಲೆ ಪರಿಣಾಮ.

**ವೃಶ್ಚಿಕ**
ನಿಮ್ಮ ಸುತ್ತ ಉಲ್ಲಾಸದ ವಾತಾವರಣ. ವೃತ್ತಿಯಲ್ಲಿ ಶುಭ ಸುದ್ದಿ. ಮನೆಯಲ್ಲೂ ಸಾಮರಸ್ಯದ ಪರಿಸರ. ಚಿಂತೆ ಮರೆಯುವ ಕಾಲ.

**ಧನು**
ಕೆಲವಾರು ಬೆಳವಣಿಗೆ ಈ ದಿನ ಸಂಭವಿಸಬಹುದು. ಅದಕ್ಕೆ ಹೊಂದಿಕೊಳ್ಳಲು ಕಲಿಯಿರಿ. ಕುಂಟುನೆಪ ಹೇಳುತ್ತಾ ಕೂರಬೇಡಿ.

**ಮಕರ**
ನಿಮ್ಮ ಗುರಿ ಸಾಧಿಸಲು ಸೂಕ್ತ ಕಾಲ. ಆತ್ಮೀಯರ ಜತೆಗಿನ ಭಿನ್ನಮತ ತೊಡೆಯಲು ಗಮನ ಕೊಡಿ. ಅಧಿಕ ಖರ್ಚು ಚಿಂತೆ ತಂದೀತು.

**ಕುಂಭ**
ಈ ದಿನ ಹೊಸ ಪ್ರಯೋಗ ನಡೆಸಲು ಹೋಗಬೇಡಿ. ಯಥಾಸ್ಥಿತಿ ಕಾಯ್ದುಕೊಂಡು ಹೋಗಿ. ವ್ಯಕ್ತಿಯೊಬ್ಬರು ಕಿರಿಕಿರಿ ಉಂಟು ಮಾಡಿಯಾರು.

**ಮೀನ**
ಕಚೇರಿಯ ರಾಜಕೀಯ ನೆಮ್ಮದಿ ಕೆಡಿಸುವುದು. ಸಿಹಿಕಹಿ ಪ್ರಸಂಗಗಳೆರಡೂ ಉಂಟಾದೀತು. ವೆಚ್ಚ ಅಧಿಕಗೊಳ್ಳಬಹುದು.

**ರಾಹುಕಾಲ : 10.30-12.00**
**ಗುಳಿಕಕಾಲ : 7.30-9.00**

ಅದೃಷ್ಟ ಸಂಖ್ಯೆ : 8,5,0,3

## ಹೂಳೆತ್ತಲು ಯೋಜನೆ

ಪುಟ ೧➡ **ನೀರಿನ ಸದ್ಬಳಕೆಯಿಂದ ರೈತರ ಆದಾಯ ವೃದ್ಧಿ:** ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯಂತೆ ದೇಶವನ್ನು ರಸ್ತೆಗಳ ಮೂಲಕ ಹೇಗೆ ಜೋಡಿಸಲಾಗುತ್ತಿದೆಯೋ, ಅದೇ ರೀತಿ ನೀರಿನ ಯೋಜನೆಗಳ ಮೂಲಕವೂ ಇಡೀ ದೇಶವನ್ನು ಬೆಸೆಯಲಾಗುತ್ತಿದೆ. ರೈತರಿಗೆ ಹೆಚ್ಚಿನ ನೀರು ಲಭ್ಯವಾದರೆ, ಅವರು ವರ್ಷಕ್ಕೆ ಒಂದರ ಬದಲು ಎರಡು ಬೆಳೆಗಳನ್ನು ತೆಗೆಯಲು ಸಾಧ್ಯವಾಗುತ್ತದೆ ಮತ್ತು ಇದರಿಂದ ಅವರ ಆದಾಯವೂ ದ್ವಿಗುಣಗೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟರು.

## ತ್ವರಿತಗತಿ ತನಿಖೆಗೆ ವಿಹಿಂಪ ಆಗ್ರಹ

• **ಹೊಸದಿಲ್ಲಿ:** ಅಯೋಧ್ಯೆ ಶ್ರೀರಾಮ ಮಂದಿರ ದೇಣಿಗೆ ದುರುಪಯೋಗ ಆರೋಪದ ಆಧಾರ ದಲ್ಲಿ ಎಫ್‌ಐಆರ್ ದಾಖಲಿಸಿ, ತ್ವರಿತಗತಿ ಯಲ್ಲಿ ತನಿಖೆ ನಡೆಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸ ಬೇಕೆಂದು ವಿಶ್ವ ಹಿಂದು ಪರಿಷತ್ (ವಿಹಿಂಪ) ಗುರುವಾರ ಆಗ್ರಹಿಸಿದೆ. ನಾಲ್ಕು ತಿಂಗಳೊಳಗೆ ತನಿಖೆ ಪೂರ್ಣಗೊಳಿಸಿ ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ವಿಧಿಸ ಬೇಕು ಎಂದು ವಿಹಿಂಪ ಅಂತಾರಾಷ್ಟ್ರೀಯ ಅಧ್ಯಕ್ಷ ಅಲೋಕ್ ಕುಮಾರ್ ಒತ್ತಾಯಿಸಿದ್ದಾರೆ. ಅಯೋಧ್ಯೆ ರಾಮಮಂದಿರ ದೇಣಿಗೆಯ ದುರುಪಯೋಗದ ಆರೋಪದಲ್ಲಿ ಎಫ್ ಐಆರ್ ದಾಖಲಿಸಬೇಕೆಂಬುದು ನಮ್ಮ ಬೇಡಿಕೆ. ತ್ವರಿತಗತಿ ನ್ಯಾಯಾಲಯ ಪ್ರಕರಣವನ್ನು ಕೈಗೆತ್ತಿಕೊಂಡು ವಿಚಾರಣೆ ನಡೆಸಬೇಕು. ತಪ್ಪಿತಸ್ಥರಿಗೆ ಕಠಿಣವಾದ ಶಿಕ್ಷೆಯಾಗಬೇಕು ಎಂದು ತಿಳಿಸಿದ್ದಾರೆ. ತ್ವರಿತಗತಿ ನ್ಯಾಯಾಲಯದಲ್ಲಿ ದಿನನಿತ್ಯವೂ ವಿಚಾರಣೆ ನಡೆಸಿ ನಾಲ್ಕು ತಿಂಗಳೊಳಗೆ ತನಿಖೆ ಪೂರ್ಣಗೊಳಿಸಬೇಕು ಎಂದಿದ್ದಾರೆ.

### ಗಿಗ್ ಕಾರ್ಮಿಕರಿಗಾಗಿ ರಾಜ್ಯ ಸರ್ಕಾರದ ನೀತಿ ಶ್ಲಾಘನೀಯ: ಬಿಎಂಎಸ್ ರಾಷ್ಟ್ರೀಯ ಉಪಾಧ್ಯಕ್ಷ ಪವನ್ ಕುಮಾರ್

# ಕಾರ್ಮಿಕ ವರ್ಗಕ್ಕೆ ಭದ್ರತೆ ಸಹಿತ ಗೌರವ

• **ಬೆಂಗಳೂರು:** ಕಾರ್ಮಿಕ ವರ್ಗಕ್ಕೆ ಭದ್ರತೆ ಸಹಿತ ಗೌರವ ತಂದುಕೊಡುವುದಕ್ಕೆ,ಆ ಮೂಲಕ ರಾಷ್ಟ್ರ ನಿರ್ಮಾಣಕ್ಕೆ ಕೊಡುಗೆ ನೀಡಲು ಮುಂದಾಗಿರುವ ಭಾರತೀಯ ಮಜ್ದೂರ್ ಸಂಘ (ಬಿಎಂಎಸ್)ದ ರಾಷ್ಟ್ರೀಯ ಉಪಾಧ್ಯಕ್ಷ, ಮಾಧ್ಯಮ ಉಸ್ತುವಾರಿ ಪವನ್‌ಕುಮಾರ್ ಅವರು ಹೊಸ ದಿಗಂತಕ್ಕೆ ವಿಶೇಷ ಸಂದರ್ಶನ ನೀಡಿದ್ದಾರೆ. ಪ್ರಸಕ್ತ ಹೊಸ ಕಾರ್ಮಿಕ ವರ್ಗವಾಗಿರುವ ಗಿಗ್ ಕಾರ್ಮಿಕರಿಗಾಗಿ ಕರ್ನಾಟಕ ಸರ್ಕಾರದ ನೀತಿಯನ್ನು ಅವರು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ.

**▸ಭಾರತೀಯ ಮಜ್ದೂರ್ ಸಂಘದ ಉದ್ದೇಶವೇನು?**

1955ರ ಜುಲೈ 23ರಂದು ಭಾರತೀಯ ಮಜ್ದೂರ್ ಸಂಘ ಪ್ರಾರಂಭವಾಯಿತು. ನಾವೀಗ 72 ವರ್ಷ ಪೂರೈಸುತ್ತಿದ್ದೇವೆ. ಕಾರ್ಮಿಕ ವರ್ಗದ ಆಸಕ್ತಿಯನ್ನು ಗಮನಿಸುತ್ತಾ ರಾಷ್ಟ್ರ ನಿರ್ಮಾಣದಲ್ಲಿ ಕೊಡುಗೆ ನೀಡುವುದು ನಮ್ಮ ಮೂಲ ಕೆಲಸವಾಗಿದೆ. ಬಿಎಂಎಸ್ ಯಾವುದೇ ರಾಜಕೀಯ ಸಂಘಟನೆಯಲ್ಲ. ನಾವು ಸರ್ಕಾರದ ಕ್ರಿಯೆಗೆ ಪ್ರತಿಕ್ರಿಯಿಸುತ್ತೇವೆ.

ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಅದು ಯಾವುದೇ ಸರ್ಕಾರ ಆಗಿರಲಿ, ಅದು ರಾಷ್ಟ್ರದ ಹಿತಕ್ಕೆ, ಬಡ ಕಾರ್ಮಿಕ ವರ್ಗಕ್ಕೆ ಮತ್ತು ಬಡವರಿಗಾಗಿ ಕೆಲಸ ಮಾಡಿದರೆ ನಾವು ಅವರನ್ನು ಬೆಂಬಲಿಸುತ್ತೇವೆ. ಒಂದು ವೇಳೆ ಅವರು ಅದಕ್ಕೆ ವಿರುದ್ಧವಾಗಿ ಕೆಲಸ ಮಾಡಿದರೆ ನಾವು ರಸ್ತೆಗಿಳಿದು ಹೋರಾಟ ಮಾಡುತ್ತೇವೆ. ಪ್ರಸಕ್ತ 6000ಕ್ಕೂ ಅಧಿಕ ಯೂನಿಯನ್‌ಗಳು ಬಿಎಂಎಸ್ ಜೊತೆಗಿವೆ. ಸುಮಾರು 2.5 ಲಕ್ಷ ಸದಸ್ಯರನ್ನು ಹೊಂದಿದ್ದೇವೆ. ಬಿಎಂಎಸ್ ದೇಶದ ಅತೀ ದೊಡ್ಡ ಕಾರ್ಮಿಕ ಸಂಘಟನೆಯಾಗಿದೆ.

**▸ಕಾರ್ಮಿಕರಿಗೆ ಅನುಕೂಲ ಮಾಡಲು ಬಿಎಂಎಸ್ ಹೇಗೆ ಕೆಲಸ ಮಾಡುತ್ತದೆ?**



ನಾವೊಂದು ನೀತಿ ರೂಪಿಸಿದ್ದೇವೆ, ಅದು ಸಂವಾದ ಮತ್ತು ಸಂಘರ್ಷ. ನಾವು ಮಾತುಕತೆ ನಡೆಸುತ್ತೇವೆ, ಅದರಿಂದ ಸಮಸ್ಯೆ ಬಗೆಹರಿದರೆ ಉತ್ತಮ. ಇಲ್ಲದಿದ್ದರೆ ನಾವು ಹೋರಾಟ ಮಾಡುತ್ತೇವೆ. ನಮಗೆ ಅಂತಿಮವಾಗಿ ಕಾರ್ಮಿಕ ವರ್ಗದ ಸಮಸ್ಯೆಗಳನ್ನು ಬಗೆಹರಿಸು ವುದು, ಅವರ ಮೂಲಕ ದೇಶದ ಸಮಸ್ಯೆಗಳನ್ನು ಬಗೆಹರಿಸಬೇಕಿದೆ. ಸ್ವಾತಂತ್ರ್ಯ ಬಂದು 75 ವರ್ಷಗಳ ನಂತರವೂ ಇದು ಸಾಧ್ಯವಾಗದಿದ್ದರೆ ಬಡವರು ಇನ್ನೂ ಬಡವರಾಗಿಯೇ ಇರಬೇಕೇ? ಇನ್ನೂ ಅಪೌಷ್ಟಿಕತೆ ಇರಬೇಕೇ? ಇನ್ನೂ ತಾರತಮ್ಯ ಇರಬೇಕೇ? ಇದಾಗಬಾರದು, ಇದನ್ನು ಸಹಿಸುವುದಕ್ಕೆ ಸಾಧ್ಯವಿಲ್ಲ.

**▸ಗಿಗ್ ಕಾರ್ಮಿಕರ ಕುರಿತಾಗಿ ಬಿಎಂಎಸ್ ಏನು ಮಾಡಿದೆ?**

ಪ್ರಸಕ್ತ ರಾಷ್ಟ್ರೀಯ ಸನ್ನಿವೇಶದಲ್ಲಿ ಅತೀ ದೊಡ್ಡ ಬದಲಾವಣೆಯಂತೆ ಕಾಣುತ್ತಿರುವುದು ಗಿಗ್ ಪ್ಲಾಟ್‌ಫಾರಂ ಎಕಾನಮಿ (ಆನ್‌ಲೈನ್ ಪ್ಲಾಟ್‌ಫಾರಂ ವ್ಯವಹಾರ). ದೇಶದಲ್ಲಿ ಗಿಗ್ ಕಾರ್ಮಿಕರ ಸಂಖ್ಯೆ ಒಂದು ಕೋಟಿಗೂ ಮಿಕ್ಕಿದೆ. ಅವರಿಗೆ ಸಾಮಾಜಿಕ ಭದ್ರತೆ, ಉದ್ಯೋಗ ಭದ್ರತೆ ಎನಿದೆ? ಸಾಮಾಜಿಕ ಭದ್ರತೆ, ಉದ್ಯೋಗ ಭದ್ರತೆಯ ಜೊತೆಗೆ ಅವರಿಗೆ ವೇತನವೂ ಇಲ್ಲ, ಇಂತಹ ಸಂಸ್ಥೆಗಳು (ಅಗ್ರಿಗೇಟರ್) ಹೆಚ್ಚು ಕಮಿಷನ್ ಪಡೆದುಕೊಳ್ಳುತ್ತವೆ. ಇದನ್ನು ಕಡಿಮೆ ಮಾಡಬೇಕಾಗಿದೆ. ಕೆಲ ಸಮಯದ ಹಿಂದೆ ಮಿನಿಟ್ ಸರ್ವಿಸ್ ಎನ್ನುವ ಸೇವೆಗಳು ಬಂದವು. ಬಿಎಂಎಸ್ ಇದನ್ನು ವಿರೋಧಿಸಿತು. ಇದು ಹೇಗೆ ಸಾಧ್ಯವಾಗುತ್ತದೆ? ಈ ಗಿಗ್ ಕಾರ್ಮಿಕರು ಅದನ್ನು ಹೇಗೆ ತಲುಪುತ್ತಾರೆ ಎಂದು ವಿರೋಧ ವ್ಯಕ್ತಪಡಿಸಿದೆವು. ನಮ್ಮ ಹೋರಾಟದ ತರುವಾಯ ಸರ್ಕಾರ ಇದನ್ನು ನಿಷೇಧಿಸಿತು.

ದಿಗಂತ ಸಂದರ್ಶನ

ಗಿಗ್ ಕಾರ್ಮಿಕರಿಗಾಗಿ ಕರ್ನಾಟಕ ಸರ್ಕಾರವು ಉತ್ತಮ ಹೆಜ್ಜೆ ಇಟ್ಟಿದೆ. ಕರ್ನಾಟಕ ಸರ್ಕಾರದ ಈ ಕ್ರಮವನ್ನು ಬಿಎಂಎಸ್ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಸ್ವಾಗತಿಸಿದೆ. ರಾಜ್ಯದ ಕಾರ್ಮಿಕ ಸಚಿವರ ಬಳಿ ತೆರಳಿ ಅವರನ್ನು ಇದಕ್ಕಾಗಿ ಗೌರವಿಸಿದ್ದೇವೆ. ಯಾರು ಉತ್ತಮ ಕೆಲಸ ಮಾಡುತ್ತಾರೋ ಅವರನ್ನು ಗೌರವಿಸುತ್ತೇವೆ. ನಾವು ಸರ್ಕಾರದ ಜೊತೆಗೆ ವ್ಯವಹರಿಸುತ್ತೇವೆಯೇ ಹೊರತು ಪಕ್ಷದ ಜೊತೆಗಲ್ಲ.

**▸ಕೃತಕ ಬುದ್ಧಿಮತ್ತೆ (ಎಐ)ಯಿಂದ ಉದ್ಯೋಗಗಳಿಗೆ ಕತ್ತರಿ ಬೀಳುವುದಿಲ್ಲವೇ? ಉದ್ಯೋಗಿಗಳು ಉದ್ಯೋಗ ಕಳೆದುಕೊಳ್ಳುವುದಕ್ಕೆ ಏನು ಪರಿಹಾರವಿದೆ?**

ಎಐ ತಂತ್ರಜ್ಞಾನವು ಕಾರ್ಮಿಕರು ಅಥವಾ ನೌಕರರ ಕೆಲಸವನ್ನು ಸುಲಭಗೊಳಿಸಬೇಕು. ಬದಲಿಗೆ ಅವರಿಗೆ ಪರ್ಯಾಯ ಆಗಬಾರದು. ಅದು ಕಾರ್ಮಿಕ ವರ್ಗವನ್ನು ಬೆಂಬಲಿಸಬೇಕು. ಆದ್ದರಿಂದ ಈ ತಂತ್ರಜ್ಞಾನವನ್ನು ಮಾನವ ಕೇಂದ್ರಿತ ತಂತ್ರಜ್ಞಾನವಾಗಿಸಬೇಕು. ಬ್ರಿಕ್ಸ್‌ನ ಟ್ರೇಡ್ ಯೂನಿಯನ್ ಫಾರಂನ ಸಮ್ಮೇಳನ ಹೈದರಾಬಾದ್‌ನಲ್ಲಿ ಜುಲೈ 14 ಮತ್ತು 15ರಂದು ನಡೆಯಲಿದೆ.

ಅದರ ಅಜೆಂಡಾದಲ್ಲಿ ಮಾನವ ಕೇಂದ್ರಿತ ತಂತ್ರಜ್ಞಾನ, ಕೌಶಲ ಅಭಿವೃದ್ಧಿ, ಎಲ್ಲರಿಗೂ ಸಾಮಾಜಿಕ ಭದ್ರತೆ ಸೇರಿದಂತೆ ಅನೇಕ ವಿಷಯಗಳ ಕುರಿತು ಚರ್ಚಿಸಲಾಗುತ್ತದೆ. ಜಗತ್ತಿಗೆ ನಾಯಕತ್ವ ನೀಡುವುದು ನಮ್ಮ ಜವಾಬ್ದಾರಿಯಾಗಿದೆ. ಈ ಫಾರಂನ ಅಧ್ಯಕ್ಷ ಬಿಎಂಎಸ್ ಆಗಿದೆ. ಆದ್ದರಿಂದ ಜಗತ್ತಿನ ಬೇರೆ ಬೇರೆ ದೇಶಗಳ ಸಂಘಟನೆಗಳೊಂದಿಗೆ ಚರ್ಚಿಸಿ ಈ ವಿಷಯವನ್ನು ಮುಂದುವರಿಸಲಾಗುತ್ತದೆ.

**▸ಭಾರತದ ಅಮೃತಕಾಲ 2047ಕ್ಕೆ ಕೊಡುಗೆ ನೀಡಲು ಬಿಎಂಎಸ್ ಏನು ಮಾಡುತ್ತದೆ? ಏನಾದರೂ ಅಜೆಂಡಾ ಇದೆಯಾ?**

ಈಗ ದೇಶ ಅಮೃತ ಕಾಲ ಆಚರಿಸುತ್ತಿದೆ. ಭಾರತವು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಬೇಕೆಂದು ಸರ್ಕಾರ ಗುರಿ ನಿಗದಿಪಡಿಸಿದೆ. ಇವತ್ತಿಗೂ ನಾವು ಕನಿಷ್ಠ ವೇತನಕ್ಕಾಗಿ ಹೋರಾಟ ನಡೆಸುತ್ತಿದ್ದೇವೆ. ನಮಗೆ ಜೀವನಾಧಾರ ವೇತನ (ಲೀವಿಂಗ್ ವೇಜ್) ಬೇಕು. ಬಡ ವ್ಯಕ್ತಿಗಳ ಕೊಳ್ಳುವ ಶಕ್ತಿ ಹೆಚ್ಚಾಗಬೇಕು. ಆಗ ಆರ್ಥಿಕ ಚಕ್ರ ನಡೆಯುತ್ತದೆ. ಒಂದು ವೇಳೆ ಅವರ ಕೊಳ್ಳುವ ಸಾಮರ್ಥ್ಯ ಹೆಚ್ಚಳವಾಗದಿದ್ದರೆ ಆರ್ಥಿಕ ಚಕ್ರ ಮುನ್ನಡೆಯುವುದಿಲ್ಲ. ಇವತ್ತಿಗೂ ಈ ದೇಶದಲ್ಲಿ ಬಡತನ ರೇಖೆಗಿಂತ ಕೆಳಗಿರುವವರು ಇದ್ದಾರೆ. ಪ್ರತಿಯೊಬ್ಬರಿಗೂ ಆಹಾರ, ವಸ್ತ್ರ, ವಸತಿ, ಶಿಕ್ಷಣ, ಆರೋಗ್ಯ ಮತ್ತು ಗೌರವ ಈ ಆರು ಮೂಲ ಸೌಕರ್ಯಗಳು ಲಭಿಸಬೇಕು. ಆದರೆ, ಈಗ ಕಾರ್ಮಿಕರಿಗೆ ಗೌರವವಿಲ್ಲದಂತಾಗಿದೆ. ಇದು ಮೂಲ ಸಮಸ್ಯೆಯಾಗಿದೆ. ಅವರ ಕೆಲಸಗಳಿಗೆ ಗೌರವ ಲಭಿಸಬೇಕಾಗಿದೆ. ಯಾವುದೇ ಕೆಲಸ ಕಡಿಮೆಯಲ್ಲ. ಇಷ್ಟು ಅಭಿವೃದ್ಧಿಯಾಗಿದೆ, ಅಮೃತಮಹೋತ್ಸವ ನಡೆದಿದೆ. ಆದರೂ ಈಗಲೂ ಒಳಚರಂಡಿ ಸಂಸ್ಕರಣಾ ಘಟಕದಲ್ಲಿ ಕಾರ್ಮಿಕರು ಮೃತಪಡುತ್ತಿದ್ದಾರೆ.

ಮಾಧ್ಯಮಗಳಲ್ಲಿ ಈ ರೀತಿಯ ಸುದ್ದಿಗಳನ್ನು ಓದುತ್ತಿದ್ದೇವೆ. ಸರ್ಕಾರ ಅವರಿಗೆ ಘೋಷಣೆ ಮಾಡಿದ ಸವಲತ್ತುಗಳು ಲಭಿಸುತ್ತಿಲ್ಲ. ಇದು ಹೇಗಾಗುತ್ತದೆ? ಇದು ಕೇವಲ ಕರ್ನಾಟಕದ ಸಮಸ್ಯೆ ಮಾತ್ರವಲ್ಲ, ಹೆಚ್ಚು ಕಡಿಮೆ ಇಡೀ ದೇಶದ ಸಮಸ್ಯೆಯಾಗಿದೆ. ಮೊದಲು ಕಾರ್ಮಿಕ ವರ್ಗವನ್ನು ಸದೃಢಗೊಳಿಸಬೇಕು, ಅವರನ್ನು ಮುಖ್ಯವಾಹಿನಿಗೆ ತಂದು ರಾಷ್ಟ್ರ ನಿರ್ಮಾಣದಲ್ಲಿ ತೊಡಗಿಸಿಕೊಳ್ಳಬೇಕು.

### ಬಿಎಂಎಸ್‌ನ ಪ್ರಮುಖ ಬೇಡಿಕೆ ಯಾವುವು?

**ಮುಖ್ಯವಾಗಿ ಬಡವರ ಖರೀದಿಸುವ ಸಾಮರ್ಥ್ಯ ಹೆಚ್ಚಾಗಬೇಕು. ಎರಡನೆಯದ್ದು ದೇಶಾದ್ಯಂತ ಇರುವ 17 ಕಾರ್ಯಕ್ರಮಗಳಲ್ಲಿ ಕೆಲಸ ಮಾಡುವ ಎಲ್ಲಾ ಯೋಜನಾ ಕಾರ್ಯಕರ್ತರನ್ನು ಒಬ್ಬ ನೌಕರ ಎಂದು ಪರಿಗಣಿಸಬೇಕು ಮತ್ತು ಅವರಿಗೆ ನೌಕರರ ಎಲ್ಲ ಹಕ್ಕುಗಳನ್ನು ನೀಡಬೇಕು. ಬಿಪಿಎಲ್ ಮಾನದಂಡವನ್ನು ಪರಿಷ್ಕರಿಸಬೇಕು. ದೇಶಾದ್ಯಂತ ಇರುವ ತೈಲ ಉತ್ಪನ್ನ ಕಂಪನಿಗಳು ತಮ್ಮ ಸಿಎಸ್‌ಆರ್ ನಿಧಿಯನ್ನು ತಮ್ಮ ಗ್ರಾಹಕರಾದ ವಾಣಿಜ್ಯ ವಾಹನಗಳ ಚಾಲಕರ ಕಲ್ಯಾಣಕ್ಕಾಗಿ ವಿನಿಯೋಗಿಸಬೇಕು. ಇಪಿಎಸ್-95 ಯೋಜನೆಯನ್ನು 2014ರ ಸೆ.1ರಂದು ಪರಿಷ್ಕರಿಸಲಾಗಿತ್ತು. ಈಗ 12 ವರ್ಷಗಳಾಗಿರುವುದರಿಂದ ಅದನ್ನು ಮತ್ತೆ ಪರಿಷ್ಕರಿಸಬೇಕು. ಗುತ್ತಿಗೆ ನೌಕರರನ್ನು ಖಾಯಂಗೊಳಿಸಿ, ಖಾಯಂ ನೌಕರರ ಎಲ್ಲ ಸವಲತ್ತುಗಳನ್ನು ಅವರಿಗೆ ಒದಗಿಸಬೇಕು.**

# ಸಂವಿಧಾನದ ಮೇಲಿನ ನೇರ ದಾಳಿ: ಮೋದಿ

ಪುಟ ೧➡ ಅನ್ಯಾಯವಾಗಿ ಹೇರಲಾದ ತುರ್ತು ಪರಿಸ್ಥಿತಿಯನ್ನು ಮೌನವಾಗಿ ಸಹಿಸಿ ಕೂರಲೊಪ್ಪದ ಅಸಂಖ್ಯ ಪ್ರಜೆಗಳು, ಸಂವಿಧಾನದ ಸಿದ್ಧಾಂತಗಳ ಎತ್ತಿಹಿಡಿಯುವಲ್ಲಿ ಸಫಲರಾಗಿದ್ದಾರೆ. ತುರ್ತು ಪರಿಸ್ಥಿತಿ ಸಂದರ್ಭದಲ್ಲೇ ದೇಶದ ಕೋಟ್ಯಂತರ ಜನರ ಅಸಾಧಾರಣ ಧೈರ್ಯ ತನ್ಮೂಲಕ ಪ್ರತಿಫಲಿತವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಸಂವಿಧಾನವು 140 ಕೋಟಿ ಭಾರತೀಯರ ಆಶೋತ್ತರಗಳು, ಹಕ್ಕುಗಳು ಮತ್ತು ಕರ್ತವ್ಯಗಳ ಮೂರ್ತರೂಪವಾಗಿದೆ ಎಂದು ಪ್ರಧಾನಿ ಮೋದಿಯವರು 1975ರ ಜೂ.25ರಂದು ಕರಾಳ ತುರ್ತು ಪರಿಸ್ಥಿತಿ ಘೋಷಣೆಯಾದದ್ದನ್ನು ಉಲ್ಲೇಖಿಸಿ ಎಕ್ಸ್‌ಗೆ ಪೋಸ್ಟ್ ಹಾಕಿದ್ದಾರೆ. ಸಾಂವಿಧಾನಿಕ ಮೌಲ್ಯಗಳನ್ನು ಸಂರಕ್ಷಿಸುವಲ್ಲಿ ನಮ್ಮ ಸಾಮೂಹಿಕ ಬದ್ಧತೆಯನ್ನು ನಾವು ಪುನರ್‌ದೃಢೀಕರಿಸುತ್ತೇವೆ. ನಮ್ಮ ಸಂವಿಧಾನದ ಸ್ಫೂರ್ತಿಯ ಮಾರ್ಗದರ್ಶನದಲ್ಲಿ ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಕ್ಕೆ ಬದ್ಧ ಭಾರತವನ್ನು ನಾವು ಕಟ್ಟಲಿದ್ದೇವೆ ಎಂದು ಪ್ರಧಾನಿ ಮೋದಿ ಘೋಷಿಸಿದ್ದಾರೆ.

**ಪ್ರಜಾಸತ್ತೆಯ ಕಗ್ಗೊಲೆ:** 1975ರ ಜೂ.25 ಮತ್ತು 1977ರ ಮಾ.21 ನಡುವಣ ಅವಧಿಯಲ್ಲಿ ಸಂವಿಧಾನದ ಕಲಂ 352ರಲ್ಲಿ ಭಾರತವನ್ನು ತುರ್ತು ಪರಿಸ್ಥಿತಿಗೆ ನೂಕಲಾಗಿತ್ತು. 1975ರ ಜೂ.25ರಂದು ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿಸಲಾಗಿತ್ತು ಎಂದು ಈ ಕುರಿತ ಗೆಜೆಟ್ ಅಧಿಸೂಚನೆ ಹೇಳಿದೆ. ತುರ್ತು ಪರಿಸ್ಥಿತಿ ಹೆಸರಲ್ಲಿ ಆಗಿನ ಕಾಂಗ್ರೆಸ್ ಸರ್ಕಾರ ಅಧಿಕಾರವನ್ನು ಸಖತ್ ದುರ್ಬಳಸಿತ್ತು ಮತ್ತು ದೇಶದ ಜನರ ವಿರುದ್ಧ ಮೇರೆ ಮೀರಿ ಅನ್ಯಾಯ, ದೌರ್ಜನ್ಯವೆಸಗಿತ್ತು. 2025ರಿಂದ ಜೂ.25ನ್ನು ನರೇಂದ್ರ ಮೋದಿ ಸರ್ಕಾರ ಸಂವಿಧಾನ ಹತ್ಯಾ ದಿನವಾಗಿ ಆಚರಿಸುತ್ತಿದೆ. ಭಾರತೀಯ ಪ್ರಜಾಸತ್ತೆಯನ್ನು ಕ್ರೂರವಾಗಿ ಹೊಸಕಿಹಾಕಿದ ಕರಾಳ ಸನ್ನಿವೇಶವನ್ನು ಸಂವಿಧಾನ ಹತ್ಯಾ ದಿವಸ್ ಪ್ರತಿಯೋರ್ವರಿಗೂ ನೆನಪಿಸುತ್ತದೆ ಎಂದು ಪ್ರಧಾನಿ ಮೋದಿ ಎಕ್ಸ್‌ಗೆ ಹಾಕಿರುವ ಮತ್ತೊಂದು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ಪ್ರಜಾಸತ್ತೆ, ಸಂವಿಧಾನ ಮತ್ತು ನಾಗರಿಕರ ಹಕ್ಕುಗಳ ಸಂರಕ್ಷಣೆಗೆ ಸದಾ ಬದ್ಧರಿರಲು ಸಂವಿಧಾನ ಹತ್ಯಾ ದಿವಸವು ಪ್ರೇರಣೆಯಾಗಿದೆ. ತುರ್ತು ಪರಿಸ್ಥಿತಿಯನ್ನು ವಿರೋಧಿಸಿದ ಎಲ್ಲಾ ಮಹಾನ್ ವ್ಯಕ್ತಿಗಳಿಗೂ ನನ್ನ ವಂದನೆಗಳು ಎಂದು ಪ್ರಧಾನಿ ಮೋದಿ ಹಿಂದಿಯಲ್ಲಿ ಹಾಕಿರುವ ಮಗದೊಂದು ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

**ಪತ್ರಿಕೆಗಳ ಮೇಲೆ ಬಲಪ್ರಯೋಗ:** ತುರ್ತು ಪರಿಸ್ಥಿತಿ ಘೋಷಣೆಯು ಭಾರತೀಯ ಸಾಂವಿಧಾನಿಕ ಚರಿತ್ರೆಯಲ್ಲೇ ತಿರುವಾಗಿತ್ತು. ಅಧಿಕಾರ ಮೀರಿ ವರ್ತಿಸುವ ಅಧಿಕಾರ ಕಾರ್ಯಾಂಗಕ್ಕೆ ಲಭಿಸಿತ್ತು ಮತ್ತು ರಾಜ್ಯಗಳು ಕೇಂದ್ರದ ಹಿಡಿತಕ್ಕೊಳಗಾಗಿದ್ದವು. ಸಾಂವಿಧಾನಿಕ ಸುರಕ್ಷೆಗಳು ವ್ಯವಸ್ಥಿತವಾಗಿ ಅಮಾನತಾಗಿದ್ದವು. ಸಾಂಸ್ಥಿಕ ವ್ಯವಸ್ಥೆಗಳು ಮತ್ತು ಆಡಳಿತಾತ್ಮಕ ಆದೇಶಗಳ ಮುಖೇನ ಪತ್ರಿಕೆಗಳು, ಸಾರ್ವಜನಿಕ ಮಾಹಿತಿ ವ್ಯವಸ್ಥೆಗಳ ಮೇಲೆ ನಿಯಂತ್ರಣ ಸಾಧಿಸಲಾಗಿತ್ತು. ನ್ಯಾಯಾಂಗ ಪರಾಮರ್ಶೆ ಮತ್ತು ಸಾಂಸ್ಥಿಕ ಪರಿಶೋಧನಾ ವ್ಯವಸ್ಥೆಗಳನ್ನು ದುರ್ಬಲಗೊಳಿಸುವಂತಹ ಸರಣಿ ಸಾಂವಿಧಾನಿಕ ತಿದ್ದುಪಡಿಗಳನ್ನು ಸಂಸತ್ತು ಅಂಗೀಕರಿಸಿತ್ತು. ಬಲವಂತದ ಸಂತಾನ ಹರಣ ಅಭಿಯಾನವು ತುರ್ತು ಪರಿಸ್ಥಿತಿ ಸಂದರ್ಭದ ತೀರಾ ವಿವಾದಾಸ್ಪದ ಅಂಶಗಳಲ್ಲೊಂದಾಗಿದೆ. ಸಾರ್ವತ್ರಿಕ ಚುನಾವಣೆಗಳು ಸೃಜಿಸಿದ ರಾಜಕೀಯ ತಿರುವುಗಳ ಪರಿಣಾಮ 1977 ಮಾರ್ಚ್‌ನಲ್ಲಿ ತುರ್ತು ಪರಿಸ್ಥಿತಿ ಕೊನೆಗೂ ಅಂತ್ಯಗೊಂಡಿತ್ತು.

# 15ರ ವೈಭವಕ್ಕೆ ಕಾಯುತ್ತಿದೆ ಇತಿಹಾಸ!

• **ಮುಂಬೈ:** ವಿಶ್ವವೇ ತಿರುಗಿ ನೋಡುವ ವಿಸ್ಮಯವೊಂದು ವೇದಿಕೆ ಸಜ್ಜಾಗಿದೆ. ಕಲ್ಪನೆಗೂ ಮೀರಿದ ಬ್ಯಾಟಿಂಗ್‌ನೊಂದಿಗೆ ಐಪಿಎಲ್, ಅಂಡರ್-19 ಹಾಗೂ ಭಾರತ ಎ ತಂಡಗಳಲ್ಲಿ ಮಿಂಚುತ್ತಿದ್ದ 15 ವರ್ಷದ ವೈಭವ್ ಸೂರ್ಯವಂಶಿ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಶುಕ್ರವಾರ ಪದಾರ್ಪಣೆ ಮಾಡಲು ಸಿದ್ಧರಾಗಿದ್ದಾರೆ. ಭಾರತ ಐರ್ಲೆಂಡ್ ವಿರುದ್ಧ 2 ಟಿ20 ಪಂದ್ಯಗಳನ್ನಾಡಲಿದೆ. ಸಂಭಾವ್ಯ ತಂಡದಲ್ಲಿರುವ ವೈಭವ್ ಪದಾರ್ಪಣೆ ಮಾಡುವ ನಿರೀಕ್ಷೆಗಳಿವೆ. ಐಪಿಎಲ್‌ನಲ್ಲಿ ವಿಸ್ಮಯ ಪ್ರದರ್ಶನ ನೀಡಿರುವ ಅವರು, ದಾಖಲೆಗಳಿಂದಲೇ ವಿಶ್ವದ ಗಮನ ಸೆಳೆದಿದ್ದರು. ಈಗಾಗಲೇ ನೀಲಿ ಜೆರ್ಸಿ ಪಡೆದಿರುವ ವೈಭವ್ ತಂಡದೊಂದಿಗೆ ಐರ್ಲೆಂಡ್‌ಗೆ ತಲುಪಿದ್ದಾರೆ. ಶುಕ್ರವಾರ ನಡೆಯಲಿರುವ ಪಂದ್ಯದಲ್ಲಿ ಅವರು ಆಡಿದರೆ, ಸಚಿನ್ ತೆಂಡೂಲ್ಕರ್ ಹೆಸರಿನಲ್ಲಿರುವ ಮತ್ತು ವಿಶ್ವದ ಅನೇಕ ಆಟಗಾರರ ಹೆಸರಿನಲ್ಲಿರುವ ದಾಖಲೆಗಳನ್ನು ಮುರಿಯಲಿದ್ದಾರೆ.



**ಸಚಿನ್ ಬಳಿಕವಲ್ಲ, ಸಚಿನ್‌ಗೂ ಮೊದಲೇ!** ಕ್ರಿಕೆಟ್ ದೇವರು ಅನಿಸಿಕೊಳ್ಳುವ ಸಚಿನ್ ತೆಂಡೂಲ್ಕರ್ ಇಂಥದ್ದೇ ದಾಖಲೆಯೊಂದನ್ನು ಆಗಿನ ದಿನಗಳಲ್ಲಿ ಮಾಡಿದ್ದರು. 1989ರಲ್ಲಿ ಪಾಕಿಸ್ತಾನದೊಂದಿಗೆ ನಡೆದ ಪಂದ್ಯವೊಂದರಲ್ಲಿ 16 ವರ್ಷ 205 ದಿನ ವಯಸ್ಸಿನ ಸಚಿನ್ ತೆಂಡೂಲ್ಕರ್ ಭಾರತ ತಂಡವನ್ನು ಪ್ರತಿನಿಧಿಸಿದ್ದರು. ಅಂದಿನಿಂದಿನ ಇಂದಿನವರೆಗೆ ಸಚಿನ್ ಮಾಡಿದ ದಾಖಲೆ ಅಚಲವಾಗಿತ್ತು. ವೈಭವ್ ಸೂರ್ಯವಂಶಿ ಬಗ್ಗೆ ಮಾತನಾಡುವಾಗ ಎಲ್ಲರೂ ಸಚಿನ್ ಬಳಿಕ ಅತಿ ಕಿರಿಯ ಎಂಬ ಮಾತನ್ನು ಹೇಳುತ್ತಾ ಬಂದರು. ಆದರೆ ವಾಸ್ತವವಾಗಿ ವೈಭವ್ ಸಚಿನ್ ಬಳಿಕವಲ್ಲ, ಸಚಿನ್‌ಗೂ ಮೊದಲೇ. ಏಕೆಂದರೆ ವೈಭವ್ ಈ ದಾಖಲೆಯನ್ನು 15 ವರ್ಷ 88 ದಿನದಲ್ಲಿ ಮುರಿಯಲಿದ್ದಾರೆ. ಭಾರತ ಪರ ಅವರೇನಾದರೂ ಆಡಿದರೆ ಇತಿಹಾಸವಾಗಲಿದೆ.

**ಅತಿ ಕಿರಿಯ ದಾಖಲೆ ಯಾರ ಹೆಸರಲ್ಲಿದೆ?** ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆಡಿದ ಅತಿ ಕಿರಿಯ ಆಟಗಾರ ಎಂಬ ದಾಖಲೆ ವಿಶ್ವದ ಹಲವಾರು ಕ್ರಿಕೆಟಿಗರ ಹೆಸರಲ್ಲಿದೆ. ಆದರೆ ಅಂತಾರಾಷ್ಟ್ರೀಯ ಕ್ರಿಕೆಟ್ ಸಂಸ್ಥೆಯ ಸಂಪೂರ್ಣ ಸದಸ್ಯತ್ವ ಹೊಂದಿದ ದೇಶಗಳಿಂದ ಪ್ರತಿನಿಧಿಸುವುದೇ ಅಧಿಕೃತ ದಾಖಲೆ. ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿರುವುದು ಪಾಕಿಸ್ತಾನದ ಹಸನ್ ರಜಾ. 14 ವರ್ಷ 233 ದಿನಗಳಲ್ಲಿ ಆಡಿ ಈ ದಾಖಲೆ ಹೊಂದಿದ್ದರು. ಆದರೆ, ಅವರ ವಯಸ್ಸಿನ ಕುರಿತು ಗೊಂದಲಗಳು ಉಂಟಾದವು.

ಪರಿಣಾಮ ಅವರ ದಾಖಲೆ ಯಾರೊಬ್ಬರೂ ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ. ವೈಭವ್ 15 ವರ್ಷದವರು. ಅವರೇನಾದರೂ ಆಡಿದರೆ, ಅತಿ ಕಿರಿಯ ಎಂದು ಕರೆದರೂ ತಪ್ಪಿಲ್ಲ. ಇದಲ್ಲದೆ ಟಿ20 ಕ್ರಿಕೆಟ್‌ನಲ್ಲಿ ಐರ್ಲೆಂಡ್‌ನ ಜೋಶ್ವಾ ಲಿಟಲ್ ಎಂಬಾತರು 16 ವರ್ಷ 309 ದಿನದಲ್ಲಿ ಮಾಡಿದ್ದರು. ಈ ದಾಖಲೆ ವೈಭವ್ ಅಳಿಸಿ ಹಾಕಲಿದ್ದಾರೆ.

### ಆರೋಗ್ಯ ಸಚಿವ ಯು.ಟಿ.ಖಾದರ್ ಹೇಳಿಕೆ

# ಆಂಬುಲೆನ್ಸ್ ಸೇವೆಗೆ ಮತ್ತಷ್ಟು ಬಲ

• **ಬೆಂಗಳೂರು:** ರಾಜ್ಯದಲ್ಲಿ 108 ಆರೋಗ್ಯ ಕವಚ ಯೋಜನೆ ಅಡಿಯಲ್ಲಿ ಆಂಬುಲೆನ್ಸ್ ಸೇವೆಯನ್ನು ಮತ್ತಷ್ಟು ಬಲಪಡಿಸಲು ಸರ್ಕಾರ ಆದ್ಯತೆ ನೀಡಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದರು.



ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಷ್ಟ್ರೀಯ ಮಾನದಂಡದ ಪ್ರಕಾರ ತುರ್ತು ಪರಿಸ್ಥಿತಿಯಲ್ಲಿ ರೋಗಿಯನ್ನು ಚಿಕಿತ್ಸಾ ಕೇಂದ್ರಕ್ಕೆ ಕರೆದೊಯ್ಯುವ ಗೋಲ್ಡನ್ ಅವರ್ ಅವಧಿಯನ್ನು 20 ನಿಮಿಷಗಳಾಗಿ ನಿಗದಿಪಡಿಸಲಾಗಿದೆ. ಆದರೆ ವಿವಿಧ ಕಾರಣಗಳಿಂದ ರಾಜ್ಯದಲ್ಲಿ ಈ ಅವಧಿಯೊಳಗೆ ರೋಗಿಗಳನ್ನು ಆಸ್ಪತ್ರೆಗೆ ತಲುಪಿಸುವುದು ಸಾಧ್ಯವಾಗುತ್ತಿರಲಿಲ್ಲ ಎಂದು ಹೇಳಿದರು.

ಈ ಸಮಸ್ಯೆಯನ್ನು ನಿವಾರಿಸಲು ವ್ಯವಸ್ಥೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗುತ್ತಿದ್ದು, ಇನ್ನು ಮುಂದೆ 10 ನಿಮಿಷಗಳ ಪ್ಲಾಟಿನಂ ಅವರ್ ಗುರಿಯನ್ನು ಹೊಂದಲಾಗಿದೆ. ಆ್ಯಂಬುಲೆನ್ಸ್ ರೋಗಿಯ ಬಳಿ ತಲುಪಿದ ತಕ್ಷಣವೇ ತುರ್ತು ಚಿಕಿತ್ಸೆ ಆರಂಭವಾಗುವಂತೆ ಕ್ರಮ ಕೈಗೊಳ್ಳಲಾಗುತ್ತಿದೆ. ಆ್ಯಂಬುಲೆನ್ಸ್‌ಗಳಲ್ಲಿ ತರಬೇತಿ ಪಡೆದ ಶುಶ್ರೂಷಕರು ಹಾಗೂ ತಂತ್ರಜ್ಞರನ್ನು ನಿಯೋಜಿಸಲಾಗಿದ್ದು, ರೋಗಿಗಳಿಗೆ ಸ್ಥಳದಲ್ಲಿಯೇ ಪ್ರಾಥಮಿಕ ಚಿಕಿತ್ಸೆ ದೊರೆಯಲಿದೆ ಎಂದು ಖಾದರ್ ವಿವರಿಸಿದರು.

ಜನಔಷಧ ಕೇಂದ್ರಗಳಲ್ಲಿ ಬ್ರ್ಯಾಂಡೆಡ್ ಔಷಧಗಳ ಮಾರಾಟದ ಕುರಿತು ಪ್ರತಿಕ್ರಿಯಿಸಿದ ಸಚಿವರು, ಯಾವುದೇ ಖಾಸಗಿ ಕಂಪನಿಯ ಔಷಧಗಳನ್ನು ನೇರವಾಗಿ ಮಾರಾಟ ಮಾಡಲು ಅವಕಾಶ ಇಲ್ಲ ಎಂದು ಸ್ಪಷ್ಟಪಡಿಸಿದರು. ಆರೋಗ್ಯ ಇಲಾಖೆ ಹಾಗೂ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳಿಗೆ ಅನುಗುಣವಾಗಿ ಮಾತ್ರ ಔಷಧಗಳ ಮಾರಾಟ ನಡೆಯಬೇಕು. ಜನಔಷಧ ಕೇಂದ್ರಗಳಲ್ಲಿ ಕಡಿಮೆ ಬೆಲೆಗೆ ಔಷಧಗಳು ದೊರೆಯುತ್ತವೆ ಎಂಬ ಕಾರಣವನ್ನು ದುರುಪಯೋಗಪಡಿಸಿಕೊಂಡು, ಸರ್ಕಾರದ ಮಾನದಂಡಗಳಿಗೆ ಹೊಂದಿಕೆಯಾಗದ ಔಷಧಗಳನ್ನು ಮಾರಾಟ ಮಾಡಿ ಸಾರ್ವಜನಿಕರನ್ನು ತಪ್ಪುದಾರಿಗೆಳೆಯುವ ಕೆಲಸ ನಡೆಯಬಾರದು ಎಂದು ಎಚ್ಚರಿಸಿದರು. ರಾಜ್ಯದ ಆರೋಗ್ಯ ಸೇವೆಗಳ ಗುಣಮಟ್ಟವನ್ನು ಹೆಚ್ಚಿಸುವ ಜತೆಗೆ ಜನರಿಗೆ ತ್ವರಿತ ಹಾಗೂ ಸುರಕ್ಷಿತ ವೈದ್ಯಕೀಯ ನೆರವು ಒದಗಿಸಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

# ಸಚಿವರಿಗೆ ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿ

• **ಬೆಂಗಳೂರು:** ರಾಜ್ಯದ ಪ್ರತಿ ಜಿಲ್ಲೆಗಳ ಪ್ರಕೃತಿ ವಿಕೋಪ ನಿರ್ವಹಣೆಯ ಮೇಲುಸ್ತುವಾರಿಯ ಜವಾಬ್ದಾರಿಯನ್ನು ಸಚಿವರಿಗೆ ವಹಿಸಿ ರಾಜ್ಯ ಸರ್ಕಾರ ಆದೇಶಿಸಿದ್ದು, ಪ್ರತಿಯೊಬ್ಬ ಸಚಿವರಿಗೆ ತಲಾ ಎರಡರಿಂದ ಮೂರು ಜಿಲ್ಲೆಯ ಉಸ್ತುವಾರಿ ನೀಡಲಾಗಿದೆ. ಸರ್ಕಾರದ ಆದೇಶದಂತೆ ಡಿಸಿಎಂ ಡಾ. ಜಿ. ಪರಮೇಶ್ವರಗೆ ತುಮಕೂರು, ಚಿತ್ರದುರ್ಗ, ಕೆ.ಎಚ್. ಮುನಿಯಪ್ಪಗೆ ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ವಿಜಯನಗರ, ರಾಮಲಿಂಗಾರೆಡ್ಡಿಗೆ ಬೆಂಗಳೂರು ದಕ್ಷಿಣ ಮತ್ತು ಮಂಡ್ಯ, ಎಂ.ಬಿ. ಪಾಟೀಲ್‌ಗೆ ವಿಜಯಪುರ ಮತ್ತು ಬಾಗಲಕೋಟೆ, ಕೆ.ಜೆ. ಜಾರ್ಜ್‌ಗೆ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ದಾವಣಗೆರೆ, ಕೃಷ್ಣ ಬೈರೇಗೌಡಗೆ ಬೆಂಗಳೂರು ನಗರ ಮತ್ತು ಹಾಸನ, ಈಶ್ವರ ಖಂಡ್ರೆಗೆ ಬೀದರ್ ಮತ್ತು ಗದಗ ಜಿಲ್ಲೆಗಳನ್ನು ನೀಡಲಾಗಿದೆ.

ಸತೀಶ್ ಜಾರಕಿಹೊಳಿಗೆ ಬೆಳಗಾವಿ, ಧಾರವಾಡ ಮತ್ತು ಹಾವೇರಿ, ಪ್ರಿಯಾಂಕ ಖರ್ಗೆಗೆ ಕಲಬುರ್ಗಿ ಮತ್ತು ಯಾದಗಿರಿ, ಡಾ. ಶರಣಪ್ರಕಾಶ್ ಪಾಟೀಲಗೆ ರಾಯಚೂರು ಮತ್ತು ಕೊಪ್ಪಳ, ಯು.ಟಿ ಖಾದರ್‌ಗೆ ಉಡುಪಿ, ಕೊಡಗು, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ, ಬೈರತಿ ಸುರೇಶ್‌ಗೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಹಾಗೂ ಯತೀಂದ್ರ ಸಿದ್ದರಾಮಯ್ಯಗೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳ ಮೇಲುಸ್ತುವಾರಿ ವಹಿಸಲಾಗಿದೆ.

ಈ ಸಚಿವರು ಬರ ಹಾಗೂ ಇನ್ನಿತರೆ ಪ್ರಕೃತಿ ವಿಕೋಪಗಳ ಕುರಿತು ಆಯಾ ಜಿಲ್ಲೆಗಳಲ್ಲಿ ಅಧಿಕಾರಿಗಳ ಸಭೆ ನಡೆಸಿ ಮೇಲುಸ್ತುವಾರಿ ವಹಿಸುವಂತೆ ತಿಳಿಸಲಾಗಿದೆ.

# ಖರ್ಗೆ ಕುಟುಂಬದಿಂದ ಭೂ ಕಬಳಿಕೆ: ಆರೋಪ

ಪುಟ ೧➡ ಇದಲ್ಲದೆ, 2016ರಲ್ಲಿ ಪಾಲಿ ಭಾಷಾ ಸಂಶೋಧನೆಗಾಗಿ 19 ಎಕರೆ ಭೂಮಿ, 2011ರಲ್ಲಿ ಗುಲ್ಬರ್ಗಾ ಪ್ರದೇಶದಲ್ಲಿ 7.18 ಎಕರೆ ಭೂಮಿ ಹಾಗೂ 2010ರಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ 8,125 ಚದರ ಮೀಟರ್ ಭೂಮಿ ಹಂಚಿಕೆಗೊಂಡಿರುವ ವಿಚಾರಗಳನ್ನೂ ಭಂಡಾರಿ ಪ್ರಸ್ತಾಪಿಸಿದ್ದಾರೆ. ಸಿದ್ಧಾರ್ಥ್ ವಿಹಾರ್ ಟ್ರಸ್ಟ್ ಮೂಲಕ ಖರ್ಗೆ ಕುಟುಂಬ ಕರ್ನಾಟಕದಲ್ಲಿ ಭೂ ಕಬಳಿಕೆ ನಡೆಸಿದೆ. ಈ ಪ್ರಕರಣಗಳಲ್ಲಿ ಭ್ರಷ್ಟಾಚಾರ ತಡೆ ಕಾಯ್ದೆಯ ಸೆಕ್ಷನ್ 13(1)(ಎ) ಮತ್ತು 13(1)(ಬಿ) ಉಲ್ಲಂಘನೆಯಾಗಿದೆ ಎಂದು ಪ್ರದೀಪ್ ಭಂಡಾರಿ ಆರೋಪಿಸಿದರು.

**ಆರೋಪ ಸುಳ್ಳು, ತನಿಖೆ ನಡೆಸಿ ಜೈಲಿಗೆ ಹಾಕಲಿ: ಖರ್ಗೆ ಸವಾಲು:** ಬಿಜೆಪಿ ಆರೋಪಕ್ಕೆ ತಿರುಗೇಟು ನೀಡಿರುವ ಸಚಿವ ಪ್ರಿಯಾಂಕ್ ಖರ್ಗೆ, ರಾಜ್ಯದಲ್ಲಿ 5 ಜನ ಬಿಜೆಪಿ ಮುಖ್ಯಮಂತ್ರಿಗಳು ಅಧಿಕಾರದಲ್ಲಿದ್ದರು. ಕೇಂದ್ರದಲ್ಲಿ ನರೇಂದ್ರ ಮೋದಿಯವರು 12 ವರ್ಷದಿಂದ ಪ್ರಧಾನಿಯಾಗಿದ್ದು, ನಿಮ್ಮದೇ ಸರ್ಕಾರ ಆಡಳಿತದಲ್ಲಿದೆ. ಆದರೂ ನಾನು ಮುಕ್ತವಾಗಿ ತಿರುಗಾಡುತ್ತಿದ್ದೇನೆ, ತಪ್ಪಿದ್ದರೆ ಜೈಲಿಗೆ ಹಾಕಿ ಎಂದು ಸವಾಲು ಹಾಕಿದ್ದಾರೆ.

# ಲಿಂಗತ್ವ ಅಲ್ಪಸಂಖ್ಯಾತರು ಗೃಹಲಕ್ಷ್ಮಿ ಫಲಾನುಭವಿಗಳು

• **ಬೆಂಗಳೂರು:** ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ವಿತರಿಸುವ ಅಂತ್ಯೋದಯ, ಬಿಪಿಎಲ್ ಮತ್ತು ಎಪಿಎಲ್ ಪಡಿತರ ಚೀಟಿಗಳಲ್ಲಿ ಕುಟುಂಬದ ಯಜಮಾನಿ ಎಂದು ನಮೂದಿಸಿರುವ ಮಹಿಳೆಯರು ಹಾಗೂ ಲಿಂಗತ್ವ ಅಲ್ಪಸಂಖ್ಯಾತರು ಗೃಹಲಕ್ಷ್ಮಿ ಯೋಜನೆ ಅರ್ಹ ಫಲಾನುಭವಿಗಳಾಗಿದ್ದಾರೆ ಎಂದು ರಾಜ್ಯ ಸರ್ಕಾರ ಸ್ಪಷ್ಟಪಡಿಸಿದೆ.

ಗೃಹಲಕ್ಷ್ಮಿ ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾಧ್ಯಮಗಳಲ್ಲಿ ಪ್ರಕಟವಾದ ವರದಿಗಳಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸ್ಪಷ್ಟೀಕರಣ ನೀಡಿದೆ. ಕುಟುಂಬದ ಯಜಮಾನಿ ಅಥವಾ ಯಜಮಾನಿಯ ಪತಿ ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ ಮತ್ತು ಜಿಎಸ್‌ಟಿ ರಿಟರ್ನ್ ಸಲ್ಲಿಸುವವರಾಗಿದ್ದಲ್ಲಿ ಅಂತಹ ಮಹಿಳೆಯರು ಈ ಯೋಜನೆಗೆ ಅರ್ಹರಾಗಿರುವುದಿಲ್ಲ. ನೋಂದಣಿಯಾದ ಫಲಾನುಭವಿಗಳ ಪೈಕಿ ಈವರೆಗೆ ಆದಾಯ ತೆರಿಗೆ ಪಾವತಿದಾರರು ಮತ್ತು ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸುತ್ತಿರುವ ಒಟ್ಟು 1,94,560 ಮಹಿಳೆಯರಿದ್ದಾರೆ ಎಂದು ತಿಳಿಸಿದೆ.

ಏಪ್ರಿಲ್ 2026ರ ಅಂತ್ಯಕ್ಕೆ 1,30,35,318 ಫಲಾನುಭವಿಗಳು ಯಶಸ್ವಿಯಾಗಿ ನೋಂದಣಿ ಮಾಡಿಕೊಂಡಿದ್ದಾರೆ. ಈ ಪೈಕಿ ಇತರೆ 95,66,679 ಫಲಾನುಭವಿಗಳು, ಪರಿಶಿಷ್ಟ ಜಾತಿಯ 24,95,604 ಫಲಾನುಭವಿಗಳು ಹಾಗೂ ಪರಿಶಿಷ್ಟ ಪಂಗಡದ 9,73,035 ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದಾರೆ. ಆರ್ಥಿಕ ಇಲಾಖೆಯು ಕಾಲಕಾಲಕ್ಕೆ ಬಿಡುಗಡೆ ಮಾಡುವ ಅನುದಾನದಂತೆ ಇಲಾಖೆಯಿಂದ ಗೃಹಲಕ್ಷ್ಮಿ ಯೋಜನೆಯ ಆ ಫಲಾನುಭವಿಗಳ ಬ್ಯಾಂಕ್ ಖಾತೆಗೆ ನೇರವಾಗಿ ಧನಸಹಾಯ ಪಾವತಿಸಲಾಗುತ್ತಿದೆ. ಪ್ರತಿ ತಿಂಗಳು ನೋಂದಣಿಯಾದ ಫಲಾನುಭವಿಗಳಿಗೆ ಧನಸಹಾಯ ಪಾವತಿಗೂ ಮುನ್ನ ನೋಂದಣಿಯಾದ ಫಲಾನುಭವಿ ಹಾಗೂ ಅವರ ಪತಿ ಆದಾಯ ತೆರಿಗೆ ಪಾವತಿದಾರರೇ ಮತ್ತು ಜಿಎಸ್‌ಟಿ ಪಾವತಿದಾರರೇ ಎಂಬ ಬಗ್ಗೆ ಆದಾಯ ತೆರಿಗೆ ಇಲಾಖೆ ಮತ್ತು ವಾಣಿಜ್ಯ ತೆರಿಗೆ ಇಲಾಖೆಯು ನೀಡಿರುವ ಎಪಿಐ ಮೂಲಕ ಕುಟುಂಬ ತಂತ್ರಾಂಶದಲ್ಲಿ ಲಭ್ಯವಾಗುವ ಮಾಹಿತಿ ಪರಿಶೀಲಿಸಲಾಗುತ್ತದೆ.



ತುಂಗಭದ್ರಾ ಜಲಾಶಯದ 33 ಕ್ರಸ್ಟ್ ಗೇಟುಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ್, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ತೆಲಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಅವರು ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾದರು.

# 27 ವಾರ್ಡ್‌ಗಳಲ್ಲಿ ಎಸ್‌ಐಆರ್ ಕಾನೂನು ಬಾಹಿರ: ಛಲವಾದಿ

• **ಬೆಂಗಳೂರು:** ರಾಜ್ಯದ ಕಾಂಗ್ರೆಸ್ ಸರ್ಕಾರದ ಕೈಗೊಂಬೆಯಾಗಿ ರಾಜ್ಯ ಚುನಾವಣಾ ಆಯೋಗವು ಬೆಂಗಳೂರಿನ 27 ವಾರ್ಡ್‌ಗಳಲ್ಲಿ ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ನಡೆಸುತ್ತಿದೆ. ಇದು ಕಾನೂನು ಬಾಹಿರ ಎಂದು ವಿಧಾನ ಪರಿಷತ್ತಿನ ಪ್ರತಿಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಕ್ಷೇಪಿಸಿದ್ದಾರೆ.



ಚುನಾವಣಾ ಆಯೋಗದ ಕಚೇರಿಗೆ ಭೇಟಿ ನೀಡಿ ದೂರು ಸಲ್ಲಿಸಿದ ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಈಗಾಗಲೇ ಭಾರತ ಚುನಾವಣಾ ಆಯೋಗವು ಎಸ್‌ಐಆರ್ ನಡೆಸುತ್ತಿದೆ. ಆದರೆ ಇದಕ್ಕೆ ಸಮಾನಾಂತರವಾಗಿ ರಾಜ್ಯ ಚುನಾವಣಾ ಆಯೋಗವು ಎಸ್‌ಐಆರ್ ನಡೆಸುತ್ತಿದೆ. ಇದು ತಪ್ಪು. ಈ ಬಗ್ಗೆ ಕರ್ನಾಟಕ ಚುನಾವಣಾ ಆಯುಕ್ತ ಅನ್ಬುಕುಮಾರ್ ಅವರಿಗೆ ಮನವಿ ಸಲ್ಲಿಸುವುದಾಗಿ ಹೇಳಿದರು.

ಅನಧಿಕೃತವಾಗಿ ಈ ರೀತಿ ಎಸ್‌ಐಆರ್ ನಡೆಸುವುದು ಸಂವಿಧಾನಕ್ಕೆ ಎಸಗುವ ಅಪಮಾನ ಮಾಡಿದಂತಾಗುತ್ತದೆ. ಒಬ್ಬರ ಹೆಸರು ಬೇರೆ ಬೇರೆ ಕ್ಷೇತ್ರಗಳಲ್ಲಿ ಹೆಸರು ಇದ್ದರೆ ಅದನ್ನು ಎಸ್‌ಐಆರ್‌ನಲ್ಲಿ ತೆಗೆಯಲಾಗುತ್ತದೆ. ಇಲ್ಲಿ ಪಕ್ಷಗಳ ಪ್ರಶ್ನೆ ಬರುವುದಿಲ್ಲ, ವ್ಯಕ್ತಿ ಮುಖ್ಯವಾಗುವುದಿಲ್ಲ. ಒಬ್ಬರ ಹೆಸರು ಒಂದೇ ಕಡೆ ಇರಬೇಕು ಎಂಬುದೇ ಇದರ ಪ್ರಮುಖ ಉದ್ದೇಶ ಎಂದು ವಿವರಿಸಿದರು. ಕೇಂದ್ರ ಚುನಾವಣಾ ಆಯೋಗವು ಕಾನೂನು ಪ್ರಕಾರ ಎಸ್‌ಐಆರ್ ನಡೆಸುತ್ತಿದೆ. ಆದರೆ, ತಮಗೆ ಬೇಕಾದವರ ಹೆಸರು ಉಳಿಸಲು ಹೀಗೆ ಎಸ್‌ಐಆರ್ ನಡೆಸಲಾಗುತ್ತಿದೆ ಎಂದು ದೂರಲಾಗುತ್ತಿದೆ. ಇದು ಸರಿಯಲ್ಲ, ಕೇಂದ್ರ ಚುನಾವಣಾ ಆಯೋಗದ ಅನುಮತಿ ಇಲ್ಲದೆ ಮತ್ತೊಂದು ಎಸ್‌ಐಆರ್ ಅನ್ನು ರಾಜ್ಯ ಚುನಾವಣಾ ಆಯೋಗ ಮಾಡುವಂತಿಲ್ಲ, ಆದರೆ, ಇಲ್ಲಿ ಕಾಂಗ್ರೆಸ್ ಸರ್ಕಾರ ಮಾಡಿಸುತ್ತಿದೆ. ತಕ್ಷಣ ಇದನ್ನು ಸ್ಥಗಿತಗೊಳಿಸಬೇಕು ಎಂದು ಮನವಿಯಲ್ಲಿ ಆಗ್ರಹಿಸುವುದಾಗಿ ತಿಳಿಸಿದರು.

## ಕಿರುಸುದ್ದಿ

### ವಾರ್ತಾ ಆಯುಕ್ತರಾಗಿ ಅನುಚೇತ್ ಅಧಿಕಾರ ಸ್ವೀಕಾರ

• **ಬೆಂಗಳೂರು:** ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ನೂತನ ಆಯುಕ್ತರಾಗಿ ಐಪಿಎಸ್ ಅಧಿಕಾರಿ ಎಂ.ಎನ್.ಅನುಚೇತ್ ಅವರು ಗುರುವಾರ ಅಧಿಕಾರ ಸ್ವೀಕರಿಸಿದರು.



ಇದುವರೆಗೆ ಇಲಾಖೆಯ ಆಯುಕ್ತರಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಹೇಮಂತ್ ನಿಂಬಾಳ್ಕರ್ ಅವರು ಅಧಿಕಾರ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಇಲಾಖೆಯ ಹಿರಿಯ ಅಧಿಕಾರಿಗಳು ನೂತನ ಆಯುಕ್ತರಿಗೆ ಶುಭಕೋರಿದರು. ಎಂ.ಎನ್. ಅನುಚೇತ್ ಅವರಿಗೆ ವಾರ್ತಾ ಇಲಾಖೆ ಜತೆಗೆ ಯುವ ಜನ ಸೇವೆ ಹಾಗೂ ಕ್ರೀಡಾ ಇಲಾಖೆಯ ಆಯುಕ್ತರ ಹೆಚ್ಚುವರಿ ಪ್ರಭಾರದಲ್ಲೂ ಇರಿಸಿ ಸರ್ಕಾರ ಆದೇಶಿಸಿದೆ.

2009ರ ಬ್ಯಾಚ್‌ನ ಕರ್ನಾಟಕ ವೃಂದದ ಐಪಿಎಸ್ ಅಧಿಕಾರಿಯಾಗಿರು ಎಂ.ಎನ್. ಅನುಚೇತ್ ಅವರು ಮೂಲತಃ ಕೋಲಾರ ಜಿಲ್ಲೆಯವರಾಗಿದ್ದಾರೆ. ಬೆಂಗಳೂರಿನ ಆರ್.ವಿ.ಇಂಜಿನಿಯರಿಂಗ್ ಕಾಲೇಜಿನಿಂದ 2006ರಲ್ಲಿ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಪದವಿ ಮುಗಿಸಿರುವ ಇವರು ತಾಂತ್ರಿಕ ಹಿನ್ನೆಲೆಯನ್ನು ಹೊಂದಿದ್ದಾರೆ. ವಾರ್ತಾ ಇಲಾಖೆಯ ಕಾರ್ಯವೈಖರಿಗೆ ಹೊಸ ವೇಗ ನೀಡಬಲ್ಲ ಸಾಮರ್ಥ್ಯ ಹೊಂದಿರುವ ಅನುಚೇತ್ ಅವರು, ಪೊಲೀಸ್ ಇಲಾಖೆಯಲ್ಲಿ ತಂತ್ರಜ್ಞಾನ ಆಧಾರಿತ ಪೊಲೀಸ್ ವ್ಯವಸ್ಥೆ ಹಾಗೂ ಸಮರ್ಥ ಆಡಳಿತಕ್ಕಾಗಿ ಹೆಸರಾಗಿದ್ದಾರೆ.

### ಟೌನ್‌ಶಿಪ್: ಸಿಎಂಗೆ ಮತ್ತೊಂದು ಪತ್ರ ಬರೆದ ಎಚ್ಡಿಕೆ

• **ರಾಮನಗರ:** ಬಿಡದಿ ಉಪನಗರ ಯೋಜನೆಗೆ ಸಂಬಂಧಿಸಿದಂತೆ ಚರ್ಚಿಸಲು ಬೈರಮಂಗಲಕ್ಕೆ ಬರುವಂತೆ ಕೋರಲಾಗಿದ್ದ ಪತ್ರಕ್ಕೆ ರಾಜ್ಯ ಸರ್ಕಾರ ಮತ್ತು ಮುಖ್ಯಮಂತ್ರಿಗಳಿಂದ ಯಾವುದೇ ಪ್ರತ್ಯುತ್ತರ ಬಾರದ ಹಿನ್ನೆಲೆಯಲ್ಲಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಮತ್ತೊಂದು ಪತ್ರವನ್ನು ಮುಖ್ಯಮಂತ್ರಿಗಳಿಗೆ ಬರೆದಿದ್ದಾರೆ. ನೊಂದ ರೈತರ ಸಮ್ಮುಖದಲ್ಲಿಯೇ ಚರ್ಚೆ ನಡೆಯಬೇಕು ಎಂಬ ತಮ್ಮ ನಿಲುವಿಗೆ ಬದ್ಧರಾಗಿರುವ ಕೇಂದ್ರ ಸಚಿವರು, ತಮ್ಮ ಅಧಿಕಾರಿಗಳೊಂದಿಗೆ ಬೈರಮಂಗಲಕ್ಕೆ ಬರುವಂತೆ ಮುಖ್ಯಮಂತ್ರಿಗಳನ್ನು ಮತ್ತೊಮ್ಮೆ ಕೋರಿದ್ದಾರೆ. ಈ ಸಂಬಂಧ ಗುರುವಾರ ಮುಖ್ಯಮಂತ್ರಿಗಳಿಗೆ ಮತ್ತೊಂದು ಪತ್ರವನ್ನು ಬರೆದಿರುವ ಸಚಿವರು, ತಮ್ಮಿಂದ ಉತ್ತರದ ನಿರೀಕ್ಷೆಯಲ್ಲಿ ಇದ್ದೇನೆ ಎಂದು ತಿಳಿಸಿದ್ದಾರೆ.

### ಮಗುವಿನೊಂದಿಗೆ ಬಾವಿಗೆ ಹಾರಿ ಗರ್ಭಿಣಿ ಆತ್ಮಹತ್ಯೆ

• **ಕಲಬುರಗಿ:** ಒಂದೂವರೆ ವರ್ಷದ ಮಗುವಿನೊಂದಿಗೆ ನಾಲ್ಕು ತಿಂಗಳ ಗರ್ಭಿಣಿಯೊಬ್ಬರು ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಹೃದಯವಿದ್ರಾವಕ ಘಟನೆ ಕಲಬುರಗಿ ಜಿಲ್ಲೆಯ ಆಳಂದ ತಾಲೂಕಿನ ಚಿಂಚನಸೂರ್ ಗ್ರಾಮದಲ್ಲಿ ನಡೆದಿದೆ. ಅಂಬಿಕಾ (25) ಎಂಬ ಮಹಿಳೆ ತನ್ನ ಒಂದೂವರೆ ವರ್ಷದ ಪುತ್ರ ಆರಾಧ್ಯನೊಂದಿಗೆ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅಂಬಿಕಾ ಅವರು ನಾಲ್ಕು ತಿಂಗಳ ಗರ್ಭಿಣಿಯಾಗಿದ್ದರು ಎಂದು ತಿಳಿದುಬಂದಿದೆ. ಮೂರು ವರ್ಷಗಳ ಹಿಂದೆ ಅಂಬಿಕಾ ಅವರು ವೀರಭದ್ರಪ್ಪ ಅವರೊಂದಿಗೆ ವಿವಾಹವಾಗಿದ್ದರು. ಮಂಗಳವಾರ ಬೆಳಗ್ಗೆ ಅಂಬಿಕಾ ಅವರು ಮನೆಯಿಂದ ಹೊರಟು ಹೋಗಿದ್ದು, ಮಗುವನ್ನು ಬಟ್ಟೆಯಿಂದ ತನ್ನ ಹೊಟ್ಟೆಗೆ ಕಟ್ಟಿಕೊಂಡು ಗ್ರಾಮದ ಹೊರವಲಯದ ಬಾವಿಗೆ ಹಾರಿದ್ದಾರೆ ಎನ್ನಲಾಗಿದೆ.

### ತುಂಗಭದ್ರಾ ಜಲಾಶಯದ 33 ಕ್ರಸ್ಟ್ ಗೇಟುಗಳ ಲೋಕಾರ್ಪಣೆ

# ಒಮ್ಮತದ ಐತಿಹಾಸಿಕ ನಿರ್ಧಾರ

• **ಕೊಪ್ಪಳ:** ತುಂಗಭದ್ರಾ ನದಿ ಪಾತ್ರದ ರೈತರ ಹಿತರಕ್ಷಣೆಗೆ ಕರ್ನಾಟಕ, ಆಂಧ್ರ ಪ್ರದೇಶ ಹಾಗೂ ತೆಲಂಗಾಣ ಮೂರೂ ರಾಜ್ಯಗಳು ಸೇರಿ ಒಮ್ಮತದ ಐತಿಹಾಸಿಕ ತೀರ್ಮಾನ ಕೈಗೊಳ್ಳಲಾಗಿದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಹೇಳಿದರು.

ಕೊಪ್ಪಳ ಜಿಲ್ಲೆ ಮುನಿರಾಬಾದ್ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ತುಂಗಭದ್ರಾ ಅಣೆಕಟ್ಟೆಯ 33 ಕ್ರಸ್ಟ್ ಗೇಟುಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಇದು ದಕ್ಷಿಣ ಭಾರತದ ಐತಿಹಾಸಿಕ ಕಾರ್ಯಕ್ರಮ. 19ನೇ ಗೇಟ್ ತುಂಡರಿಸಿದಾಗ ಈ ಜಿಲ್ಲೆಯ ಉಸ್ತುವಾರಿ ಮಂತ್ರಿಗಳಾದ ಶಿವರಾಜ ತಂಗಡಗಿ ಹಾಗೂ ಅಧಿಕಾರಿಗಳು ಮಧ್ಯರಾತ್ರಿ ನನಗೆ ಕರೆ ಮಾಡಿ, ಅಣೆಕಟ್ಟು ನಡುಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು. ನಾನು ಅಂದು ಬೆಳಗ್ಗೆ 8 ಗಂಟೆಗೆ ಸ್ಥಳಕ್ಕೆ ಭೇಟಿ ನೀಡಿದೆವು. ತಕ್ಷಣವೇ ಏನು ಮಾಡಬೇಕು ಎಂದು ತಜ್ಞರೊಂದಿಗೆ ಚರ್ಚಿಸಿ ಒಂದೇ ವಾರದಲ್ಲಿ ಗೇಟ್ ಬದಲಾವಣೆ ಮಾಡಲಾಯಿತು. ಆ ಮೂಲಕ ಈ ಭಾಗದ ರೈತರನ್ನು ರಕ್ಷಣೆ ಮಾಡಲಾಯಿತು ಎಂದು ತಿಳಿಸಿದರು.

**ಒಂದು ತಾಸು ಚರ್ಚಿಸಿ, ಐತಿಹಾಸಿಕ ತೀರ್ಮಾನ:** ಈ ಅಣೆಕಟ್ಟಿನ 33 ಟಿಎಂಸಿ ನೀರನ್ನು ಉಳಿಸುವ ಬಗ್ಗೆ ರೈತ ಮುಖಂಡರು ಸಲ್ಲಿಸಿರುವ ಮನವಿ ಸೇರಿದಂತೆ ಯಾವ ರೀತಿ ರಕ್ಷಿಸಿ, ರೈತ ಕುಟುಂಬಗಳನ್ನು ಕಾಪಾಡಬೇಕು ಎಂದು ನಾವು ಚರ್ಚೆ ಮಾಡಿದ್ದೇವೆ. ನವಲಿ ಸಮನಾಂತರ ಜಲಾಶಯ, ಹೂಳೆತ್ತುವ ವಿಚಾರ ಸೇರಿದಂತೆ ಎಲ್ಲ ಅವಕಾಶಗಳ ಬಗ್ಗೆ ಸುದೀರ್ಘ ಚರ್ಚೆ ಮಾಡಿ ನಾವೆಲ್ಲರೂ ಒಮ್ಮತದ ಅಭಿಪ್ರಾಯಕ್ಕೆ ಬಂದಿದ್ದೇವೆ. ಈ ತೀರ್ಮಾನವನ್ನು ಕೇಂದ್ರ ಸಚಿವರೇ ಪ್ರಕಟಿಸಲಿದ್ದಾರೆ.



> ನಮ್ಮ ಭಾಗದ ಕುಡಿಯುವ ಹಾಗೂ ಕೃಷಿ ನೀರಿನ ಸಮಸ್ಯೆಯಿಂದಾಗಿ ಜನರು ಜಿಲ್ಲೆ, ರಾಜ್ಯ ದಾಟಿ ವಲಸೆ ಹೋಗುವ ಪರಿಸ್ಥಿತಿ ಇದೆ. ಆದರೆ, ನಮಗೆ ಸಿಗಬೇಕಾದ ನೀರು ಸಮುದ್ರ ಪಾಲಾಗುತ್ತಿದೆ. ರಾಜಕೀಯವನ್ನು ಬದಿಗಿಟ್ಟು, ಈ ಭಾಗದ ರೈತಾಪಿ ವರ್ಗದ ಹಿತದೃಷ್ಟಿಯಿಂದ ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡಲು ನಿರ್ಧರಿಸಿದ್ದೇವೆ.
> ■ **ರೇವಂತ್ ರೆಡ್ಡಿ,** ತೆಲಂಗಾಣ ಮುಖ್ಯಮಂತ್ರಿ

ಇಂದು ನಾವು ಒಂದು ತಾಸುಗಳ ಕಾಲ ಮಾಡಿರುವ ಚರ್ಚೆ ದೇಶದ ನೀರಾವರಿ ಹಾಗೂ ಒಕ್ಕೂಟ ವ್ಯವಸ್ಥೆಯಲ್ಲಿ ಇತಿಹಾಸದ ಪುಟಕ್ಕೆ ಸೇರಲಿದೆ. ನಮ್ಮ ನೀರು, ನಮ್ಮ ಹಕ್ಕು ಆಶಯದ ಅಡಿ ಮೂರು ರಾಜ್ಯಗಳ ರೈತರ ರಕ್ಷಣೆಗೆ ನಾವು ಐತಿಹಾಸಿಕ ತೀರ್ಮಾನ ಕೈಗೊಂಡಿದ್ದೇವೆ.

**ರೈತರಿಗಾಗಿ ದೃಢ ತೀರ್ಮಾನ:** ರೈತನಿಗೆ ಸಂಬಳವಿಲ್ಲ, ಭಡ್ತಿ ಇಲ್ಲ, ಪಿಂಚಣಿ ಇಲ್ಲ, ರಜೆಯೂ ಇಲ್ಲ ಹಾಗೂ ನಿವೃತ್ತಿಯೂ ಇಲ್ಲ. ಇಂತಹ ಕಷ್ಟದ ಪರಿಸ್ಥಿತಿಯಲ್ಲೂ ದೇಶಕ್ಕೆ ಅನ್ನ ನೀಡುವ ರೈತನ ಬದುಕನ್ನು ಉಳಿಸಬೇಕು ಮತ್ತು ಈ ಭಾಗದ ಭತ್ತದ ಕಣಜವನ್ನು ಕಾಪಾಡಬೇಕು ಎಂಬ ದೃಢ ತೀರ್ಮಾನವನ್ನು ನಿಮ್ಮೆಲ್ಲರ ಆಶೀರ್ವಾದದೊಂದಿಗೆ ನಾವು ತೆಗೆದುಕೊಂಡಿದ್ದೇವೆ ಎಂದರು.

> ದೇಶದ ಎಲ್ಲ ನದಿಗಳನ್ನು ಜೋಡಿಸುವುದೊಂದೇ ಇರುವ ಏಕೈಕ ಮಾರ್ಗವಾಗಿದೆ. ಹೆಚ್ಚುವರಿ ನೀರಿರುವ ನದಿಗಳಿಂದ ಕೊರತೆಯಿರುವ ನದಿಗಳಿಗೆ ನೀರನ್ನು ಹರಿಸುವ ಮೂಲಕ ಬರಗಾಲವನ್ನು ಸಮರ್ಥವಾಗಿ ಎದುರಿಸಬಹುದು. ಇದರಿಂದ ರಾಜ್ಯಗಳ ನಡುವಿನ, ಜಿಲ್ಲೆಗಳ ನಡುವಿನ ಹಾಗೂ ರೈತರ ನಡುವಿನ ನೀರಿನ ಸಂಘರ್ಷ ಸಂಪೂರ್ಣವಾಗಿ ತಡೆಯಬಹುದು.
> ■ **ಚಂದ್ರಬಾಬು ನಾಯ್ಡು,** ಆಂಧ್ರ ಪ್ರದೇಶ ಸಿಎಂ

**ಅಂತಾರಾಜ್ಯ ಸಹಕಾರಕ್ಕೆ ಶ್ಲಾಘನೆ:** ಹಿಂದೆ ಆಂಧ್ರಪ್ರದೇಶ, ತೆಲಂಗಾಣ ಮತ್ತು ಕರ್ನಾಟಕ ರಾಜ್ಯಗಳ ನಡುವೆ ನೀರು ಹಂಚಿಕೆ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿದ್ದವು. ಆದರೆ, ಇಂದು ಮೂರೂ ರಾಜ್ಯಗಳ ಮುಖ್ಯಮಂತ್ರಿಗಳು ಒಂದೇ ವೇದಿಕೆಗೆ ಬಂದು ಒಗ್ಗಟ್ಟು ಪ್ರದರ್ಶಿಸಿರುವುದನ್ನು ಸಚಿವರು ಮುಕ್ತ ಕಂಠದಿಂದ ಶ್ಲಾಘಿಸಿದರು. ಯಾವುದೇ ಆಕ್ಷೇಪಣೆಗಳಿಲ್ಲದೆ, ಪರಸ್ಪರ ಸಹಕಾರ ಹಾಗೂ ಆರ್ಥಿಕ ನೆರವು ನೀಡಿದ್ದರಿಂದಲೇ ತುಂಗಭದ್ರಾ ಜಲಾಶಯಕ್ಕೆ ಕೇವಲ ಕೆಲವೇ ದಿನಗಳಲ್ಲಿ ನೂತನ ಗೇಟುಗಳನ್ನು ಅಳವಡಿಸಲು ಸಾಧ್ಯವಾಯಿತು ಎಂದು ಕೇಂದ್ರ ಸಚಿವ ಸಿ.ಆರ್.ಪಾಟೀಲ ಸ್ಮರಿಸಿದರು.

# ಖಾಲಿ ಹುದ್ದೆಗಳಿಗೆ ತ್ವರಿತ ನೇಮಕಾತಿ

• **ಬೆಂಗಳೂರು:** ಕರ್ನಾಟಕ ಸರ್ಕಾರವು ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಮಹತ್ವದ ಆದೇಶ ಹೊರಡಿಸಿದೆ. ಒಟ್ಟು 72,186 ಹುದ್ದೆಗಳ ನೇಮಕಾತಿಗೆ ಅನುಮೋದನೆ ನೀಡಲಾಗಿದ್ದು, ಈ ಕುರಿತು ಉನ್ನತ ಮಟ್ಟದ ಅಧಿಕಾರಿಗಳಿಗೆ ಮೇಲುಸ್ತುವಾರಿ ಜವಾಬ್ದಾರಿ ನೀಡಲಾಗಿದೆ.

2023–24ನೇ ಸಾಲಿನಿಂದ ಇಲ್ಲಿಯ ವರೆಗೆ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 40,009 ಹುದ್ದೆಗಳನ್ನು ಭರ್ತಿ ಮಾಡಲು ಆರ್ಥಿಕ ಇಲಾಖೆ ಸಹಮತಿ ನೀಡಿದೆ. ಕಲ್ಯಾಣ–ಕರ್ನಾಟಕ ಸ್ಥಳೀಯ ವೃಂದದಲ್ಲಿ ಖಾಲಿ ಇರುವ 32,177 ಹುದ್ದೆಗಳ ಪೈಕಿ ಶೇ. 80ರಷ್ಟು ಹುದ್ದೆಗಳನ್ನು ಭರ್ತಿ ಮಾಡಲು ಕಳೆದ ಶನಿವಾರ ನಡೆದ ಸಂಪುಟದಲ್ಲಿ ಅನುಮತಿಸಲಾಗಿತ್ತು.

ಈ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಆಯ್ಕೆ ಪ್ರಾಧಿಕಾರಗಳಿಂದ ಕ್ರಿಯಾ ಯೋಜನೆಗಳನ್ನು ಪಡೆದು ಸಚಿವ ಸಂಪುಟದ ಅನುಮೋದನೆಗೆ ಮಂಡಿಸಲಾಗಿತ್ತು. ಸಚಿವ ಸಂಪುಟವು ಈ ಪ್ರಕ್ರಿಯೆಗೆ ಅನುಮೋದನೆ ನೀಡಿದೆ.

17 ಇಲಾಖೆಗಳಲ್ಲಿನ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳನ್ನು ತ್ವರಿತಗತಿಯಲ್ಲಿ ಭರ್ತಿ ಮಾಡಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರಿಗೆ ಜವಾಬ್ದಾರಿ ನೀಡಲಾಗಿದೆ.

34 ಇಲಾಖೆಗಳಲ್ಲಿನ ನೇರ ನೇಮಕಾತಿ ಮೂಲಕ ಭರ್ತಿ ಮಾಡಬೇಕಾದ ಹುದ್ದೆಗಳನ್ನು ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗೆ ಜವಾಬ್ದಾರಿ ನೀಡಲಾಗಿದೆ. ನೇಮಕಾತಿ ಪ್ರಕ್ರಿಯೆ ಸಂಪೂರ್ಣವಾಗಿ ಪಾರದರ್ಶಕವಾಗಿದ್ದು, ಯಾವುದೇ ರೀತಿಯ ಅಕ್ರಮ ಅಥವಾ ಅಸಮರ್ಪಕತೆ ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತದೆ.

**6 ತಿಂಗಳಲ್ಲಿ ನೇಮಕಾತಿ ಪೂರ್ಣಗೊಳಿಸಿ**



ಎಲ್ಲಾ ನೇರ ನೇಮಕಾತಿ ಹುದ್ದೆಗಳಿಗೆ ಮುಂದಿನ ಎರಡು ತಿಂಗಳುಗಳಲ್ಲಿ ನೇಮಕಾತಿ ಅಧಿಸೂಚನೆ ಹೊರಡಿಸಲು ಸೂಚಿಸಲಾಗಿದೆ. ಮುಂದಿನ ನಾಲ್ಕು ತಿಂಗಳುಗಳಲ್ಲಿ ನೇಮಕಾತಿ ಪರೀಕ್ಷೆಗಳನ್ನು ನಡೆಸಿ, ಆರು ತಿಂಗಳುಗಳಲ್ಲಿ ನೇಮಕಾತಿ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ನೇಮಕಾತಿ ಆದೇಶಗಳನ್ನು ಹೊರಡಿಸಲು ಸರ್ಕಾರ ಸೂಚಿಸಿದೆ.

# ಪ್ರಸ್ತುತ ರಾಜ್ಯದಲ್ಲಿದೆ ನೀರಿಗೆ ಅಭಾವ: ಬಿ.ವೈ.ರಾಘವೇಂದ್ರ

• **ಶಿವಮೊಗ್ಗ:** ನಮ್ಮ ರಾಜ್ಯದಲ್ಲೇ ಕುಡಿಯಲು ಮತ್ತು ಕೃಷಿಗೆ ನೀರಿಲ್ಲದ ಪರಿಸ್ಥಿತಿ ಇರುವಾಗ, ನೆರೆ ರಾಜ್ಯಕ್ಕೆ ನೀರು ಬಿಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಸಂಸದ ಬಿ.ವೈ.ರಾಘವೇಂದ್ರ ಪ್ರತಿಕ್ರಿಯಿಸಿದ್ದಾರೆ. ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿ, ತಮಿಳುನಾಡಿನವರು ಪ್ರತಿ ವರ್ಷ ಅವರ ಪಾಲಿನ ನೀರನ್ನು ಕೇಳುವುದು ಮಾಮೂಲಿಯಾಗಿದೆ.



ಆದರೆ ಪ್ರಸ್ತುತ ನಮ್ಮಲ್ಲಿಯೇ ನೀರಿನ ಅಭಾವವಿದೆ. ಇಂತಹ ಪರಿಸ್ಥಿತಿಯಲ್ಲಿ ಅವರಿಗೆ ನೀರು ಹರಿಸಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದರು.

ಈ ಗಂಭೀರ ವಿಚಾರದಲ್ಲಿ ರಾಜ್ಯ ಸರ್ಕಾರ ಮತ್ತು ಆಡ್ವೋಕೇಟ್ ಜನರಲ್(ಎಜಿ) ಅವರು ತಕ್ಷಣ ಸಮಾಲೋಚನೆ ನಡೆಸಿ, ಬಲವಾದ ಕಾನೂನು ಹೋರಾಟದ ಮೂಲಕ ತಮಿಳುನಾಡಿನ ಹಠಾತ್ ಧೋರಣೆ ವಿರೋಧಿಸಬೇಕಿದೆ ಎಂದು ಆಗ್ರಹಿಸಿದರು. ಸಾಮಾನ್ಯವಾಗಿ ಪ್ರತಿ ವರ್ಷ ಮಳೆಗಾಲಕ್ಕೆ ಮುನ್ನ ಕರ್ನಾಟಕ, ತ.ನಾಡು ನಡುವೆ ನೀರಿನ ಹಂಚಿಕೆ ಕುರಿತು ಚರ್ಚೆಗಳು, ಸಂಘರ್ಷಗಳು ಮುನ್ನೆಲೆಗೆ ಬರುತ್ತವೆ. ಈ ಪ್ರಕ್ರಿಯೆಯಲ್ಲಿ ಸುಪ್ರೀಂ ಕೋರ್ಟ್ ಹಾಗೂ ಕೇಂದ್ರ ಜಲ ಸಮಿತಿ ಕೂಡ ಮಧ್ಯಸ್ಥಿಕೆ ವಹಿಸಿ ನಿರ್ದೇಶನಗಳನ್ನು ನೀಡುತ್ತವೆ. ಆದರೆ ಪ್ರಸಕ್ತ ಸಾಲಿನಲ್ಲಿ ಕಾವೇರಿ ವಿವಾದ ದೊಡ್ಡಮಟ್ಟದ ಬಿಕ್ಕಟ್ಟಾಗಿ ಪರಿಣಮಿಸುವ ಮುನ್ಸೂಚನೆ ಸಿಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಪ್ರಸ್ತುತ ತಮಿಳುನಾಡು ಸರ್ಕಾರ ಕೃಷ್ಣರಾಜಸಾಗರ ಜಲಾಶಯ ಹಾಗೂ ಅದರ ಸುತ್ತಮುತ್ತಲಿನ ಉಪ ಡ್ಯಾಂಗಳಲ್ಲಿರುವ ನೀರನ್ನು ತನಗೇ ಬಿಡಬೇಕು ಎಂದು ಹಠ ಹಿಡಿದಿರುವುದು ಆತಂಕ ಮೂಡಿಸಿದೆ ಎಂದರು.

ಸಿಎಂ ಸದ್ಯ ಅತಿ ಉತ್ಸಾಹದಿಂದ ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್‌ಗಳ ಉದ್ಘಾಟನಾ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದಾರೆ. ಈ ಕಾರ್ಯಕ್ರಮಕ್ಕೆ ಬೇರೆ ಬೇರೆ ರಾಜ್ಯಗಳ ಮುಖ್ಯಮಂತ್ರಿಗಳು ಸಹ ಆಗಮಿಸಿದ್ದಾರೆ. ಇಷ್ಟೆಲ್ಲಾ ಗಂಭೀರ ವಿದ್ಯಮಾನಗಳ ಮಧ್ಯೆ, ಕಾವೇರಿ ನದಿ ನೀರಿನ ರಕ್ಷಣೆ ಹಾಗೂ ತಮಿಳುನಾಡಿನ ತಗಾದೆಯ ವಿರುದ್ಧ ಮುಖ್ಯಮಂತ್ರಿಗಳು ರಾಜ್ಯದ ಹಿತದೃಷ್ಟಿಯಿಂದ ಯಾವ ರೀತಿಯ ದೃಢ ತೀರ್ಮಾನ ಕೈಗೊಳ್ಳಲಿದ್ದಾರೆ ಎಂಬುದನ್ನು ನಾವು ಕಾದು ನೋಡುತ್ತಿದ್ದೇವೆ ಎಂದು ತಿಳಿಸಿದರು.

# ಆರ್‌ಎಸ್‌ಎಸ್ ನಿಷೇಧಿಸಲು ಹೋರಾಟ: ಹರಿಪ್ರಸಾದ್

• **ಹುಬ್ಬಳ್ಳಿ:** ಮೂರು ಬಾರಿ ಈಗಾಗಲೇ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ನಿಷೇಧಿಸಲಾಗಿತ್ತು. ನಮ್ಮ ಮುಂದಿನ ಹೋರಾಟ ಆರ್‌ಎಸ್‌ಎಸ್ ನಿಷೇಧಿಸುವುದಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ತಿಳಿಸಿದರು.

ನಗರದಲ್ಲಿ ಗುರುವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಆರ್‌ಎಸ್‌ಎಸ್ ಬಗ್ಗೆ ಗೃಹಸಚಿವ ಪ್ರಿಯಾಂಕ್ ಖರ್ಗೆ ನಿರಂತರ ಟೀಕೆ ಮಾಡುತ್ತಿರುವುದರಿಂದ ಅವರ ಗಮನ ಬೇರೆಡೆ ಸೆಳೆಯಲು ಬಿಜೆಪಿ ಭೂ ಹಗರಣದಲ್ಲಿ ಮಲ್ಲಿಕಾರ್ಜುನ ಖರ್ಗೆ ಭಾಗಿಯಾಗಿದ್ದಾರೆ ಎಂದು ಸುಳ್ಳು ಆರೋಪ ಮಾಡುತ್ತಿದೆ ಎಂದರು.

ನಾಲ್ಕು ಸಾವಿರ ಕೋಟಿ ಹಣವನ್ನು ಬಿಜೆಪಿ ಕೇಂದ್ರದಲ್ಲಿ ಬಂದ ಬಳಿಕ ಸಂಗ್ರಹಿಸಿದೆ. ನಮ್ಮದು ಬಡವರ ಪಕ್ಷವಾಗಿದ್ದು, ಖಜಾನೆಯಲ್ಲಿ 700 ಕೋಟಿ ಮಾತ್ರವಿದೆ. ಚೆಕ್ ಮೂಲಕವೇ ನಮ್ಮ ವ್ಯವಹಾರ ನಡೆಯುತ್ತವೆ. ಬಿಜೆಪಿ ಹಾಗೂ ಆರ್‌ಎಸ್‌ಎಸ್ ತಮ್ಮನ್ನು ವಿರೋಧಿಸುವವರನ್ನು ಚುನಾವಣಾ ಆಯೋಗ ಮೂಲಕ ಮತದಾರರ ಪಟ್ಟಿಯಿಂದ ತೆಗೆದು ಹೊರಗಿಡುತ್ತಿದ್ದಾರೆ. ಎಸ್‌ಐಆರ್ ಬಗ್ಗೆ ನಮ್ಮ ವಿರೋಧವಿಲ್ಲ. ಆದರೆ, ನಿಜವಾದ ಯಾವೊಬ್ಬ ಮತದಾರನೂ ಪಟ್ಟಿಯಿಂದ ಬಿಟ್ಟು ಹೋಗಬಾರದು ಎನ್ನುವುದು ನಮ್ಮ ಉದ್ದೇಶ. ಈ ನಿಟ್ಟಿನಲ್ಲಿ ನಾವು ವಿಭಾಗ ಮಟ್ಟದಲ್ಲಿ ಜಾಗೃತಿ ಸಮಾವೇಶ ನಡೆಸುತ್ತಿದ್ದೇವೆ ಎಂದು ಹೇಳಿದರು. ಸಚಿವ ಸಂಪುಟ ವಿಸ್ತರಣೆಯಲ್ಲಿ ಯಾವುದೇ ಗೊಂದಲವಿಲ್ಲ. ಆದರೆ, ನಾವು ಸದ್ಯ ಎಸ್‌ಐಆರ್ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ನಿರತರಾಗಿದ್ದೇವೆ. ಜಿಲ್ಲಾ ಪಂಚಾಯ್ತಿ, ತಾಲೂಕು ಪಂಚಾಯ್ತಿ ಹಾಗೂ ಉಪ ಚುನಾವಣೆಗಳು ಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಪಕ್ಷದ ನೇತೃತ್ವದಲ್ಲಿ ನಡೆಯುತ್ತದೆ ಎಂದರು.

# ಪಿಂಚಣಿದಾರರ ಪರಿಶೀಲನೆ

• **ಬೆಂಗಳೂರು:** ರಾಜ್ಯದಲ್ಲಿ ಸಾಮಾಜಿಕ ಭದ್ರತಾ ಯೋಜನೆಗಳ ಅಡಿಯಲ್ಲ ಪಿಂಚಣಿ ಪಡೆಯುತ್ತಿರುವ ಫಲಾನುಭವಿಗಳ ಪಾರದರ್ಶಕತೆ ಮತ್ತು ಅರ್ಹತೆಯನ್ನು ಖಚಿತಪಡಿಸಿಕೊಳ್ಳಲು ಸರ್ಕಾರವು ಮೊಬೈಲ್ ಆ್ಯಪ್ ಮೂಲಕ ಪರಿಶೀಲನೆ ಕೈಗೊಂಡಿದೆ.

ರಾಜ್ಯಾದ್ಯಂತ ಪ್ರಸ್ತುತ ಒಟ್ಟು 83,11,493 ಫಲಾನುಭವಿಗಳು ಪಿಂಚಣಿ ಪಡೆಯುತ್ತಿದ್ದು, ಇವರ ಪೈಕಿ ಪ್ರಾಥಮಿಕ ತಪಾಸಣೆಯಲ್ಲಿ 23,13,664 ಫಲಾನುಭವಿಗಳ ವಿವರಗಳು ಸಂದೇಹಾಸ್ಪದ ಎಂದು ಕಂಡು ಬಂದಿರುತ್ತದೆ. ಈ ಸಂದೇಹಾಸ್ಪದ ಖಾತೆಗಳನ್ನು ಸಂಯೋಜನೆ ಮೊಬೈಲ್ ಆ್ಯಪ್ ಮೂಲಕ ಪ್ರಸ್ತುತ ಕೂಲಂಕಷವಾಗಿ ಪರಿಶೀಲಿಸಲಾಗುತ್ತಿದೆ. ಮಂಜೂರಾತಿ ಸಮಯದಲ್ಲಿ ವಯಸ್ಸಿನ ದೃಢೀಕರಣದ ಬಗ್ಗೆ ತಪ್ಪು ಮತ್ತು ನಕಲಿ ದಾಖಲೆಗಳನ್ನು ನೀಡಿ ಕಾನೂನು ಬಾಹಿರವಾಗಿ ಪಿಂಚಣಿ ಪಡೆಯುತ್ತಿದ್ದ 91,152 ಅನರ್ಹ ಫಲಾನುಭವಿಗಳನ್ನು ಪತ್ತೆ ಹಚ್ಚಲಾಗಿದ್ದು, ಇವರ ಪಿಂಚಣಿಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಗೊಳಿಸಲು ತೀರ್ಮಾನಿಸಲಾಗಿದೆ.

» 91,152 ಅನರ್ಹ ಫಲಾನುಭವಿ ಪತ್ತೆ, ಪಿಂಚಣಿ ರದ್ದತಿಗೆ ತೀರ್ಮಾನ

ಗ್ರಾಮ ಆಡಳಿತ ಅಧಿಕಾರಿಗಳ ಪರಿಶೀಲನೆ ಸಮಯದಲ್ಲಿ ಯಾವುದೇ ಅಧಿಕೃತ ದಾಖಲೆಗಳನ್ನು ಹಾಜರುಪಡಿಸಲು ವಿಫಲರಾದ, ನೀಡಲಾದ ವಿಳಾಸದಲ್ಲಿ ವಾಸವಿಲ್ಲದ ಹಾಗೂ ಆದಾಯ ಪ್ರಮಾಣ ಪತ್ರ ಸಲ್ಲಿಸದ ಒಟ್ಟು 16,42,303 ಫಲಾನುಭವಿಗಳ ಪಿಂಚಣಿಯನ್ನು ಸದ್ಯ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

ದಾಖಲೆಗಳ ಕೊರತೆಯಿಂದಾಗಿ ಪಿಂಚಣಿ ಸ್ಥಗಿತಗೊಂಡಿರುವ 16,42,303 ಫಲಾನುಭವಿಗಳಿಗೆ ಕಂದಾಯ ಇಲಾಖೆಯು ಸೂಕ್ತ ತಿಳುವಳಿಕೆ ಪತ್ರವನ್ನು ನೀಡಲು ಆದೇಶಿಸಿದೆ. ಸಂಬಂಧಪಟ್ಟ ತಹಸೀಲ್ದಾರರ ಮೂಲಕ ಇವರಿಗೆ ನೋಟಿಸ್ ನೀಡಿ, ತಮ್ಮ ಅರ್ಹತಾ ದಾಖಲೆಗಳನ್ನು ಸಲ್ಲಿಸಲು 30 ದಿನಗಳ ಕಾಲಾವಕಾಶವನ್ನು ಕಲ್ಪಿಸಿಕೊಡಲಾಗಿದೆ. ಫಲಾನುಭವಿಗಳು ದಾಖಲೆಗಳನ್ನು ಪರಿಶೀಲಿಸಿದ ನಂತರ, ಅರ್ಹರಾಗಿದ್ದಲ್ಲಿ ಅಂತಹವರ ಪಿಂಚಣಿ ಸೌಲಭ್ಯವನ್ನು ತಕ್ಷಣವೇ ಮುಂದುವರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ರಾಜ್ಯದ ಎಲ್ಲಾ ಜಿಲ್ಲಾಧಿಕಾರಿ ಹಾಗೂ ತಹಸೀಲ್ದಾರ್‌ಗಳಿಗೆ ಕಂದಾಯ ಇಲಾಖೆಯು ಕಟ್ಟುನಿಟ್ಟಿನ ನಿರ್ದೇಶನ ನೀಡಿದೆ.

**ಅರ್ಹರಿಗೆ ಪಿಂಚಣಿ ಪಾವತಿ:** ಸಂದೇಹಾಸ್ಪದವೆಂದು ಗುರುತಿಸಲಾಗಿದ್ದ ಖಾತೆಗಳ ಪೈಕಿ, ಗ್ರಾಮ ಆಡಳಿತ ಅಧಿಕಾರಿಗಳು ಸ್ಥಳದಲ್ಲೇ ಪರಿಶೀಲನೆ ನಡೆಸಿ ಅರ್ಹರೆಂದು ವರದಿ ಮಾಡಿದ 3,35,610 ಫಲಾನುಭವಿಗಳು ಸೇರಿದಂತೆ ರಾಜ್ಯದ ಒಟ್ಟು 63,04,554 ಅರ್ಹ ಫಲಾನುಭವಿಗಳಿಗೆ ಮೇ ತಿಂಗಳ ವರೆಗಿನ ಪಿಂಚಣಿಯನ್ನು ಯಶಸ್ವಿಯಾಗಿ ಪಾವತಿಸಲಾಗಿದೆ.

### ಈ ಬಾರಿ 64.84 ಲಕ್ಷ ಮಕ್ಕಳಿಗೆ ಪೋಲಿಯೊ ಲಸಿಕೆ ನೀಡುವ ಗುರಿ: ಆರೋಗ್ಯ ಸಚಿವ

# ಪೋಲಿಯೊ ಮುಕ್ತ ಭಾರತ ಸಾಧನೆ ನಿರಂತರ

• **ಬೆಂಗಳೂರು:** ಪೋಲಿಯೊ ಮುಕ್ತ ಭಾರತದ ಸಾಧನೆಯನ್ನು ಮುಂದುವರಿಸುವ ಉದ್ದೇಶದಿಂದ ಆರೋಗ್ಯ ಇಲಾಖೆಯು ರಾಜ್ಯಾದ್ಯಂತ ಜೂ.28ರಂದು ಪಲ್ಸ್ ಪೋಲಿಯೊ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಬಾರಿ 64.84 ಲಕ್ಷ 5 ವರ್ಷದೊಳಗಿನ ಮಕ್ಕಳಿಗೆ ಪೋಲಿಯೊ ಲಸಿಕೆ ನೀಡುವ ಗುರಿ ಹೊಂದಿದೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ತಿಳಿಸಿದರು.

ಗುರುವಾರ ನಗರದ ಆರೋಗ್ಯಸೌಧದಲ್ಲಿ ಪೋಲಿಯೊ ಲಸಿಕೆ ಅಭಿಯಾನದ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಜೂ.28ರಂದು ಬೆಳಗ್ಗೆ 8 ಗಂಟೆಗೆ ಪಲ್ಸ್ ಪೋಲಿಯೊ ಕಾರ್ಯಕ್ರಮಕ್ಕೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚಾಲನೆ ನೀಡಲಿದ್ದಾರೆ ಎಂದು ತಿಳಿಸಿದರು. ವಿಶೇಷವಾಗಿ ವಲಸೆ ಕಾರ್ಮಿಕರ ಮಕ್ಕಳು, ನಗರ ಸ್ಲಂ ಪ್ರದೇಶಗಳಲ್ಲಿ ವಾಸಿಸುವ ಮಕ್ಕಳು, ಅಪಾಯದಂಚಿನ ಪ್ರದೇಶಗಳ ಮಕ್ಕಳು ಸೇರಿದಂತೆ ಯಾವುದೇ ಮಗು ಲಸಿಕೆಯಿಂದ ವಂಚಿತವಾಗದಂತೆ ಕ್ರಮ ಕೈಗೊಳ್ಳಲಾಗಿದೆ. ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ಅಡಿಯಲ್ಲಿ ಪ್ರತಿ ಮಗುವಿಗೆ ಐದು ಡೋಸ್ ಓರಲ್ ಪೋಲಿಯೊ ವ್ಯಾಕ್ಸಿನ್ ಹಾಗೂ ಮೂರು ಡೋಸ್ ಇಂಜೆಕ್ಟಬಲ್ ಪೋಲಿಯೊ ವ್ಯಾಕ್ಸಿನ್ (ಐಪಿವಿ) ನೀಡಲಾಗುತ್ತಿದೆ. ಜತೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೊ ಅಭಿಯಾನದಲ್ಲಿ ಹೆಚ್ಚುವರಿ ರಕ್ಷಣೆಯಾಗಿ ಎರಡು ಹನಿ ಲಸಿಕೆ ನೀಡಲಾಗುತ್ತದೆ ಎಂದರು.



> ಪೋಲಿಯೊ ಮುಕ್ತ ಭಾರತ, ಪೋಲಿಯೊ ಮುಕ್ತ ಕರ್ನಾಟಕ ಎಂಬ ಗುರಿಯನ್ನು ಎಲ್ಲರೂ ಸೇರಿ ಸಾಧಿಸೋಣ. ಜೀವರಕ್ಷಕ ಎರಡು ಹನಿಗಳಿಂದ ಪೋಲಿಯೊ ವಿರುದ್ಧದ ನಮ್ಮ ನಿರಂತರ ಗೆಲುವನ್ನು ಮುಂದುವರಿಸೋಣ.
> ■ **ಯು.ಟಿ.ಖಾದರ್,** ಆರೋಗ್ಯ ಸಚಿವ

**36 ಸಾವಿರಕ್ಕೂ ಹೆಚ್ಚು ಬೂತ್‌ಗಳ ಸ್ಥಾಪನೆ:** ಈ ವರ್ಷದ ಪಲ್ಸ್ ಪೋಲಿಯೊ ಕಾರ್ಯಕ್ರಮದ ಅಡಿಯಲ್ಲಿ ರಾಜ್ಯದಲ್ಲಿ ಈ ವರ್ಷ 36,076 ಬೂತ್‌ಗಳನ್ನು ಸ್ಥಾಪಿಸಲಾಗಿದ್ದು, 988 ಸಂಚಾರಿ ತಂಡಗಳು ಹಾಗೂ 2,125 ಟ್ರಾನ್ಸಿಟ್ ತಂಡವು ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ವಿವಿಧ ಸಾರ್ವಜನಿಕ ಸ್ಥಳಗಳಲ್ಲಿ ಲಸಿಕೆ ವಿತರಿಸಲಿದ್ದಾರೆ.

ಈ ಕಾರ್ಯಕ್ರಮಕ್ಕೆ 1,14,213 ಲಸಿಕಾ ಕಾರ್ಯಕರ್ತರು ಮತ್ತು 7,197 ಮೇಲ್ವಿಚಾರಕರು ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

**ಲಸಿಕಾ ಕೇಂದ್ರ ಪತ್ತೆಗೆ ಆ್ಯಪ್**

ಪೋಲಿಯೊ ಮುಕ್ತ ಭಾರತ ನಿರ್ಮಿಸುವ ಸಲುವಾಗಿ ಎಲ್ಲ ತಾಯಂದಿರು ತಮ್ಮ ಮಕ್ಕಳಿಗೆ ಪೋಲಿಯೊ ಲಸಿಕೆ ಹಾಕಿಸಬೇಕು. ಬೇರೆ ಯಾವುದೇ ರೀತಿಯ ಲಸಿಕೆ ಪಡೆಯುತ್ತಿದ್ದರೂ ಈ ಲಸಿಕೆಯನ್ನು ತಪ್ಪಿಸುವಂತಿಲ್ಲ. ಹತ್ತಿರದ ಲಸಿಕಾ ಕೇಂದ್ರ ಪತ್ತೆಗೆ ಗೂಗಲ್ ಪ್ಲೇ ಸ್ಟೋರ್‌ನಲ್ಲಿ ನಿಯರ್ ಬೈ ವ್ಯಾಕ್ಸಿನೇಷನ್ ಸೆಂಟರ್ ಆ್ಯಪ್ ಅಭಿವೃದ್ಧಿಪಡಿಸಲಾಗಿದ್ದು, ಈ ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡು ಕೇಂದ್ರ ಹುಡುಕಬಹುದು ಎಂದರು.

### ಪ್ರಕೃತಿ ವಿಕೋಪ ನಿರ್ವಹಣೆ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಪರಂ ಸಭೆ

# ಸೂಪರ್ ಎಲ್ ನೀನೋ ಎದುರಿಸಲು ಸಜ್ಜಾಗಿ

• **ಬೆಂಗಳೂರು:** ರಾಜ್ಯದಲ್ಲಿ ಸಂಭವನೀಯ ಪ್ರಕೃತಿ ವಿಕೋಪಗಳು ಹಾಗೂ ಸೂಪರ್ ಎಲ್ ನೀನೋ ಪರಿಣಾಮದಿಂದ ಉಂಟಾಗಬಹುದಾದ ಬರ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ಎದುರಿಸಲು ವಿವಿಧ ಇಲಾಖೆಗಳ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.



ಗುರುವಾರ ವಿಧಾನಸೌಧದಲ್ಲಿ ಪ್ರಕೃತಿ ವಿಕೋಪ ನಿರ್ವಹಣೆ ಕುರಿತು ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಈವರೆಗೆ ಕೈಗೊಂಡಿರುವ ಅಗತ್ಯ ಕ್ರಮಗಳ ಕುರಿತು ಮಾಹಿತಿ ಪಡೆದರು. ಮಳೆ ಕೊರತೆ, ಕುಡಿಯುವ ನೀರು, ಜಾನುವಾರುಗಳಿಗೆ ಮೇವಿನ ಸಮಸ್ಯೆ ಸೇರಿದಂತೆ ವಿವಿಧ ವಿಚಾರಗಳ ಕುರಿತು ಸಮಗ್ರವಾಗಿ ಚರ್ಚಿಸಿದರು. ಜಾಗತಿಕ ಹವಾಮಾನ ವೈಪರೀತ್ಯದ ಭಾಗವಾಗಿ ಸೂಪರ್ ಎಲ್ ನೀನೋ ಪರಿಣಾಮದಿಂದ ರಾಜ್ಯದಲ್ಲಿ ಉಂಟಾಗಬಹುದಾದ ಸಂಭವನೀಯ ಪರಿಣಾಮಗಳು, ಮಳೆಯ ಕೊರತೆಯಿಂದ ಜನರು ಎದುರಿಸಬಹುದಾದ ಸಮಸ್ಯೆಗಳು ಹಾಗೂ ರಾಜ್ಯದ ಕೆಲವು ಪ್ರದೇಶಗಳಲ್ಲಿ ಬರ ಪರಿಸ್ಥಿತಿ ನಿರ್ಮಾಣವಾಗುವ ಸಾಧ್ಯತೆಗಳ ಕುರಿತು ಅಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಿದರು.

> 122 ತಾಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, 139 ಹಳ್ಳಿಗಳಿಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲಾಗುತ್ತಿದೆ. 789 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆಯಲಾಗಿದ್ದು, 669 ಹಳ್ಳಿಗಳಲ್ಲಿ ಖಾಸಗಿ ಕೊಳವೆಬಾವಿಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ.
> ■ **ಡಾ. ಜಿ. ಪರಮೇಶ್ವರ್,** ಉಪಮುಖ್ಯಮಂತ್ರಿ

ಸಂಭವನೀಯ ಬರ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಕುಡಿಯುವ ನೀರಿನ ಲಭ್ಯತೆ, ಜಾನುವಾರುಗಳಿಗೆ ಮೇವು, ಕೃಷಿ ಚಟುವಟಿಕೆಗಳ ನಿರ್ವಹಣೆ ಹಾಗೂ ನೀರಿನ ಸಂರಕ್ಷಣೆಗೆ ಸಂಬಂಧಿಸಿದಂತೆ ಜಿಲ್ಲಾವಾರು ಕಾರ್ಯಯೋಜನೆಗಳನ್ನು ಸಿದ್ಧಪಡಿಸಬೇಕು. ಎಲ್ಲ ಜಿಲ್ಲಾಧಿಕಾರಿಗಳು ಹಾಗೂ ಜಿ.ಪಂ. ಸಿಇಒಗಳಿಗೆ ಅಗತ್ಯ ಸೂಚನೆಗಳನ್ನು ನೀಡಬೇಕು ಎಂದು ಡಿಸಿಎಂ ಸೂಚಿಸಿದರು. ಜಲಾಶಯಗಳ ನೀರಿನ ಮಟ್ಟ, ಅಂತರ್ಜಲ ಪರಿಸ್ಥಿತಿ ಹಾಗೂ ನೀರಿನ ಬಳಕೆಯ ಮೇಲ್ವಿಚಾರಣೆಯನ್ನು ನಿರಂತರವಾಗಿ ನಡೆಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಯಾವುದೇ ರೀತಿಯ ಪ್ರಕೃತಿ ವಿಕೋಪ, ಬರ ಪರಿಸ್ಥಿತಿ ಎದುರಾದರೂ ಸಾರ್ವಜನಿಕರಿಗೆ ತೊಂದರೆಯಾಗದಂತೆ ಸಂಬಂಧಿತ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯನಿರ್ವಹಿಸಿ ತ್ವರಿತ ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

## ಸಂಪಾದಕೀಯ

### ಕಠಿಣ ಕಾನೂನಿನ ಅವಶ್ಯಕತೆ ಇದೆ

ಪ್ರತಿ ದಿನ ಎಲ್ಲಾ ಪತ್ರಿಕೆ-ಮಾಧ್ಯಮಗಳಲ್ಲಿ ನೂರಾರು ಸಂಗತಿಗಳು ಗಮನ ಸೆಳೆಯುತ್ತವೆ. ಆದರೆ ಸಮಾಜೋಪಲೋಕನದ ದೃಷ್ಟಿಯಿಂದ ಕೆಲವು ಮುಖ್ಯವೆನಿಸುತ್ತವೆ. ಅಬಕಾರಿ ಹೆಚ್ಚುವರಿ ಆಯುಕ್ತರೊಬ್ಬರ ಮನೆ ಮತ್ತು ಕಚೇರಿಯ ಮೇಲೆ ನಡೆದ ಜಾರಿ ನಿರ್ದೇಶನಾಲಯ(ಇಡಿ) ನಡೆಸಿದ ದಾಳಿ ಒಂದು ಸುದ್ದಿಯಾದರೆ, ದಾವಣಗೆರೆ ಜಿಲ್ಲೆಯ ಹರಿಹರದ ಪುಟ್ಟ ಗ್ರಾಮವೊಂದರಲ್ಲಿ ಸೋಹೆಲ್ ಎಂಬ ಉಗ್ರನ ಬಂಧನ ಇನ್ನೊಂದು. ಅದೂ ಉತ್ತರ ಪ್ರದೇಶ ಮೂಲದ ಉಗ್ರನಿಗೆ ಪಾಕಿಸ್ತಾನದ ಉಗ್ರ ಸಂಘಟನೆಗಳೊಂದಿಗೆ ನಂಟಿರುವುದು, ಅಯೋಧ್ಯೆ ರಾಮಮಂದಿರದ ಸ್ಫೋಟಕ್ಕೆ ಸಂಚು ರೂಪಿಸಿರುವ ಆಘಾತಕಾರಿ ಸಂಗತಿ. ಸಾಮಾನ್ಯವಾಗಿ ಈ ರೀತಿಯ ಸುದ್ದಿಗಳು ಪದೇ ಪದೇ ಪ್ರಕಟವಾಗುತ್ತಿರುತ್ತವೆ. ಕೆಲವೊಮ್ಮೆ ಭ್ರಷ್ಟ ಅಧಿಕಾರಿಗಳ ಅಕ್ರಮ ಸಂಪಾದನೆಯ ಚಿತ್ರಗಳು ಪ್ರಕಟವಾಗಿ ಆತನ ಬಂಧನವಾಗಿದೆ ಎಂದು ಜನರು ಹಗುರವಾಗುತ್ತಾರೆ. ಭ್ರಷ್ಟಾಚಾರಿಗಳಿಗೆ ಈ ರೀತಿಯಲ್ಲಿ ಭಯಹುಟ್ಟಿಸಿದರೆ ಭ್ರಷ್ಟಾಚಾರ ಕಡಿಮೆಯಾಗುತ್ತದೆ ಎಂದು ಜನಸಾಮಾನ್ಯರು ಮಾತಾಡಿಕೊಳ್ಳುತ್ತಾರೆ. ಅದೇ ರೀತಿ ಜೈಲಿಗಟ್ಟಲ್ಪಡುವ ಉಗ್ರರು ಮತ್ತೆಮತ್ತೆ ಉತ್ತರ ಪ್ರದೇಶದಿಂದಲೇ ಸಿಕ್ಕಿಬೀಳುತ್ತಿರುತ್ತಾರೆ. ಅದೂ ಅವರೆಲ್ಲರೂ ಸಹರಾನ್‌ಪುರದಂಥ ಜಿಲ್ಲೆಗಳವರೇ ಆಗಿರುತ್ತಾರೆ! ಹಿಂದೆಲ್ಲೋ ಯೋಗಿ ಸರ್ಕಾರ ಇಂಥ ಶಂಕಿತ ಉಗ್ರರ ಮನೆಗಳನ್ನು ಬುಲ್ಡೋಜರ್ ಬಳಸಿ ನಾಶಮಾಡಿದೆ ಎಂಬ ಸುದ್ದಿಗಳು ಬರುತ್ತಿದ್ದವು. ಆಗಲೂ ದೇಶವನ್ನು ಪ್ರೀತಿಸುವವನು ನಿರಾಳವಾಗುತ್ತಿದ್ದ, ಭಯೋತ್ಪಾದಕ ಸಂತಾನವನ್ನು ಹುಟ್ಟಡಗಿಸಲು ಇಂಥ ನಿರ್ದಾಕ್ಷಿಣ್ಯ ಕ್ರಮಗಳು ಮಾತ್ರ ಅಗತ್ಯ ಎಂದುಕೊಳ್ಳುತ್ತಿದ್ದ.



ಈಗೇಕೋ ಭ್ರಷ್ಟ ಮತ್ತು ಉಗ್ರರ ದಮನಕ್ಕೆ ಇವು ಸಾಕಾಗದು ಎನಿಸುತ್ತಿವೆ. ರಕ್ತಬೀಜಾಸುರರಂತೆ ಇವರು ಸತತವಾಗಿ ಹುಟ್ಟಿಬರಲು ಕಾರಣವೇನು? ಆದರಲ್ಲೂ ಉತ್ತರ ಪ್ರದೇಶದಂಥ ರಾಜ್ಯದ ಕಟ್ಟುನಿಟ್ಟಿನ ಕಾನೂನುಗಳು ಮತಾಂಧತೆಯನ್ನು ಇನ್ನೂ ತಡೆಯಲು ಸಾಧ್ಯವಾಗಿಲ್ಲವೆಂದರೆ ಅದಕ್ಕೇನನ್ನಬೇಕೋ ತಿಳಿಯುತ್ತಿಲ್ಲ. ಇಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಭಯೋತ್ಪಾದನೆಗೆ ತೆರಳಲು ಬಡತನ ಅಥವಾ ಇನ್ನಾವುದೋ ಕಾರಣ ಅಲ್ಲ. ಉತ್ತರ ಪ್ರದೇಶದ ಕಾನೂನು ಸುವ್ಯವಸ್ಥೆ ಅದನ್ನು ಅರಿತಿರಬಹುದು. ಆದರೆ ಬುದ್ಧಿಜೀವಿ ವರ್ಗ ಮತ್ತು ಕೆಲ ಕಾನೂನು ಪರಿಣತರು ಉಗ್ರರಿಗೆ ಬೆಂಬಲವಾಗಿಯೇ ಇದ್ದಾರೆ. ಸಮರ್ಥಕರ ಯಾವ ಕಟ್ಟಡಗಳಿನ್ನೂ ಉರುಳಿಲ್ಲ. ಆ ಕಾರ್ಯ ಆರಂಭಗೊಂಡರೆ ಇದು ಹದ್ದುಬಸ್ತಿಗೆ ಬರಬಹುದೇನೋ! ಹಾಗೆಯೇ ಭ್ರಷ್ಟಾಚಾರಿಗಳ ವಿರುದ್ಧ ಭಾರತದ ಎಲ್ಲೂ ಕಠಿಣ ಕಾನೂನು ಇಲ್ಲ. ಅಕ್ರಮ ಸಂಪತ್ತಿನ ಮೇಲಿನ ದಾಳಿಗಳು ರೋಚಕವಾಗಿ ಸುದ್ದಿಯಾಗುವಷ್ಟು ಅದರ ಫಲಶ್ರುತಿ ಸುದ್ದಿಯಾಗುವುದಿಲ್ಲ. ದೇಶದ ಉದ್ದಗಲಕ್ಕೆ ಹರಡಿರುವ ಈ ಜಾಲ ವಿಶಾಲವಾಗಿದೆ. ಕಾನೂನಿನ ಕಣ್ಣಿನಿಂದ ಸುಲಭವಾಗಿ ನುಸುಳಬಲ್ಲ ಮಾರ್ಗಗಳು ಅವುಗಳಿಗೆ ತಿಳಿದಿವೆ.

ಇವೆರಡನ್ನು ಹತ್ತಿಕ್ಕದವರೆಗೆ ದೇಶದ ಅಭಿವೃದ್ಧಿ ಸಾಧ್ಯವಿಲ್ಲ. ಎರಡನ್ನು ಹತ್ತಿಕ್ಕಲು ಈಗಿರುವ ಮಾರ್ಗಗಳಿಗೆ ಆಗಿಲ್ಲ. ಮತಾಂಧತೆಯಿಂದ ತನ್ನ ಜೀವವನ್ನೇ ಪಣಕ್ಕಿಡಬಲ್ಲ ದುರುಳರು ಇನ್ನು ಕಾನೂನು ಮತ್ತು ತನ್ನ ಮನೆಯನ್ನು ಲೆಕ್ಕಿಸಿ ಬದುಕುತ್ತಾನೆ ಎನ್ನುವಂತಿಲ್ಲ. ಕಾನೂನು ತಯಾರಕರು ಮತ್ತು ನೀತಿನಿರೂಪಕರು ಇವೆರಡರ ಬಗ್ಗೆ ಸೂಕ್ತವಾದ ಕಾನೂನುಗಳನ್ನು ತರುವುದೊಂದೇ ಇಂಥ ಘಟನೆಗಳು ಮರುಕಳಿಸದಿರುವಂತೆ ಮಾಡಲು ಸಾಧ್ಯ.

## ಮನುಷ್ಯನನ್ನು ಮೃತ್ಯು ಕೊಲ್ಲುವುದಿಲ್ಲ

**ಅತಿಮಾನೋಕ್ತ್ರತಿ ವಾದಶ್ಚ ತಥಾಥಾತ್ಯಾಗೋ ನರಾಧಿಪ।**
**ಕ್ರೋಧಶ್ಚಾತ್ಮವಿಧಿತ್ಸಾ ಚ ಮಿತ್ರದ್ರೋಹಶ್ಚ ತಾನಿ ಷಟ್।**
**ಏತ ಏವಾಸಯಸ್ತೀಕ್ಷ್ಣಾಃ ಕೃಂತಂತ್ಯಾಯೂಂಷಿ ದೇಹಿನಾಮ್।**
**ಏತಾನಿ ಮಾನವಾನ್ ಘ್ನಂತಿ ನ ಮೃತ್ಯುಃ ಭದ್ರಮಸ್ತು ತೇ ॥** -ಮಹಾಭಾರತ

ಮನುಷ್ಯನ ಆಯುಸ್ಸನ್ನು ಅವನ ಅತಿಮಾನ, ಅತಿವಾದ, ಅತ್ಯಾಗ, ಕ್ರೋಧ, ಆತ್ಮವಿಧಿತ, ಮಿತ್ರದ್ರೋಹ- ಈ ಆರು ತೀಕ್ಷ್ಣ ಚೂರಿಗಳು ಕತ್ತರಿಸುತ್ತವೆ. ಇವೇ ಮನುಷ್ಯನನ್ನು ಕೊಲ್ಲುತ್ತವೆ. ಮೃತ್ಯು ಅಲ್ಲ - ಎಂಬುದು ಶ್ಲೋಕಾರ್ಥ.

ಮನುಷ್ಯರ ಪ್ರಾಣವನ್ನು ಮೃತ್ಯುಬಂದು ಕೊಂಡೊಯ್ಯುತ್ತದೆ ಎಂಬುದು ಲೋಕದ ತಿಳುವಳಿಕೆ. ಶಾಸ್ತ್ರಾದಿಗಳೂ ಇದನ್ನೇ ಹೇಳುತ್ತವೆ. ಆಯುಷ್ಯ ತೀರಿದ ಮೇಲೆ ಮುಂದಿನ ಕೆಲಸ ಮೃತ್ಯುವಿನದು ಎಂಬ ನಂಬಿಕೆ. ಆದರಿಲ್ಲಿ ಪ್ರಕೃತಶ್ಲೋಕವಿದಕ್ಕೆ ವಿರುದ್ಧವಾದ ವಾದವನ್ನು ಮುಂದಿಡುತ್ತದೆ. ಮನುಷ್ಯನ ಆಯುಷ್ಯವನ್ನು ಕತ್ತರಿಸುವ ಹರಿತವಾದ ಆರು ಚೂರಿಗಳಿವೆ. ಇವೇ ಮನುಷ್ಯನ ಅಂತ್ಯಕ್ಕೆ ಕಾರಣ ಎನ್ನುವ ಈ ಸುಭಾಷಿತ ಅದಾವುದೆಂದೂ ಹೇಳುತ್ತದೆ.

ಶ್ಲೋಕ ಸಾಗರ



ಡಾ. ಸೋಂದಾ ಭಾಸ್ಕರ ಭಟ್

ಅತಿಮಾನ ಮನುಷ್ಯನ ಆಯುಸ್ಸನ್ನು ಕೊಲ್ಲುವ ಮೊದಲ ಚೂರಿ. ಈ ಚೂರಿ ಬಾಹ್ಯ ನೋಟಕ್ಕೆ ಕಾಣಿಸಿರಬಹುದು. ಆದರೆ ಗೊತ್ತಿಲ್ಲದಂತೆ ಇರಿಯುತ್ತದೆ. ಅಂದರೆ ಅತಿಯಾದ ದುರಹಂಕಾರ. 'ಅಹಂ' ಸಾವಿಗೆ ಕಾರಣವಾಗುತ್ತದೆ. ಅಹಂಕಾರ, ದುರಭಿಮಾನಗಳು ಹೆಚ್ಚಾದಾಗ ಸಮಾಜವೇ ಅಂಥವರನ್ನು ದೂರವಿರಿಸುತ್ತದೆ. ಎಲ್ಲವನ್ನೂ ಎಲ್ಲರನ್ನೂ ಕಳೆದುಕೊಂಡ ಮೇಲೆ ಇದ್ದೂ ಸತ್ತಂತೆ. ತನ್ನ ನಡತೆಯೇ ತನಗೆ ಸಾವಾಗಿ ಪರಿಣಮಿಸುತ್ತದೆ.

ಅತಿವಾದ ಎರಡನೆಯ ಚೂರಿ. ಎಲ್ಲವೂ ಒಂದು ಹಂತದಲ್ಲಿದ್ದರೆ ಚಂದ. ಪರಿಧಿಯಿಂದ ಮೀರಿ ಹೊರನಡೆದರೆ ಅಲ್ಲಿಗೆ ಮುಗಿಯಿತು. ಮಾತಿಗೊಂದು ಮಿತಿಯಿರಬೇಕು. ಸಂಸ್ಕಾರವಿರಬೇಕು. ಎಲ್ಲರನ್ನೂ ಆಕರ್ಷಿಸುವಂತೆ ಮಧುರವಾಗಿರಬೇಕು ನಮ್ಮ ಮಾತು. ಮಾತಿನ ಮಿತಿಯನ್ನು ಮೀರಿ ಅತಿಯಾಗಿ ಮಾತನಾಡಲು ಪ್ರಾರಂಭಿಸಿದರೆ ನಮ್ಮ ಮಾತು ಅಸ್ತಿತ್ವಕ್ಕೆ ಧಕ್ಕೆತರಬಹುದು. ಅತ್ಯಾಗ ಎಂದರೆ ದಾನಮಾಡದಿರುವುದು. ಎಲ್ಲರೂ ಗಳಿಕೆಯ ಒಂದು ಭಾಗವನ್ನು ಫಲಾಪೇಕ್ಷೆಯಿಲ್ಲದೆ ದಾನ ಮಾಡಬೇಕು. ಪ್ರತಿಯೊಂದ ಸರಿಯಾದ ಕ್ರಮದಲ್ಲಿ, ಸರಿಯಾದ ವ್ಯಕ್ತಿಗೆ ನೀಡಬೇಕು. ಈ ಬಗೆಯ ತ್ಯಾಗವೇ ಆಯುಷ್ಯ ವೃದ್ಧಿಗೆ ಕಾರಣವಾಗುತ್ತದೆ. ಅತ್ಯಾಗ ಆಯುಃ ಕ್ಷೀಣತೆಗೆ ಕಾರಣವಾಗುತ್ತದೆ.

ಕ್ರೋಧ ಮನುಷ್ಯನ ಮೊದಲ ವೈರಿ. ಸೋಲಿಗೂ, ಸಾವಿಗೂ ಕಾರಣವಾಗಬಲ್ಲ ಗುಣ ಇದ್ದಕ್ಕಿದ್ದಂತೆ ಚೂರಿಯಾಗಿಯೂ ಪರಿಣಮಿಸಬಹುದು. ಕ್ರೋಧ ಕಟ್ಟಿಕೊಂಡು ದೀರ್ಘಕಾಲ ಬದುಕಲು ಸಾಧ್ಯವಿಲ್ಲ. ಅಕ್ರೋಧವೇ ಜೀವನಕ್ಕೆ ಬಂಧನವನ್ನು ಒದಗಿಸಬಲ್ಲದು. ಕ್ರೋಧ ನಮ್ಮನ್ನೇ ವೈರಿಗಳನ್ನಾಗಿ ಕೊಲ್ಲುತ್ತದೆ.

ಮಿತ್ರದ್ರೋಹದಂತಹ ಪಾಪ ಮತ್ತೊಂದಿಲ್ಲ. ನಮ್ಮ ಒಳಿತಿಗಾಗಿ ತಮ್ಮನ್ನು ಸಮರ್ಪಿಸಿಕೊಂಡು, ಸುಖ-ದುಃಖಗಳಲ್ಲಿ ಭಾಗಿಗಳಾಗಿ ಸದಾ ನಮ್ಮೊಂದಿಗಿರುವವರು ಸ್ನೇಹಿತರು ಮಾತ್ರ. ಅವರನ್ನ ನಮ್ಮಂತೆಯೇ ಪ್ರೀತಿಸಬೇಕೇ ವಿನಾ ದ್ರೋಹವೆಸಗಬಾರದು. ಮಿತ್ರದ್ರೋಹ ಬೇರೆಯಲ್ಲ, ಸಾವು ಬೇರೆಯಲ್ಲ. ಆತ್ಮವಿಧಿತ್ಸಾ ಎಂದರೆ ತನ್ನನ್ನು ತಾನು ತಿಳಿದುಕೊಳ್ಳದೇ, ತನ್ನ ಕರ್ತವ್ಯವನ್ನು ಅನುಷ್ಠಾನಿಸದೆ ತನ್ನ ಬಗ್ಗೆ ಕೀಳರಿಮೆ, ತಾತ್ಸಾರ ಹೊಂದಿರುವುದು. ಯಾವಾಗಲೂ ತನ್ನನ್ನು ತಾನೇ ಹಳಿದುಕೊಳ್ಳುವುದು. ಇದಿದ್ದರೆ ಸತ್ತಂತೆ. ನಮ್ಮ ಉನ್ನತಿಗೆ ಮಾರಕವಾದ ಈ ಆರನ್ನೂ ಪ್ರತಿರೋಧಿಸುತ್ತ ತ್ಯಜಿಸಬೇಕು. ಆಗ ಮಾತ್ರ ಬದುಕು ಆಪ್ಯಾಯಮಾನವಾಗುತ್ತದೆ. ಬದುಕಿಗೆ ಬೆಲೆ ಬರುತ್ತದೆ. ಅದಿಲ್ಲದಿದ್ದರೆ ಕೊಲ್ಲುವುದಕ್ಕೆ ಮೃತ್ಯು ಬೇಕಾಗಿಲ್ಲ, ನಾವೇ ನಮ್ಮನ್ನು ಕೊಂದುಕೊಳ್ಳುತ್ತೇವೆ.

## ಕಿರುಕುಳ ಆರೆಸ್ಸೆಸ್‌ಗೆ ಹೊಸದೇನಲ್ಲ...

ರಾಜ್ಯದ ಸಚಿವರು ಮತ್ತು ಕಾಂಗ್ರೆಸ್ಸಿನ ರಾಷ್ಟ್ರಮಟ್ಟದ ನಾಯಕರು ಆರೆಸ್ಸೆಸ್ ವಿರುದ್ಧ ನಿರಂತರ ಹೇಳಿಕೆಗಳನ್ನು ನೀಡುತ್ತಿರುವುದನ್ನು ನೋಡಿದರೆ ಅವರು, ಆರೆಸ್ಸೆಸ್‌ಗೆ ಎಲ್ಲ ರೀತಿಯಲ್ಲೂ ಕಿರುಕುಳ ನೀಡಲು ಮುಂದಾಗಿದ್ದಾರೆ ಎಂಬುದು ವ್ಯಕ್ತವಾಗುತ್ತದೆ. ಸರಕಾರಗಳಿಂದ ವಿರೋಧಿಗಳಿಂದ ನಿರಂತರ ನಿಂದನೆ, ದ್ವೇಷ, ಸುಳ್ಳು ಪ್ರಚಾರಗಳನ್ನು, ಕಿರುಕುಳಗಳನ್ನು ಎದುರಿಸುತ್ತಲೇ ಬಂದ ಆರೆಸ್ಸೆಸ್‌ಗೆ ಇದು ಹೊಸದೇನಲ್ಲ. ದೇಶ ಮತ್ತು ಜನತೆಯ ನಿರಂತರ ನಿಸ್ವಾರ್ಥ ಸೇವೆಯಲ್ಲಿ ಸಮರ್ಪಣಾ ಭಾವದಿಂದ ತೊಡಗಿರುವ ಆರೆಸ್ಸೆಸ್ ಮತ್ತು ಸಂಘದ ಸ್ವಯಂಸೇವಕರು ನಿತ್ಯದ ಪ್ರಾರ್ಥನೆಯಲ್ಲಿ ತಾಯಿ ಭಾರತಿಯನ್ನು ಪರಮವೈಭವಕ್ಕೇರಿಸುವಲ್ಲಿ ನಿರಂತರ ಸವಾಲುಗಳನ್ನು ಎದುರಿಸುತ್ತಲೇ ಬಂದಿದ್ದಾರೆ. ಅದನ್ನೂ ಸತ್ಯದ ಹಾದಿಯಲ್ಲಿ, ಧರ್ಮದ ಹಾದಿಯಲ್ಲಿ ಸಂಘ ಮುನ್ನಡೆಯಲಿದೆ ಎಂಬುದರಲ್ಲಿ ಸಂಶಯವಿಲ್ಲ.

ಪತ್ರ ಮಿತ್ರ

ದೇಶ-ಸಮಾಜಕ್ಕೆ ಆಪತ್ತು, ವಿಪತ್ತು ಬಂದಾಗಲೆಲ್ಲ ಜಾತಿ, ಮತ, ಧರ್ಮ ನೋಡದೆ ನೊಂದವರ ಕಣ್ಣೀರೊರೆಸುವುದರೊಂದಿಗೆ ನೆರವಾಗಿರಿಸಿ ಸಂಘ-ಸಂಘಸ್ವಯಂಸೇವಕರು ಕಾರ್ಯಾಚರಿಸುತ್ತಿರುವುದನ್ನು ದೇಶ ನೋಡುತ್ತಲೇ ಬಂದಿದೆ. ಕೇವಲ ರಾಜಕೀಯ ಕಾರಣಕ್ಕಾಗಿ ಸಂಘದ ಮೇಲೆ ದ್ವೇಷ ಸಾಧಿಸುವ ಯತ್ನಗಳೇ ಯಶಸ್ಸು ಸಿಗದು. ಹಾಗೆಯೇ ಯಾವುದೇ ಜಾತಿಭೇದ ಕಾಣದ ಒಂದೇ ಒಂದು ಸ್ಥಳ ಇದ್ದರೆ ಅದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಶಾಖೆ ಎಂಬ ಅಂಶವನ್ನೂ ಪ್ರಜ್ಞಾವಂತರು ಗುರುತಿಸಲಾರಂಭಿಸಿರುವುದು ಗಮನಾರ್ಹ.

-ಕಿರಣ್, ಮಂಗಳೂರು

# ಪೆರಿಯಾರ್ ನಾಸ್ತಿಕ್ಯಕ್ಕೂ ತಮಿಳುನಾಡು ವಿಶಿಲ್!

ಉಘೇ ವೀರಭೂಮಿಗೆ

• ಸಂತೋಷ್ ತಮ್ಮಯ್ಯ
santoshthammaiah@gmail.com



ಬೆಂಜಮಿನ್ ಡಿಸ್ರೇಲಿ. ಹಲವರಿಗೆ ಹೆಸರನ್ನೆಲ್ಲೋ ಕೇಳಿರುವಂತಿದೆಯಲ್ಲಾ ಎಂದೆನಿಸಬಹುದು. ಆದರೆ ವಿಕಿಪೀಡಿಯಾ ಕೂಡ ಆತನನ್ನು ಯು.ಕೆಯ ರಾಜಕಾರಣಿ, ಕವಿ ಮತ್ತು ಸಾಹಿತಿ ಎಂದಷ್ಟೇ ಪರಿಚಯಿಸುತ್ತದೆ. ಕೇವಲ ಯುನೈಟೆಡ್ ಕಿಂಗ್ಡಮಿನ ಸಾಹಿತಿ ಎಂಬ ಒಂದೇ ಕಾರಣಕ್ಕೆ ಬೆಂಜಮಿನ್ ಡಿಸ್ರೇಲಿ ಖ್ಯಾತನಲ್ಲ. ಆತ ಎರಡೆರಡು ಬಾರಿ ಯುಕೆಯ ಪ್ರಧಾನಮಂತ್ರಿ ಕೂಡ ಆಗಿದ್ದ! ಸಕ್ರೀಯ ರಾಜಕಾರಣಿಯಾಗಿ, ಹೋರಾಟನಾಗಿ ಇಂದಿಗೂ ಆತ ಜಗತ್ತಿನ ನೆನಪಿನಲ್ಲಿದ್ದಾನೆ. ಆತ ಹುಟ್ಟಿದ್ದು 1804ರಲ್ಲಿ. ಅಜ್ಜ ಇಟಲಿ ಮೂಲದವನು, ಅಜ್ಜಿ ಯಹೂದಿ. ಮಕ್ಕಳೆಲ್ಲಾ ಯಹೂದಿಗಳಾಗಿ ಬೆಳೆದರು. ಹೊಟ್ಟೆಪಾಡಿಗೆ ಇಂಗ್ಲೆಂಡಿಗೆ ವಲಸೆ ಬಂದ ಅಜ್ಜ ಬುದ್ಧಿವಂತಿಕೆ ಉಪಯೋಗಿಸಿ ತನ್ನನ್ನು ಮತ್ತು ತನ್ನ ಕುಟುಂಬವನ್ನು ಕ್ರೈಸ್ತಮತಕ್ಕೆ ಒಪ್ಪಿಸಿಕೊಂಡ. ಅಂದರೆ ಹದಿನೈದನೇ ಶತಮಾನದಿಂದಲೂ ಉದಾರವಾದಿ ಎಂದು ಜಂಬ ಕೊಚ್ಚಿಕೊಳ್ಳುತ್ತಿದ್ದ ಯುಕೆಯಲ್ಲಿ ಯಹೂದಿಯೊಬ್ಬ ಬದುಕಲು ಕ್ರೈಸ್ತನಾಗಿ ಮತಾಂತರವಾಗಬೇಕಿತ್ತು!

ಬೆಂಜಮಿನ್ 17 ವರ್ಷದವನಿದ್ದಾಗ ಬ್ಲೂಮ್ಸ್‌ಬರಿಯಲ್ಲಿ ವಕೀಲರೊಬ್ಬರ ಬಳಿ ಕೆಲಸಕ್ಕೆ ಸೇರಿಕೊಂಡ. ವಕೀಲರ ಬಳಿ ಬರುತ್ತಿದ್ದ ವ್ಯಾಜ್ಯಗಳಿಂದ ಆತನಿಗೆ ಲೋಕದಲ್ಲಿ ಹೀಗೆಲ್ಲಾ ನಡೆಯುತ್ತವೆಯೇ ಎನಿಸತೊಡಗಿತು. ಆತನ ಲೋಕಜ್ಞಾನ ಬೆಳೆಯಿತು. ಆದರೆ ಯಾಕೋ ಆ ಕೆಲಸ ಆತನಿಗೆ ಬೇಗನೆ ಸಾಕೆನಿಸಿತು. ಮುಂದೆ ಗೆಳೆಯರೊಂದಿಗೆ ವ್ಯಾಪಾರಕ್ಕೆ ಕೈ ಹಾಕಿದ, ಆದರೆ ಕೈ ಸುಟ್ಟುಕೊಂಡು ಸಾಲಗಾರನಾದ. ಆದರೆ ಧೈರ್ಯಗೆಡಲಿಲ್ಲ. ತನ್ನ ಗೆಳೆಯ ಜಾನ್ ಮರ್‍ರೆ ಎಂಬಾತನೊಂದಿಗೆ ಪತ್ರಿಕೆ ಆರಂಭಿಸಲು ಹೊರಟ. ಆದರೆ ಪಾಲುದಾರನಾಗಿದ್ದ ಬೆಂಜಮಿನ್‌ಗೆ ಬಂಡವಾಳ ಸಿಗಲಿಲ್ಲ. ಆದರಿಂದ ಮರ್‍ರೆ ಮುನಿಸಿಕೊಂಡ. ಇಬ್ಬರು ಕಿತ್ತಾಡಿಕೊಂಡರು. ನಿನ್ನ ಮಾತು ಕೇಳಿ ನಾನು ಹಾಳಾದೆ ಎಂದು ಮರ್‍ರೆ ಬೆಂಜಮಿನ್‌ನಿಗೆ ಬದ್ಧ ವೈರಿಯೇ ಆದ. ಕೆಲ ದಿನಗಳವರೆಗೆ ಸುದ್ದಿ ಇಲ್ಲದಿದ್ದ ಬೆಂಜಮಿನ್ 'ವಿವಿಯನ್ ಗ್ರೇ' ಎಂಬ ಕಾದಂಬರಿಯೊಂದನ್ನು ಬರೆದ. ಆದರಲ್ಲಿ ಭರಪೂರ ಬಯ್ಗುಳಗಳಿದ್ದವು. ತನಗಾಗದವರನ್ನು, ತನ್ನೊಡನೆ ಜಗಳವಾಡಿದವರನ್ನು ಅದರಲ್ಲಿ ಮನಸೋ ಇಚ್ಛೆ ಬೆಂಜಮಿನ್ ಬಯ್ದಿದ್ದ. ಆ ಕಾರಣಕ್ಕೆ ಪುಸ್ತಕದಲ್ಲಿ ಬರೆದವನ ಹೆಸರಿರಲಿಲ್ಲ! ಆದರೆ 'ವಿವಿಯನ್ ಗ್ರೇ'ಯಲ್ಲಿ ಜಾನ್ ಮರ್‍ರೆಯನ್ನು ಬೆಂಜಮಿನ್ ಸಾಕಷ್ಟು ಹುರಿದು ಉಪ್ಪುಖಾರ ಸೇರಿಸಿದ್ದರಿಂದ ಆತ ಬೆಂಜಮಿನ್ ಡಿಸ್ರೇಲಿಯೇ ಆಗಿರಬೇಕೆಂದು ಜನ ಮಾತಾಡಿಕೊಂಡರು. ಕಾದಂಬರಿಯಲ್ಲಿ ಸತ್ತ್ವವೇನೂ ಇಲ್ಲದಿದ್ದರೂ ಮೊನಚು ಭಾಷೆ, ವ್ಯಂಗ್ಯ, ವಿಡಂಬನೆ ಮತ್ತು ಸೃಜನಶೀಲ ಬಯ್ಗುಳಗಳಿಗಾಗಿ ಅದು ಸಾಕಷ್ಟು ಚರ್ಚೆಗೊಳಗಾಯಿತು. ಮುಂದೆ ಕೆಲ ಕಾಲ ಮತ್ತೆ ಬೆಂಜಮಿನ್ ಭೂಗತನಾದ. ಒಂದಿನ ಏಕಾಏಕಿ ಮೂರು ಸಂಪುಟಗಳ 'ದಿ ಯಂಗ್ ಡ್ಯೂಕ್' ಎಂಬ ಕಾದಂಬರಿಯನ್ನು ಪ್ರಕಟಿಸಿ ಮತ್ತೆ ಸುದ್ದಿಯಾದ. ಈ ಪುಸ್ತಕದಲ್ಲೂ ಎಂದಿನಂತೆ ಮೊನಚಿತ್ತು, ಬಯ್ಗುಳಗಳಿದ್ದವು. ವ್ಯವಸ್ಥೆಯನ್ನು, ದ್ವಂದ್ವ ವ್ಯಕ್ತಿತ್ವದವರನ್ನು, ಕಪಟಿಗಳನ್ನು ಅದರಲ್ಲಿ ಸಾಕಷ್ಟು ಟೀಕಿಸಿದ್ದ. ವಿನೂತನ ಭಾಷಾಶೈಲಿ ಮತ್ತು ನೇರವಂತಿಕೆಗಳಿಂದ ಈ ಎರಡು ಕಾದಂಬರಿಗಳು ಆತನಿಗೊಂದು ಐಡೆಂಟಿಟಿಯನ್ನು ತಂದುಕೊಟ್ಟವು. ಅದುವರೆಗೆ ಬೆಂಜಮಿನ್‌ನಂತೆ ಕಾದಂಬರಿಯಲ್ಲಿ ಬಯ್ಗುಳವನ್ನು ತುಂಬಿದವರಿರಲಿಲ್ಲ. ಲೋಕದ ಡೊಂಕನ್ನು ನೇರವಾಗಿ ಹೇಳಿದ ಶೈಲಿ ಆ ದಿನಗಳಲ್ಲಿ ಹೊಸದಾಗಿತ್ತು. ಕಾದಂಬರಿಯಲ್ಲಿದ್ದ ಮಹತ್ವಾಕಾಂಕ್ಷೆ, ಹಠಮಾರಿತನ ಮತ್ತು ಸೇಡಿನ ಧೋರಣೆಗಳು ಯುವ ಓದುಗರನ್ನು ಸಹಜವಾಗಿ ಸೆಳೆದಿತ್ತು. ಈ ಗುಣಗಳಿಂದಲೇ ಮುಂದೆ ಬೆಂಜಮಿನನ ಬದುಕು ಆತನನ್ನು ಎಲ್ಲೆಲ್ಲೋ ಎಳೆದುಕೊಂಡುಹೋಯಿತು. ಆತ ರಾಜಕೀಯ ಪ್ರವೇಶಿಸಿದ. ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣೆಯಲ್ಲಿ ಸ್ಪರ್ಧಿಸಿ ಮೂರು ಬಾರಿ ಸೋತ. ನಂತರ ಕನ್ಸರ್ವೇಟಿವ್ ಪಕ್ಷ ಸೇರಿ ಅದರಲ್ಲಿ ಗೆದ್ದು ಹೌಸ್ ಆಫ್ ಕಾಮನ್ಸ್ ಪ್ರವೇಶಿಸಿದ. ಪತ್ರಿಕೆಗಳಲ್ಲಿ ಸತತವಾಗಿ ಬರೆಯತೊಡಗಿದ ಬೆಂಜಮಿನ್ ದೇಶಾದ್ಯಂತ ಜನಪ್ರೀಯ ರಾಜಕಾರಣಿಯಾದ. ರಾಜಕೀಯ ನಾಯಕರ ಧೋರಣೆಗಳನ್ನು ಟೀಕಿಸಿ ಮೂರು ಕಾದಂಬರಿಗಳನ್ನು ಬರೆದ. ಹಣೆಬರಹ ಚೆನ್ನಾಗಿದ್ದ ಡಿಸ್ರೇಲಿ ರಾಜಕೀಯದ ಸ್ಥಿತ್ಯಂತರದ ಕಾಲದಲ್ಲಿ (1868) ಇಂಗ್ಲೆಂಡಿನ ಪ್ರಧಾನಿಯೂ ಆದ. 1874ರಲ್ಲಿ ಎರಡನೆ ಬಾರಿಯೂ ಪ್ರಧಾನಿಯಾದ. ಇಂಗ್ಲೆಂಡಿನ ಸುಧಾರಣೆ ಮತ್ತು ಹಲವು ಜಾಗತಿಕ ವಿದ್ಯಮಾನಗಳಲ್ಲಿ ಹೆಸರು ಮಾಡಿದ ಬೆಂಜಮಿನ್ ಡಿಸ್ರೇಲಿ ಬದುಕಿನುದ್ದಕ್ಕೂ ನಿರಂತರವಾಗಿ ಕಾದಂಬರಿಗಳನ್ನು ಬರೆದ. ವಿಶ್ವದ ನಾನಾ ಭಾಗಗಳಲ್ಲಿ ಆತನ ಕಾದಂಬರಿಗಳಿಂದ ಪ್ರೇರಿತರಾದವರಿದ್ದರು. ಬಿಡುವಿಲ್ಲದ ರಾಜಕಾರಣಿಯಾಗಿದ್ದರೂ ಆತನ ಕಾದಂಬರಿ ಪ್ರೇಮ, ಜೀವಂತಿಕೆ, ನೇರವಂತಿಕೆಗಳಿಂದ ಆತನಿಗೆ ಜಗತ್ತಿನಾದ್ಯಂತ ಅಭಿಮಾನಿಗಳಿದ್ದರು.

ಭಾರತದಲ್ಲಿ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ನಡೆದು ಭಾರತದ ಅಧಿಕಾರ ಈಸ್ಟ್ ಇಂಡಿಯಾ ಕಂಪನಿ ಕೈಯಿಂದ ಇಂಗ್ಲೆಂಡ್ ಸಂಸತ್ತಿಗೆ ಹಸ್ತಾಂತರವಾದ ಕೆಲವೇ ವರ್ಷಗಳಲ್ಲಿ, ಅಂದರೆ 1868ರಲ್ಲಿ ಬೆಂಜಮಿನ್ ಮೊದಲ ಬಾರಿ ಇಂಗ್ಲೆಂಡಿನ ಪ್ರಧಾನಿಯಾಗಿದ್ದನೆಂಬುದು ವಿಶೇಷ. ಈ ಎಲ್ಲಾ ವಿವರಗಳಿಲ್ಲಿ ಅಪ್ರಸ್ತುತ. ಆದರೆ ಬೆಂಜಮಿನನಿಗೆ ಸಿಕ್ಕ ಸ್ಟಾರ್‌ಡಂ ಯಾವ ಪರಿಯ ಅಧ್ವಾನವನ್ನು ಸೃಷ್ಟಿಸಿತೆಂಬುದಕ್ಕೆ ಇತರ ವಿವರಗಳ ಅವಲೋಕನವೂ ಅಗತ್ಯ. ಆತನ ಪ್ರೇರಣೆಯಿಂದ ಕೇವಲ ಬಯ್ಯುವ ಪದಗಳಿಂದಲೇ ಯುವಕರು ಕಾವ್ಯ ರಚನೆಗೆ ಮುಂದಾದರು. ಲೋಕದ ಡೊಂಕನ್ನು ತಿದ್ದುವುದರ ಹೊರತಾಗಿ ಸಾಹಿತ್ಯಕ್ಕೆ ಬೇರೆ ಉದ್ದೇಶವಿಲ್ಲವೆಂಬ ಧೋರಣೆ ಹರಡತೊಡಗಿತು. ಸಾಹಿತ್ಯ ವಿಮರ್ಶೆಗಳೆಲ್ಲವನ್ನೂ ಟೀಕೆಗಳೆಂದು ಪರಿಭಾವಿಸುವ ವರ್ಗ ಸೃಷ್ಟಿಯಾಯಿತು. ಮತ್ತೊಬ್ಬರಿಗೆ ನೋವು ನೀಡದ ವಾಕ್ಯಗಳಿಂದೇನುಪಯೋಗ ಎನ್ನುವ ವಿಚಿತ್ರ ಮಾನಸಿಕತೆಯೂ ಬೆಳೆಯಲಾರಂಭಿಸಿತು. ಬೆಂಜಮಿನ್ ಡಿಸ್ರೇಲಿ ಬರೆಯುತ್ತಿದ್ದಾಗಲೇ ಬ್ರಿಟನ್‌ನಲ್ಲಿ ಬದಲಾವಣೆಗೆ ತಹತಹಿಸುತ್ತಿದ್ದ ಮತ್ತು ಸಾಹಿತ್ಯಕ್ಕೆ ತಕ್ಕ ಭಾವುಕತೆಯ ಮಿಶ್ರಣವನ್ನು ಹದವಾಗಿ ಮಾಡುತ್ತಿದ್ದ ಸಾಹಿತ್ಯ ಚಳವಳಿಯ ಕಾಲಘಟ್ಟವಾಗಿತ್ತು. ಬ್ರಿಟಿಷ್ ಸಾಮ್ರಾಜ್ಯದ ಹೆಮ್ಮೆಯ ಜೊತೆಜೊತೆಗೆ ವಾಸ್ತವವಾದ, ಸಾಮಾಜಿಕ ವಿಮರ್ಶೆ, ನೈತಿಕತೆ, ವಿಜ್ಞಾನ-ಧರ್ಮ ಸಂಘರ್ಷಗಳೂ ಅತಿಯಾಗಿ ಕಾಣಿಸುತ್ತಿದ್ದ ವಿಕ್ಟೋರಿಯನ್ ಯುಗದ ಉಚ್ಛ್ರಾಯ ಕಾಲಮಾನವೂ ಅದಾಗಿತ್ತು. ಡಿಕನ್ಸ್ ಮತ್ತು ಈಲಿಯಟ್ ನಂಥವರು ಬರೆಯುತ್ತಿದ್ದ ಅದೇ ಕಾಲದಲ್ಲಿ ಬೆಂಜಮಿನ್‌ನ ಸಾಹಿತ್ಯಗಳು ಅತಿಯಾದ ಜನಪ್ರೀಯತೆ ಗಳಿಸಿದ್ದರ ಜೊತೆಗೆ ಬ್ರಿಟಿಷ್ ವಿರೋಧಾಭಾಸದ ಮಾನಸಿಕತೆಯ ಅನಾವರಣವನ್ನೂ ಮಾಡಿತು. ಏಕೆಂದರೆ ತನ್ನ ರಂಜಕ ಪುಸ್ತಕಗಳಿಂದ ಬೆಂಜಮಿನ್ ಎಲ್ಲರಿಗಿಂತ ಖ್ಯಾತನಾಗಿದ್ದ. ಆ ಖ್ಯಾತಿ ಮತ್ತು ರಾಜಕಾರಣಿಯ ಪೋಷಾಕಿನಿಂದ ಆತನಿಗೆ ಆದಾಗಲೇ ಸುಧಾರಕನೆಂಬ ವ್ಯಕ್ತಿತ್ವವೂ ಹೇರಿಕೆಯಾಗಿಬಿಟ್ಟಿದ್ದವು. ಮುಖ್ಯವಾಗಿ ಅಂದಿನ ಕನ್ಸರ್ವೇಟಿವ್ ಪಕ್ಷದ ರಾಷ್ಟ್ರೀಯವಾದಿ ವಿಚಾರಗಳಿಗೆ ಆತನೇ ಹೀರೋ ಆಗಿಬಿಟ್ಟ. ಕನ್ಸರ್ವೇಟಿವ್ ಪಕ್ಷದ ಜನಪ್ರೀಯ one-nation ಥಿಯರಿಯನ್ನು ಬೆಂಜಮಿನ್ ಡಿಸ್ರೇಲಿಯೇ ಕಂಡುಹಿಡಿದ ಎಂದು ಜನ ನಂಬತೊಡಗಿದರು. ಬೆಂಜಮಿನ್‌ನ ರಾಷ್ಟ್ರೀಯವಾದಿ ಚಿಂತನೆಗಳಲ್ಲಿ ಜಳ್ಳೇ ತುಂಬಿರುತ್ತಿದ್ದರೂ ಆತ ಇನ್ಯಾರಿಗೋ ಬಯ್ಯುತ್ತಿದ್ದ ಮಾತುಗಳು ಜನರಿಗೆ ಆಕರ್ಷಕ ರಾಷ್ಟ್ರೀಯವಿಚಾರಗಳಾಗಿ ಕೇಳಿಸುತ್ತಿದ್ದವು. ಆತನ ಪ್ರತಿಮೆ ಸ್ಥಾಪನೆಯಾಯಿತು. ಆತ ಜೀವಂತವಿದ್ದಾಗಲೇ ಆತ ದೇಶದ ಸ್ಮೃತಿ ಚಿಹ್ನೆಯ ಭಾಗವಾದ. ಪ್ರಮುಖ ಪ್ರಧಾನಿಯಾಗಿ ದಾಖಲಾದ. ಎಲ್ಲಕ್ಕಿಂತ ಹೆಚ್ಚಾಗಿ ಕನ್ಸರ್ವೇಟಿವ್ ಪಕ್ಷ ಬೆಂಜಮಿನ್ ಡಿಸ್ರೇಲಿಯನ್ನು ಪ್ರಮುಖ ಪೂರ್ವಜ ಎಂದೇ ಭಾವಿಸುತ್ತದೆ. ಬೆಂಜಮಿನ್ ಆ ದೇಶದ ಮರೆಯಲಾಗದ ವ್ಯಕ್ತಿಯೇನಾಗದಿದ್ದರೂ ಆತನ ರಾಜಕೀಯ ಜೀವನ ಮತ್ತು ಮರಣಾನಂತರದ ಕೆಲವು ವರ್ಷಗಳವರೆಗಾದರೂ ಬೃಹದಾಕಾರಕ್ಕೆ ಬೆಳೆದ ಪ್ರಮುಖ ರಾಜಕಾರಣಿಯಂತೂ ಆಗಿದ್ದ. ಆದರೆ ಇಂಗ್ಲಿಷರು ಪಕ್ಕಾ ವ್ಯವಹಾರಸ್ಥ ವರ್ಗ. ನೀರು ನುಂಗಿದಾಗ ತನ್ನ ಮರಿಗಳನ್ನೇ ಕೆಳಗಿಟ್ಟು, ತಾನು ಮೇಲೆ ನಿಂತು ಬದುಕುವ ಜಾಯಮಾನದ ಅವರಿಗೆ ಬೆಂಜಮಿನ್ ಡಿಸ್ರೇಲಿ ಮುಂದಿನ ಕೆಲವೇ ವರ್ಷಗಳಲ್ಲಿ ಮಹಾತ್ಮನಾಗಿರಲಿಲ್ಲ. ಜೊತೆಗೆ ಬೆಂಜಮಿನನ ಗಟ್ಟಿತನವರದ ವಿಚಾರಧಾರೆಗಳು ಆತನ ಹೆಸರಿಗೆ ಗೆದ್ದಲು ಹಿಡಿಸಿದವು. ಒಂದು ದಿನ ಆತ ಜನರ ಮನದಿಂದ ಮರೆಯಾದ. ಇಂದಿನ ಯು.ಕೆಗೆ ಆತನ ಬಗ್ಗೆ ಗೌರವಗಳಿವೆಯಾದರೂ ಆತನನ್ನೇನೂ ಐತಿಹಾಸಿಕ ವ್ಯಕ್ತಿಯಾಗಿ ನೋಡುತ್ತಿಲ್ಲ. ಬ್ರಿಟಿಷ್ ರಾಜಕೀಯ ಇತಿಹಾಸದ ಆತ ಅಲ್ಲಲ್ಲಿ ಕಂಡುಬರುತ್ತಾನಾದರೂ ಅದು ಕೇವಲ ಸಾರ್ವಜನಿಕ ಸ್ಮರಣೆಯ ಭಾಗವಾಗಿ ಮಾತ್ರ ಇದೆ. ಅಂದರೆ ಇಂದಿನ ಯುಗದಲ್ಲಿ ರಾಜಕೀಯ ಪಿತಾಮಹನ ಸ್ಥಾನಮಾನವನ್ನೇನೂ ನೀಡುವ ಸ್ಥಿತಿ ಇಂದಿನ ಕನ್ಸರ್ವೇಟಿವ್ ಪಕ್ಷದೊಳಗೂ ಇಲ್ಲ. ಇಂದಿನ ಯಾವ ರೀತಿನೀತಿಗಳಿಗೂ ಅವನು ಮಾದರಿಯಾಗಿ ಉಳಿದಿಲ್ಲ.

ಬರಗಾಲದ ಹೊತ್ತಲ್ಲಿ ಈ ಆಂಗ್ಲನ ನೆನಪಾಗಲೊಂದು ಕಾರಣವಿದೆ! ಈ ಸಿದ್ಧಾಂತಗಳು, ಚಳವಳಿಗಳ ಹಿಂದಿನ ತತ್ತ್ವಗಳೆಲ್ಲವೂ ಯುಗಯುಗಗಳಿಗೂ ಇರಲೇಬೇಕಾದ ಗ್ಯಾರಂಟಿ ವಸ್ತುಗಳೇನಲ್ಲ. ಒಂದು ಕಾಲದಲ್ಲಿ ರಾಮನ ಆಡಳಿತವಿತ್ತು. ಆದರೆ ನಮ್ಮ ಪೀಳಿಗೆ ಸಿದ್ದರಾಮಯ್ಯ ಆಡಳಿತವನ್ನೂ ನೋಡಿದೆವು. ಮುಂದೊಂದು ದಿನ ಈ ಆಡಳಿತವೂ ಬದಲಾಗಲಿದೆ. ಸೃಷ್ಟಿ ಬದಲಾಗಲಿದೆ ಎಂಬುದನ್ನು ಒಪ್ಪಿಕೊಳ್ಳುವವರೆಲ್ಲರೂ ಸಮಾಜ ಬದಲಾಗುವುದೇ ಶತಸಿದ್ಧ ಎಂಬುದನ್ನೂ ಒಪ್ಪಿಕೊಳ್ಳಬೇಕು. ನಿರ್ಮಿಸಿಕೊಂಡ ಕೆಲವು ಸಿದ್ಧಸೂತ್ರಗಳು ಕಣ್ಣಮುಂದೆಯೇ ಮುರಿದುಬೀಳುವುದನ್ನೂ ನಾವು ನೋಡಿದ್ದೇವೆ. ಯಾವುದೋ ದೇಶದಲ್ಲಿ ಆಕಸ್ಮಿಕವಾಗಿ ಹುಟ್ಟಿದ ಕಮ್ಯುನಿಸಂ ಎಂಬ ಆಕ್ರೋಶ ಎಷ್ಟೆಲ್ಲಾ ಅರ್ಭಟಿಸಿರಲಿಲ್ಲ. ಆದರೆ ಇಂದು? ದೇಶವನ್ನು ಕಿತ್ತುತಿನ್ನುತ್ತಿದ್ದ ನಕ್ಸಲಿಸಂ ನಾಶವಾಗಿದೆ. ಈಗಿನ ಪರಿಸ್ಥಿತಿಗೆ ತಕ್ಕಂತೆ ಜಗತ್ತು ಓಡುತ್ತಿದೆ. ಸದ್ಯಕ್ಕೆ ಜಗತ್ತು ಅದರಲ್ಲೆ ಒಗ್ಗಿದೆ.

ಇಷ್ಟೆಲ್ಲಾ ಹೇಳಲು ಕಾರಣ ತಮಿಳುನಾಡಿನಲ್ಲಿ ಕೊನೆಗೂ ದ್ರಾವಿಡ ಪಕ್ಷಗಳು ಮೈ ತೊಳೆದುಕೊಂಡಿವೆ ಎಂಬುದಕ್ಕಾಗಿ. ಅಲ್ಲಿ ಹುಟ್ಟಿದ ಬಹುತೇಕ ಪಕ್ಷಗಳಿಗೆ ದ್ರಾವಿಡ ಬೇರುಗಳನ್ನು ಸಂಪೂರ್ಣವಾಗಿ ಕಳಚಿಕೊಳ್ಳಲಿನ್ನೂ ಸಾಧ್ಯವಾಗಿಲ್ಲ. ಆದರೆ ದ್ರಾವಿಡ ಚಿಂತನೆಯನ್ನೇ ಪ್ರತಿಪಾದಿಸುವ ಜೋಸೆಫ್ ವಿಜಯ್ ಅವರ ಟಿವಿಕೆ ಕೊನೆಗೂ, "ನಾವು ಪೆರಿಯಾರ್ ಹೇಳಿದ ಸಾಮಾಜಿಕ ಹೊಣೆಗಾರಿಕೆಯನ್ನು ಪಾಲಿಸುವವರೇ ಹೊರತು ನಾಸ್ತಿಕ್ಯವನ್ನು ಪಾಲಿಸುವವರಲ್ಲ" ಎಂಬ ಹೇಳಿಕೆಯೇ ಕಾಲನ ನಡೆಯಲ್ಲಿ ಪೆರಿಯಾರನೂ ಶಾಶ್ವತನಲ್ಲ ಎಂಬುದಕ್ಕೆ ಸಾಕ್ಷಿ. ಕೆಲವು ವರ್ಷಗಳ ಹಿಂದೆ ತಮಿಳುನಾಡಿನ ಯಾವ ರಾಜಕಾರಣಿಯ ಬಾಯಿಂದಲೂ ಇಂಥ ಮಾತುಗಳು ಬರುತ್ತದೆಂದು ಊಹಿಸಲಾಗುತ್ತಿರಲಿಲ್ಲ. ವಿಚಿತ್ರವೆಂದರೆ ತಮಿಳುಜನರ ಕಣ್ಣಲ್ಲಿ ನಾಸ್ತಿಕ್ಯವನ್ನೂ ಕಾಣಲಾಗುತ್ತಿರಲಿಲ್ಲ! ಆದರೆ ಪೆರಿಯಾರನ ಹೆಸರಿನಲ್ಲಿ ಹುಟ್ಟಾಟಗಳು ನಡೆಯುತ್ತಲೇ ಇದ್ದವು. ಪೆರಿಯಾರನ ಶವಪೆಟ್ಟಿಗೆಗೆ ಮೊಳೆ ಹೊಡೆಯುವ ಪ್ರಕ್ರಿಯೆ ವಿಧ್ಯುಕ್ತವಾಗಿ ಚಾಲನೆಗೊಂಡಾಗ ಯಾಕೋ ಒಂದು ಕಾಲದಲ್ಲಿ ಮೆರೆದ ಬೆಂಜಮಿನ್ ಡಿಸ್ರೇಲಿ ನೆನಪಾದ.

# ಶಿಕ್ಷಣ ತಜ್ಞರ ವಿಶ್ವರೂಪ ದರ್ಶನ ಮಾಡಿಸಿದ ಕೃಷ್ಣ

▸ ರಾಜೀವ ಹೆಗಡೆ



**ಅ ಆ ಇ ಈ ಹೇಳೋಣ ಕನ್ನಡಕ್ಕೆ ಜೈ ಎನ್ನೋಣ ಉ ಊ ಋ ಹೇಳೋಣ ಕನ್ನಡದ ಋಣ ನೆನೆಯೋಣ.....**

ಇದು ಎನ್‌ಸಿಇಆರ್‌ಟಿಯ ಆರನೇ ತರಗತಿ ಪುಸ್ತಕದ ಮೊದಲ ಅಧ್ಯಾಯದ ಆರಂಭಿಕ ಸಾಲು. ಕನ್ನಡಕ್ಕೆ ಜೈ ಎಂದು ಭಾಷೆಯ ಋಣವನ್ನು ಮಕ್ಕಳಿಗೆ ನೆನಪಿಸುತ್ತಾ, ನಮ್ಮ ಕನ್ನಡ ಭಾಷೆಯನ್ನು ಕಲಿಸುವ ಪಠ್ಯವನ್ನು ನೀಡಲಾಗಿದೆ. ಆದರೆ ಈ ಪಠ್ಯದ ಹೆಸರನ್ನು ಅರ್ಥೈಸಿಕೊಳ್ಳದೇ ಸಹಿಸಿಕೊಳ್ಳಲಾಗದ ಒಂದಿಷ್ಟು ಎಡಪಂತೀಯ ಬುದ್ಧಿಜೀವಿಗಳಿಗೆ ಸಸ್ಯಾಹಾರ-ಮಾಂಸಾಹಾರ, ಬಸವಣ್ಣ, ಕುವೆಂಪು, ಕರಾವಳಿ, ಮಲೆನಾಡು, ಉತ್ತರ ಕರ್ನಾಟಕವೆಲ್ಲ ಕಣ್ಣಿಗೆ ರಾಚಲು ಆರಂಭಿಸಿದೆ. ಆದರೆ ಇವೆಲ್ಲ ಹುಳುಕಿಗೆ ಕಾರಣವಾಗಿದ್ದು, ಕೇವಲ ಕೃಷ್ಣ ಎನ್ನುವ ಪುಸ್ತಕದ ಹೆಸರು.

ಈ ಬಗ್ಗೆ ಎನ್‌ಸಿಇಆರ್‌ಟಿ ಕೂಡ ಸ್ಪಷ್ಟನೆ ನೀಡಿದೆ. ಆದಾಗ್ಯೂ ಪಠ್ಯದ ಬಗ್ಗೆ ಎತ್ತಿರುವ ವಿರೋಧಕ್ಕೆ ಸಂಬಂಧಿಸಿದ ನಾಲ್ಕು ಆಯಾಮಗಳನ್ನು ಪರಿಶೀಲಿಸೋಣ. ಕೃಷ್ಣ ಎನ್ನುವ ಹೆಸರು, ಸಸ್ಯಾಹಾರ-ಮಾಂಸಾಹಾರ ಹಾಗೂ ಕರ್ನಾಟಕದ ಅಸ್ಮಿತೆಗಳಾದ ಪಂಪ, ಕುವೆಂಪು, ಬಸವಣ್ಣರನ್ನು ಕಡೆಗಣಿಸಲಾಗಿದೆ. ಇದರೊಟ್ಟಿಗೆ ಕರ್ನಾಟಕದ ಸಾಮಾಜಿಕ ಹಾಗೂ ಪ್ರಾದೇಶಿಕ ವೈವಿಧ್ಯತೆ ಬಗ್ಗೆ ವಿವರ ನೀಡಿಲ್ಲ ಎನ್ನುವುದು ಒಂದಿಷ್ಟು ಜನರ ಕೊಂಕು ಮಾತಾಗಿದೆ.

**ಕೃಷ್ಣ ಎಂಬ ಹೆಸರು**

ಎಂದಿಗೂ ನಮ್ಮ ಗ್ರಹಿಕೆಯು ನೇರವಾಗಿ ಆಲೋಚನೆಯನ್ನೇ ಅವಲಂಬಿಸಿರುತ್ತದೆ. ನರೇಂದ್ರ ಮೋದಿ ಸರ್ಕಾರದ ಎಲ್ಲ ಕೆಲಸವನ್ನು ಒಂದೇ ಕನ್ನಡಕದಿಂದ ನೋಡಿದಾಗ ಆಗುವ ಎಡವಟ್ಟುಗಳೇ ಇಲ್ಲಿಯೂ ಆಗಿವೆ. ಕೃಷ್ಣ ಎನ್ನುವ ಹೆಸರನ್ನು ದೇವರು-ಧರ್ಮದ ನಂಟಿನೊಂದಿಗೆ ನೋಡಿ ಒಂದಿಷ್ಟು ಜನರು ಅಸಲಿ ಗುಣವನ್ನು ಪ್ರದರ್ಶನ ಮಾಡಿದ್ದಾರೆ. ಟೀಕಾಕಾರರು ಹಾಗೂ ದೇವರನ್ನೇ ನಂಬದವರಿಗೆ ಕೃಷ್ಣ ಎನ್ನುವುದು ದೇವರಾಗಿ ಕಾಣಿಸಿಕೊಂಡಿದ್ದರೆ, ಪಠ್ಯ ರಚನೆಕಾರರಿಗೆ ಅದು ನಮ್ಮ ರಾಜ್ಯದ ಕೋಟ್ಯಂತರ ಜನರ ಹಸಿವು ನೀಗಿಸುವ ನದಿಯಾಗಿ ಗೋಚರಿಸಿದೆ. ಮಾಡಿರುವ ಪ್ರಮಾದವನ್ನು ಮುಚ್ಚಿಕೊಳ್ಳಲು ಈ ರೀತಿ ಸ್ಪಷ್ಟನೆಗಳು ಬಂದಿಲ್ಲ. ಇಂತಹ ಟೀಕೆಗಳು ಮುನ್ನೆಲೆಗೆ ಬರುವ ಮೊದಲೇ, ಹಿಂದಿ, ಇಂಗ್ಲಿಷ್ ಹಾಗೂ ಉರ್ದು ಪುಸ್ತಕಗಳಿಗೆ ಕ್ರಮವಾಗಿ ಗಂಗಾ, ಕಾವೇರಿ, ಯಮುನಾ ಎಂದು ಹೆಸರಿಡಲಾಗಿದೆ. ಇವೆಲ್ಲವೂ ದೇಶದ ಹಲವು ರಾಜ್ಯಗಳ ಜನರಿಗೆ ಹಸಿರು, ಉಸಿರು ಹಾಗೂ ಹೊಟ್ಟೆಯನ್ನು ತುಂಬಿಕೊಡುವ ಜೀವನದಿಗಳಾಗಿವೆ. ಈ ದೇಶದ ಅನಕ್ಷರಸ್ಥ ವ್ಯಕ್ತಿ ಕೂಡ ಈ ಗಂಗಾ, ಕಾವೇರಿ, ಯಮುನಾ, ಕೃಷ್ಣಾ ನದಿಯನ್ನು ಧರ್ಮ, ಜಾತಿ ಹಾಗೂ ದೇವರೊಂದಿಗೆ ಅಂಟಿಸಿಕೊಂಡು ನೋಡುವುದಿಲ್ಲ. ಈ ನದಿಯನ್ನು ಕಂಡಾಗ ದೇಶದ ಪ್ರತಿಯೊಬ್ಬ ಪ್ರಜ್ಞಾವಂತರು ಗೊತ್ತಿಲ್ಲದೇ ನಮಿಸುತ್ತಾರೆ. ವಿಶೇಷವೆಂದರೆ ಈ ದೇಶದ ಅನಕ್ಷರಸ್ಥರು ಕೂಡ ಶಿಕ್ಷಣ ತಜ್ಞರಿಗಿಂತ ಹೆಚ್ಚು ಪ್ರಾಜ್ಞರಾಗಿರುತ್ತಾರೆ. ಕೃಷ್ಣಾ ನದಿಯು ಕರ್ನಾಟಕದ 5 ಜಿಲ್ಲೆ ಒಂದು ಕೋಟಿಗೂ ಹೆಚ್ಚು ಜನಕ್ಕೆ ಜೀವನ ನೀಡಿದೆ. ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ತೆಲಂಗಾಣದಲ್ಲೂ ಇದರ ಪಾತ್ರ ದೊಡ್ಡದು. ಹಾಗೆಯೇ ಈ ಕೃಷ್ಣ ಎನ್ನುವ ಶಬ್ದವನ್ನು ಮೇಲ್ಜಾತಿಗೆ ಸೇರಿಸಿ, ಆಹಿಂದ ವರ್ಗಕ್ಕೆ ಅನ್ಯಾಯವಾಗಿದೆ ಎಂಬ ಬುದ್ಧಿವಂತರ ಮಾತನ್ನೂ ಕೇಳಿದೆ. ಆದರೆ ನಾವೆಲ್ಲ ಕೃಷ್ಣನನ್ನು ಗೊಲ್ಲ ಎಂದು ಪೂಜಿಸಿದ್ದನ್ನು ರಾಜಕೀಯ ಅರಿಯದ ಜನಸಾಮಾನ್ಯರು ಮರೆಯುವುದಿಲ್ಲ.

ಧಾರ್ಮಿಕ ಅಪನಂಬಿಕೆಗೆ ಕನ್ನಡ ಅಸ್ಮಿತೆ ಸೇರಿಸುವ ಸಂಚು

ಪಠ್ಯ ಓದದೇ ಸುಳ್ಳಿನ ಕಥೆ ಕಟ್ಟುವ ಎಡವಟ್ಟು

ಇದರ ಇನ್ನೊಂದು ಆಯಾಮವನ್ನು ನೋಡೋಣ. ಜನರಿಗೆ ದಿಕ್ಕು ತಪ್ಪಿಸುವ ಸಲುವಾಗಿಯೇ ಇಂತಹ ಕುಚೋದ್ಯ ಮಾಡಲಾಗಿದೆ ಎಂದು ಕೆಲ ಶಿಕ್ಷಣ ತಜ್ಞರು ವಾದಿಸಬಹುದು. ಆದರೆ ಅಂತಹ ವಾದಕ್ಕೂ ಯಾವುದೇ ಜಾಗವಿಲ್ಲದಷ್ಟು ಅಚ್ಚುಕಟ್ಟಾಗಿ ಮುಖಪುಟ ರಚಿಸಲಾಗಿದೆ. ಹರಿಯುವ ನದಿಯ ಜೊತೆಗೆ ಮೈಸೂರು ಅರಮನೆ ಹಾಗೂ ಹಂಪಿಯ ಕಲ್ಲಿನ ರಥವನ್ನು ತೋರಿಸಲಾಗಿದೆ. ಅದರೊಟ್ಟಿಗೆ ಒಂದಿಷ್ಟು ಮಕ್ಕಳು ಪಾಠದೊಂದಿಗೆ ಆಟವಾಡುತ್ತಿರುವುದನ್ನು ಕಾಣಬಹುದು. ಎಲ್ಲಿಯೂ ಧರ್ಮ ಅಥವಾ ಜಾತಿಯ ಸೂಚಕಗಳನ್ನು ಬಳಸಲಾಗಿಲ್ಲ. ದೇವಾಲಯ ಅಥವಾ ದೇವರು ಕೃಷ್ಣನನ್ನು ಹೋಲುವ ಚಿತ್ರದ ಬಳಕೆಯಾಗಿಲ್ಲ. ಇಷ್ಟಾದ ಮೇಲೂ ಪಠ್ಯದಲ್ಲಿ ಕೊಂಕು ಕಾಣಿಸಿದವರಿಗೆ, ಆ ಕೃಷ್ಣನೇ ಬಂದು ಬುದ್ಧಿ ಹೇಳಿದರೂ ಅರ್ಥವಾಗುವುದಿಲ್ಲ.

**ಸಸ್ಯಾಹಾರ-ಮಾಂಸಾಹಾರದ ವಿವಾದ**

ಪಠ್ಯದ ಆರನೇ ಅಧ್ಯಾಯ ಅಥವಾ ಘಟಕದಲ್ಲಿ ಆರೋಗ್ಯವೇ ಭಾಗ್ಯ



'ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ' ಎಂಬಂತೆ ಪ್ರತಿದಿನ ನಾವು ನಿಲ್ಲು ಉತ್ತಮ ಆಹಾರವನ್ನು ಸೇವಿಸಬೇಕು. ಪ್ರತಿದಿನ ಯೋಗಾಸನವನ್ನು ಮಾಡುವುದರಿಂದ ನಮ್ಮ ಮನಸ್ಸಿಗೆ ಶಾಂತಿ ಮತ್ತು ದೇಹಕ್ಕೆ ಶಕ್ತಿಯು ದೊರೆಯುತ್ತದೆ.

ಸಮತೋಲನ ಆಹಾರ

ನಮ್ಮ ದೇಹಕ್ಕೆ ಶಕ್ತಿ ದೊರಕಲು ಸಮತೋಲನ ಆಹಾರಗಳಾದ ಹಾಲು, ಸೊಪ್ಪು, ತರಕಾರಿ, ಹಣ್ಣು, ಹಂಪಲುಗಳು ಅಗತ್ಯ. ಇವು ನಮ್ಮ ದಿನ ನಿತ್ಯದ ಆಹಾರದ ಭಾಗವಾಗಬೇಕು.

ಭಾರತವು ವಿವಿಧತೆಯಲ್ಲಿ ಏಕತೆಯನ್ನು ಹೊಂದಿದೆ. ಪ್ರತಿ ರಾಜ್ಯದಲ್ಲೂ ಕೂಡ ಆರೋಗ್ಯಕರವಾದಂತಹ ಅನೇಕ ಆಹಾರ ಪದಾರ್ಥಗಳನ್ನು ನೋಡುತ್ತೇವೆ. ಉದಾಹರಣೆಗೆ ಕರ್ನಾಟಕದ ರಾಗಿಮುದ್ದೆ ದೇಹಕ್ಕೆ ಶಕ್ತಿ ಮತ್ತು ತಂಪು ನೀಡಿದರೆ, ತಮಿಳುನಾಡಿನ ಮೃದುವಾದ ಇಡ್ಲಿ ಸವಿಯೊಂದಿಗೆ ಜೀರ್ಣಶಕ್ತಿಗೂ ಸಹ ಒಳ್ಳೆಯದು. ಕೇರಳದ ಪುಟ್ಟು ರುಚಿಯೊಂದಿಗೆ ನಾರಿನಾಂಶವನ್ನು ನೀಡಿದರೆ, ಗುಜರಾತಿನ ಕಿಚಿಡಿ ಮಾಡಲು ಸರಳ ಮತ್ತು ಸವಿಯಲು ರುಚಿ.

ರಾಗಿ ತಿಂದವ ನಿರೋಗಿ - ಪುರಂದರದಾಸರು

ಎನ್ನುವ ವಿಚಾರವಿದೆ. ಸಮತೋಲನ ಆಹಾರ ಸೇವನೆ ಎನ್ನುವ ವಿಚಾರವನ್ನು ಪ್ರಸ್ತಾಪಿಸುತ್ತಾ, ಯೋಗದ ಚಿತ್ರದ ಜೊತೆಗೆ ಒಂದು ತಟ್ಟೆಯಲ್ಲಿ ಕೆಲ ಆಹಾರಗಳನ್ನು ತೋರಿಸಲಾಗಿದೆ. ಅದರಲ್ಲಿ ಹಾಲು, ಹಣ್ಣು, ಹಂಪಲು ಹಾಗೂ ರೊಟ್ಟಿಯ ಚಿತ್ರಗಳಿವೆ. ಹಾಗೆಯೇ ಮುಂದುವರಿದು ನಮ್ಮ ದೇಹಕ್ಕೆ ಶಕ್ತಿ ದೊರಕಲು ಸಮತೋಲನ ಆಹಾರಗಳಾದ ಹಾಲು, ಸೊಪ್ಪು, ತರಕಾರಿ, ಹಣ್ಣು, ಹಂಪಲುಗಳು ಅಗತ್ಯ. ಇವು ನಮ್ಮ ದಿನ ನಿತ್ಯದ ಆಹಾರದ ಭಾಗವಾಗಬೇಕು ಎಂದು ಪ್ರಕಟಿಸಲಾಗಿದೆ. ಇಲ್ಲಿ ಪ್ರಕಟವಾಗಿರುವ ಪ್ರತ್ಯೇಕ ಚಿತ್ರದಲ್ಲಿ ಮೊಟ್ಟೆಯೂ ಇದೆ. ಹಾಗೆಯೇ ಅಧ್ಯಾಯದ ಕೊನೆಯಲ್ಲಿ ಮನೆಯ ಆಹಾರ ಆರೋಗ್ಯಕರ ಎಂದು ಸಾಮಾನ್ಯ ಊಟದ ಚಿತ್ರವನ್ನು ತೋರಿಸಲಾಗಿದೆ. ಅದರೊಟ್ಟಿಗೆ ಅನಾರೋಗ್ಯಕರ ಆಹಾರವನ್ನು ಕಡಿಮೆ ಸೇವಿಸಬೇಕು ಎಂದು ಇನ್ನೊಂದು ಸಾಲು ಸೇರಿಸಲಾಗಿದೆ. ಇಲ್ಲೇನಾದರೂ ಮಾಂಸಾಹಾರವನ್ನು ತೋರಿಸಲಾಗಿದೆಯೇ ಎಂದು ಕನ್ನಡಕ ಹಾಕಿಕೊಂಡು ಹತ್ತಾರು ಬಾರಿ ಹುಡುಕಿದೆ. ಆದರೆ ಅಲ್ಲಿರುವುದು ಬರ್ಗರ್, ಫಿಂಗರ್ ಚಿಪ್ಸ್ ಹಾಗೂ ಕೋಕ್ ರೀತಿಯ ಪಾನೀಯ. ಇದ್ಯಾವುದೂ ಮಾಂಸಾಹಾರಕ್ಕೆ ಸೇರುವುದಿಲ್ಲ. ಒಂದೊಮ್ಮೆ ಬರ್ಗರ್‌ನಲ್ಲಿ ಮಾಂಸವಿದ್ದರೂ, ಅದನ್ನು ಆರೋಗ್ಯಕರ ತಿಂಡಿ ಎಂದೂ ಈ ದೇಶದಲ್ಲಿನ ಯಾವೊಬ್ಬ ಆರೋಗ್ಯ ತಜ್ಞ ಕೂಡ ಹೇಳಲು ಸಾಧ್ಯವಿಲ್ಲ. ನಾನು ದೇಶ ಪ್ರೇಮಿ ಎಂದು ಹೇಳಿಕೊಂಡಾಕ್ಷಣ, ಉಳಿದವರೆಲ್ಲ ದೇಶದ್ರೋಹಿಗಳಾಗುವುದಿಲ್ಲ. ಹಾಗೆಯೇ ಸಮತೋಲನ ಆಹಾರದಲ್ಲಿ ಕೇವಲ ಸಸ್ಯಾಹಾರದ ಉಲ್ಲೇಖವಿದ್ದಾಕ್ಷಣ, ಮಾಂಸಾಹಾರ ಹಾಗೂ ಅದನ್ನು ಸೇವಿಸುವವರು ಕೆಟ್ಟವರು ಎಂದಾಗುವುದಿಲ್ಲ. ಅಂದ್ಹಾಗೆ ನಾನು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ, ಆಹಾರದ ಉಲ್ಲೇಖಗಳಲ್ಲಿ ಎಲ್ಲಿಯೂ ಆರೋಗ್ಯಕರ ಆಹಾರದ ಪಟ್ಟಿಯಲ್ಲಿ ಯಾವುದೇ ಮಾಂಸಾಹಾರಗಳಿರಲಿಲ್ಲ. ಹಾಗಿದ್ದರೆ ಆಗಿದ್ದ ಕಾಂಗ್ರೆಸ್ ನೇತೃತ್ವದ ಸರ್ಕಾರ ಕೂಡ ಮಾಂಸಾಹಾರದ ವಿರೋಧಿಯಾಗಿತ್ತು ಎಂದು ವಾದಿಸಲು ಸಾಧ್ಯವೇ? ಅದರೊಟ್ಟಿಗೆ ಆಧುನಿಕ ಜಗತ್ತಿನಲ್ಲಿ ಯಾವುದೊಂದು ಜಾತಿ, ಧರ್ಮವು ನಿರ್ದಿಷ್ಟ ಆಹಾರ ಪದ್ಧತಿಗೆ ಸೀಮಿತವಾಗಿಲ್ಲ. ಎಲ್ಲೆಡೆಯೂ ಎಲ್ಲ ರೀತಿಯ ಆಹಾರ ಸೇವಿಸುವವರು ಸಿಗುತ್ತಾರೆ. ಒಂದೇ ಮನೆಯಲ್ಲಿ ಇಂತಹ ವೈರುಧ್ಯಗಳು ಸಿಗುತ್ತವೆ. ಹಾಗೆಯೇ ಪ್ರತಿದಿನ ಮಾಂಸಾಹಾರವನ್ನು ಸೇವಿಸುವ ಜನರು ಕೂಡ ಸಣ್ಣ ಮಕ್ಕಳಿಗೆ, ವಾರಪೂರ್ತಿ ಅದನ್ನೇ ತಿನ್ನಿಸುವುದಿಲ್ಲ. ಆದರೆ ಆಹಾರವನ್ನು ಜಾತಿಯ ಕನ್ನಡಕದಲ್ಲಿ ನೋಡಿದಾಗ ಇಂತಹ ಸಮಸ್ಯೆ ಶುರುವಾಗುತ್ತದೆ. ಮಾಂಸಾಹಾರವನ್ನು ಸಮತೋಲನದ ಆಹಾರಕ್ಕೆ ಸೇರಿಸದಿರಲು, ಜಾತಿಯ ಬದಲಿಗೆ ಕೊಬ್ಬಿನ ಅಂಶ ಕಾರಣವಾಗಿರುತ್ತದೆ. ಅಷ್ಟಕ್ಕೂ ಇಡೀ ಪುಸ್ತಕದಲ್ಲಿ ಎಲ್ಲಿಯೂ ಮಾಂಸಾಹಾರ ಸೇವಿಸಬೇಡಿ, ಅಪಾಯಕಾರಿ ಎಂದು ಎಲ್ಲಿಯೂ ಹೇಳಿಲ್ಲ. ಅಂದ್ಹಾಗೆ ಜೀವ ಉಳಿಸಿಕೊಳ್ಳಲು ಉಸಿರಾಡಬೇಕು ಎನ್ನುವುದನ್ನು ಕೂಡ ಉಲ್ಲೇಖಿಸಿಲ್ಲ. ಇದನ್ನು ನೋಡಿ, ಕೆಲವರು ಉಸಿರಾಟ ನಿಲ್ಲಿಸದಿದ್ದರೆ ಸಾಕಿತ್ತು.

**ಕನ್ನಡ ಅಸ್ಮಿತೆಯ ಗಣ್ಯರು**

ಸಿಬಿಎಸ್‌ಇ ಪಠ್ಯಕ್ರಮದ ಮೂರನೇ ಭಾಷೆಯ ಆರನೇ ತರಗತಿ ಪಠ್ಯವೆಂದರೆ, ಅವರಿಗೆ ಕನ್ನಡ ಕಲಿಕೆಯ ಆರಂಭದ ದಿನಗಳಿರಬಹುದು. ಮೊದಲ ವರ್ಷವೇ ಎಲ್ಲವನ್ನೂ ಪಠ್ಯದಲ್ಲಿ ಸೇರಿಸಬೇಕು ಎಂದು ಶಿಕ್ಷಣ ತಜ್ಞರೆನಿಸಿಕೊಂಡವರು ವಾದ ಮಾಡಿದರೆ, ಬಾಲಿಶ ಎನಿಸುತ್ತದೆ. ಒಂದು ತರಗತಿಗೆ ಕನ್ನಡ ಮುಗಿದು ಹೋಗುವುದಿಲ್ಲ. ಇನ್ನೂ ನಾಲ್ಕೈದು ತರಗತಿಗೆ ಕನ್ನಡದ ಪಠ್ಯ ಬರುವುದು ಬಾಕಿಯಿದೆ. ಅಲ್ಲಿಯವರೆಗೆ ಕಾದುನೋಡಿದರೆ ಔಚಿತ್ಯವೆನಿಸುತ್ತದೆ. ಒಂದೊಮ್ಮೆ ಆಗಲೂ ಕನ್ನಡದ ಶ್ರೇಷ್ಠರನ್ನು ಕಡೆಗಣಿಸಿದರೆ, ಆಗ ಧ್ವನಿ ಎತ್ತುವುದರಲ್ಲಿ ಅರ್ಥವಿದೆ. ಹಾಗೆಯೇ ಶ್ರೇಷ್ಠ ಕನ್ನಡಿಗರನ್ನು ನಿರ್ಲಕ್ಷಿಸಿ, ಇನ್ಯಾವುದೋ ಭಾಷೆ, ರಾಜ್ಯ, ದೇಶದ ವ್ಯಕ್ತಿಗಳಿಗೆ ಪಠ್ಯದ ಯಾವುದೇ ಅಧ್ಯಾಯದಲ್ಲಿ ಮಣೆಯನ್ನು ಹಾಕಲಾಗಿಲ್ಲ ಎನ್ನುವುದನ್ನು ಕೂಡ ಅರ್ಥೈಸಿಕೊಳ್ಳಬೇಕು.

**ಪ್ರಾದೇಶಿಕ ವೈವಿಧ್ಯತೆ**

ಪಠ್ಯದಲ್ಲಿ ಕರಾವಳಿ, ಉತ್ತರ ಕರ್ನಾಟಕ, ಮಲೆನಾಡು, ಹಳೆಯ ಮೈಸೂರು ಭಾಗದ ಜಾನಪದ, ಸಾಹಿತ್ಯ ಬದುಕು ಕಾಣೆಯಾಗಿದೆ ಎನ್ನುವ ವಾದವನ್ನು ಕೆಲವರು ಇರಿಸಿದ್ದಾರೆ. ಯಾರೋ ಕಿಡಿಗೇಡಿಗಳು ಕಳುಹಿಸಿದ ಸ್ಕ್ರೀನ್‌ಶಾಟನ್ನು ನೋಡಿಕೊಂಡು ಇಂತಹ ಆರೋಪ ಮಾಡಬಹುದು. ಏಕೆಂದರೆ ನಾನು ಖುದ್ದಾಗಿ ಪುಸ್ತಕವನ್ನು ಎನ್‌ಸಿಇಆರ್‌ಟಿ ವೆಬ್‌ಸೈಟ್‌ನಲ್ಲಿ ನೋಡಿದ್ದೇನೆ. ಪಠ್ಯದಲ್ಲಿ ಅಕ್ಷರ ಮಾಲೆ, ನನ್ನ ಕುಟುಂಬ ಮತ್ತು ನಮ್ಮ ದಿನಚರಿ, ಸಮುದಾಯ ಸಹಾಯಕರು, ನಮ್ಮ ಹವ್ಯಾಸ-ನಮ್ಮ ಅಭಿರುಚಿ, ಕರುನಾಡ ಕಾಶ್ಮೀರ, ಆರೋಗ್ಯವೇ ಭಾಗ್ಯ, ಶೆಟ್ಟರ ದಿನಸಿ ಅಂಗಡಿ, ಚನ್ನಪಟ್ಟಣದ ಗೊಂಬೆಗಳು, ಅಚ್ಚರಿಯ ಹಂಪಿ, ತಾಯಿ ಋಣ, ಜನಪದ ಸೊಬಗು ಎನ್ನುವ ಅಧ್ಯಾಯಗಳಿವೆ. ಕೊಡಗಿನ ಬಗಗೆ ಕರುನಾಡ ಕಾಶ್ಮೀರ, ಹಳೇ ಮೈಸೂರು ಭಾಗದ ಚನ್ನಪಟ್ಟಣದ ಗೊಂಬೆಗಳು, ಉತ್ತರ ಕರ್ನಾಟಕದ ಅಚ್ಚರಿಯ ಹಂಪಿ ಹಾಗೂ ಕರಾವಳಿ ಮಲೆನಾಡು ಭಾಗದ ಜನಪದ ಸೊಬಗು ಎನ್ನುವ ಅಧ್ಯಾಯಗಳಿವೆ. ಜನಪದ ಸೊಬಗು ಅಧ್ಯಾಯದಲ್ಲಿ ವಿಶೇಷವಾಗಿ ಕಂಬಳ ಹಾಗೂ ಯಕ್ಷಗಾನದ ಉಲ್ಲೇಖಗಳಿವೆ. ಹಾಗೆ ನೋಡಿದರೆ ಕರ್ನಾಟಕದ ನಾಲ್ಕೂ ದಿಕ್ಕಿನಿಂದ ಒಂದಿಷ್ಟು ಅಂಶಗಳನ್ನು ಎತ್ತಿಕೊಳ್ಳಲಾಗಿದೆ. ಆದರೆ ಕೀಟಲೆಯನ್ನೇ ಉದ್ದೇಶವಾಗಿಸಿಕೊಂಡವರ ಪ್ರಕಾರ ಕರ್ನಾಟಕದ ಎಲ್ಲ ವೈವಿಧ್ಯತೆಯನ್ನು ಒಂದೇ ತರಗತಿಯ ಪಠ್ಯದಲ್ಲಿ ಕೊಡಬೇಕು ಎನ್ನುವುದು ನಗೆಪಾಟಲಿನ ವಿಚಾರವಾಗುತ್ತದೆ. ಏಕೆಂದರೆ ಕರುನಾಡು ಅಷ್ಟೊಂದು ವೈವಿಧ್ಯತೆಯನ್ನು ಹೊಂದಿದ ಭೂಮಿಯಾಗಿದೆ. ಅಂದ್ಹಾಗೆ ನೀವು ಕೂಡ www.ncert.nic.in/textbook.php ವೆಬ್‌ಸೈಟ್‌ನಲ್ಲಿ ಈ ಪುಸ್ತಕವನ್ನು ಪರಿಶೀಲಿಸಬಹುದು.

**ಕೇಸರೀಕರಣ ಎಲ್ಲಿದೆ?**

ನರೇಂದ್ರ ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ದಿನದಿಂದ ಶಿಕ್ಷಣ ಎಂದಾಕ್ಷಣ ಕೇಸರೀಕರಣ ಎನ್ನುವುದು ಕೆಲವರಿಗೆ ಶೋಕಿಯಾಗಿದೆ. ಕರ್ನಾಟಕದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ವಿರೋಧಿಸುವಾಗಲೂ ಇದೇ ಹೊಲಸು ರಾಜಕೀಯ ನಡೆಯಿತು. ಈಗ ಎನ್‌ಸಿಆರ್‌ಟಿಯ ಹೊಸ ಪಠ್ಯದ ವಿಚಾರದಲ್ಲೂ ಇಂತಹದ್ದೇ ರಾಜಕೀಯ ಶುರುವಾಗಿದೆ. ಮೇಲೆ ಉಲ್ಲೇಖಿಸಿದಂತೆ ಅಕ್ಷರ ಮಾಲೆ, ನನ್ನ ಕುಟುಂಬ ಮತ್ತು ನಮ್ಮ ದಿನಚರಿ, ಸಮುದಾಯ ಸಹಾಯಕರು, ನಮ್ಮ ಹವ್ಯಾಸ-ನಮ್ಮ ಅಭಿರುಚಿ, ಕರುನಾಡ ಕಾಶ್ಮೀರ, ಆರೋಗ್ಯವೇ ಭಾಗ್ಯ, ಶೆಟ್ಟರ ದಿನಸಿ ಅಂಗಡಿ, ಚನ್ನಪಟ್ಟಣದ ಗೊಂಬೆಗಳು, ಅಚ್ಚರಿಯ ಹಂಪಿ, ತಾಯಿ ಋಣ, ಜನಪದ ಸೊಬಗು ಎನ್ನುವ ಈ ಹನ್ನೊಂದು ಅಧ್ಯಾಯಗಳಲ್ಲಿ ಒಂದೇ ಒಂದು ಧರ್ಮ, ಜಾತಿ, ದೇವರು ಅಥವಾ ಸೈದ್ಧಾಂತಿಕ ವಿಚಾರಗಳ ಪ್ರಸ್ತಾಪವೇ ಆಗಿಲ್ಲ. ಕುಟುಂಬ, ಕರುನಾಡಿನ ಕಾಶ್ಮೀರ, ದಿನಸಿ ಅಂಗಡಿ, ಗೊಂಬೆ, ಹಂಪಿ, ತಾಯಿ, ಜನಪದದಲ್ಲಿ ಕೇಸರೀಕರಣವು ಕಾಣಿಸಿದರೆ, ಕೂಡಲೇ ನಿಮ್ಮ ಕನ್ನಡಕವನ್ನು ಬದಲಿಸಿಕೊಂಡು ಸಮಾಜವನ್ನು ನೋಡಲು ಆರಂಭಿಸಿ.



ಜನಪದ ಸೊಬಗು

ವೆನೆಜುವೆಲಾ ಕಂಪನ | 164 ಮಂದಿ ಸಾವು

# ಪ್ರಬಲ ಭೂಕಂಪ ಜನಜೀವನ ತತ್ತರ



**ಕಾರಕಾಸ್:** ವೆನೆಜುವೆಲಾದ ಉತ್ತರ ಕರಾವಳಿ ಪ್ರದೇಶದಲ್ಲಿ 7.5 ತೀವ್ರತೆಯ ಪ್ರಬಲ ಭೂಕಂಪ ಸಂಭವಿಸಿದೆ. ಇದಕ್ಕೂಮುನ್ನ ಕೇವಲ 40 ಸೆಕೆಂಡುಗಳಲ್ಲಿ 7.2 ತೀವ್ರತೆಯ ಮತ್ತೊಂದು ಭೂಕಂಪನ ನಡೆದಿದೆ. ಭೂಕಂಪನದಿಂದ ಕನಿಷ್ಠ 164 ಜನರು ಬಲಿಯಾಗಿದ್ದು, 1000ಕ್ಕೂ ಮಂದಿ ಗಾಯಗೊಂಡಿದ್ದಾರೆ. ತೀವ್ರವಾಗಿ ಹಾನಿಗೊಳಗಾದ ಪ್ರದೇಶಗಳಲ್ಲಿ ರಕ್ಷಣಾ ಕಾರ್ಯಾಚರಣೆಗಳು ನಡೆಯುತ್ತಿವೆ. ಕುಸಿದಿರುವ ಕಟ್ಟಡಗಳ ಅಡಿಯಲ್ಲಿ ಸಿಲುಕಿರುವ ಜನರನ್ನು ಹೊರತೆಗೆಯಲು ಅತ್ಯಂತ ಹೆಚ್ಚು ಹಾನಿಗೊಳಗಾಗಿರುವ ಪ್ರದೇಶಗಳಿಗೆ ಆದ್ಯತೆಯ ಮೇರೆಗೆ ರಕ್ಷಣಾ ತಂಡಗಳನ್ನು ರವಾನಿಸಲಾಗುತ್ತಿದೆ ಎಂದು ಹಂಗಾಮಿ ಅಧ್ಯಕ್ಷೆ ಡೆಲ್ಸಿ ರೊಡ್ರಿಗಸ್ ತಿಳಿಸಿದ್ದಾರೆ. ಅವರು ದೇಶದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿದ್ದು, ಭೂಕಂಪದಿಂದ ಹಾನಿಗೊಳಗಾದ ಆಸ್ಪತ್ರೆಗಳು ಮತ್ತು ಮನೆಗಳ ಪುನರ್ನಿರ್ಮಾಣಕ್ಕಾಗಿ 200 ಮಿಲಿಯನ್ ಯುಎಸ್ ಡಾಲರ್ ನಿಧಿಯನ್ನು ಪ್ರಕಟಿಸಿದ್ದಾರೆ.

- 11ಸಾವಿರ ಮಂದಿ ನಾಪತ್ತೆ
- ಸಾವಿನ ಸಂಖ್ಯೆ ಏರಿಕೆ ಸಾಧ್ಯತೆ

**ಮುಂದುವರಿದ ರಕ್ಷಣಾ ಕಾರ್ಯಾಚರಣೆ:** ವೆನೆಜುವೆಲಾದಲ್ಲಿ ಕಳೆದ ಒಂದು ಶತಮಾನದಲ್ಲೇ ಸಂಭವಿಸಿದ ಅತ್ಯಂತ ಶಕ್ತಿಶಾಲಿ ಭೂಕಂಪ ಇದಾಗಿದೆ. ಲಾ ಗ್ವೈರಾ ರಾಜ್ಯದಲ್ಲಿ ಮೂವರು ಮಕ್ಕಳನ್ನು ಅವಶೇಷಗಳ ಅಡಿಯಿಂದ ಜೀವಂತವಾಗಿ ರಕ್ಷಿಸಲಾಗಿದೆ. ಅತಿ ಹೆಚ್ಚು ಕಟ್ಟಡಗಳು ಕುಸಿದಿರುವುದರಿಂದ ಲಾ ಗ್ವೈರಾ ಅತ್ಯಂತ ತೀವ್ರವಾಗಿ ಹಾನಿಗೊಳಗಾದ ಪ್ರದೇಶ ಎಂದು ಘೋಷಿಸಲಾಗಿದೆ. ದೇಶದ ಇತರ ಭಾಗಗಳಿಂದ ರಕ್ಷಣಾ ತಂಡಗಳನ್ನು ಲಾ ಗ್ವೈರಾಕ್ಕೆ ಸ್ಥಳಾಂತರಿಸಲಾಗಿದೆ. ವಿಶ್ವಸಂಸ್ಥೆಯ ಪ್ರಮಾಣೀಕೃತ ಶೋಧನೆ ಮತ್ತು ರಕ್ಷಣಾ ತಂಡಗಳು ಸಹಾಯಕ್ಕಾಗಿ ವೆನೆಜುವೆಲಾಕ್ಕೆ ಪ್ರಯಾಣ ಬೆಳೆಸಿವೆ.

**ದೇಶಾದ್ಯಂತ ಹಾನಿ:** ಭೂಕಂಪದಿಂದಾಗಿ ದೇಶದ ಪ್ರಮುಖ ವಿಮಾನ ನಿಲ್ದಾಣವಾದ ಸೈಮನ್ ಬೊಲಿವರ್ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಹಾನಿಗೊಳಗಾಗಿದ್ದು, ಅದನ್ನು ಮುಚ್ಚಲಾಗಿದೆ. ರಾಜಧಾನಿ ಕಾರಕಾಸ್‌ನ ಹಲವು ಭಾಗಗಳಲ್ಲಿ ವಿದ್ಯುತ್ ಮತ್ತು ಮೊಬೈಲ್ ನೆಟ್‌ವರ್ಕ್ ಸೇವೆಗಳು ಸ್ಥಗಿತಗೊಂಡಿವೆ. ಸುರಂಗಮಾರ್ಗ (ಸಬ್ ವೇ) ಕಾರ್ಯಾಚರಣೆಯನ್ನು ಅಮಾನತುಗೊಳಿಸಲಾಗಿದೆ. ನೈಸರ್ಗಿಕ ಅನಿಲ ಪೂರೈಕೆಯನ್ನು ಸ್ಥಗಿತಗೊಳಿಸಲಾಗಿದೆ. ಶಾಲಾ ಕಟ್ಟಡಗಳನ್ನು ಆಶ್ರಯ ತಾಣಗಳಾಗಿ ಮತ್ತು ದೇಣಿಗೆ ಕೇಂದ್ರಗಳಾಗಿ ಬಳಸಲಾಗುವುದು ಎಂದು ಶಿಕ್ಷಣ ಸಚಿವಾಲಯ ತಿಳಿಸಿದೆ.ಮತ್ತೆ ಭೂಕಂಪ ಸಂಭವಿಸುವ ಭೀತಿಯಿಂದಾಗಿ ಅನೇಕ ನಿವಾಸಿಗಳು ಮನೆಗಳಿಂದ ಹೊರಗೇ ಉಳಿದಿದ್ದಾರೆ. ಇನ್ನು ಕೆಲವರು ನಿಲ್ಲಿಸಿದ ಕಾರುಗಳು, ಸಬ್‌ವೇ ನಿಲ್ದಾಣಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ರಾತ್ರಿ ಕಳೆದಿದ್ದಾರೆ. ಸಂಪರ್ಕ ಸೇವೆಗಳು ಅಸ್ತವ್ಯಸ್ತಗೊಂಡಿರುವುದರಿಂದ ಕಾಣೆಯಾದ ಸಂಬಂಧಿಕರ ಬಗ್ಗೆ ಮಾಹಿತಿ ಪಡೆಯಲು ಸಾಮಾಜಿಕ ಮಾಧ್ಯಮಗಳನ್ನು ವ್ಯಾಪಕವಾಗಿ ಬಳಸಲಾಗುತ್ತಿದೆ.

### ಮೋದಿ ಸಂತಾಪ: ನೆರವಿನ ಭರವಸೆ

ವೆನೆಜುವೆಲಾವನ್ನು ಪ್ರಬಲ ಭೂಕಂಪ ನಡುಗಿಸಿದ್ದು, ಸುಮಾರು 32ಜನರನ್ನು ಆಹುತಿ ತೆಗೆದುಕೊಂಡ ಮತ್ತು ಅಂದಾಜು 700ಕ್ಕೂ ಅಧಿಕ ಮಂದಿ ಗಾಯಗೊಂಡ ಭಯಾನಕ ಭೂಕಂಪನ ಬಗ್ಗೆ ಗಾಢ ಸಂತಾಪ ವ್ಯಕ್ತಪಡಿಸುವ ಭಾರತದ ಪ್ರಧಾನ ಪ್ರಧಾನಿ ನರೇಂದ್ರ ಮೋದಿ, ಸಂತ್ರಸ್ತ ಲ್ಯಾಟಿನ್ ಅಮೆರಿಕನ್ ರಾಷ್ಟ್ರಕ್ಕೆ ಎಲ್ಲಾ ರೀತಿಯ ನೆರವು ನೀಡಲು ಭಾರತ ಸಿದ್ಧವಿದೆ ಎಂದು ಎಕ್ಸ್‌ನ ಹಾಕಿರುವ ಪೋಸ್ಟ್‌ನಲ್ಲಿ ಭರವಸೆ ನೀಡಿದ್ದಾರೆ. ವೆನೆಜುವೆಲಾ ಸರಕಾರ ಮತ್ತು ಅಲ್ಲಿನ ಜನರಿಗೆ, ಮುಖ್ಯವಾಗಿ ಭೂಕಂಪನದಲ್ಲಿ ತಮ್ಮ ಪ್ರೀತಿಪಾತ್ರರನ್ನು ಕಳೆದುಕೊಂಡ ಕುಟುಂಬಗಳಿಗೆ ನನ್ನ ಹೃದಯಪೂರ್ವಕ ಗಾಢ ಸಂತಾಪ ವ್ಯಕ್ತಪಡಿಸುತ್ತೇನೆ. ಗಾಯಾಳುಗಳ ಶೀಘ್ರ ಚೇತರಿಕೆಗೆ ಭಾರತ ಪ್ರಾರ್ಥಿಸುವುದು. ಇಂತಹ ಸಂಕಷ್ಟದ ಸನ್ನಿವೇಶದಲ್ಲಿ ಸಂತ್ರಸ್ತರ ಜತೆ ಭಾರತ ಏಕತೆಯಿಂದ ನಿಲ್ಲುವುದು. ಸಂತ್ರಸ್ತ ರಾಷ್ಟ್ರಕ್ಕೆ ಎಲ್ಲಾ ರೀತಿಯ ನೆರವು ವಿಸ್ತರಿಸಲು ಭಾರತ ಸಿದ್ಧವಿದೆ ಎಂದು ಪ್ರಧಾನಿ ಮೋದಿ ಪೋಸ್ಟ್‌ನಲ್ಲಿ ಭರವಸೆ ನೀಡಿದ್ದಾರೆ.

### ಅಂತಾರಾಷ್ಟ್ರೀಯ ನೆರವು

ದುರಂತದ ಈ ಸಂದರ್ಭದಲ್ಲಿ ಭಾರತ ವೆನೆಜುವೆಲಾಕ್ಕೆ ಸಹಾಯ ಹಸ್ತ ಚಾಚಿದ್ದು ಅಗತ್ಯ ನೆರವು ಮತ್ತು ಬೆಂಬಲವನ್ನು ಪ್ರಕಟಿಸಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಈಕ್ವೆಡಾರ್ ಮಾನವೀಯ ನೆರವನ್ನು ಘೋಷಿಸಿದ್ದರೆ, ಕತಾರ್, ಮೆಕ್ಸಿಕೋ ಮತ್ತು ಎಲ್ ಸಾಲ್ವಡಾರ್ ರಕ್ಷಣಾ ಸಿಬ್ಬಂದಿಯನ್ನು ಕಳುಹಿಸಿವೆ. ಅಮೆರಿಕದ ಶೋಧನೆ ಮತ್ತು ರಕ್ಷಣಾ ತಂಡಗಳು, ವೈದ್ಯಕೀಯ ಸಂಪನ್ಮೂಲಗಳು ಮತ್ತು ಮಾನವೀಯ ಸಹಾಯವನ್ನು ತಕ್ಷಣವೇ ನಿಯೋಜಿಸುವುದಾಗಿ ಯುಎಸ್ ವಿದೇಶಾಂಗ ಕಾರ್ಯದರ್ಶಿ ರೂಬಿಯೋ ಪ್ರಕಟಿಸಿದ್ದಾರೆ.

# ಆಂಧ್ರದ ಸ್ವರ್ಣಗಿರಿ

## ಭಾರತದ ಮೊದಲ ಖಾಸಗಿ ಚಿನ್ನದ ಗಣಿ ಆಂಧ್ರಪ್ರದೇಶದಲ್ಲಿ ಪ್ರಾರಂಭ

ಸುದ್ದಿ ಸಮಗ್ರ



ಆಂಧ್ರಪ್ರದೇಶದ ಕರ್ನೂಲು ಜಿಲ್ಲೆಯ ಸ್ವರ್ಣಗಿರಿ ಚಿನ್ನದ ಗಣಿಯಲ್ಲಿ ವಾಣಿಜ್ಯ ಉತ್ಪಾದನೆ ಅಧಿಕೃತವಾಗಿ ಆರಂಭವಾಗಿದ್ದು, ಇದು ಕಾರ್ಯಾಚರಣೆಯಲ್ಲಿರುವ ಭಾರತದ ಮೊದಲ ಖಾಸಗಿ ಚಿನ್ನದ ಗಣಿಯಾಗಿದೆ. ಈ ಐತಿಹಾಸಿಕ ಯೋಜನೆ, ದೇಶದ ಆಂತರಿಕ ಚಿನ್ನದ ಉತ್ಪಾದನೆಯನ್ನು ಗಣನೀಯವಾಗಿ ಹೆಚ್ಚಿಸುವ ನಿರೀಕ್ಷೆಯಿದೆ. ಜತೆಗೆ 2,000 ವರ್ಷಗಳಿಗಿಂತಲೂ ಹೆಚ್ಚು ಹಳೆಯದಾದ ಗಣಿಗಾರಿಕೆಯ ಇತಿಹಾಸ ಹೊಂದಿರುವ ಈ ಸ್ಥಳಕ್ಕೆ ಮರುಜೀವ ನೀಡಲಿದೆ.

**405** ಕೋಟಿ ರೂ. ಒಟ್ಟು ಹೂಡಿಕೆ ಮೊತ್ತ

**400** ಕಿಲೋಗ್ರಾಂ 2026-27ರ ಉತ್ಪಾದನಾ ಗುರಿ

**700** ಸ್ಥಳೀಯ ಉದ್ಯೋಗ ಸೃಷ್ಟಿ

**600** ಹೆಕ್ಟರ್ ಒಟ್ಟು ವ್ಯಾಪ್ತಿ

### ಐತಿಹಾಸಿಕ ಉದ್ಘಾಟನೆ

ಬುಧವಾರ ಆಂಧ್ರಪ್ರದೇಶದ ಮುಖ್ಯಮಂತ್ರಿ ಎನ್ ಚಂದ್ರಬಾಬು ನಾಯ್ಡು ಈ ಐತಿಹಾಸಿಕ ಗಣಿಗಾರಿಕೆ ಯೋಜನೆಯನ್ನು ಅಧಿಕೃತವಾಗಿ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಗಣಿಯ ಎರಡನೇ ಹಂತದ ವಿಸ್ತರಣಾ ಕಾಮಗಾರಿಗಳಿಗೂ ಚಾಲನೆ ನೀಡಿದರು. ಈ ಯೋಜಿತ ವಿಸ್ತರಣೆ ಮುಂದಿನ ಕೆಲವು ವರ್ಷಗಳಲ್ಲಿ ಗಣಿಯ ವಾರ್ಷಿಕ ಚಿನ್ನದ ಉತ್ಪಾದನಾ ಸಾಮರ್ಥ್ಯವನ್ನು ಹಂತಹಂತವಾಗಿ ಗಣನೀಯವಾಗಿ ಹೆಚ್ಚಿಸಲು ರೂಪಿಸಲ್ಪಟ್ಟಿದೆ.

### ಸ್ವರ್ಣಗಿರಿ ಎಂದು ಮರುನಾಮ

ಹಿಂದೆ ಜೊನ್ನಗಿರಿ ಎಂದು ಕರೆಯಲ್ಪಡುತ್ತಿದ್ದ ಈ ಗಣಿಗಾರಿಕೆ ಪ್ರದೇಶವನ್ನು ವಾಣಿಜ್ಯ ಕಾರ್ಯಾಚರಣೆ ಪ್ರಾರಂಭವಾಗುವ ಮುನ್ನ ಆಂಧ್ರಪ್ರದೇಶ ಸರ್ಕಾರ ಸ್ವರ್ಣಗಿರಿ ಎಂದು ಅಧಿಕೃತವಾಗಿ ಮರುನಾಮಕರಣ ಮಾಡಿದೆ. ಹೊಸದಾಗಿ ಹೆಸರಿಸಲಾದ ಈ ಪದದ ಅರ್ಥ 'ಚಿನ್ನದ ಪರ್ವತ' ಎಂದಾಗಿದ್ದು, ಈ ಪ್ರದೇಶ ಚಿನ್ನದ ಗಣಿಗಾರಿಕೆಯೊಂದಿಗೆ ಹೊಂದಿರುವ ಸುದೀರ್ಘ ಐತಿಹಾಸಿಕ ಸಂಬಂಧವನ್ನು ಪ್ರತಿಬಿಂಬಿಸಲು ಈ ಹೆಸರನ್ನು ಆಯ್ಕೆ ಮಾಡಲಾಗಿದೆ.



### ಭವಿಷ್ಯದ ವಿಸ್ತರಣೆ

ಮೂಲ ಗಣಿಗಾರಿಕೆಯ ಜೊತೆಗೆ, ಆಂಧ್ರಪ್ರದೇಶ ಸರ್ಕಾರ ಸ್ವರ್ಣಗಿರಿ ಗಣಿಯ ಸಮೀಪದಲ್ಲೇ ವಿಶೇಷ ಚಿನ್ನದ ಆಭರಣ ತಯಾರಿಕಾ ಪಾರ್ಕ್ ಅನ್ನು ಸ್ಥಾಪಿಸುವ ಸಮಗ್ರ ಯೋಜನೆಯನ್ನು ಪ್ರಕಟಿಸಿದೆ. ಕಚ್ಚಾ ವಸ್ತುಗಳನ್ನು ಹೊರತೆಗೆಯುವ ಪ್ರಮುಖ ಮೂಲದ ಬಳಿಯೇ ಆಭರಣ ಉತ್ಪಾದನೆಯನ್ನು ಉತ್ತೇಜಿಸಲು ಮತ್ತು ಮೌಲ್ಯವರ್ಧನೆಗೆ ಪ್ರೋತ್ಸಾಹ ನೀಡಲು ಈ ಯೋಜನೆಯನ್ನು ವಿನ್ಯಾಸಗೊಳಿಸಲಾಗಿದೆ. ಇದು ಸಂಸ್ಕರಣೆಗಾಗಿ ದೂರದ ಕೇಂದ್ರಗಳಿಗೆ ಲೋಹವನ್ನು ಸಾಗಿಸುವ ಅಗತ್ಯವನ್ನು ತಪ್ಪಿಸುತ್ತದೆ. ಆಂಧ್ರಪ್ರದೇಶ, ಪ್ರಸ್ತುತ ಸಕ್ರಿಯ ಪರಿಶೋಧನೆಯ ಹಂತದಲ್ಲಿರುವ ಇನ್ನೂ ಹಲವಾರು ಭರವಸೆಯ ಚಿನ್ನದ ನಿಕ್ಷೇಪಗಳನ್ನು ಹೊಂದಿದೆ ಎಂದು ರಾಜ್ಯದ ಅಧಿಕಾರಿಗಳು ತಿಳಿಸಿದ್ದಾರೆ. ಭವಿಷ್ಯದಲ್ಲಿ ಈ ಹೆಚ್ಚುವರಿ ಖನಿಜ ನಿಕ್ಷೇಪಗಳನ್ನು ಯಶಸ್ವಿಯಾಗಿ ಗುರುತಿಸಿ ಅಭಿವೃದ್ಧಿಪಡಿಸಿದರೆ, ಆಂಧ್ರಪ್ರದೇಶ ಭಾರತದ ಪ್ರಮುಖ ಚಿನ್ನದ ಗಣಿಗಾರಿಕೆ ತಾಣವಾಗಿ ಹೊರಹೊಮ್ಮಲಿದೆ.



### ಉತ್ಪಾದನೆಯ ಗುರಿಗಳು

ಕಾರ್ಯಾಚರಣೆಯ ಮುನ್ಸೂಚನೆಗಳ ಪ್ರಕಾರ, ಸ್ವರ್ಣಗಿರಿ ಗಣಿ 2026-27ರ ಹಣಕಾಸು ವರ್ಷದಲ್ಲಿ ಸುಮಾರು 400 ಕಿಲೋಗ್ರಾಂ ಚಿನ್ನವನ್ನು ಉತ್ಪಾದಿಸುವ ನಿರೀಕ್ಷೆಯಿದೆ. ಹೊಸದಾಗಿ ಪ್ರಾರಂಭಿಸಲಾದ ಎರಡನೇ ಹಂತದ ವಿಸ್ತರಣೆ ಯಶಸ್ವಿಯಾಗಿ ಪೂರ್ಣಗೊಂಡ ನಂತರ, ಈ ಸ್ಥಳದಲ್ಲಿ ವಾರ್ಷಿಕ ಚಿನ್ನದ ಉತ್ಪಾದನೆ ಸುಮಾರು ಎರಡು ಟನ್‌ಗಳಿಗೆ ಏರಲಿದೆ. ಈ ಪ್ರಮಾಣದ ಬೆಳವಣಿಗೆಯು ಈ ಗಣಿಯನ್ನು ದೇಶದ ಅತಿ ದೊಡ್ಡ ಚಿನ್ನ ಉತ್ಪಾದನಾ ಕೇಂದ್ರಗಳಲ್ಲಿ ಒಂದನ್ನಾಗಿ ಮಾಡಲಿದೆ. ಈ ಬೃಹತ್ ಯೋಜನೆಯನ್ನು ಸುಮಾರು 405 ಕೋಟಿ ರೂ. ಗಳ ಅಂದಾಜು ಹೂಡಿಕೆಯೊಂದಿಗೆ ಅಭಿವೃದ್ಧಿಪಡಿಸಲಾಗಿದೆ. ಈ ಸಂಪೂರ್ಣ ಮೂಲಸೌಕರ್ಯ ಮತ್ತು ಗಣಿಗಾರಿಕೆ ಗುತ್ತಿಗೆ ಪ್ರದೇಶವು ಕರ್ನೂಲು ಜಿಲ್ಲೆಯ ಸುಮಾರು 600 ಹೆಕ್ಟೇರ್ ಪ್ರದೇಶದಲ್ಲಿ ವಿಸ್ತರಿಸಿದೆ. ಇದರ ಪರಿಣಾಮವಾಗಿ, ಆಂಧ್ರಪ್ರದೇಶ ರಾಜ್ಯ ಸರ್ಕಾರ ಹೊರತೆಗೆಯಲಾದ ಚಿನ್ನದ ಪ್ರಮಾಣದ ಆಧಾರದ ಮೇಲೆ ಪ್ರತಿವರ್ಷ ಗಣನೀಯ ರಾಯಲ್ಟಿ ಆದಾಯ ಪಡೆಯುವ ನಿರೀಕ್ಷೆಯಲ್ಲಿದೆ.

### ಸುಧಾರಿತ ತಂತ್ರಜ್ಞಾನಗಳ ಬಳಕೆ

ಪ್ರಾಚೀನ ಸಾಂಪ್ರದಾಯಿಕ ವಿಧಾನಗಳಿಂದ ಆಧುನಿಕ ಖಾಸಗಿ ಉದ್ಯಮದ ಕಡೆಗಿನ ಈ ಪರಿವರ್ತನೆ, ಭಾರತದ ಖನಿಜ ಸಂಪನ್ಮೂಲ ನಿರ್ವಹಣಾ ನೀತಿಯಲ್ಲಿ ಪ್ರಮುಖ ಬದಲಾವಣೆಯನ್ನು ಸೂಚಿಸುತ್ತದೆ. ಚಿನ್ನದ ಗಣಿಗಾರಿಕೆ ವಲಯವನ್ನು ಖಾಸಗಿ ಬಂಡವಾಳ ಹೂಡಿಕೆಗೆ ಮುಕ್ತಗೊಳಿಸುವ ಮೂಲಕ, ಶತಮಾನಗಳಿಂದ ಅನ್ವೇಷಿಸಲ್ಪಡದೆ ಉಳಿದಿರುವ ಆಳವಾದ ನಿಕ್ಷೇಪಗಳನ್ನು ಸುರಕ್ಷಿತವಾಗಿ ಹೊರತೆಗೆಯಲು ಸುಧಾರಿತ ತಂತ್ರಜ್ಞಾನಗಳನ್ನು ಬಳಸಿಕೊಳ್ಳುವ ಉದ್ದೇಶವನ್ನು ಸರ್ಕಾರ ಹೊಂದಿದೆ.

### ಐತಿಹಾಸಿಕ ಹಿನ್ನೆಲೆ

ಇತಿಹಾಸಕಾರರು ಮತ್ತು ಪುರಾತತ್ವ ತಜ್ಞರ ಪ್ರಕಾರ, ಕರ್ನೂಲು ಪ್ರದೇಶ ಐತಿಹಾಸಿಕ ಮೌರ್ಯ ಸಾಮ್ರಾಜ್ಯದ ಅವಧಿಯಲ್ಲಿ ಅತ್ಯಂತ ಪ್ರಮುಖ ಚಿನ್ನ ಉತ್ಪಾದನಾ ಕೇಂದ್ರವಾಗಿ ಕಾರ್ಯನಿರ್ವಹಿಸುತ್ತಿತ್ತು. ಈ ಗಣಿಗಾರಿಕೆ ಚಟುವಟಿಕೆಯು ಪ್ರಮುಖವಾಗಿ ಕ್ರಿ.ಪೂ 3ನೇ ಶತಮಾನದಲ್ಲಿ ಸಾಮ್ರಾಟ್ ಅಶೋಕನ ಆಳ್ವಿಕೆಯ ಅವಧಿಯಲ್ಲಿ ವ್ಯಾಪಕವಾಗಿ ನಡೆದಿತ್ತು. ಈ ಪ್ರದೇಶದ ಸುತ್ತಮುತ್ತ ಪತ್ತೆಯಾಗಿರುವ ಪ್ರಾಚೀನ ಶಿಲಾಶಾಸನಗಳು ಇಲ್ಲಿ ನಡೆದಿದ್ದ ಐತಿಹಾಸಿಕ ಗಣಿಗಾರಿಕೆ ಚಟುವಟಿಕೆಗಳಿಗೆ ಸ್ಪಷ್ಟ ಪುರಾವೆಗಳನ್ನು ಒದಗಿಸುತ್ತವೆ.

### ಆರ್ಥಿಕ ಪರಿಣಾಮಗಳು

ನೇರ ಖನಿಜ ಆದಾಯದ ಜೊತೆಗೆ, ಈ ಕೈಗಾರಿಕಾ ಯೋಜನೆ ಸುಮಾರು 700 ನೇರ ಉದ್ಯೋಗಾವಕಾಶಗಳನ್ನು ಸೃಷ್ಟಿಸುವ ನಿರೀಕ್ಷೆಯಿದೆ. ಕಾರ್ಯಾಚರಣೆಯ ಮಾರ್ಗಸೂಚಿಗಳ ಪ್ರಕಾರ, ಈ ಉದ್ಯೋಗಾವಕಾಶಗಳಲ್ಲಿ ಹೆಚ್ಚಿನ ಪಾಲನ್ನು ಹತ್ತಿರದ ಗ್ರಾಮಗಳ ನಿವಾಸಿಗಳಿಗೆ ನೀಡಲು ಉದ್ದೇಶಿಸಲಾಗಿದೆ. ಇದರಿಂದಾಗಿ ಸ್ಥಳೀಯ ಗ್ರಾಮೀಣ ಆರ್ಥಿಕತೆಗೆ ಪ್ರಮುಖ ಆರ್ಥಿಕ ಉತ್ತೇಜನ ಸಿಗಲಿದೆ. ಇತಿಹಾಸದುದ್ದಕ್ಕೂ ನೆರೆಯ ಕರ್ನಾಟಕದಲ್ಲಿರುವ ಹಟ್ಟಿ ಚಿನ್ನದ ಗಣಿ ಭಾರತದ ಆಂತರಿಕ ಚಿನ್ನದ ಉತ್ಪಾದನೆಯ ಬಹುಪಾಲು ಪಾಲನ್ನು ಹೊಂದಿತ್ತು. ಆದ್ದರಿಂದ ಸ್ವರ್ಣಗಿರಿ ಯೋಜನೆ, ದೇಶೀಯ ಪೂರೈಕೆ ಸರಪಳಿಯನ್ನು ವೈವಿಧ್ಯಗೊಳಿಸಲು, ದೇಶದ ಒಟ್ಟು ಆಂತರಿಕ ಉತ್ಪಾದನೆಯನ್ನು ಹೆಚ್ಚಿಸಲು ಮತ್ತು ಭಾರತ ಆಮದು ಮಾಡಿಕೊಳ್ಳುವ ಚಿನ್ನದ ಮೇಲಿನ ದೀರ್ಘಕಾಲೀನ ಅವಲಂಬನೆಯನ್ನು ಹಂತಹಂತವಾಗಿ ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ಅಂದಾಜಿಸಲಾಗಿದೆ.

## ಕಿರುಸುದ್ದಿ

### ನಾಳೆಯಿಂದ ಪ್ರಧಾನಿ ಸೀಶೆಲ್ಸ್ ಪ್ರವಾಸ ಶುರು

**ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಸೀಶೆಲ್ಸ್ ಪ್ರವಾಸ ಕೈಗೊಳ್ಳಲಿದ್ದು, ಸೀಶೆಲ್ಸ್ ರಾಷ್ಟ್ರೀಯ ದಿನದ ಸುವರ್ಣ ಮಹೋತ್ಸವದಲ್ಲಿ ಗೌರವ ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದು ವಿದೇಶಾಂಗ ಸಚಿವಾಲಯ(ಎಂಇಎ) ತಿಳಿಸಿದೆ. ಈ ಸಂಭ್ರಮಾಚರಣೆಯಲ್ಲಿ ಭಾರತೀಯ ಸೇನಾ ತುಕಡಿ ಹಾಗೂ ನೌಕಾಪಡೆಯ ಎರಡು ಯುದ್ಧನೌಕೆಗಳು ಪಾಲ್ಗೊಳ್ಳಲಿವೆ ಎಂದು ವಿದೇಶಾಂಗ ಸಚಿವಾಲಯ ಹೇಳಿದೆ. ಜೂ.27ರಿಂದ 29ರವರೆಗೆ ಪ್ರಧಾನಿ ಮೋದಿ ಸೀಶೆಲ್ಸ್‌ನಲ್ಲಿಯೇ ಇದ್ದು, ಅಲ್ಲಿನ ಅಧ್ಯಕ್ಷ ಪ್ಯಾಟ್ರಿಕ್ ಹರ್ಮಿನಿ ಅವರೊಂದಿಗೆ ಎಲ್ಲಾ ಕ್ಷೇತ್ರಗಳಲ್ಲಿ ದ್ವಿಪಕ್ಷೀಯ ಒಪ್ಪಂದ ಬಲವರ್ಧನೆಗಾಗಿ ಚರ್ಚಿಸಲಿದ್ದಾರೆ.

### ಪ್ರಾಜೆಕ್ಟ್ ಹಾಕ್ ಐ: ಅಮರನಾಥ ಯಾತ್ರೆ ಸುರಕ್ಷತೆಗೆ ಚಾಲನೆ

**ಶ್ರೀನಗರ:** ಪಹಾಲ್ಗಾಮ್ ಮೂಲಕ ಸಾಗುವ ಸಾಂಪ್ರದಾಯಿಕ ಅಮರನಾಥ ಯಾತ್ರಾ ಮಾರ್ಗದ ಸುರಕ್ಷತೆಗಾಗಿ ಪೊಲೀಸರು ಪ್ರಾಜೆಕ್ಟ್ ಹಾಕ್ ಐ ಯೋಜನೆಗೆ ಚಾಲನೆ ನೀಡಿದ್ದಾರೆ. ಈ 57 ದಿನಗಳ ಸುದೀರ್ಘ ತೀರ್ಥಯಾತ್ರೆ ಜುಲೈ 3ರಂದು ಪ್ರಾರಂಭವಾಗಿ ಆ.28ರಂದು ಮುಕ್ತಾಯಗೊಳ್ಳಲಿದೆ.ಅನಂತನಾಗ್ ಜಿಲ್ಲೆಯಲ್ಲಿ ಕೈಗೊಳ್ಳಲಾಗಿರುವ ಈ ಭದ್ರತಾ ಯೋಜನೆ, ಐದು ಡ್ರೋನ್ ತಂಡಗಳು, 28 ಎತ್ತರದ ವೀಕ್ಷಣಾ ಗೋಪುರಗಳು ಮತ್ತು 22 ಸ್ನೈಪರ್ ತಂಡಗಳನ್ನು ಒಳಗೊಂಡಿದೆ. ನಿರಂತರ ನೈಜ-ಸಮಯದ ಕಣ್ಗಾವಲಿಗಾಗಿ ಅಧಿಕಾರಿಗಳು 416 ಹೈ-ರೆಸಲ್ಯೂಶನ್ ಸಿಸಿಟಿವಿ ಕ್ಯಾಮೆರಾಗಳು ಮತ್ತು ಮುಖ ಗುರುತಿಸುವಿಕೆ ತಂತ್ರಜ್ಞಾನ ಮೂಲಸೌಕರ್ಯವನ್ನು ಅಳವಡಿಸಿದ್ದಾರೆ.

### ಚೀನಾ ಮೂಲದ ಹೂಡಿಕೆಗೆ ಕೇಂದ್ರ ಅನುಮತಿ ಸಾಧ್ಯತೆ

**ಹೊಸದಿಲ್ಲಿ:** ಕಳೆದೊಂದು ದಶಕದಲ್ಲೇ ಮೊದಲ ಬಾರಿಗೆ ಆಟೋಮೊಬೈಲ್ ಉದ್ಯಮದಲ್ಲಿ ಚೀನಾ ಬೆಂಬಲಿತ ಕಂಪನಿಯ ಹೂಡಿಕೆಗೆ ಕೇಂದ್ರ ಸರ್ಕಾರ ಅನುಮತಿ ನೀಡುವ ಸಾಧ್ಯತೆಯಿದೆ. ಚೀನಾ ಬೆಂಬಲಿತ ಅತಿದೊಡ್ಡ ಹೈಬ್ರಿಡ್ ಕಾರು ಇಂಜಿನ್ ತಯಾರಕ ಹಾರ್ಸ್ ಪವರ್ ಟ್ರೈನ್ ಲಿ. ದೇಶದಲ್ಲಿ 370 ದಶಲಕ್ಷ ಡಾಲರ್ ಹೂಡಿಕೆ ಮಾಡಲು ಹೊರಟಿದೆ. ಚೆನ್ನೈನ ರೆನೊ ಘಟಕದಲ್ಲಿ ಹೈಬ್ರಿಡ್ ಇಂಜಿನ್‌ಗಳನ್ನು ಹಾರ್ಸ್ ಪವರ್‌ಟ್ರೈನ್ ಲಿ. ನಿರ್ಮಿಸುವ ಸಾಧ್ಯತೆಯಿದೆ. ದೇಶೀಯ ಉತ್ಪಾದನೆಗೆ ಉತ್ತೇಜನ ನೀಡುವ ಹಾಗೂ ಹೈಬ್ರಿಡ್ ವಾಹನಗಳಿಗೆ ಹೆಚ್ಚುತ್ತಿರುವ ಬೇಡಿಕೆಯಿಂದ ಕೇಂದ್ರ ಸರ್ಕಾರ ತನ್ನ ನೀತಿಗಳಲ್ಲಿ ಬದಲಾವಣೆ ಮಾಡಿಕೊಂಡಿದ್ದು, ಈ ಹೂಡಿಕೆಗೆ ಅನುಮತಿ ನೀಡುವ ಸಾಧ್ಯತೆಯಿದೆ.

## ಸುಂಕ ಲಾಭ ಚೌಕಟ್ಟಿಲ್ಲದೆ ಒಪ್ಪಂದವಿಲ್ಲ: ಗೋಯಲ್

**ಹೊಸದಿಲ್ಲಿ:** ಇತರ ಸ್ಪರ್ಧಾತ್ಮಕ ದೇಶಗಳಿಗಿಂತ ಭಾರತದ ರಫ್ತುಗಳಿಗೆ ತುಲನಾತ್ಮಕ ಸುಂಕ ಅನುಕೂಲ ಖಾತ್ರಿಯ ಚೌಕಟ್ಟೊಂದನ್ನು ಹೊಂದುವ ವರೆಗೆ ಅಮೆರಿಕದ ಜೊತೆಗೆ ಯಾವುದೇ ದ್ವಿಪಕ್ಷೀಯ ವ್ಯಾಪಾರ ಒಪ್ಪಂದಕ್ಕೆ ಭಾರತ ಮುಂದಾಗುವುದಿಲ್ಲ ಎಂಬುದಾಗಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಸ್ಪಷ್ಟಪಡಿಸಿದ್ದಾರೆ. ಅಮೆರಿಕದ ಜೊತೆಗಿನ ಸಂಧಾನ ಕುರಿತಂತೆ ಮಾತನಾಡಿದ ಅವರು, ಚರ್ಚೆಗಳು ಮುಂದುವರಿದಿದ್ದುಫಿ, ಈಗ ಭಾರತಕ್ಕೆ ಅಮೆರಿಕ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕತೆಯಲ್ಲಿ ಮೇಲುಗೈ ಲಭಿಸುವಂತಹ ತುಲನಾತ್ಮಕ



ಸುಂಕ ಚೌಕಟ್ಟೊಂದನ್ನು ರೂಪಿಸುವುದಕ್ಕೆ ಹೆಚ್ಚು ಒತ್ತು ನೀಡಿದ್ದೇವೆ .ಸ್ಪರ್ಧಾತ್ಮಕತೆಯ ಅನುಕೂಲತೆಯನ್ನು ಹೊಂದುವ ಚೌಕಟ್ಟೊಂದು ರೂಪುಗೊಳ್ಳದ ಹೊರತು ನಾವು ಅಮೆರಿಕದ ಜತೆ ಒಪ್ಪಂದಕ್ಕೆ ಮುಂದಾಗುವುದಿಲ್ಲ ಎಂದಿದ್ದಾರೆ. ಕಳೆದ ಫೆ.6ರಂದು ಉಭಯ ದೇಶಗಳು ವ್ಯಾಪಾರ ಒಪ್ಪಂದ ಕುರಿತ ವಿಶಾಲ ರೂಪುರೇಷೆಗಳ ಬಗ್ಗೆ ಒಪ್ಪಿಕೊಂಡಿವೆ. ಅನಂತರ ಉಭಯ ದೇಶಗಳು ಸೂಕ್ಷ್ಮ ಅಂಶಗಳ ಕುರಿತು ಕೆಲಸ ಮಾಡುತ್ತಿವೆ .ಅಮೆರಿಕವು ಸ್ಪರ್ಧಾತ್ಮಕತೆಯ ಅನುಕೂಲವನ್ನು ಭಾರತಕ್ಕೆ ಒದಗಿಸಬಹುದಾಗಿದ್ದು , ಈಗ ಕಾನೂನು ಮತ್ತು ನೀತಿ ವ್ಯವಸ್ಥೆಗಳ ಚರ್ಚೆಗಳು ನಡೆಯುತ್ತಿವೆ .ಭಾರತಕ್ಕೆ ಕಾನೂನಾತ್ಮಕ ಮತ್ತು ನೀತಿಯ ನೆಲೆಯಲ್ಲಿ ಬಲ ಅಗತ್ಯವಿದೆ ಎಂದು ಅವರು ವಿವರಿಸಿದರು. ಭಾರತ-ಅಮೆರಿಕ ದ್ವಿಪಕ್ಷೀಯ ವ್ಯಾಪಾರ ಒಪ್ಪಂದ(ಬಿಟಿಎ)ದ ಮೊದಲ ಹಂತವನ್ನು ಅಂತಿಮಗೊಳಿಸಿದಾಗ ಭಾರತಕ್ಕೆ ವಿಧಿಸಲಾಗಿರುವ ಸುಂಕವನ್ನು ಶೇ.25ರಿಂದ ಶೇ.18ಕ್ಕೆ ಇಳಿಸಲು ಅಮೆರಿಕ ಒಪ್ಪಿತ್ತು.

## ದಂಗೆ ಎದ್ದ ಪಿಒಕೆಗೆ ಪಾಕಿಸ್ತಾನ ದಿಗ್ಬಂಧನ

**ಇಸ್ಲಾಮಾಬಾದ್:** ಸ್ವಾರ್ಥಿ ಪಾಕಿಸ್ತಾನ ತನ್ನ ನಾಗರಿಕರನ್ನೇ ಉಪವಾಸಕ್ಕೆ ತಳ್ಳುತ್ತಿರುವುದು ವಿಪರ್ಯಾಸ. ಸರ್ಕಾರದ ವಿರುದ್ಧ ದಂಗೆ ಎದ್ದ ಒಂದೇ ಒಂದು ಕಾರಣಕ್ಕೆ ಪಾಕ್ ಆಕ್ರಮಿತ ಕಾಶ್ಮೀರಕ್ಕೆ ಆಹಾರ, ಔಷಧ ನೀಡದೇ ದಿಗ್ಬಂಧನ ಹೇರಿದೆ. ಈ ಬಗ್ಗೆ ನಿವಾಸಿಗಳು, ಟ್ರಕ್ ಚಾಲಕರು ಸ್ಥಳೀಯ ಮಾಧ್ಯಮಗಳಿಗೆ ತಿಳಿಸಿದ್ದು, ಅಗತ್ಯ ಸರಕುಗಳನ್ನು ಸಾಗಿಸುವ ವಾಹನಗಳನ್ನು ಪ್ರದೇಶವನ್ನು ಪ್ರವೇಶಿಸದಂತೆ ತಡೆಯಲಾಗುತ್ತಿದೆ ಎಂದಿದ್ದಾರೆ. ಈ ಪ್ರದೇಶದಲ್ಲಿ ಆರ್ಥಿಕ ಮತ್ತು ರಾಜಕೀಯ ಕುಂದುಕೊರತೆಗಳನ್ನು ಪ್ರಶ್ನಿಸಿ, ಪ್ರತಿಭಟನೆಗಳನ್ನು ಮುನ್ನಡೆಸುತ್ತಿರುವ ಪ್ರಮುಖ ನಾಗರಿಕ ಸಮಾಜದ ಒಕ್ಕೂಟವಾದ ಜಂಟಿ ಅವಾಮಿ ಕ್ರಿಯಾ ಸಮಿತಿ (ಜೆಎಎಸಿ)ಯನ್ನು ನಿಷೇಧಿಸಿದ ಬಳಿಕ ಪ್ರತಿಭಟನೆ ಭುಗಿಲೆದ್ದಿತ್ತು. ಆದರೇ ಪಾಕಿಸ್ತಾನಿ ಅಧಿಕಾರಿಗಳು ದಿಗ್ಬಂಧನ ಆರೋಪವನ್ನು ತಳ್ಳಿ ಹಾಕಿದ್ದಾರೆ. ಕೆಲವು ಮಾಧ್ಯಮಗಳ ಪ್ರಕಾರ, ಪ್ರತಿಭಟನೆಗಳು, ಧರಣಿಗಳು ಮತ್ತು ವ್ಯಾಪಾರ ಮುಷ್ಕರಗಳಿಂದ ಈ ಪ್ರದೇಶದ ಹಲವಾರು ಪಟ್ಟಣಗಳಲ್ಲಿ ದೈನಂದಿನ ಜೀವನವನ್ನು ಸ್ಥಗಿತಗೊಳಿಸಿವೆ. ಪ್ರತಿಭಟನೆ ಭುಗಿಲೆದ್ದ ದಿನದಿಂದ ಪಿಒಕೆಯ ದೈನಂದಿನ ಜೀವನವು ತೀವ್ರವಾಗಿ ಅಸ್ತವ್ಯಸ್ತಗೊಂಡಿದೆ. ಸಾರಿಗೆ ಜಾಲಗಳನ್ನು ದುರ್ಬಲಗೊಳಿಸಲಾಗಿದ್ದು, ಸರಕು ಮತ್ತು ಸೇವೆಗಳ ಸಂಚಾರವನ್ನು ಅಡ್ಡಿಪಡಿಸಿದೆ. ಪಾಕಿಸ್ತಾನಿ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಈ ಪ್ರದೇಶಕ್ಕೆ ಆಹಾರ, ಇಂಧನ ಮತ್ತು ವೈದ್ಯಕೀಯ ಸರಬರಾಜುಗಳ ಸಾಗಣೆಯನ್ನು ನಿರ್ಬಂಧಿಸಿರುವುದರಿಂದ ಬಿಕ್ಕಟ್ಟು ಉಲ್ಬಣಗೊಂಡಿದೆ ಎಂದು ನಿವಾಸಿಗಳು ಮತ್ತು ವಿರೋಧ ಪಕ್ಷಗಳು ಆರೋಪಿಸಿವೆ.

## ಕನಿಷ್ಕಾ ಸ್ಫೋಟ ಖಲಿಸ್ತಾನಿ ಉಗ್ರರ ಕುಕೃತ್ಯ: ಕೆನಡಾ

**ಒಟ್ಟಾವಾ:** ಏರ್ ಇಂಡಿಯಾದ ಕನಿಷ್ಕಾ ವಿಮಾನವನ್ನು 1985ರಲ್ಲಿ ಬಾಂಬ್ ಸ್ಫೋಟಿಸಿ 329 ಮಂದಿಯನ್ನು ಹತ್ಯೆಗೈದ ಕುಕೃತ್ಯದ ಹಿಂದೆ ಕೆನಡಾ ಮೂಲದ ಖಲಿಸ್ತಾನಿ ಉಗ್ರರ ಕೈವಾಡವಿತ್ತು ಎಂದು ಕೆನಡಾದ ಭದ್ರತಾ ಗುಪ್ತಚರ ಸೇವೆ ಮೊದಲ ಬಾರಿಗೆ ಸ್ಪಷ್ಟವಾಗಿ ಒಪ್ಪಿಕೊಂಡಿದೆ. ಭಾರತವು ಆರಂಭದಿಂದಲೂ ಇದು ಖಲಿಸ್ತಾನಿ ಉಗ್ರರ ಸಂಚು ಎಂದು ಪ್ರತಿಪಾದಿಸುತ್ತಲೇ ಬಂದಿದ್ದರೂ, ಕೆನಡಾದ ಸರ್ಕಾರಗಳು ಈವರೆಗೆ ಅಧಿಕೃತ ಹೇಳಿಕೆಗಳಲ್ಲಿ ಖಲಿಸ್ತಾನಿ ಎಂಬ ಪದವನ್ನು ನೇರವಾಗಿ ಬಳಸಲು ಹಿಂದೇಟು ಹಾಕುತ್ತಿದ್ದವು. ಇದೀಗ ಕೆನಡಾದ ಪ್ರಮುಖ ಗುಪ್ತಚರ ಸಂಸ್ಥೆಯ ಹೇಳಿಕೆಯು ಖಲಿಸ್ತಾನಿ ಉಗ್ರವಾದದ ಬಗ್ಗೆ ಭಾರತ ವ್ಯಕ್ತಪಡಿಸುತ್ತಿದ್ದ ಕಳವಳಕ್ಕೆ ಪುಷ್ಟಿ ನೀಡಿದೆ. ದುರಂತದ ಸ್ಮರಣಾರ್ಥ ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿರುವ ಸಂದೇಶದಲ್ಲಿ, 1985ರ ಜೂ.23ರಂದು ಕೆನಡಾ ಮೂಲದ ಖಲಿಸ್ತಾನಿ ಉಗ್ರರು ಇರಿಸಿದ್ದ ಬಾಂಬ್‌ನಿಂದ ಏರ್ ಇಂಡಿಯಾ ವಿಮಾನ ಸ್ಫೋಟವಾಗಿದ್ದು, ಅದರಲ್ಲಿದ್ದ ಎಲ್ಲರೂ ಮೃತಪಟ್ಟಿದ್ದರು. ಕೆನಡಾದ ಇತಿಹಾಸದಲ್ಲಿಯೇ ಇದು ಅತ್ಯಂತ ಭೀಕರ ಭಯೋತ್ಪಾದಕ ದಾಳಿ ಎಂದು ಗುಪ್ತಚರ ಸಂಸ್ಥೆ ತಿಳಿಸಿದೆ.

ಬೋಯಿಂಗ್ 747 ಮಾದರಿಯ ಏರ್ ಇಂಡಿಯಾ ವಿಮಾನಕ್ಕೆ ಎಂಪರರ್ ಕನಿಷ್ಕಾ ಎಂದು ಹೆಸರಿಡಲಾಗಿತ್ತು. ವಿಮಾನದ ಸರಕು ವಿಭಾಗದಲ್ಲಿ ಇರಿಸಲಾಗಿದ್ದ ಬಾಂಬ್ ಅಟ್ಲಾಂಟಿಕ್ ಸಾಗರದ ಮೇಲೆ ಸ್ಫೋಟಗೊಂಡಿತ್ತು. ವಿಮಾನದಲ್ಲಿದ್ದ ಪ್ರಯಾಣಿಕರು ಹಾಗೂ ಸಿಬ್ಬಂದಿ ಸೇರಿದಂತೆ 329 ಮಂದಿ ಮೃತಪಟ್ಟಿದ್ದರು. ಮೃತರಲ್ಲಿ 268 ಮಂದಿ ಕೆನಡಾ ನಾಗರಿಕರಾಗಿದ್ದರು.

## ಐಎಎಫ್ ನೇತ್ರಾ ಕಣ್ಗಾವಲು ವ್ಯವಸ್ಥೆಗೆ ಅಂತಿಮ ಅನುಮತಿ

**ಹೊಸದಿಲ್ಲಿ:** ಸ್ವದೇಶಿ ನಿರ್ಮಿತ ನೇತ್ರಾ ಕಣ್ಗಾವಲು ಮತ್ತು ನಿಯಂತ್ರಣ ವ್ಯವಸ್ಥೆಗೆ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ(ಡಿಆರ್‌ಡಿಒ) ಅಂತಿಮ ಕಾರ್ಯಾಚರಣಾ ಅನುಮತಿ(ಎಫ್‌ಒಸಿ) ನೀಡಿದೆ. ಇದರೊಂದಿಗೆ ಭಾರತೀಯ ವಾಯುಪಡೆ (ಐಎಎಫ್)



ವೈಮಾನಿಕ ಕಣ್ಗಾವಲು ಮತ್ತು ಯುದ್ಧ ನಿರ್ವಹಣಾ ಸಾಮರ್ಥ್ಯ ಬಲವರ್ಧನೆಯಲ್ಲಿ ಹೊಸ ಮೈಲಿಗಲ್ಲು ಬರೆದಿದೆ. ಇದು ಆಪರೇಷನ್ ಸಿಂದೂರ ಮತ್ತು ಬಾಲಾಕೋಟ್ ದಾಳಿಗಳಲ್ಲಿ ಬಳಕೆಯಾಗಿತ್ತು ಎಂದು ವಾಯು ಸಿಬ್ಬಂದಿ ಉಪ ಮುಖ್ಯಸ್ಥ ಏರ್ ಮಾರ್ಷಲ್ ಅವಧೇಶ್ ಕುಮಾರ್ ಭಾರ್ತಿ ತಿಳಿಸಿದ್ದಾರೆ. ನೇತ್ರಾಗೆ ಆರಂಭಿಕ ಕಾರ್ಯಾಚರಣಾ ಅನುಮತಿ(ಐಒಸಿ)ಯನ್ನು 2017ರಲ್ಲಿ ನೀಡಲಾಗಿತ್ತು. ವೈಮಾನಿಕ ಕಣ್ಗಾವಲು, ಸಂದರ್ಭದ ಅರಿವು ಮತ್ತು ಯುದ್ಧ ನಿರ್ವಹಣಾ ಸಾಮರ್ಥ್ಯದೊಂದಿಗೆ ವಿನ್ಯಾಸಗೊಳಿಸಲಾಗಿದೆ.

## ಮೋದಿ ಭೇಟಿ ಬಳಿಕ ಅಮೆಜಾನ್ ಸಿಇಒ ಘೋಷಣೆ

# 48 ಶತಕೋಟಿ ಡಾಲರ್ ಹೂಡಿಕೆ

**ಹೊಸದಿಲ್ಲಿ:** ಮುಂದಿನ 5 ವರ್ಷಗಳಲ್ಲಿ ದಾಖಲೆಯ 48 ಶತಕೋಟಿ ಡಾಲರ್ ಹೂಡಿಕೆ ಮಾಡುವುದಾಗಿ ಅಮೆಜಾನ್ ಘೋಷಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರನ್ನು ಗುರುವಾರ ಭೇಟಿಯಾದ ಬಳಿಕ ಅಮೆಜಾನ್ ಸಿಇಒ ಆ್ಯಂಡಿ ಜೆಸ್ಸಿ ಈ ಘೋಷಣೆಯನ್ನು ಮಾಡಿದ್ದಾರೆ. ಈ ಬಾರಿ ಅಮೆಜಾನ್ 13 ಶತಕೋಟಿ ಡಾಲರ್ ಹೆಚ್ಚುವರಿ ಹೂಡಿಕೆ ಮಾಡಲಿದೆ. ಅಮೆಜಾನ್ ಕಂಪನಿಯ ಪಾಲಿಗೆ ಭಾರತವು ಜಾಗತಿಕ ಮಟ್ಟದಲ್ಲೇ ಅತ್ಯಂತ ಪ್ರಮುಖ ಮಾರುಕಟ್ಟೆಯಾಗಿದೆ. ಕಂಪನಿಯ ಹೊಸ ಹೂಡಿಕೆಗಳು ಭಾರತೀಯ ಮಾರುಕಟ್ಟೆಗೆ ಅಮೆಜಾನ್ ಬದ್ಧತೆಯನ್ನು ತೋರಿಸುತ್ತದೆ. ಅಮೆಜಾನ್‌ನ ಭಾರತದ ವ್ಯವಹಾರವು ಅತ್ಯಂತ ಆವೇಗದಲ್ಲಿ ಮುನ್ನುಗ್ಗುತ್ತಿದೆ. ಭಾರತದಲ್ಲಿ ಅಮೆಜಾನ್‌ನ ಇ-ಕಾಮರ್ಸ್, ಅಮೆಜಾನ್ ವೆಬ್ ಹಾಗೂ ಕ್ಲೌಡ್ ಕಂಪ್ಯೂಟಿಂಗ್ ಸೇವೆಗಳಿಗೆ ಅತ್ಯಂತ ಗ್ರಾಹಕ ಬೇಡಿಕೆಯಿದೆ ಎಂದು ಸಿಇಒ ಜೆಸ್ಸಿ ಹೇಳಿದ್ದಾರೆ.



ಕೇಂದ್ರ ಸರ್ಕಾರ ಡಿಜಿಟಲ್ ಆರ್ಥಿಕತೆ ವಿಸ್ತರಿಸಿದ್ದು, ಅಮೆಜಾನ್ ಕ್ಲೌಡ್ ಮತ್ತು ಎಐ ಸೇವೆಗಳ ಗ್ರಾಹಕರ ಸಂಖ್ಯೆ ಮತ್ತು ಬೇಡಿಕೆಗಳೂ ಹೆಚ್ಚುತ್ತಿವೆ. ಇದರಿಂದ ಜಾಗತಿಕ ಟೆಕ್ ದೈತ್ಯ ಅಮೆಜಾನ್ ಭಾರತದಲ್ಲಿ ಹೂಡಿಕೆಯನ್ನು ಹೆಚ್ಚಿಸುವುದಾಗಿ ಘೋಷಿಸಿದೆ. ಕಳೆದೊಂದು ದಶಕದಿಂದ ಕಂಪನಿ ಭಾರತದಲ್ಲಿ ತನ್ನ ಹೂಡಿಕೆಯನ್ನು ಹೆಚ್ಚಿಸುತ್ತಲೇ ಬಂದಿದೆ. ವಿಶ್ವದ ಅತಿ ವೇಗದ ಪ್ರಗತಿ ಕಾಣುತ್ತಿರುವ ಆರ್ಥಿಕತೆಯಲ್ಲಿ ಲಾಜಿಸ್ಟಿಕ್ಸ್ ಸಂಪರ್ಕಜಾಲ, ತಂತ್ರಜ್ಞಾನ ಮೂಲಸೌಕರ್ಯ, ಎಐ ಹಾಗೂ ಡಿಜಿಟಲ್ ಸೇವೆಗಳಲ್ಲಿ ಆಳವಾಗಿ ಬೇರೂರುವಲ್ಲಿ ಅಮೆಜಾನ್ ಯಶಸ್ವಿಯಾಗಿದೆ.

**ಅಮೆಜಾನ್ ಹೂಡಿಕೆಗೆ ಪ್ರಧಾನಿ ಸ್ವಾಗತ:** ಅಮೆಜಾನ್‌ನ ದಾಖಲೆಯ 48 ಶತಕೋಟಿ ಡಾಲರ್ ಹೂಡಿಕೆ ಘೋಷಣೆಯನ್ನು ಪ್ರಧಾನಿ ಮೋದಿ ಸ್ವಾಗತಿಸಿದ್ದಾರೆ. ಅಲ್ಲದೆ, ಅಮೆಜಾನ್ ಹೂಡಿಕೆಯಿಂದ ದೇಶದ ಯುವಜನತೆಗೆ ಹೊಸ ಅವಕಾಶಗಳನ್ನು ಒದಗಿಸಲಿದೆ ಎಂದು ಪ್ರಧಾನಿ ತಮ್ಮ ಎಕ್ಸ್ ಪೋಸ್ಟ್‌ನಲ್ಲಿ ಹೇಳಿದ್ದಾರೆ. ಪ್ರಧಾನಿ ಮೋದಿಯವರ ಭೇಟಿಯ ಬಳಿಕ ಭಾರತದಲ್ಲಿನ ದೀರ್ಘಕಾಲದ ಹೂಡಿಕೆ ಬದ್ಧತೆಯನ್ನು ಸಿಇಒ ಜೆಸ್ಸಿ ಪುನರುಚ್ಚರಿಸಿದ್ದಾರೆ.

## ಎನ್‌ಸಿಇಆರ್‌ಟಿ ನಿರ್ಧಾರಕ್ಕೆ ಸಚಿವ ಪ್ರಧಾನ್ ಶ್ಲಾಘನೆ

# ಸಮಾಜ ವಿಜ್ಞಾನದಲ್ಲಿ ತುರ್ತು ಪರಿಸ್ಥಿತಿ ಪಾಠ

**ಹೊಸದಿಲ್ಲಿ :** ತುರ್ತು ಪರಿಸ್ಥಿತಿಗೆ ಸಂಬಂಧಪಟ್ಟ ಪಾಠವನ್ನು 9ನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕಕ್ಕೆ ಎನ್‌ಸಿಇಆರ್‌ಟಿ ಸೇರ್ಪಡೆ ಮಾಡಿದೆ. ತುರ್ತು ಪರಿಸ್ಥಿತಿ ಭಾರತದ ಪ್ರಜಾಸತ್ತೆಗೊಂದು ಪ್ರಮುಖ ಸವಾಲಾಗಿದೆ ಎಂದು ಎನ್‌ಸಿಇಆರ್‌ಟಿ ವಿಶ್ಲೇಷಿಸಿದೆ. ದೇಶದಲ್ಲಿ ಹಿಂದೆ ನಡೆದಿರುವ ಕರಾಳ ಕೃತ್ಯಗಳನ್ನು ಭಾವೀ ಪೀಳಿಗೆ ಅರಿಯಬೇಕು ಎಂದು ಎನ್‌ಸಿಇಆರ್‌ಟಿಯ ಯೋಜನೆಯನ್ನು ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಶ್ಲಾಘಿಸಿದ್ದಾರೆ. 1970ರ ಆರಂಭದಲ್ಲಿ ಇಂದಿರಾಗಾಂಧಿ ನೇತೃತ್ವದ ಸರಕಾರದ ಆಡಳಿತ ವೈಖರಿ ಬಗ್ಗೆ ಸಾರ್ವಜನಿಕ ಅಸಂತೃಪ್ತಿ ತೀವ್ರವಾಗಿತ್ತು. ಹೆಚ್ಚಿದ್ದ ನಿರುದ್ಯೋಗ ಸಮಸ್ಯೆ, ಹಣದುಬ್ಬರ ಮತ್ತು ತಪ್ಪು ಆಡಳಿತ ನೀತಿ ವಿರುದ್ಧ ಜನರಿಂದ ವ್ಯಾಪಕ ಪ್ರತಿಭಟನೆಗಳು ವ್ಯಕ್ತವಾಗಿದ್ದವು. ಈ ಹಿನ್ನೆಲೆಯಲ್ಲಿ ಆಂತರಿಕ ಕ್ಷೋಭೆಯ ನೆಪವೊಡ್ಡಿ ಸರಕಾರ 1975 ಜೂನ್‌ನಲ್ಲಿ ರಾಷ್ಟ್ರೀಯ ತುರ್ತುಪರಿಸ್ಥಿತಿಯನ್ನು ದೇಶದ ಮೇಲೆ ಹೇರಿತ್ತು. ತುರ್ತು ಪರಿಸ್ಥಿತಿ ಅವಧಿಯಲ್ಲಿ ಬಹುತೇಕ ಮೂಲಭೂತ ಹಕ್ಕುಗಳು ಅಮಾನತಾಗಿದ್ದವು. ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸಲಾಗಿತ್ತು. ಸಾಕಷ್ಟು ಸಂಖ್ಯೆಯಲ್ಲಿ ರಾಜಕೀಯ ನಾಯಕರು ಮತ್ತು ಸಾಮಾಜಿಕ ಕಾರ್ಯಕರ್ತರನ್ನು ವಿನಾಕಾರಣ ಬಂಧಿಸಲಾಗಿತ್ತು. ಪ್ರಜಾತಾಂತ್ರಿಕ ಸಂಸ್ಥೆಗಳ ಮೇಲೆ ಅನಗತ್ಯ ಒತ್ತಡತಂತ್ರ ಹೇರಲಾಗಿತ್ತು ಮತ್ತು ಜನರ ಸ್ವಾತಂತ್ರ್ಯಕ್ಕೆ ಕತ್ತರಿ ಹಾಕಲಾಗಿತ್ತು ಎಂದು ಹೊಸತಾಗಿ ರಚಿತ ಸಮಾಜ ವಿಜ್ಞಾನ ಪಠ್ಯಪುಸ್ತಕ 'ಅಂಡರ್‌ಸ್ಟ್ಯಾಂಡಿಂಗ್ ಸೊಸೈಟಿ : ಇಂಡಿಯಾ ಅಂಡ್ ಬಿಯಾಂಡ್'ನ ಪಾಠದಲ್ಲಿ ವಿವರಿಸಲಾಗಿದೆ.

### ಸಸ್ಯಾಹಾರ ಪ್ರಚಾರ ಮಾಡಿಲ್ಲ ಕೃಷ್ಣಾನದಿ ಹೆಸರು, ದೇವರದ್ದಲ್ಲ

**ಹೊಸದಿಲ್ಲಿ:** 6ನೇ ತರಗತಿ ಕನ್ನಡ ಪಠ್ಯಪುಸ್ತಕದಲ್ಲಿ ಸಸ್ಯಾಹಾರ ಪ್ರಚಾರವಿಲ್ಲ, ಕೃಷ್ಣ ಎಂಬ ಪದ ಕೃಷ್ಣಾ ನದಿಯಿಂದ ಪ್ರೇರಿತವಾಗಿದ್ದು, ಇದು ಭಗವಾನ್ ಶ್ರೀ ಕೃಷ್ಣನನ್ನು ಉಲ್ಲೇಖಿಸುವುದಿಲ್ಲ ಎಂದು ಎನ್‌ಸಿಇಆರ್‌ಟಿ ಸ್ಪಷ್ಟನೆ ನೀಡಿದೆ. ಎನ್‌ಸಿಇಆರ್‌ಟಿಯು ಆರ್3 ಭಾಷೆಯ ಪಠ್ಯಪುಸ್ತಕಗಳನ್ನು ಒಳಗೊಂಡಂತೆ ತನ್ನ ಭಾಷಾ ಪಠ್ಯಪುಸ್ತಕಗಳಿಗೆ ನದಿಗಳ ಹೆಸರಿಡುವ ಅಭ್ಯಾಸವನ್ನು ಅಳವಡಿಸಿಕೊಂಡಿದೆ. ಕೃಷ್ಣ ಎಂಬ ಹೆಸರು ಭಾರತದ ಪ್ರಮುಖ ನದಿಗಳಲ್ಲಿ ಒಂದಾದ ಕೃಷ್ಣ ನದಿಯಿಂದ ಸ್ಫೂರ್ತಿ ಪಡೆದಿದೆ. ಇದು ಕರ್ನಾಟಕದಲ್ಲಿಯೂ ಹರಿಯುತ್ತದೆ. ಇನ್ನೊಂದೆಡೆ, ಪಠ್ಯಪುಸ್ತಕದಲ್ಲಿ ಸಸ್ಯಾಹಾರವನ್ನು ಉತ್ತೇಜಿಸಲಾಗಿದೆ ಹಾಗೂ ಮಾಂಸಾಹಾರವನ್ನು ಕಡೆಗಣಿಸಲಾಗಿದೆ ಎಂಬ ಆರೋಪಕ್ಕೂ ಎನ್‌ಸಿಇಆರ್‌ಟಿ ಸ್ಪಷ್ಟನೆ ನೀಡಿದೆ. 6ನೇ ಅಧ್ಯಾಯದಲ್ಲಿ 'ಸಮತೋಲಿತ ಆಹಾರ' ಕುರಿತು ವಿವರವಾಗಿ ಪಾಠವಿದ್ದು, 63ನೇ ಪುಟದಲ್ಲಿ ಇದೇ ವಿಷಯವನ್ನು ಪ್ರತ್ಯೇಕ ಶೀರ್ಷಿಕೆಯಲ್ಲಿ ವಿವರಿಸಲಾಗಿದೆ ಎಂದು ತಿಳಿಸಿದೆ.

# ಹೆಣ್ಣು ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಒತ್ತು: ಶಾಸಕ

**ಬೀದರ:** ಮಾಜಿ ಸಚಿವರು ಹಾಗೂ ಶಾಸಕರಾದ ಪ್ರಭು ಬಿ.ಚವ್ಹಾಣ ಅವರು ಔರಾದ(ಬಿ) ಪಟ್ಟಣದಲ್ಲಿ ಹೊಸದಾಗಿ ನಿರ್ಮಿಸಲಾದ ಡಾ.ಬಿ.ಆರ್. ಅಂಬೇಡ್ಕರ್ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯದ ನೂತನ ಕಟ್ಟಡವನ್ನು ಸೋಮವಾರ ಲೋಕಾರ್ಪಣೆಗೊಳಿಸಿದರು.



ಈ ವೇಳೆ ಮಾತನಾಡಿದ ಅವರು, ಹಿಂದಿನ ವಸತಿ ನಿಲಯದ ಕಟ್ಟಡವು ತುಂಬಾ ಹಳೆಯದಾಗಿದ್ದು, ಗಾತ್ರದಲ್ಲಿಯೂ ಚಿಕ್ಕದಾಗಿತ್ತು. ಮಳೆಯ ಸಮಯದಲ್ಲಿ ಕಟ್ಟಡದಲ್ಲಿ ನೀರು ಸೋರುತ್ತಿರುವ ಬಗ್ಗೆ ವಿದ್ಯಾರ್ಥಿನಿಯರು ಗಮನಕ್ಕೆ ತಂದಿದ್ದರು. ನಾನು ಕೂಡ ಸ್ವತಃ ಭೇಟಿ ನೀಡಿ ಗಮನಿಸಿದ್ದೆ. ಹಿಂದೆ ಸಚಿವನಾಗಿದ್ದಾಗ 2 ಕೋಟಿ ರೂಪಾಯಿ ಅನುದಾನ ಮಂಜೂರು ಮಾಡಿ ಸುಂದರ ಹಾಗೂ ಭವ್ಯ ನೂತನ ಕಟ್ಟಡವನ್ನು ನಿರ್ಮಿಸಲಾಗಿದೆ ಎಂದು ಹೇಳಿದರು.

ದಾಂಡೇಲಿ ನಗರಸಭೆಗೆ 2025-26 ನೇ ಸಾಲಿನ ಮಾನ್ಯ ಮುಖ್ಯ ಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ (CMIDP) ಯೋಜನೆಯಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಪಾರದರ್ಶಕ ಕಾಯ್ದೆ ಹಾಗೂ ನಿಯಮಾವಳಿ-2000 KPPP Portal ದ್ವಿ-ಲಕೋಟೆ ಪದ್ಧತಿಯಲ್ಲಿ ಐಟಂವಾರು KW-3 ಕರಾರಿನಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಹಾಗೂ ಅರ್ಹ ಗುತ್ತಿಗೆದಾರರಿಂದ ಇಂಡೆಂಟ್ 1) DMA/2025-26/OW/WORK_INDENT 55045/Call-2 (ಇತರೆ) 2) DMA/2025-26/OW/WORK_INDENT 55056/Call-2 (ಪರಿಶಿಷ್ಟ ಜಾತಿ) 3) DMA/2025-26/OW/WORK_INDENT 55061/Call-2 ಪ್ರವರ್ಗ-2 (ಅ) ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. www.kppp.karnataka.gov.in ಮೂಲಕ ಟೆಂಡರ್ ಫಾರ್ಮಗಳನ್ನು ಭರ್ತಿ ಮಾಡಿ ಅರ್ಜಿಗಳನ್ನು ಸಲ್ಲಿಸುವುದು. ಹೆಚ್ಚಿನ ಮಾಹಿತಿಯನ್ನು ನಗರಸಭೆಯ ವೆಬ್‌ಸೈಟ್ www.dandelicity.mrc.gov.in ನಲ್ಲಿ ಪಡೆಯಬಹುದು.

ಟೆಂಡರು ವಿವರ: (1) ಟೆಂಡರ ಪೂರ್ವಭಾವಿ ಸಭೆ ದಿನಾಂಕ: 09-07-2026 11:30 ಗಂಟೆಗೆ
(2) ಟೆಂಡರ ಕುರಿತು ವಿಚಾರಣೆಗಾಗಿ ದಿನಾಂಕ: 10-07-2026 16:30 ಗಂಟೆಗೆ
(3) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 13-07-2026 16:30 ಗಂಟೆಗೆ
(4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 14-07-2026 17:00 ಗಂಟೆಗೆ
(5) ಆರ್ಥಿಕ ಬಿಡ್ ತೆರೆಯುವ ದಿನಾಂಕ: 16-07-2026 17.00 ಗಂಟೆಗೆ

DIPR/KWR/KSMCA/233/26-27 dt. 25.06.2026
ಸಹಿ/- ಪೌರಾಯುಕ್ತರು
ನಗರಸಭೆ, ದಾಂಡೇಲಿ

## ಹಿಂದೂ ಧಾರ್ಮಿಕ ದತ್ತಿ ಇಲಾಖೆ
## ಕಾರ್ಯನಿರ್ವಾಹಕಾಧಿಕಾರಿಗಳ ಕಾರ್ಯಾಲಯ
## ಶ್ರೀ ವಿರೂಪಾಕ್ಷೇಶ್ವರಸ್ವಾಮಿ ದೇವಾಸ್ಥಾನ ಹಂಪಿ-ಹೊಸಪೇಟೆ
ತಾಲೂಕು. ದೂರವಾಣಿ ಸಂ.08394-241241
**Email: srivirupakseshwaratemplehampi@gmail.com.**
ಸಂ:ಶ್ರೀವಿಸ್ವಾದೇ/ಟೆಂಡರ್/03/2026-27 ದಿನಾಂಕ: 24.06.2026

### ಪ್ರಕಟಣೆ

**ವಿಷಯ:** ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕು ಹಂಪಿ ಶ್ರೀ ವಿರೂಪಾಕ್ಷೇಶ್ವರ ಸ್ವಾಮಿ ದೇವಸ್ಥಾನಕ್ಕೆ ಬರುವ ಭಕ್ತರಿಗೆ ನದಿಯಲ್ಲಿ ಸ್ನಾನ ಮಾಡಿ ಬಟ್ಟೆ ಬದಲಾಯಿಸಿಕೊಳ್ಳಲು MS Fabricated Cabins ಖರೀದಿಸಲು ಟೆಂಡರ್ ಕರೆಯುವ ಬಗ್ಗೆ.

ವಿಜಯನಗರ ಜಿಲ್ಲೆ ಹೊಸಪೇಟೆ ತಾಲೂಕು ಹಂಪಿ ಶ್ರೀ ವಿರೂಪಾಕ್ಷೇಶ್ವರ ಸ್ವಾಮಿ ದೇವಸ್ಥಾನಕ್ಕೆ ಬರುವ ಭಕ್ತರಿಗೆ ನದಿಯಲ್ಲಿ ಸ್ನಾನ ಮಾಡಿ ಬಟ್ಟೆ ಬದಲಾಯಿಸಿಕೊಳ್ಳಲು **MS Fabricated Cabins** ಖರಿದಿಸಲು ಅಂಗೀಕೃತ ಸಂಸ್ಥೆಗಳಿಂದ ಧರಪಟ್ಟಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ತಮ್ಮ ತಮ್ಮ ಧರಸೂಚಿಯೊಂದಿಗೆ ಪ್ರಕಟಣೆ ಹೊರಡಿಸಿದ 8 ದಿನಗಳ ಒಳಗಾಗಿ ಈ ಕೆಳಕಂಡ ವಿವರಗಳನೊಳಗೊಂಡ ಧರಪಟ್ಟಿಯನ್ನು ಮೊಹರು ಮಾಡಿದ ಲಕೋಟೆ ಒಳಗೆ ಸಲ್ಲಿಸತಕ್ಕದ್ದು ಹೆಚ್ಚಿನ ವಿವರಗಳಿಗೆ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿಗೆ ಸಂಪರ್ಕಿಸತಕ್ಕದ್ದು.

| Sl. no | Item Description | Size | Quantity |
|---|---|---|---|
| | MS Fabricated Portable Dress Change Cabins (5*2=10 cabin unit) | 20*12*9 | 01 |
| | (with Solar Light Facility) | | |

ಸಹಿ/-ಕಾರ್ಯನಿರ್ವಾಹಕ ಅಧಿಕಾರಿಗಳು
ಶ್ರೀ ವಿರೂಪಾಕ್ಷೇಶ್ವರ ಸ್ವಾಮಿ ದೇವಸ್ಥಾನ ಹಂಪಿ. ಹೊಸಪೇಟೆ ತಾ॥
ವಾ.ಸಾ.ಸಂ.ಇ/ವಿಜಯನಗರ/2026-27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/156

**IN THE COURT OF THE CIVIL JUDGE CUM JMFC AT SANDUR**
**CRL.M.C.NO. 747/2026**

**BETWEEN:Sri. V. Veeresh and another** ....Petitioners.
**-AND-**
**The Tahasildar, cum The register of birth and deaths,Taluk office Sandur** .....Respondent.
**To,**
**The Tahasildar, cum The register of birth and deaths,Taluk office Sandur** ...Respondent.

**TO WHOMSOEVER IT MAY CONCERN NOTICE**

**Whereas above named Petitioners herein have instituted above petition under section 13(3) of Birth and Deaths Act 1969 against the respondent for the purpose of seeking death certificate of death of The deceased Dodda Eranna S/o Vaddara Eranna and Eramma and H/o Sathyakka , who was died on 27-07-1993 at petitioners house at Hosadaroji village Sandur.**

**Any person interested are hereby summonsed to appear before this court in person or by pleader duly instructed aired able to answer all material questions relating to the petition on 04-08-2026 at 11-00 a.m. before this court.**

**In default of your appearance on the date/day of above petition will be heard and determined as 'ex-parte'.**

**Given under my hand and seal of the court on this 24th day of June-2026.**

**By order of the court**
**Sd/-Sirasthedhar.**
**Civil judge & JMFC Court Sandur.**
**Sd/-(Huchappa.K)**
**Advocate Sandur.**

**IN THE COURT OF THE CIVIL JUDGE CUM JMFC AT SANDUR**
**CRL.M.C.NO. 748/2026**

**BETWEEN:Sri. V. Veeresh and another** ....Petitioners.
**-AND-**
**The Tahasildar, cum The register of birth and deaths,Taluk office Sandur** .....Respondent.
**To,**
**The Tahasildar, cum The register of birth and deaths,Taluk office Sandur** ...Respondent.

**TO WHOMSOEVER IT MAY CONCERN NOTICE**

**Whereas above named Petitioners herein have instituted above petition under section 13(3) of Birth and Deaths Act 1969 against the respondent for the purpose of seeking death certificate of death of The deceased Eramma W/O Late. Vaddara Eranna who was died on 07-09-1979 at petitioners house at Hosadaroji village Sandur. Any person interested are hereby summonsed to appear before this court in person or by pleader duly instructed aired able to answer all material questions relating to the petition on 04-08-2026 at 11-00 a.m. before this court.**

**In default of your appearance on the date/day of above petition will be heard and determined as 'ex-parte'.**

**Given under my hand and seal of the court on this 24th day of June-2026.**

**By order of the court**
**Sd/-Sirasthedhar.**
**Civil judge & JMFC Court Sandur.**
**Sd/-(Huchappa.K)**
**Advocate Sandur.**

ಕ್ರಿ.ಮಿ. ನಂ.:684/2026
ಮಾನ್ಯ 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಇವರ ನ್ಯಾಯಾಲಯದಲ್ಲಿ.

ಅರ್ಜಿದಾರರು:1)ರೇವಣಪ್ಪ ತಂದೆ ಬೀರಪ್ಪ ದೊಣಗಾರ, ವಯಾ:52ವರ್ಷ, ಉದ್ಯೋಗ: ಶೇತ್ಕರಿ ಕೆಲಸ ಸಾ॥ ಕವಲೆತ್ತು ತಾ॥ ರಾಣೇಬೆನ್ನೂರು ಜಿ॥ ಹಾವೇರಿ ಮತ್ತು ಇತರರು

ವಿರುದ್ಧ

ಎದುರುಗಾರರು:1)ಜನನ ಮರಣ ನೋಂದಣಾಧಿಕಾರಿಗಳು ಉಪ ತಹಸೀಲ್ದಾರ್ ಕುಪ್ಪೆಲೂರು ತಾ॥ ರಾಣೇಬೆನ್ನೂರು ಜಿ॥ ಹಾವೇರಿ

'ಇಶ್ತಿಯಾರ ನಾಮೆ'

ಇದರಲ್ಲಿ ಅರ್ಜಿದಾರರ ತಂದೆಯಾದ ಬೀರಪ್ಪ ತಂದೆ ಸಿದ್ದಪ್ಪ ದೊಣಗಾರ ಇವರು ದಿನಾಂಕ 09-11-2022 ರಂದು ರಾಣೇಬೆನ್ನೂರು ತಾಲೂ ಕ ಕವಲತ್ತು ಗ್ರಾಮದಲ್ಲಿ ಮರಣಹೊಂದಿರುತ್ತಾರೆ. ಇವರ ಮರಣದ ದಿನಾಂಕವನ್ನು ಎದುರುಗಾರ ಕಛೇರಿಯ ಜನನ-ಮರಣ ನೋಂದಣಿ ವಹಿಯಲ್ಲಿ ನೋಂದಣಿ ಮಾಡಿಕೊಳ್ಳುವುದು ಅತೀ ಅವಶ್ಯ ಇದ್ದು ಇದರ ಬಗ್ಗೆ ಸಾರ್ವಜನಿಕರ ತಂಟೆ ವ ತಕರಾರು ಇದ್ದಲ್ಲಿ ದಿನಾಂಕ:27-7-2026ರಂದು ಬೆಳಿಗ್ಗೆ 10-30 ಗಂಟೆಗೆ ಮಾನ್ಯ ನ್ಯಾಯಾಲಯದಲ್ಲಿ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ಮಾನ್ಯ ನ್ಯಾಯಾಲಯದವರು ಮುಂದಿನ ಆದೇಶ ಮಾಡುತ್ತಾರೆ ಅಂತಾ ಕೊಟ್ಟ ಸಾರ್ವಜನಿಕ ತಿಳುವಳಿಕೆ ನೋಟೀಸು

ಈ ಹೊತ್ತು ನ್ಯಾಯಾಲಯದ ಶೀಲು ವ ಮೋಹರು ಹಾಕಿ 25-6-2026 ಕೊಡಲ್ಪಟ್ಟಿದೆ
ಸ್ಥಳ: ರಾಣೇಬೆನ್ನೂರು
ದಿನಾಂಕ: 25-06-2026

ನ್ಯಾಯಾಲಯದ ಆದೇಶ ಮೇರೆಗೆ
ಸಹಿ/-ಶಿರಸ್ತೇದಾರರು, ಮಾನ್ಯ 1ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ವ ಜೆ.ಎಂ.ಎಫ್.ಸಿ.ರಾಣೇಬೆನ್ನೂರು
ಸದರಿಯವರ ಪರಿಚಯವಿದೆ
ಸಹಿ/- ಶ್ರೀ ಐ.ಬಿ ರೇವಣಸಿದ್ದಪ್ಪ

ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಂಕೋಲಾ,ಅಂಕೋಲಾದಲ್ಲಿ
ಕ್ರಿಮಿನಲ್ ಮಿಸಲೇನಿಸ್ ಸಂಖ್ಯೆ:49/2026
ಶ್ರೀಮುಕುಂದ ಹನುಮಾ ಗೌಡ,ಪ್ರಾಯ 80 ವರ್ಷ, ಉದ್ಯೋಗ:ರೈತಾಬಿ, ಸಾಕಿನ್: ಮುದ್ರಾಣಿ, ಬೆಳಂಬಾರ, ತಾಲೂಕ :ಅಂಕೋಲಾ, ಉ.ಕ. ಜಿಲ್ಲೆ ........ಅರ್ಜಿದಾರರು

ವಿರುದ್ಧ

ಮಾನ್ಯ ತಹಶಿಲ್ದಾರರು ಅಂಕೋಲಾ ಮತ್ತು ಜನನ ಮತ್ತುಮರಣಗಳ ನೋಂದಣಾಧಿಕಾರಿಗಳು ...... ಎದುರುದಾರರು

ಈ ಮೂಲಕ ತಿಳಿಸುವುದೇನೆಂದರೆ,

ಈ ಪ್ರಕರಣದಲ್ಲಿ ಅರ್ಜಿದಾರರ ತಂದೆ ಹನುಮಾ ಬೀರಾ ಗೌಡ ಇವರು ದಿನಾಂಕ:10-09-1923 ರಂದು ಅಂಕೋಲಾ ತಾಲೂಕಿನ ಬೆಳಂಬಾರ ಗ್ರಾಮದ ಅರ್ಜಿದಾರರ ಮನೆಯಲ್ಲಿ ಅನಾರೋಗ್ಯದಿಂದ ಮರಣಪಟ್ಟಿದ್ದು ಮೃತರ ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ಕ್ರಿಮಿನಲ್ ಮಿಸಲೆನಿಸ್ ನಂ. 49/2025 ಪ್ರಕರಣವನ್ನು ಅಂಕೋಲಾದ ಜೆ.ಎಮ್.ಎಫ್.ಸಿ ನ್ಯಾಯಾಲಯ ಅಂಕೋಲಾದಲ್ಲಿ ದಿನಾಂಕ:13-03-2026 ರಂದು ದಾಖಲುಪಡಿಸಿದ್ದು ಇರುತ್ತದೆ. ಈ ಬಗ್ಗೆ ಮೃತರ ಯಾರಾದರೂ ವಾರಸುದಾರರು ಆಕ್ಷೇಪಿಸುವುದಿದ್ದಲ್ಲಿ ದಿನಾಂಕ30-06-2026ರಂದು ಸಮಯ ಬೆಳಿಗ್ಗೆ11=00ಗಂಟೆಗೆ ಸ್ವತಹ ವ ತಮ್ಮ ನ್ಯಾಯವಾದಿಗಳ ಮೂಲಕ ಈ ನ್ಯಾಯಾಲಯದಲ್ಲಿ ಹಾಜರಿರತಕ್ಕದ್ದು.

ಮಾನ್ಯ ನ್ಯಾಯಾಲಯದ ಆದೇಶದ ಅನ್ವಯ ನನ್ನ ಸಹಿ ಮತ್ತು ಕೋರ್ಟಿನ ಮುದ್ರೆಯೊಂದಿಗೆ ದಿನಾಂಕ 17/6/26 ರಂದು ನೀಡಲಾಗಿದೆ.

ಕೋರ್ಟ ಆದೇಶದ ಮೆರೆಗೆ
ಸಹಿ/-ಶಿರಸೇದಾರರು(ಆಡಳಿತ),ಸಿವಿಲ್ ಜಡ್ಜ್& ಜೆ.ಎಮ್.ಎಫ್.ಸಿ ನ್ಯಾಯಾಲಯ ಅಂಕೋಲಾ
ಬಿ.ಡಿ.ನಾಯ್ಕ, ಅರ್ಜಿದಾರ ಪರ ವಕೀಲರು

ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಂಕೋಲಾ, ಅಂಕೋಲಾದಲ್ಲಿ
ಕ್ರಿಮಿನಲ್ ಮಿಸಲೇನಿಸ್ ಸಂಖ್ಯೆ :55/2026
ಶ್ರೀ ದೇವಕಿರಾಮ ಗೋಪಾಲಕೃಷ್ಣ, ಪ್ರಾಯ 51 ವರ್ಷ,ಉದ್ಯೋಗ:ಖಾಸಗಿನೌಕರಿ, ಸಾಕಿನ್: ಸಹಕಾರನಗರ,ಬೆಂಗಳೂರು ಉತ್ತರ,ಬೆಂಗಳೂರು. ...ಅರ್ಜಿದಾರರು

ವಿರುದ್ಧ

ಮಾನ್ಯ ಮುಖ್ಯಾಧಿಕಾರಿಗಳು ಪುರಸಭೆ ಅಂಕೋಲಾ ಮತ್ತು ಜನನ ಮತ್ತು ಮರಣಗಳ ನೋಂದಣಾಧಿಕಾರಿಗಳು .......ಎದುರುದಾರರು

ಈ ಮೂಲಕ ತಿಳಿಸುವುದೇನೆಂದೆ,

ಈ ಪ್ರಕರಣದಲ್ಲಿ ಅರ್ಜಿದಾರರ ತಂದೆ ಆದ ಗಂಗಾಧರ ರಾಮಚಂದ್ರ ನಾಯ್ಕ ಇವರು ದಿನಾಂಕ:19-01-2007 ರಂದು ಅಂಕೋಲಾ ತಾಲೂಕಿನ ಅಂಕೋಲಾ ಪುರಸಭೆ ವ್ಯಾಪ್ತಿಯ ಶೆಡಗೇರಿ ಗ್ರಾಮದಲ್ಲಿ ಇರುವ ಅರ್ಜಿದಾರರ ಮನೆಯಲ್ಲಿ ಅನಾರೋಗ್ಯದಿಂದ ಮರಣಪಟ್ಟಿದ್ದು ಮೃತರ ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ಕ್ರಿಮಿನಲ್ ಮಿಸಲೆನಿಸ್ ನಂ.55/2026 ಪ್ರಕರಣವನ್ನು ಅಂಕೋಲಾದ ಜೆ.ಎಮ್.ಎಫ್.ಸಿ ನ್ಯಾಯಾಲಯ ಅಂಕೋಲಾದಲ್ಲಿ ದಿನಾಂಕ 03-11-2025 ರಂದು ದಾಖಲುಪಡಿಸಿದ್ದು ಇರುತ್ತದೆ. ಈ ಬಗ್ಗೆ ಮೃತರ ಯಾರಾದರೂ ವಾರಸುದಾರರು ಆಕ್ಷೇಪಿಸುವುದಿದ್ದಲ್ಲಿ ದಿನಾಂಕ 30-06-2026 ರಂದು ಸಮಯ ಬೆಳಿಗ್ಗೆ 11=00 ಗಂಟೆಗೆ ಸ್ವತಹ ವ ತಮ್ಮ ನ್ಯಾಯವಾದಿಗಳ ಮೂಲಕ ಈ ನ್ಯಾಯಾಲಯದಲ್ಲಿ ಹಾಜರಿರತಕ್ಕದ್ದು.

ಮಾನ್ಯ ನ್ಯಾಯಾಲಯದ ಆದೇಶದ ಅನ್ವಯ ನನ್ನ ಸಹಿ ಮತ್ತು ಕೋರ್ಟಿನ ಮುದ್ರೆಯೊಂದಿಗೆ ದಿನಾಂಕ 17/6/26 ರಂದು ನೀಡಲಾಗಿದೆ.

ಕೋರ್ಟ ಆದೇಶದ ಮೆರೆಗೆ
ಸಹಿ/-ಶಿರಸೇದಾರರು(ಆಡಳಿತ),ಸಿವಿಲ್ ಜಡ್ಜ್& ಜೆ.ಎಮ್.ಎಫ್.ಸಿ ನ್ಯಾಯಾಲಯ ಅಂಕೋಲಾ
ಬಿ.ಡಿ.ನಾಯ್ಕ, ಅರ್ಜಿದಾರ ಪರ ವಕೀಲರು

ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಅಂಕೋಲಾ,ಅಂಕೋಲಾದಲ್ಲಿ
ಕ್ರಿಮಿನಲ್ ಮಿಸಲೇನಿಸ್ ಸಂಖ್ಯೆ :84/2026
ಶ್ರೀಮತಿ ಸಣ್ಣು ಪೊಕ್ಕ ಗೌಡ, ಪ್ರಾಯ 56ವರ್ಷ, ಉದ್ಯೋಗ :ರೈತಾಬಿ, ಸಾಕಿನ್ :ಉಳುವರೆ, ತಾಲೂಕ :ಅಂಕೋಲಾ, ಉತ್ತರಕನ್ನಡ ಜಿಲ್ಲೆ. ..........ಅರ್ಜಿದಾರರು

ವಿರುದ್ಧ

ಮಾನ್ಯ ತಹಶಿಲ್ದಾರರು ಅಂಕೋಲಾ ಮತ್ತು ಜನನ ಮತ್ತುಮರಣಗಳ ನೋಂದಣಾಧಿಕಾರಿಗಳು ...ಎದುರುದಾರರು

ಈ ಮೂಲಕ ತಿಳಿಸುವುದೇನೆಂದರೆ,

ಈ ಪ್ರಕರಣದಲ್ಲಿ ಅರ್ಜಿದಾರರ ಬಾವ (ಗಂಡನ ಸಹೋದರ) ನಾದ ಸೋಮಣ್ಣ ದೊಳ್ಳಾ ಗೌಡ ಇವನು ದಿನಾಂಕ:22-11-2023ರಂದು ಅಂಕೋಲಾ ತಾಲೂಕಿನ ಉಳುವರೆ ಗ್ರಾಮದ ಅರ್ಜಿದಾರರ ಮನೆಯಲ್ಲಿ ಅನಾರೋಗ್ಯದಿಂದ ಮರಣ ಪಟ್ಟಿದ್ದು ಮೃತರ ಮರಣ ಪ್ರಮಾಣ ಪತ್ರ ಪಡೆಯುವ ಸಲುವಾಗಿ ಕ್ರಿಮಿನಲ್ ಮಿಲೆನಿಸ್ ನಂ.84/2026 ಪ್ರಕರಣವನ್ನು ಅಂಕೋಲಾದ ಜೆ.ಎಮ್.ಎಫ್.ಸಿ ನ್ಯಾಯಾಲಯ ಅಂಕೋಲಾ ದಲ್ಲಿ ದಿನಾಂಕ 06-06-2026ರಂದು ದಾಖಲು ಪಡಿಸಿದ್ದು ಇರುತ್ತದೆ. ಈ ಬಗ್ಗೆ ಮೃತರ ಯಾರಾ ದರೂ ವಾರಸುದಾರರು ಆಕ್ಷೇಪಿಸುವುದಿದ್ದಲ್ಲಿ ದಿನಾಂಕ 18-07-2026 ರಂದು ಸಮಯ ಬೆಳಿಗ್ಗೆ 11=00 ಗಂಟೆಗೆ ಸ್ವತಹ ವ ತಮ್ಮ ನ್ಯಾಯವಾದಿಗಳ ಮೂಲಕ ಈ ನ್ಯಾಯಾಲಯ ದಲ್ಲಿ ಹಾಜರಿರತಕ್ಕದ್ದು.

ಮಾನ್ಯ ನ್ಯಾಯಾಲಯದ ಆದೇಶದ ಅನ್ವಯ ನನ್ನ ಸಹಿ ಮತ್ತು ಕೋರ್ಟಿನ ಮುದ್ರೆಯೊಂದಿಗೆ ದಿನಾಂಕ 18/6/26ರಂದು ನೀಡಲಾಗಿದೆ.

ಕೋರ್ಟ ಆದೇಶದ ಮೆರೆಗೆ
ಸಹಿ/-ಶಿರಸೇದಾರರು(ಆಡಳಿತ),ಸಿವಿಲ್ ಜಡ್ಜ್& ಜೆ.ಎಮ್.ಎಫ್.ಸಿ ನ್ಯಾಯಾಲಯ ಅಂಕೋಲಾ
ಬಿ.ಡಿ.ನಾಯ್ಕ, ಅರ್ಜಿದಾರ ಪರ ವಕೀಲರು

# ಸಾರ್ವಜನಿಕ ಸೇವೆಯೇ ಬಿಜೆಪಿ ಸಂಕಲ್ಪ: ಸುರೇಶಕುಮಾರ




•**ಗದಗ:** ಭಾರತೀಯ ಜನತಾ ಪಾರ್ಟಿ ಜಿಲ್ಲಾ ವತಿಯಿಂದ ನಗರದ ವಿಮಲರೆಸಾರ್ಟ್‌ನಲ್ಲಿಜಿಲ್ಲಾಮಟ್ಟದ ಪಂ.ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾಭಿಯಾನದ ಸಮಾರೋಪ ಸಭೆ ಜರುಗಿತು.

ಶಾಸಕ ಸುರೇಶಕುಮಾರ ಮಾತನಾಡಿ, ಭಾರತೀಯ ಜನತಾ ಪಾರ್ಟಿ ಸಾರ್ವಜನಿಕರ ಸೇವೆಯೇ ಸಂಕಲ್ಪವಾಗಿ ಕಾರ್ಯನಿರ್ವಹಿಸುತ್ತಿದ್ದು, ನಮ್ಮ ಪ್ರಧಾನಮಂತ್ರಿಗಳುಸಾಕಷ್ಟು ಯೋಜನೆಗಳನ್ನು ನೀಡಿದ್ದಾರೆ. 4 ಕೋಟಿಗಿಂತ ಹೆಚ್ಚು ಜನ ಪ್ರಧಾನ ಮಂತ್ರಿ ಆವಾಸ್ ಯೋಜನೆ, 17000 ಸಾವಿರ ಕೋಟಿ ಪ್ರಧಾನ ಮಂತ್ರಿ ಸ್ವನಿಧಿ ಯೋಜನೆ, 25 ಕೋಟಿ ಜನರನ್ನು ಬಡತನದಿಂದ ಹೊರತಂದು, 12 ಕೋಟಿ ಶೌಚಾಲಯಗಳನ್ನು ನಿರ್ಮಿಸಿದ್ದು ಮುದ್ರಾ ಯೋಜನೆಯಿಂದ 57 ಕೋಟಿ ಗೂ ಹೆಚ್ಚುಸಾಲಗಳ ಸೌಲಭ್ಯ ನೀಡಿದ್ದು ಇನ್ನೂ ಹಲವಾರು ಯೋಜನೆಗಳನ್ನು ದೇಶದ ಜನರಿಗೆ ನೀಡಿದ್ದು ಹಾಗೂ ಜಾಗತಿಕ ಉದ್ವಿಗ್ನತೆಗಳು, ವ್ಯಾಪಾರ ಅಡೆತಡೆಗಳುಮತ್ತುಬದಲಾಗುತ್ತಿರುವ ಪೂರೈಕೆ ಸರಣಿಗಳ ನಡುವೆ, ಭಾರತವು ಕಾರ್ಯತಂತ್ರದ ಸ್ವಾಯತ್ತತೆ, ಶಾಂತಿ ಮತ್ತು ಎಲ್ಲರನ್ನೂ ಒಳಗೊಂಡ ಬೆಳವಣಿಗೆಯ ಸಂಕೇತವಾಗಿ ಹೊರಹೊಮ್ಮಿದೆ ಎಂದರು.

ಜಿಲ್ಲಾಧ್ಯಕ್ಷ ರಾಜು ಕುರಡಗಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿಜಿ ಎಂದಿಗೂ ಕಠಿಣ ಪರಿಶ್ರಮದಿಂದ ಆಯಾಸಗೊಳ್ಳದೆ, ಕಠಿಣ ಪರಿಶ್ರಮವು ಬಡ ಜನರ ಮುಖದಲ್ಲಿ ತರುವನಗುವನ್ನು ನೋಡಿ ತೃಪ್ತಿಯಲ್ಲಿ ಭಾವನೆಯಲ್ಲಿರುವರು. ವಿಕಸಿತ ಭಾರತಕ್ಕಾಗಿ ಭವಿಷ್ಯದ ಕೃಷಿ ಪರಿಸರ ವ್ಯವಸ್ಥೆ ನಿರ್ಮಿಸಲು ಒಟ್ಟಾಗಿ ಕೆಲಸ ಮಾಡಬೇಕು ನಮ್ಮ ರೈತರ ಸಾಂಪ್ರದಾಯಿಕ ಜ್ಞಾನ, ವಿಜ್ಞಾನದ ಶಕ್ತಿ ಮತ್ತು ಸರ್ಕಾರದ ಬೆಂಬಲ ಒಟ್ಟಿಗೆ ಸೇರಿದಾಗ, ನಮ್ಮ ರೈತರು ನಮ್ಮ ಅನ್ನದಾತರಾಗುವುದು ಮಾತ್ರವಲ್ಲದೆ, ನಮ್ಮ ಭೂಮಿ ತಾಯಿಯೂ ಸಹ ಆರೋಗ್ಯ ಕರವಾಗಿರುತ್ತದೆ ಎನ್ನುವ ಭಾವನೆ ಇಟ್ಟುಕೊಂಡಿರುವರು ಎಂದರು. ರಾಜ್ಯಸಭಾ ಸದಸ್ಯ ಮಾ. ನಾಗರಾಜ, ಶಾಸಕ ಸಿ.ಸಿ.ಪಾಟೀಲ, ಶಾಸಕ ಡಾ.ಚಂದ್ರು ಲಮಾಣಿ, ವಿಧಾನ ಪರಿಷತ್ ಸದಸ್ಯ ಎಸ್.ವಿ.ಸಂಕನೂರ, ಮಾಜಿ ಸಚಿವ ಕಳಕಪ್ಪ ಬಂಡಿ, ಪ್ರಶಿಕ್ಷಣ ರಾಜ್ಯ ಸಂಚಾಲಕ ನಾಗಮೂರ್ತಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಿಂಗರಾಜ ಪಾಟೀಲ, ಆರ್.ಕೆ.ಚವ್ಹಾಣ, ಫಕೀರೇಶ ರಟ್ಟಿಹಳ್ಳಿ ಹಾಗು ಬಿಜೆಪಿ ಪ್ರಶಿಕ್ಷಣಾರ್ಥಿಗಳು ಮತ್ತು ಪ್ರಬಂಧಕರು ಉಪಸ್ಥಿತರಿದ್ದರು.

# ಬಹಿರಂಗ ಚರ್ಚೆಗೆ ಬಿಜೆಪಿಗೆ ಆಹ್ವಾನ

•**ಹುಬ್ಬಳ್ಳಿ:** ಬಿಹಾರದಿಂದ ಆರಂಭವಾಗಿರುವ ಎಸ್‌ಐಆರ್ ಪ್ರಕ್ರಿಯೆ ಈವರೆಗೆ 13 ರಾಜ್ಯ ಕೇಂದ್ರಾಡಳಿತ ಪ್ರದೇಶಗಳಲ್ಲಿ ನಡೆದಿದ್ದು, ಸುಮಾರು ಆರು ಕೋಟಿ ಹೆಸರುಗಳನ್ನು ಮತದಾರರ ಪಟ್ಟಿಯಿಂದ ತೆಗೆದು ಹಾಕಿದೆ. ಇದನ್ನು ಸಮರ್ಥಿಸಿಕೊಳ್ಳುತ್ತಿರುವ ಬಿಜೆಪಿಗೆ ಜಾಗೃತ ಕರ್ನಾಟಕವು ಜೂನ್ 30ರಂದು ಸಂಜೆ 4ಕ್ಕೆ ಬೆಂಗಳೂರಿನ ಗಾಂಧಿ ಭವನದ ಬಾಪು ಸಭಾಂಗಣದಲ್ಲಿ ಬಹಿರಂಗ ಚರ್ಚೆಗೆ ಆಹ್ವಾನಿಸಿದೆ ಎಂದು ಜಾಗೃತ ಕರ್ನಾಟಕದ ಕಾರ್ಯಕಾರಿ ಸಮಿತಿ ಸದಸ್ಯ ಸಿ.ಜಿ.ಪಾಟೀಲ ಹೇಳಿದರು.

ನಗರದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಒಂದೆಡೆ ಜಾಗೃತ ಕರ್ನಾಟಕ ಮತ್ತು ರಾಜ್ಯದ ಹಲವು ಸಮುದಾಯಗಳು, ಸಂಘಟನೆಗಳು ಮತ್ತು ಪಕ್ಷಗಳು ಎಸ್‌ಐಆರ್‌ನ್ನು ವಿರೋಧಿಸುತ್ತಿದ್ದರೆ, ಬಿಜೆಪಿ ಮಾತ್ರ ಸಮರ್ಥಿಸುತ್ತಿದೆ. ಈ ಹಿನ್ನೆಲೆಯಲ್ಲಿ ಪರಸ್ಪರ ವಿರುದ್ಧ ಅಭಿಪ್ರಾಯ ಇರುವ ಎರಡು ಕಡೆಯವರನ್ನು ಮುಖಾಮುಖಿಯಾಗಿ ತಮ್ಮ ಅನಿಸಿಕೆಗಳನ್ನು ಮುಕ್ತವಾಗಿ ಚರ್ಚಿಸುವುದು ಅಗತ್ಯವಾಗಿದೆ ಎಂದರು.

ಯಾವುದೇ ಪಕ್ಷಪಾತವಿಲ್ಲದೇ ಬಹಿರಂಗ ಚರ್ಚೆ ನಡೆಸುವ ಉದ್ದೇಶದಿಂದ ಚರ್ಚೆಯನ್ನು ಆನ್‌ಲೈನ್ ಮೂಲಕ ಲೈವ್ ಮಾಡಲು ಉದ್ದೇಶಿಸಲಾಗಿದೆ. ಹೀಗಾಗಿ ಬಿಜೆಪಿ ರಾಜ್ಯಾಧ್ಯಕ್ಷರು ಅಥವಾ ವಿರೋಧ ಪಕ್ಷದ ನಾಯಕರು ಈ ಬಹಿರಂಗ ಚರ್ಚೆಯಲ್ಲಿ ಮುಕ್ತವಾಗಿ ಪಾಲ್ಗೊಳ್ಳಬೇಕು. ರಾಜ್ಯದ ಜನತೆಗೆ ಮತದಾನದ ಹಕ್ಕಿನ ರಕ್ಷಣೆಯ ಅಭಯ ನೀಡಬೇಕು ಎಂದು ಒತ್ತಾಯಿಸಿದರು.

ಚಿಂತಾಮಣಿ ಸಿಂದಗಿ, ಲಲಿತಾ ಹೆಗಡೆ, ಅಭಿಷೇಕ ರಾಯಕೊಪ್ಪ ಕುಮಾರಣ್ಣ ಪಾಟೀಲ ಇದ್ದರು.

# ಆರೆಸ್ಸೆಸ್ ನಿಷೇಧಿಸುವಂತೆ ಡಿಎಸ್‌ಎಸ್ ಪ್ರತಿಭಟನೆ

•**ಕಲಬುರಗಿ:** ಆರೆಸ್ಸೆಸ್ ಸಂಘಟನೆಯನ್ನು ನಿಷೇಧಿಸಬೇಕು ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಜೀವ ಬೆದರಿಕೆ ಹಾಕಿರುವ ಬಿಜೆಪಿ ಸಂಸದ ರಮೇಶ ಜಿಗಜಿಣಗಿ ಸೇರಿದಂತೆ ವಿವಿಧ ಬಿಜೆಪಿ ಮುಖಂಡರನ್ನು ಬಂಧಿಸಬೇಕು ಎಂದು ಆಗ್ರಹಿಸಿ ದಲಿತ ಸಂಘಟನೆಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ ಗುರುವಾರ ನಗರದಲ್ಲಿ ಪ್ರತಿಭಟನೆ ನಡೆಯಿತು.

ಕಲಬುರಗಿಯ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಜಮಾಯಿಸಿದ ನೂರಾರು ಪ್ರತಿಭಟನಾಕಾರರು, ರಸ್ತೆ ತಡೆ ನಡೆಸಿ ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಸಂಸದ ರಮೇಶ ಜಿಗಜಿಣಗಿ ಹಾಗೂ ಆರ್‌ಎಸ್‌ಎಸ್ ವಿರುದ್ಧ ಘೋಷಣೆಗಳನ್ನು ಕೂಗಿದ ಮುಖಂಡರು, ರಸ್ತೆಯಲ್ಲೇ ಮಾನವ ಸರಪಳಿ ನಿರ್ಮಿಸಿ ಸಂಚಾರಕ್ಕೆ ತಡೆ ಒಡ್ಡಿದರು. ತಮಿಳುನಾಡು ಮಾದರಿಯಲ್ಲಿಯೇ ಕರ್ನಾಟಕದಲ್ಲೂ ಆರ್‌ಎಸ್‌ಎಸ್ ಸಂಘಟನೆಯ ಚಟುವಟಿಕೆಗಳನ್ನು ಸಂಪೂರ್ಣವಾಗಿ ಬ್ಯಾನ್ ಮಾಡಬೇಕು ಎಂದು ಒತ್ತಾಯಿಸಲಾಯಿತು. ಪ್ರಗತಿಪರ ಮುಖಂಡ ಸುನೀಲ ಮಾನಪಡೆ ಮತ್ತಿತರರು ಇದ್ದರು.

## ಯುವತಿ ನಾಪತ್ತೆ



•**ಅಂಕೋಲಾ:** ಯುವತಿಯೋರ್ವಳು ಮನೆಯಲ್ಲಿ ಯಾರಿಗೂ ಹೇಳದೆ ಮನೆಯಿಂದ ಎಲ್ಲೋ ಹೋಗಿ ಕಾಣೆಯಾಗಿರುವ ಕುರಿತಾಗಿ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ತಾಲೂಕಿನ ಗಾಬೀತವಾಡ ಕೇಣಿ ನಿವಾಸಿ ಸಾಕ್ಷಿ ಸೂರ್ಯಕಾಂತ ಚೋಡನಕರ (19) ಕಾಣೆಯಾಗಿರುವ ಯುವತಿಯಾಗಿದ್ದು, ಪಟ್ಟಣದ ಬಟ್ಟೆ ಅಂಗಡಿಯೊಂದರಲ್ಲಿ ಒಂದು ತಿಂಗಳು ಕೆಲಸ ಮಾಡಿದ್ದ ಈಕೆ ಕೆಲಸ ಬಿಟ್ಟು ಮನೆಯಲ್ಲೇ ಇದ್ದಳು ಎನ್ನಲಾಗುತ್ತಿದ್ದು, ಜೂನ್ 23ರಂದು ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನದ 3 ಗಂಟೆ ನಡುವಿನ ಅವಧಿಯಲ್ಲಿ ಮನೆಯಲ್ಲಿ ಯಾರಿಗೂ ತಿಳಿಸದೇ ಎಲ್ಲಿಯೋ ಹೋಗಿ ಮನೆಗೆ ಮರಳಿ ಬರದೇ ಕಾಣೆಯಾಗಿರುವುದಾಗಿ ಆಕೆಯ ತಾಯಿ ದೂರು ದಾಖಲಿಸಿದ್ದಾರೆ. ಯುವತಿ ಕನ್ನಡ ಕೊಂಕಣಿ ಭಾಷೆ ಬಲ್ಲವಳಾಗಿದ್ದು, ಗೋಧಿ ಮೈಬಣ್ಣ, ದುಂಡನೆಯ ಮುಖ, ಸದೃಢ ಮೈಕಟ್ಟು ಹೊಂದಿದ್ದಾಳೆ. ಯುವತಿಯ ಕುರಿತಂತೆ ಯಾವುದೇ ಮಾಹಿತಿ ಲಭ್ಯವಾದಲ್ಲಿ ಅಂಕೋಲಾ ಪೊಲೀಸ್ ಠಾಣೆ ಸಂಪರ್ಕಿಸಲು ಕೋರಲಾಗಿದೆ.

## ಯುವತಿ ಕಾಣೆ



•**ಅಂಕೋಲಾ:** ತಾಯಿಗೆ ಮಾತ್ರೆ ತರುವುದಾಗಿ ಶಿರಸಿಯ ಆಸ್ಪತ್ರೆಗೆ ತೆರಳಿದ್ದ ಯುವತಿ ಮನೆಗೆ ಬರದೆ ಕಾಣೆಯಾಗಿರುವ ಕುರಿತು ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ತಾಲೂಕಿನ ಕುಂಟಕಣಿ ಅಸ್ಲಗಿ ನಿವಾಸಿ ಶ್ರೀದೇವಿ ಈಶ್ವರ ಗೌಡ(18) ಕಾಣೆಯಾಗಿರುವ ಯುವತಿಯಾಗಿದ್ದು ಜೂನ್ 24ರಂದು ಬೆಳಗ್ಗೆ 8 ಗಂಟೆಗೆ ಶಿರಸಿಯ ಟಿ.ಎಸ್.ಎಸ್ ಆಸ್ಪತ್ರೆಗೆ ಹೋಗಿ ತಾಯಿಯ ಔಷಧಿ ತರುವುದಾಗಿ ಮನೆಯಲ್ಲಿ ಹೇಳಿ ಹೋದವಳು ಮರಳಿ ಮನೆಗೆ ಬಾರದ ಕಾರಣ ಆಕೆಯ ಅಣ್ಣ ಅಂಕೋಲಾ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾನೆ. ಗೋಧಿ ಮೈಬಣ್ಣ ಉದ್ದನೆಯ ಮುಖ, ಸಾಧಾರಣ ಮೈಕಟ್ಟು ಹೊಂದಿರುವ ಯುವತಿ ಕನ್ನಡ ಭಾಷೆ ಬಲ್ಲವಳಾಗಿದ್ದು 5.3ಅಡಿ ಎತ್ತರ ಇರುವ ಆಕೆ ಮನೆಯಿಂದ ಹೋಗುವಾಗ ಹೂವಿನ ಚಿತ್ರ ಇರುವ ಬಿಳಿ ಬಣ್ಣದ ಟಾಪ್, ಕಪ್ಪು ಪ್ಯಾಂಟ್ ಧರಿಸಿದ್ದರು. ಯುವತಿಯ ಕುರಿತಂತೆ ಮಾಹಿತಿ ಕಂಡು ಬಂದಲ್ಲಿ ಅಂಕೋಲಾ ಪೊಲೀಸ್ ಠಾಣೆಗೆ ಸಂಪರ್ಕಿಸಲು ಕೋರಲಾಗಿದೆ.

## ಜೀವ ಬೆದರಿಕೆ

•**ಹುಬ್ಬಳ್ಳಿ:** ಹಳೇ ವೈಷಮ್ಯದ ಹಿನ್ನೆಲೆ ಮನೆಗೆ ನುಗ್ಗಿ ಜೀವ ಬೆದರಿಕೆ ಹಾಕಿದ್ದಲ್ಲದೆ, ದೇವರಕೋಣೆಯಲ್ಲಿಟ್ಟಿದ್ದ 8 ಲಕ್ಷರೂ. ಮೌಲ್ಯದ 80 ಗ್ರಾಂ ಬಂಗಾರದ ಬಳೆಗಳನ್ನು ತೆಗೆದುಕೊಂಡು ಹೋದ ಆರೋಪದ ಮೇಲೆ ರೋಹನ್ ಬಿ. ಎಂಬಾತನ ವಿರುದ್ಧ ಪ್ರಕರಣ ದಾಖಲಾಗಿದೆ. ರೋಹನ್ ಮಹಿಳೆಯ ಮನೆಗೆ ಹೋಗಿ ನನ್ನ ವಿರುದ್ಧ ಸಾಕ್ಷಿ ಹೇಳುತ್ತಿಯಾ? ನಿನಗೆ ಒಂದು ಗತಿ ಕಾಣಿಸುತ್ತೇನೆ. ನಾನು ಕೋರ್ಟ್‌ಗೆ ಓಡಾಡಿ ಹಣ ಖರ್ಚ ಆಗಿವೆ. ಅವನ್ನು ಕೊಡು ಇಲ್ಲ ಬಂಗಾರ ಕೊಡು ಎಂದು ಬೆದರಿಕೆ ಹಾಕಿದಲ್ಲದೆ, ದೇವರ ಕೋಣೆಯಲ್ಲಿದ್ದ ಆಭರಣ ತೆಗೆದುಕೊಂಡು ಹೋಗಿದ್ದಾನೆ ಎಂದು ರೂಪಾ ಎಂಬುವರು ಬೆಂಡಿಗೇರಿ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

## CHANGE OF NAME

I, **TANMAYI UDAPUDI** (Old Name) Resident of 1404, Amma Bagalkot Road, Lokapur, Mudhol, Bagalkot - 587122, have changed my name as **TANMAYI SHIVANAND UDAPUDI** (New Name) henceforth I will be called and recognized by new name for all future purposes, dated: 25/06/2026.

## CHANGE OF NAME

I, **INUSAHMAD JANGUBAI** (Old Name) Resident of E/98 Kasaba Galli Haliyal Karwar 581329 (address), have changed my name as **YUNUS AHAMED ABDUL REHAMAN JANGUBHAI** (New Name) henceforth I will be called and recognized by new name for all future purposes, dated: 25/06/2026.

## ಕಾವೇರಿ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಹೇಮಾವತಿ ನಾಲಾ ತನಿಖಾ ವಿಭಾಗ, ಹೆಬ್ಬೂರು
ತುಮಕೂರು ತಾಲ್ಲೂಕು ಮತ್ತು ಜಿಲ್ಲೆ ದೂರವಾಣಿ : 0816-2957008,
ಇ-ಮೇಲ್ : eehcidhebbur@gmail.com
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ : 07/2026-27 ದಿನಾಂಕ : 22-06-2026

### ಟೆಂಡರ್ ಪ್ರಕಟಣೆ

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಅಭಿಯಂತರರು ಹೇಮಾವತಿ ನಾಲಾ ತನಿಖಾ ವಿಭಾಗ, ಕಾ.ನೀ.ನಿ.ನಿ., ಹೆಬ್ಬೂರು ರವರು ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ 07 ಕಾಮಗಾರಿಗಳಿಗೆ ಅಲ್ಪಾವಧಿ ಟೆಂಡರ್‌ನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟನ್ ಕೀ ಆಧಾರದ ಮೇಲೆ ಆಹ್ವಾನಿಸಲಾಗಿದೆ.

ಟೆಂಡರ್ ಸಲ್ಲಿಸಲು ಪ್ರಾರಂಭಿಕ ದಿನಾಂಕ : 24-06-2026
ಮತ್ತು ಅಂತಿಮ ದಿನಾಂಕ : 04-07-2026.

ಹೆಚ್ಚಿನ ವಿವರಗಳನ್ನು ಈ ಕಛೇರಿಯಲ್ಲಿ ಹಾಗೂ ಅಂತರ್ಜಾಲದ ಮೂಲಕ ವೆಬ್‌ಸೈಟ್ ವಿಳಾಸ : www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್,
ಹೇಮಾವತಿ ನಾಲಾ ತನಿಖಾ ವಿಭಾಗ,
ಕಾ.ನೀ.ನಿ.ನಿ., ಹೆಬ್ಬೂರು.
ಡಿಐಪಿಆರ್/ತುಮಕೂರು/43/ಮಣಿಪಾಲ್/2026-27

## ಶುಕ್ರವಾರದ ಪಂದ್ಯಗಳು

ಟರ್ಕಿ-ಅಮೆರಿಕ (ಬೆಳಗ್ಗೆ 7:30)

ಪರಾಗ್ವೆ-ಆಸ್ಟ್ರೇಲಿಯಾ (ಬೆಳಗ್ಗೆ 7:30)

ನಾರ್ವೆ-ಫ್ರಾನ್ಸ್ (ಮಧ್ಯರಾತ್ರಿ 12:30)

ಸೆನೆಗಲ್-ಇರಾಕ್ (12:30)

## ಕಿರುಸುದ್ದಿ

### ಜೂ. ಶೂಟಿಂಗ್: ಬೆಳ್ಳಿಗೆ ಐಶ್ವರ್ಯ ಶೂಟ್

**ಹುಬ್ಬಳ್ಳಿ:** ಜರ್ಮನಿಯ ಶೂಲ್‌ನಲ್ಲಿ ನಡೆಯುತ್ತಿರುವ ವಿಶ್ವ ಜೂನಿಯರ್ ಶೂಟಿಂಗ್ ಚಾಂಪಿಯನ್‌ಶಿಪ್‌ನಲ್ಲಿ ಹುಬ್ಬಳ್ಳಿಯ ಹುಡುಗಿ ಐಶ್ವರ್ಯ ಬಾಲೆಹೊಸೂರ 50 ಎಂ ಫ್ರೀ ಪಿಸ್ತೂಲ್ ವಿಭಾಗದಲ್ಲಿ ಗುರುವಾರ ಬೆಳ್ಳಿ ಪದಕಕ್ಕೆ ಗುರಿಯಿಟ್ಟರು. 18 ವರ್ಷ ವಯಸ್ಸಿನ ಐಶ್ವರ್ಯ ಬಾಲೆಹೊಸೂರ(540.11)ಅಂಕ ಸಂಪಾಸಿದ್ದು, 540.12 ಅಂಕಗಳಿಸಿದ ರಷ್ಯಾದ ಸೋಫಿಯಾ ಅವರು ಚಿನ್ನ ಪದಕ ಹಾಗೂ ಮಂಗೋಲಿಯಾದ ಆರಿವುಝುಯ (533.4) ಅಂಕ ಪಡೆದು ಕಂಚು ಪದಕ ಪಡೆದಿದ್ದಾರೆ. ಹುಬ್ಬಳ್ಳಿಯ ಶೂಟಿಂಗ್ ಅಕಾಡೆಮಿಯಲ್ಲಿ ತರಬೇತಿ ಪಡೆದಿದ್ದಾರೆ. ತರಬೇತುದಾರ ಮಾಜಿ ಸೈನಿಕ ರವಿಚಂದ್ರ ಬಾಲೆಹೊಸೂರ ಅವರು ಐಶ್ವರ್ಯ ಅವರಿಗೆ ಮಾರ್ಗದರ್ಶನ ನೀಡಿದ್ದಾರೆ. ಈ ಕುರಿತಂತೆ ನನ್ನ ಮಗಳು ವಿಶ್ವ ಜೂನಿಯರ್ ಶೂಟಿಂಗ್‌ನಲ್ಲಿ ಬೆಳ್ಳಿ ಪದಕ ಪಡೆದಿದ್ದು, ತುಂಬ ಖುಷಿಯಾಗಿದೆ. ಮುಂದಿನ ಬಾರಿ ಚಿನ್ನ ಪಡೆಯುತ್ತಾಳೆ ಎಂಬ ವಿಶ್ವಾಸ ನನಗೆ ಇದೆ ಎಂದು ಐಶ್ವರ್ಯ ತಂದೆ ಹಾಗೂ ತರಬೇತುದಾರ ರವಿಚಂದ್ರ ಬಾಲೆಹೊಸೂರು ಅಭಿಪ್ರಾಯ ವ್ಯಕ್ತಪಡಿಸಿದರು.

### ಉತ್ತಮ ಮೊತ್ತದತ್ತ ಭಾರತ ಎ

**ಗಾಲೆ:** ಸಾಯಿ ಸುದರ್ಶನ್ (132), ಧ್ರುವ್ ಜುರೇಲ್(58★) ಮತ್ತು ಶೇಕ್ ರಶೀದ್(53★) ಅವರ ಬ್ಯಾಟಿಂಗ್‌ನೊಂದಿಗೆ ಭಾರತ ಎ ತಂಡವು ಶ್ರೀಲಂಕಾ ವಿರುದ್ಧ ನಡೆಯುತ್ತಿರುವ ಅನಧಿಕೃತ ಟೆಸ್ಟ್ ಪಂದ್ಯದಲ್ಲಿ ಉತ್ತಮ ಮೊತ್ತದತ್ತ ಸಾಗಿದೆ. ಮೊದಲ ದಿನ 86 ಓವರ್‌ಗಳಿಗೆ ಬ್ಯಾಟಿಂಗ್ ಮಾಡಿರುವ ಭಾರತ ಎ 4 ವಿಕೆಟ್ ನಷ್ಟಕ್ಕೆ 333 ರನ್ ಗಳಿಸಿ ಬ್ಯಾಟಿಂಗ್ ಉಳಿಸಿಕೊಂಡಿದೆ. ಧ್ರುವ್ ಮತ್ತು ರಶೀದ್ ಕ್ರೀಜ್‌ನಲ್ಲಿದ್ದಾರೆ. ಸಾಯಿ ಸುದರ್ಶನ್ ಮೊದಲಿನಿಂದಲೂ ಉತ್ತಮ ಬ್ಯಾಟಿಂಗ್ ಮಾಡಿ ಶತಕ ಬಾರಿಸಿದರು. ಆಯುಷ್ 25 ರನ್ ಗಳಿಸಿದರು. ಪಡಿಕ್ಕಲ್ 12 ರನ್‌ಗೆ ಔಟಾದರೆ, ಗಾಯಕ್ವಾಡ್ 22 ರನ್ ಮಾತ್ರ ಗಳಿಸಿದರು. ಶ್ರೀಲಂಕಾ ಎ ಪರ ದಿಲ್ಲುಮ್ 2, ರವೀಂದು ಮತ್ತು ಚಮಿಕಾ ತಲಾ 1 ವಿಕೆಟ್ ಕಿತ್ತರು.

### ಸೆಮಿಗೆ ಇಂಗ್ಲೆಂಡ್

**ಲಂಡನ್:** ವ್ಯಾಟ್ ಹಾಡ್ಜ್ ಅವರ ಸ್ಫೋಟಕ ಬ್ಯಾಟಿಂಗ್ ಮತ್ತು ಸಾಂಘಿಕ ಬೌಲಿಂಗ್ ದಾಳಿ ಸಂಘಟಿಸಿರುವ ಇಂಗ್ಲೆಂಡ್ ಮಹಿಳೆಯರ ತಂಡವು ಪ್ರತಿಷ್ಠಿತ ಮಹಿಳೆಯರ ಟಿ20 ವಿಶ್ವಕಪ್ ಸೆಮಿಫೈನಲ್ ಗೇರಿತು. ಬುಧವಾರ ನಡೆದ ಲೀಗ್ ಪಂದ್ಯದಲ್ಲಿ 38 ರನ್‌ಗಳ ದೊಡ್ಡ ಗೆಲುವು ಸಾಧಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಇಂಗ್ಲೆಂಡ್ ಆರಂಭಿಕ ವಿಕೆಟ್ ಕಳೆದುಕೊಂಡರೂ, ಹಾಡ್ಜ್ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಕ್ರೀಜ್‌ಗೆ ಅಂಟಿಕೊಂಡರು. ಮಧ್ಯಮ ಕ್ರಮಾಂಕದಲ್ಲಿ ಹೀದರ್ 43 ರನ್‌ಗಳ ಕೊಡುಗೆ ನೀಡಿದರು. ಹಾಡ್ಜ್ ಒಟ್ಟು 65 ರನ್ ಗಳಿಸಿದ ನಂತರ ಇಂಗ್ಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 186 ರನ್ ಗಳಿಸಿತು. ಗುರಿ ಬೆನ್ನತ್ತಿದ ವೆಸ್ಟ್ ಇಂಡೀಸ್ 20 ಓವರ್‌ಗಳಲ್ಲಿ 148 ರನ್ ಮಾತ್ರ ಗಳಿಸಿತು. 5 ವಿಕೆಟ್ ಮಾತ್ರವೇ ಬಿದ್ದರೂ ನಿಧಾನ ಬ್ಯಾಟಿಂಗ್ ಮಾಡಿ ವಿಂಡೀಸ್ ಸೋತಿತು. ಆದರೂ ಚಿನ್ನಲ್ ಹೆನ್ರಿ 30 ಬಾಲ್‌ಗಳಲ್ಲಿ 51 ರನ್ ಗಳಿಸಿ ಹೋರಾಡಿದರು.

### ದಾಖಲೆ ಮಾಡಿದ ಚಾರಣಿ

**ಲಂಡನ್:** ಬಾಂಗ್ಲಾ ವಿರುದ್ಧ ನಡೆದ ಪಂದ್ಯದಲ್ಲಿ ವಿಕೆಟ್ ಪಡೆದ ಭಾರತ ಸ್ಪಿನ್ನರ್ ಶ್ರೀ ಚಾರಣಿ ಒಂದೇ ಆವೃತ್ತಿಯಲ್ಲಿ ಭಾರತೀಯ ಆಟಗಾರ್ತಿಯೊಬ್ಬರು ಅತಿ ಹೆಚ್ಚು ವಿಕೆಟ್ ಪಡೆದ ದಾಖಲೆಯನ್ನು ಮುರಿದರು. 20ನೇ ಓವರ್‌ನಲ್ಲಿ ಬಾಂಗ್ಲಾದೇಶದ ಶೋರ್ನಾ ಅಕ್ತರ್ ಅವರನ್ನು ಔಟ್ ಮಾಡುವ ಮೂಲಕ ಅವರು ಆವೃತ್ತಿಯ 11ನೇ ವಿಕೆಟ್ ಪಡೆದರು, 2020ರ ಆವೃತ್ತಿಯಲ್ಲಿ ಪೂನಮ್ ಯಾದವ್ ಅವರ 10 ವಿಕೆಟ್ ಸಾಧನೆಯನ್ನು ಹಿಂದಿಕ್ಕಿದರು. ಒಟ್ಟಾರೆ ದಾಖಲೆಯು ನ್ಯೂಜಿಲೆಂಡ್‌ನ ಅಮೆಲಿಯಾ ಕೆರ್ ಅವರ ಹೆಸರಿನಲ್ಲಿ 15 ವಿಕೆಟ್‌ಗಳನ್ನು ಪಡೆದಿದ್ದು, ಈ ದಾಖಲೆ ಮುರಿಯುವತ್ತ ಚಾರಣಿ ಸಾಗಿದ್ದಾರೆ.

#### ಅತಿ ಹೆಚ್ಚು ವಿಕೆಟ್

- ಶ್ರೀ ಚರಣಿ (2026): 12★
- ಪೂನಮ್ ಯಾದವ್ (2020): 10
- ಡಯಾನಾ ಡೇವಿಡ್ (2010): 9
- ಪೂನಮ್ ಯಾದವ್ (2014): 8
- ರಾಧಾ ಯಾದವ್ (2018): 8

## ಪ್ಲೇಆಫ್‌ಗೆ ಮುನ್ನಡೆ | ನೇಮರ್ ಪುನರಾಗಮನ

# ಬ್ರೆಜಿಲ್ ಆರ್ಭಟ



3-0
ಬ್ರೆಜಿಲ್ ಸ್ಕಾಟ್ಲೆಂಡ್

**ಮಿಯಾಮಿ ಗಾರ್ಡನ್ಸ್:** ಅಭಿಮಾನಿಗಳ ಫೇವರಿಟ್, ದಿಗ್ಗಜ ಫುಟ್‌ಬಾಲರ್ ನೇಮರ್ ವಿಶ್ವಕಪ್ ಪಂದ್ಯಾವಳಿಗೆ ಕಾಲಿಟ್ಟ ಪಂದ್ಯದಲ್ಲಿ ಬ್ರೆಜಿಲ್ ಸ್ಕಾಟ್ಲೆಂಡ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿದೆ. ಸತತ ಎರಡು ಪಂದ್ಯಗಳಿಂದ ದೂರ ಉಳಿದಿದ್ದ ನೇಮರ್ ಕೊನೆಗೂ ಕ್ರೀಡಾಂಗಣದಲ್ಲಿ ಕಾಣಿಸಿಕೊಂಡರು. ಕಾಲಿನ ಗಾಯದಿಂದಾಗಿ ದೂರ ಉಳಿದಿದ್ದ ಅವರು, ಫಿಟ್ನೆಸ್ ಪರೀಕ್ಷೆ ಪಾಸಾದ ನಂತರ ಪಂದ್ಯಾವಳಿಗೆ ಮರಳಿದ್ದಾರೆ. ಬುಧವಾರ ತಡರಾತ್ರಿ ನಡೆದ ಪಂದ್ಯದಲ್ಲಿ ಬ್ರೆಜಿಲ್ ಸ್ಕಾಟ್ಲೆಂಡ್ ತಂಡವನ್ನು ಎದುರಿಸಿತ್ತು. ಸ್ಟಾರ್ ಫಾರ್ವರ್ಡ್ ವಿನಿಸಿಯಸ್ ಜೂನಿಯರ್ ಅವರ ದ್ವಿಗೋಲು ಸಾಧನೆಯ ನೆರವಿನಿಂದ ಐದು ಬಾರಿಯ ವಿಶ್ವ ಚಾಂಪಿಯನ್ ಬ್ರೆಜಿಲ್, ಸ್ಕಾಟ್ಲೆಂಡ್ ವಿರುದ್ಧ 3-0 ಅಂತರದ ಭರ್ಜರಿ ಜಯ ಸಾಧಿಸಿ ಫಿಫಾ ವಿಶ್ವಕಪ್‌ನ ನಾಕೌಟ್ ಹಂತಕ್ಕೆ ಪ್ರವೇಶಿಸಿದೆ. ಪಂದ್ಯ ಆರಂಭವಾದ ಏಳನೇ ನಿಮಿಷದಲ್ಲೇ ವಿನಿಸಿಯಸ್ ಗೋಲು ಬಾರಿಸಿ ಬ್ರೆಜಿಲ್‌ಗೆ ಮುನ್ನಡೆ ತಂದುಕೊಟ್ಟರು. ಮೊದಲಾರ್ಧದ ಅಂತಿಮ ಕ್ಷಣಗಳಲ್ಲಿ ಮತ್ತೊಮ್ಮೆ ಗೋಲು ದಾಖಲಿಸಿದ ಅವರು ಟೂರ್ನಿಯಲ್ಲಿ ತಮ್ಮ ಗೋಲುಗಳ ಸಂಖ್ಯೆಯನ್ನು ನಾಲ್ಕಕ್ಕೆ ಏರಿಸಿಕೊಂಡರು. ಈ ಮೂಲಕ ಫ್ರಾನ್ಸ್‌ನ ಕೈಲಿಯನ್ ಎಂಬಾಪ್ಪೆ ಅವರೊಂದಿಗೆ ಸಮಬಲ ಸಾಧಿಸಿದ ವಿನಿಸಿಯಸ್, ಐದು ಗೋಲುಗಳೊಂದಿಗೆ ಅಗ್ರಸ್ಥಾನದಲ್ಲಿರುವ ಲಿಯೋನೆಲ್ ಮೆಸ್ಸಿಗೆ ಒಂದು ಗೋಲು ಹಿಂದಿದ್ದಾರೆ. ಮ್ಯಾಥಿಯಸ್ ಕುನ್ಹಾ ಕೂಡ ಒಂದು ಗೋಲು ದಾಖಲಿಸಿ ಬ್ರೆಜಿಲ್‌ನ ಗೆಲುವನ್ನು ಮತ್ತಷ್ಟು ಭದ್ರಪಡಿಸಿದರು. ಸ್ಕಾಟ್ಲೆಂಡ್ ರಕ್ಷಣಾ ವಿಭಾಗ ಬ್ರೆಜಿಲ್‌ನ ವೇಗದ ದಾಳಿಯನ್ನು ತಡೆಯಲು ವಿಫಲವಾಯಿತು.

**ನೇಮರ್ ಸಬ್‌ಸ್ಟಿಟ್ಯೂಟ್:** ಪಂದ್ಯದ ಮತ್ತೊಂದು ವಿಶೇಷ ಆಕರ್ಷಣೆಯೆಂದರೆ ನೇಮರ್ ಅವರ ಮರಳುವಿಕೆ. ಬಲ ಕಾಲಿನ ಗಾಯದಿಂದ ಮೊದಲ ಎರಡು ಪಂದ್ಯಗಳಿಂದ ಹೊರಗುಳಿದಿದ್ದ ನೇಮರ್ 76ನೇ ನಿಮಿಷದಲ್ಲಿ ಬದಲಿ ಆಟಗಾರನಾಗಿ ಕಣಕ್ಕಿಳಿದರು. ಅವರು ವಾರ್ಮ್‌ಅಪ್ ಆರಂಭಿಸಿದ ಕ್ಷಣದಿಂದಲೇ ಅಭಿಮಾನಿಗಳು ಅವರ ಹೆಸರನ್ನು ಘೋಷಿಸುತ್ತಿದ್ದರು. ಮೈದಾನಕ್ಕೆ ಕಾಲಿಟ್ಟಾಗ ಸ್ಟೇಡಿಯಂ ಸಂಭ್ರಮದಿಂದ ಮೊಳಗಿತು.

#### ಪ್ರಮುಖ ಅಂಶಗಳು

- ವಿನಿಸಿಯಸ್ ಜೂನಿಯರ್ 2 ಗೋಲು
- ಮ್ಯಾಥಿಯಸ್ ಕುನ್ಹಾ 1 ಗೋಲು

## 32ರ ಸುತ್ತಿಗೆ ಮೊರಾಕ್ಕೊ

**ಅಟ್ಲಾಂಟಾ:** ಎರಡು ಬಾರಿ ಹಿನ್ನಡೆಯನ್ನು ಅನುಭವಿಸಿದರೂ ಅಸಾಧಾರಣ ಪುನರಾಗಮನ ಮಾಡಿದ ಮೊರಾಕ್ಕೊ, ಹೈಟಿಯನ್ನು 4-2 ಗೋಲುಗಳಿಂದ ಮಣಿಸಿ ಫಿಫಾ ವಿಶ್ವಕಪ್ ನಾಕೌಟ್ ಹಂತಕ್ಕೆ ಅರ್ಹತೆ ಪಡೆದುಕೊಂಡಿದೆ. ವಿಶ್ವಕಪ್‌ನಲ್ಲಿ 52 ವರ್ಷಗಳ ಬಳಿಕ ಆಡುತ್ತಿರುವ ಹೈಟಿ ಅಚ್ಚರಿಯ ಆರಂಭ ಮಾಡಿತು. 10ನೇ ನಿಮಿಷದಲ್ಲಿ ಲೆನ್ನಿ ಜೋಸೆಫ್ ಬಾರಿಸಿದ ಗೋಲು ಹೈಟಿಗೆ ಮುನ್ನಡೆ ನೀಡಿತು. ಇದು 1974ರ ಬಳಿಕ ವಿಶ್ವಕಪ್‌ನಲ್ಲಿ ಹೈಟಿ ದಾಖಲಿಸಿದ ಮೊದಲ ಗೋಲಾಗಿತ್ತು. ಮೊರಾಕ್ಕೊ ನಿರಂತರ ಒತ್ತಡದ ಫಲವಾಗಿ 39ನೇ ನಿಮಿಷದಲ್ಲಿ ಅಚ್ರಫ್ ಹಕಿಮಿ ಸಮಬಲ ಸಾಧಿಸಿದರು. ಆದರೆ ನಾಲ್ಕು ನಿಮಿಷಗಳಲ್ಲೇ ವಿಲ್ಸನ್ ಇಸಿಡೋರ್ ಅವರ ಅದ್ಭುತ ದೂರದ ಶಾಟ್ ಹೈಟಿಗೆ ಮತ್ತೆ 2-1 ಮುನ್ನಡೆ ತಂದುಕೊಟ್ಟಿತು. ಮೊದಲಾರ್ಧದ ಹೆಚ್ಚುವರಿ ಸಮಯದಲ್ಲಿ ಇಸ್ಮಾಯೆಲ್ ಸೈಬಾರಿ ಗೋಲು ಬಾರಿಸಿ ಮೊರಾಕ್ಕೊವನ್ನು 2-2 ಸಮಬಲಕ್ಕೆ ತಂದರು. ಟೂರ್ನಿಯಲ್ಲಿ ಇದು ಸೈಬಾರಿಯ



ಮೂರನೇ ಗೋಲಾಗಿತ್ತು.ದ್ವಿತೀಯಾರ್ಧದಲ್ಲಿ ಪಂದ್ಯ ಇನ್ನಷ್ಟು ರೋಚಕವಾಯಿತು. ಬದಲಿ ಆಟಗಾರನಾಗಿ ಬಂದ ಸೂಫಿಯಾನ್ ರಹಿಮಿ 78ನೇ ನಿಮಿಷದಲ್ಲಿ ಗೋಲು ಬಾರಿಸಿ ಮೊರಾಕ್ಕೊಗೆ ಮೊದಲ ಬಾರಿಗೆ ಮುನ್ನಡೆ ತಂದುಕೊಟ್ಟರು. 89ನೇ ನಿಮಿಷದಲ್ಲಿ ಗೆಸ್ಸಿಮೆ ಯಾಸಿನ್ ಮತ್ತೊಂದು ಗೋಲು ದಾಖಲಿಸಿ ಹೈಟಿಯ ಅಚ್ಚರಿಯ ಕನಸಿಗೆ ತೆರೆ ಎಳೆದರು.

## ಮೆಕ್ಸಿಕೊ ಮಿಂಚಿನಾಟ, ಜೆಕ್ ಹೊರಕ್ಕೆ

**ಮೆಕ್ಸಿಕೊ ಸಿಟಿ:** ಆತಿಥೇಯ ಮೆಕ್ಸಿಕೊ ವಿಶ್ವಕಪ್‌ನಲ್ಲಿ ತನ್ನ ಅದ್ಭುತ ಫಾರ್ಮ್ ಮುಂದುವರಿಸಿದ್ದು, ಜೆಕ್ ಗಣರಾಜ್ಯವನ್ನು 3-0 ಗೋಲುಗಳಿಂದ ಮಣಿಸಿ ಗುಂಪು ಹಂತದ ಎಲ್ಲಾ ಮೂರು ಪಂದ್ಯಗಳನ್ನು ಗೆದ್ದ ಮೊದಲ ಮೆಕ್ಸಿಕನ್ ತಂಡವಾಗಿ ಇತಿಹಾಸ ನಿರ್ಮಿಸಿದೆ. ಮೊದಲಾರ್ಧದಲ್ಲಿ ಗೋಲುರಹಿತವಾಗಿದ್ದ ಪಂದ್ಯದಲ್ಲಿ, ದ್ವಿತೀಯಾರ್ಧ ಆರಂಭವಾದ ಬಳಿಕ ಮೆಕ್ಸಿಕೊ ದಾಳಿಯ ಅಬ್ಬರ ಶುರುವಾಯಿತು. 55ನೇ ನಿಮಿಷದಲ್ಲಿ 22 ವರ್ಷದ ಯುವ ಆಟಗಾರ ಮಟಿಯೋ ಚಾವೆಜ್ ವಿಶ್ವಕಪ್‌ನಲ್ಲಿನ ತನ್ನ ಮೊದಲ ಗೋಲು ದಾಖಲಿಸಿ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಇದಾದ ಕೇವಲ ಆರು ನಿಮಿಷಗಳ ಬಳಿಕ, ಜುಲಿಯನ್ ಕ್ವಿನೋನ್ಸ್ ಗೋಲು ಬಾರಿಸಿ ಮೆಕ್ಸಿಕೊದ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. ಪಂದ್ಯದ ಹೆಚ್ಚುವರಿ ವೇಳೆಯಲ್ಲಿ ಅಲ್ವಾರೊ ಫಿಡಾಲ್ಗೊ ಮೂರನೇ ಗೋಲು ದಾಖಲಿಸಿದರು.

- ಎಲ್ಲಾ ಪಂದ್ಯಗಳಲ್ಲಿ ಗೆದ್ದ ಏಕೈಕ ತಂಡ ಮೆಕ್ಸಿಕೊ
- ವಿಶ್ವಕಪ್ ಲೀಗ್ ಪಂದ್ಯಗಳಲ್ಲಿ ಇತಿಹಾಸ

## ನಾಕೌಟ್‌ಗೇರಿದ ದ.ಆಫ್ರಿಕಾ

**ಗುಡಾಲುಪೆ (ಮೆಕ್ಸಿಕೋ):** ಫಿಫಾ ವಿಶ್ವಕಪ್ ಇತಿಹಾಸದಲ್ಲಿ ಮೊದಲ ಬಾರಿಗೆ ದಕ್ಷಿಣ ಆಫ್ರಿಕಾ ನಾಕೌಟ್ ಹಂತಕ್ಕೆ ಪ್ರವೇಶಿಸಿದೆ. ಬುಧವಾರ ನಡೆದ ಗುಂಪು ಎ ಪಂದ್ಯದಲ್ಲಿ ದಕ್ಷಿಣ ಕೊರಿಯಾವನ್ನು 1-0 ಗೋಲುಗಳಿಂದ ಮಣಿಸಿದ ಆಫ್ರಿನ್ನರು, ಐತಿಹಾಸಿಕ ಸಾಧನೆ ಮಾಡಿದರು. ಪಂದ್ಯದ 63ನೇ ನಿಮಿಷದಲ್ಲಿ ಥಾಪೆಲೊ ಮಸೆಕೊ, ತ್ಲಪಾಂಗ್ ಮೊರೆಮಿ ನೀಡಿದ ನಿಖರ ಪಾಸ್ ಅನ್ನು ಗೋಲಾಗಿ ಪರಿವರ್ತಿಸಿ ತಂಡಕ್ಕೆ ಅಮೂಲ್ಯ ಜಯ ತಂದುಕೊಟ್ಟರು. ಈ ಗೆಲುವಿನೊಂದಿಗೆ ದಕ್ಷಿಣ ಆಫ್ರಿಕಾ ಗುಂಪಿನಲ್ಲಿ ಎರಡನೇ ಸ್ಥಾನ ಪಡೆದು ನಾಕೌಟ್ ಹಂತಕ್ಕೆ ಅರ್ಹತೆ ಗಳಿಸಿತು. ಗುಂಪಿನ ಅಗ್ರಸ್ಥಾನವನ್ನು ಮೆಕ್ಸಿಕೋ ತನ್ನದಾಗಿಸಿಕೊಂಡಿತು. 1998, 2002 ಹಾಗೂ 2010ರಲ್ಲಿ (ಆತಿಥೇಯರಾಗಿದ್ದಾಗಲೂ) ಗುಂಪು ಹಂತದಲ್ಲೇ ಹೊರಬಿದ್ದಿದ್ದ ದಕ್ಷಿಣ ಆಫ್ರಿಕಾ, ಈ ಬಾರಿ ಆ ಕಹಿ ನೆನಪುಗಳನ್ನು ಅಳಿಸಿ ಹೊಸ ಇತಿಹಾಸ ಬರೆದಿದೆ.

**ವಿಶ್ವಕಪ್‌ನಲ್ಲಿ ದಕ್ಷಿಣ ಆಫ್ರಿಕಾದ ಐತಿಹಾಸಿಕ ಸಾಧನೆ: ಮೊದಲ ಬಾರಿಗೆ ನಾಕೌಟ್ ಹಂತಕ್ಕೆ**

**ಬೋಸ್ನಿಯಾ ಮತ್ತು ಹರ್ಜೆಗೋವಿನಾಗೆ ಗೆಲುವು, ಹೊರಬಿದ್ದ ಕತಾರ್:** ಉತ್ತಮ ಪ್ರದರ್ಶನ ನೀಡಿರುವ ಬೋಸ್ನಿಯಾ-ಹರ್ಜೆಗೋವಿನಾ ಕತಾರ್ ತಂಡವನ್ನು ಮಣಿಸಿದೆ. ಹಿಂದಿನ ಪಂದ್ಯಗಳಲ್ಲಿ ಹಿನ್ನಡೆ ಅನುಭವಿಸಿದ್ದ ಬೋಸ್ನಿಯಾ, 3-1ರಿಂದ ಪಂದ್ಯ ಗೆದ್ದಿದೆ. ಕೇರಿಮ್ 29ನೇ ನಿಮಿಷದಲ್ಲಿ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. ಐದು ನಿಮಿಷ ಬಳಿಕ 34ನೇ ನೇ ನಿಮಿಷಕ್ಕೆ ಮಹುಮದ್ ಅಬುನಂದಾ ಮತ್ತೊಂದು ಗೋಲು ಗಳಿಸಿ ಮುನ್ನಡೆ ವಿಸ್ತರಿಸಿದರು. ಕತಾರ್ ಪರ ಹಸನ್ 42ನೇ ನಿಮಿಷಕ್ಕೆ ಒಂದು ಗೋಲು ಗಳಿಸಿ ಅಂತರ ಕುಗ್ಗಿಸಿದರು. ಆದರೆ ಇಮ್ರಿನ್ 80ನೇ ನಿಮಿಷಕ್ಕೆ ಮತ್ತೊಂದು ಗೋಲು ಗಳಿಸಿ ಗೆಲುವಿನ ದಡ ಸೇರಿಸಿದರು.

## ಸ್ವಿಟ್ಜರ್ಲೆಂಡ್ ಅಗ್ರಸ್ಥಾನ, ಕೆನಡಾಗೆ ಐತಿಹಾಸಿಕ ನಾಕೌಟ್ ಟಿಕೆಟ್

**ವ್ಯಾಂಕೂವರ್:** ರೂಬೆನ್ ವರ್ಗಾಸ್ ಹಾಗೂ ಜೋಹಾನ್ ಮಂಜಾಂಬಿ ಗಳಿಸಿದ ಗೋಲುಗಳ ನೆರವಿನಿಂದ ಸ್ವಿಟ್ಜರ್ಲೆಂಡ್ 2-1 ಅಂತರದಲ್ಲಿ ಕೆನಡಾವನ್ನು ಮಣಿಸಿ ಗುಂಪು ಬಿಯ ಅಗ್ರಸ್ಥಾನವನ್ನು ತನ್ನದಾಗಿಸಿಕೊಂಡಿತು. ಸೋಲು ಕಂಡರೂ ಕೆನಡಾ ವಿಶ್ವಕಪ್ ಇತಿಹಾಸದಲ್ಲೇ ಮೊದಲ ಬಾರಿಗೆ ನಾಕೌಟ್ ಹಂತಕ್ಕೆ ಅರ್ಹತೆ ಪಡೆಯುವ ಮೂಲಕ ಸಂಭ್ರಮಿಸಿತು. ಮೊದಲಾರ್ಧದಲ್ಲಿ ಎರಡೂ ತಂಡಗಳು ಗೋಲುರಹಿತ ಸಮಬಲ ಸಾಧಿಸಿದ್ದವು. ಆದರೆ ದ್ವಿತೀಯಾರ್ಧ ಆರಂಭವಾದ ಕೇವಲ 40 ಸೆಕೆಂಡುಗಳಲ್ಲೇ ರೂಬೆನ್ ವರ್ಗಾಸ್ ಗೋಲು ಬಾರಿಸಿ ಸ್ವಿಸ್ ಪಡೆಗೆ ಮುನ್ನಡೆ ಒದಗಿಸಿದರು. 57ನೇ ನಿಮಿಷದಲ್ಲಿ ಬ್ರಿಲ್ ಎಂಬೋಲೊ ನೀಡಿದ ಪಾಸ್ ಅನ್ನು ಜೋಹಾನ್ ಮಂಜಾಂಬಿ ಗೋಲಾಗಿ ಪರಿವರ್ತಿಸಿ ಮುನ್ನಡೆಯನ್ನು 2-0ಕ್ಕೆ ಹೆಚ್ಚಿಸಿದರು. 76ನೇ ನಿಮಿಷದಲ್ಲಿ ಬದಲಿ ಆಟಗಾರನಾಗಿ ಕಣಕ್ಕಿಳಿದ ಪ್ರಾಮಿಸ್ ಡೇವಿಡ್, ತನ್ನ ಮೊದಲ ಸ್ಪರ್ಶದಲ್ಲೇ ಚೆಂಡನ್ನು ಜಾಲಕ್ಕಟ್ಟಿ ಕೆನಡಾಗೆ ಸಮಾಧಾನದ ಗೋಲು ತಂದುಕೊಟ್ಟರು. ಆದರೆ ಅದಕ್ಕಿಂತ ಹೆಚ್ಚಿನ ಹೋರಾಟ ಸಾಧ್ಯವಾಗದೆ ಪಂದ್ಯ ಸ್ವಿಟ್ಜರ್ಲೆಂಡ್ ಪಾಲಾಯಿತು. ಈ ಗೆಲುವಿನೊಂದಿಗೆ ಸ್ವಿಟ್ಜರ್ಲೆಂಡ್ ಏಳು ಅಂಕಗಳೊಂದಿಗೆ ಗುಂಪಿನ ಅಗ್ರಸ್ಥಾನಿಯಾಗಿ ನಾಕೌಟ್ ಹಂತಕ್ಕೆ ಪ್ರವೇಶಿಸಿತು. ಆರು ಅಂಕಗಳೊಂದಿಗೆ ಕೆನಡಾ ಎರಡನೇ ಸ್ಥಾನ ಪಡೆದಿತು.



## ಶ್ರೇಯಸ್‌ಗೆ ಮೊದಲ ಟಾಸ್ಕ್!

**ಬೆಲ್‌ಫಾಸ್ಟ್(ಐರ್ಲೆಂಡ್):** ನೂತನ ತಂಡ ಮತ್ತು ನೂತನ ನಾಯಕನೊಂದಿಗೆ ಮೈದಾನಕ್ಕಿಳಿಯಲು ಸಜ್ಜಾಗಿರುವ ಭಾರತ ಟಿ20 ತಂಡ ಶುಕ್ರವಾರದಂದು ಐರ್ಲೆಂಡ್ ತಂಡವನ್ನು ಎದುರಿಸಲಿದೆ.

ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ನಡೆಯಲಿರುವ ಏಷ್ಯನ್ ಗೇಮ್ಸ್‌ಗೆ ಕ್ರಿಕೆಟ್ ಸೇರಿಕೊಂಡಿರುವ ನಿಟ್ಟಿನಲ್ಲಿ ಭಾರತ ಸಿದ್ಧಗೊಳ್ಳಬೇಕಿದೆ. ಈ ನಿಟ್ಟಿನಲ್ಲಿ ಶ್ರೇಯಸ್ ಅಯ್ಯರ್ ನೇತೃತ್ವದಲ್ಲಿ ಹೊಸ ತಂಡವನ್ನೇ ಘೋಷಿಸಿರುವ ಬಿಸಿಸಿಐ ಟಿ20ಯಲ್ಲಿ ಹೊಸ ಅಧ್ಯಾಯ ಬರೆಯುವುದಕ್ಕೆ ಸಿದ್ಧವಾಗಿದೆ. ಬೆಲ್‌ಫಾಸ್ಟ್‌ನಲ್ಲಿ ಈ ಪಂದ್ಯ ನಡೆಯಲಿದೆ.

**ಇಂದಿನಿಂದ ಐರ್ಲೆಂಡ್ ಟಿ20 ಸರಣಿ**

**ಹೊಸ ತಂಡಕ್ಕೆ ಹತ್ತಾರು ಜವಾಬ್ದಾರಿ:** ಪಂಜಾಬ್ ಕಿಂಗ್ಸ್ ತಂಡವನ್ನು ಮುನ್ನಡೆಸಿರುವ ರೀತಿ ಗಮನಿಸಿರುವ ಬಿಸಿಸಿಐ ಸೂರ್ಯಕುಮಾರ್ ಯಾದವ್ ಅವರಿಗೆ ಗೇಟ್ ಪಾಸ್ ನೀಡಿ, ಶ್ರೇಯಸ್ ಅಯ್ಯರ್‌ಗೆ ನಾಯಕತ್ವ ಪಟ್ಟ ಕಟ್ಟಿದೆ. ಆದಾಗ್ಯೂ ಸಾಬೀತು ಪಡಿಸಿಕೊಳ್ಳುವ ಸವಾಲನ್ನು ಹೊಂದಿರುವ ಭಾರತ ತಂಡ ಐರ್ಲೆಂಡ್ ಪರೀಕ್ಷೆ ಎದುರಿಸಬಹುದು. ಹೊಸ ಸಂಯೋಜನೆ ತಂಡದಲ್ಲಿದೆ. ವಿಶ್ವ ಚಾಂಪಿಯನ್ ಎಂಬ ಪಟ್ಟ ಕಟ್ಟಿಕೊಂಡಿರುವ ಭಾರತಕ್ಕೆ ಗೆಲ್ಲುವುದೊಂದೆ ಪ್ರಮುಖ ಗುರಿಯಾಗಿದೆ.

**ಹೊಸಬರಿಗೆ ಅವಕಾಶ:** ಶ್ರೇಯಸ್ ಅಯ್ಯರ್



ನಾಯಕತ್ವದಲ್ಲಿ ವೈಭವ್ ಸೂರ್ಯವಂಶಿ ಪದಾರ್ಪಣೆ ಮಾಡುವ ಸಾಧ್ಯತೆಗಳಿವೆ. ತಿಲಕ್ ವರ್ಮಾ ಉಪನಾಯಕರಾಗಲಿದ್ದು, ಸಂಜು ಸ್ಯಾಮ್ಸನ್, ಇಶಾನ್ ಕಿಶನ್, ಅಭಿಷೇಕ್ ಶರ್ಮಾ, ಶಿವಂ ದುಬೆ, ಅರ್ಷದೀಪ್ ಸಿಂಗ್ ಸೇರಿದಂತೆ ವಿವಿಧ ಯುವಕರು ಕಣಕ್ಕಿಳಿಯಬಹುದು. ಐಪಿಎಲ್‌ನಲ್ಲಿ ಮಿಂಚಿರುವ ಸೂರ್ಯಾಂಶ್ ಶೇಡ್ಗೆ, ಪ್ರಿನ್ಸ್ ಯಾದವ್ ಮತ್ತು ರವಿ ಬಿಷ್ಣೋಯ್ ಕೂಡ ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಅಲ್ಲದೆ ಬಹು ದಿನಗಳ ನಂತರ ಹರ್ಷಿತ್ ರಾಣಾ ತಂಡದಲ್ಲಿ ಕಾಣಿಸಿಕೊಳ್ಳುವ ನಿರೀಕ್ಷೆಗಳೂ ಇವೆ.

**ಪಿಚ್ ರಿಪೋರ್ಟ್:** ಬೆಲ್‌ಫೆಸ್ಟ್‌ನಲ್ಲಿ ಪಂದ್ಯ ನಡೆಯಲಿದೆ. ಸಾಮಾನ್ಯವಾಗಿ ಐರ್ಲೆಂಡ್‌ನ ದೇಶಿ ಕ್ರಿಕೆಟ್ ಪಂದ್ಯಗಳೇ ಇಲ್ಲಿ ಹೆಚ್ಚು ನಡೆಯುತ್ತವೆ. ಬ್ಯಾಟರ್‌ಗಳಿಗೆ ಅಲ್ಪ ಅನುವು ಮಾಡಿಕೊಡಬಹುದು. ಹೆಚ್ಚಿನ ಕ್ರ್ಯಾಕ್ ಇರುವುದು ಬೌಲರ್‌ಗಳಿಗೂ ಅಲ್ಪ ಬಲ ಸಿಗಬಹುದು ಮೊದಲು ಬೌಲಿಂಗ್ ಮಾಡುವ ತಂಡಕ್ಕೆ ಲಾಭ.

## ಶೆಫಾಲಿ ಅಬ್ಬರಕ್ಕೆ ಬಸವಳಿದ ಬಾಂಗ್ಲಾ

**ಮ್ಯಾಂಚೆಸ್ಟರ್:** ಬಾಂಗ್ಲಾ ತಂಡವನ್ನು ಮನಬಂದಂತೆ ದಂಡಿಸಿದ ಶೆಫಾಲಿ ವರ್ಮಾ ಭಾರತದ ಸೆಮಿಫೈನಲ್ ಕನಸನ್ನು ಇನ್ನಷ್ಟು ಭದ್ರವಾಗಿಸಿದರು. ದ.ಆಫ್ರಿಕಾ ತಂಡದೊಂದಿಗೆ ಸೋತು ಹಿನ್ನಡೆ ಅನುಭವಿಸಿದ್ದ ಭಾರತ ಮಹಿಳೆಯರ ತಂಡವು ಟಿ20 ವಿಶ್ವಕಪ್ ಪಂದ್ಯಾವಳಿಯಲ್ಲಿ ಪುನರಾಗಮನ ಮಾಡಿದೆ.



ಸಾಂಘಿಕ ಬೌಲಿಂಗ್ ದಾಳಿ, ಶೆಫಾಲಿ ವರ್ಮಾ ಅವರ ಸ್ಫೋಟಕ ಬ್ಯಾಟಿಂಗ್‌ನೊಂದಿಗೆ ಕೌರ್ ಪಡೆಯು ಗುರುವಾರ ನಡೆದ ಪಂದ್ಯದಲ್ಲಿ ಬಾಂಗ್ಲಾವನ್ನು 9 ವಿಕೆಟ್‌ಗಳಿಂದ ಭರ್ಜರಿ ಗೆಲುವು ದಾಖಲಿಸಿತು. ಇದರೊಂದಿಗೆ ತನ್ನ ಎರಡನೇ ಸ್ಥಾನ ಭದ್ರವಾಗಿಸಿಡೆ. ಬ್ಯಾಟಿಂಗ್ ಆಯ್ದುಕೊಂಡ ಬಾಂಗ್ಲಾ ಸ್ಪಿನ್ ದಾಳಿಗೆ ಉರುಳಿತು. ಕಷ್ಟದ ಸಮಯದಲ್ಲಿ ಫೇರ್‌ಡೊಸ್ 33, ನಿಗಾರ್ ಸುಲ್ತಾನ್ 32 ರನ್‌ನೊಂದಿಗೆ ಆಸರೆಯಾದರು. ಪರಿಣಾಮ 20 ಓವರ್‌ಗಳಲ್ಲಿ ಪರದಾಡಿ 136 ರನ್ ಗಳಿಸಿತು. ರಾಧಾ 3, ಚಾರಣಿ 2, ನಂದಿನಿ ಮತ್ತು ರೇಣುಕಾ ಒಂದರಂತೆ ಭಾರತ 8 ವಿಕೆಟ್ ಪಡೆದುಕೊಂಡಿತು. ಗುರಿ ಬೆನ್ನತ್ತಿದ ಭಾರತ 16.5 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 139 ರನ್ ಗಳಿಸಿ ಗೆದ್ದಿತು. ಮೊದಲಿನಿಂದಲೂ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದ ಶೆಫಾಲಿ ವರ್ಮಾ ಕ್ಷಣ ಮಾತ್ರಕ್ಕೂ ನಿಲ್ಲದೆ ದಂಡಿಸಿದರು. ಅವರಿಗೆ ಯಸ್ತಿಕಾ(23) ಸಾಥ್ ಸಿಕ್ಕಿತು. ಶೆಫಾಲಿ ವರ್ಮಾ 34 ಬಾಲ್‌ಗಳಲ್ಲಿ 53 ರನ್ ಗಳಿಸಿ ಔಟಾದರು. ಮುಂದೆ ಬಂದ ಬ್ಯಾಟರ್‌ಗಳು ಕೈಕೊಟ್ಟರೂ ಜೆಮಿಮಾ ರಾಡ್ರಿಗ್ಸ್ 26 ರನ್ ಬಾರಿಸಿ ಪಂದ್ಯ ಗೆಲ್ಲಿಸಿದರು.

**ಭಾರತಕ್ಕೆ ಸುಲಭದ ತುತ್ತು:** ಗುರಿ ಬೆನ್ನತ್ತುವಾಗ ಶೆಫಾಲಿ ವರ್ಮಾ ಯಾವುದೇ ಮುಲಾಜಿಲ್ಲದೆ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಸ್ಮೃತಿ ಮಂಧಾನ ಸೆಟ್ ಆಗುವತ್ತ ಸಾಗಿದರೆ, ಶೆಫಾಲಿ ಬೌಂಡರಿಗಳೊಂದಿಗೆ ಬಿರುಸಿನ ಬ್ಯಾಟಿಂಗ್ ಮಾಡಿದರು. ಪವರ್‌ಪ್ಲೇನಲ್ಲಿ ಭಾರತ 1 ವಿಕೆಟ್ ಮಾತ್ರಕ್ಕೆ 63 ರನ್ ಗಳಿಸಿತ್ತು. ಮಂಧಾನ 8 ರನ್‌ಗೆ ಔಟಾಗಿದ್ದರು. ಮೂರನೇ ಕ್ರಮಾಂಕದಲ್ಲಿ ಬಂದ ಯಸ್ತಿಕಾ ಕೂಡ ಬೌಂಡರಿಗಳೊಂದಿಗೆ ಮಿಂಚಿದರು. ಅರ್ಧಶತಕ ಬಾರಿಸುತ್ತಲೆ ಅವರು ವಿಕೆಟ್ ಒಪ್ಪಿಸಿದರು. ಭಾರತ ದಿಢೀರ್ ಕುಸಿತ ಕಂಡಿತ್ತು. ರಾಡ್ರಿಗ್ಸ್ ಅಬ್ಬರದ ಬ್ಯಾಟಿಂಗ್‌ನೊಂದಿಗೆ ಪಂದ್ಯ ಭಾರತದ ಕೈಗಿಟ್ಟು ವಿಕೆಟ್ ಒಪ್ಪಿಸಿದರು. ಕೊನೆಯಲ್ಲಿ ದೀಪ್ತಿ ವಿನ್ನಿಂಗ್ ಶಾಟ್ ಬಾರಿಸಿ ಗೆಲ್ಲಿಸಿದರು.

#### ಸಂಕ್ಷಿಪ್ತ ಸ್ಕೋರ್

ಬಾಂಗ್ಲಾ 20 ಓವರ್‌ಗಳಲ್ಲಿ 136/8: ಫೇರ್‌ಡೊಸ್ 33, ನಿಗಾರ್ 32; ರಾಧಾ 28/3, ಚಾರಣಿ 21/2
ಭಾರತ 16.5 ಓವರ್‌ಗಳಲ್ಲಿ 139/5: ಶೆಫಾಲಿ 53, ರಾಡ್ರಿಗ್ಸ್ 26; ರಿತು 29/2

## ಯುಎಸ್ ಓಪನ್: ಕಿಡಂಬಿ, ತನ್ವಿ ಶುಭಾರಂಭ

**ಹೊಸದಿಲ್ಲಿ:** ಅನುಭವಿ ಕಿಡಂಬಿ ಶ್ರೀಕಾಂತ್, ಯುವ ಆಟಗಾರ ರೋಣಕ್ ಚೌಹಾಣ್, ತನ್ವಿ ಶರ್ಮಾ ಸೇರಿದಂತೆ ಭಾರತದ ಶಟ್ಲರ್‌ಗಳು ಯುಎಸ್ ಓಪನ್ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿದರು.

ಗುರುವಾರ ನಡೆದ ಪಂದ್ಯಗಳಲ್ಲಿ ಶ್ರೀಕಾಂತ್ ಸ್ವದೇಶದ ದಯಾನಂದ ವಿರುದ್ಧ 21-14, 21-12ರಿಂದ ಗೆಲುವು ಸಾಧಿಸಿದರು. ರೌಣಕ್ ಚೌಹಾಣ್ ಕೂಡ ಸ್ವದೇಶದ ಸುಬ್ರಮಣಿ ಅವರೊಂದಿಗೆ 23-11, 21-16ರಿಂದ ಗೆಲುವು ಸಾಧಿಸಿದರು. ಮಹಿಳೆಯರ ವಿಭಾಗದಲ್ಲಿ ತನ್ವಿ ಶರ್ಮಾ ವೈ ಲಿ ಅವರೊಂದಿಗೆ 21-19, 21-11ರಿಂದ ಭರ್ಜರಿ ಗೆಲುವು ಸಾಧಿಸಿದರು. ರಕ್ಷಿತಾ ರಾಮ್‌ರಾಜ್ ಸ್ವಾಬಿಕೋವಾ ವಿರುದ್ಧ 21-15, 21-18ರಿಂದ ಗೆಲುವು ಸಾಧಿಸಿದರು. ಡಿ. ಸಿಹಾಗ್ ಕಾಸ್ಟಿಲ್ಲೊ ಅವರೊಂದಿಗೆ 21-14, 21-14ರಿಂದ ಗೆಲುವು ಸಾಧಿಸಿದರು.

## ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ಅನರ್ಹ

**ಬೆಂಗಳೂರು:** ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ (ಕೆಎಸ್‌ಸಿಎ) ಕಾರ್ಯದರ್ಶಿ ಸಂತೋಷ್ ಮೆನನ್ ಅವರು ಹುದ್ದೆಯಲ್ಲಿ ಮುಂದುವರಿಯಲು ಅರ್ಹರಲ್ಲ ಎಂದು ಬಿಸಿಸಿಐ ಒಂಬುಡ್ಸ್‌ಮನ್ ತೀರ್ಪು ನೀಡಿದ್ದು, ಹುದ್ದೆ ಖಾಲಿಯಿದೆ ಎಂದು ಘೋಷಿಸಿದ್ದಾರೆ.

ಕೆಎಸ್‌ಸಿಎ ಸಾಂಸ್ಥಿಕ ಸದಸ್ಯ ಡಾಲ್ಫಿನ್ ಕ್ರಿಕೆಟರ್ಸ್ ಸಲ್ಲಿಸಿದ ದೂರಿನ ಮೇರೆಗೆ ಬಿಸಿಸಿಐ ಒಂಬುಡ್ಸ್‌ಮನ್ ನ್ಯಾಯಮೂರ್ತಿ ಅರುಣ್ ಮಿಶ್ರಾ (ನಿವೃತ್ತ) ಈ ನಿರ್ಧಾರ ತೆಗೆದುಕೊಂಡಿದ್ದಾರೆ. ನಿಯಮಗಳ ಅಡಿಯಲ್ಲಿ ಮೆನನ್ ಗರಿಷ್ಠ ಅನುಮತಿಸುವ ಒಂಬತ್ತು ವರ್ಷಗಳ ಅಧಿಕಾರಾವಧಿಯನ್ನು ಪೂರ್ಣಗೊಳಿಸಿದ್ದಾರೆ. ಕೆಎಸ್‌ಸಿಎ ವ್ಯವಸ್ಥಾಪಕ ಸಮಿತಿ ಸದಸ್ಯರಾಗಿ (ಡಿಸೆಂಬರ್ 2013 ರಿಂದ ಡಿಸೆಂಬರ್ 2019) ಮತ್ತು ಕೆಎಸ್‌ಸಿಎ ಕಾರ್ಯದರ್ಶಿಯಾಗಿ (ಡಿಸೆಂಬರ್ 2019 ರಿಂದ ನವೆಂಬರ್ 2022) ಮೆನನ್ ಅವರ ಅಧಿಕಾರಾವಧಿಯನ್ನು ಗಣನೆಗೆ ತೆಗೆದುಕೊಂಡಾಗ ಅವರ ಅಧಿಕಾರಾವಧಿ ಒಂಬತ್ತು ವರ್ಷಗಳನ್ನು ಮೀರಿದೆ ಎಂದು ದೂರುದಾರರು ವಾದಿಸಿದ್ದಾರೆ. ಈ ಬಗ್ಗೆ ಕೆಎಸ್‌ಸಿಎ ಹೇಳಿಕೆ ನೀಡಿದ್ದು, ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ)ಓಂಬುಡ್ಸ್‌ಮನ್ ನೀಡಿರುವ ಆದೇಶವನ್ನು ನಾವು ಗಮನಿಸಿದ್ದು, ನಾವು ಕಾನೂನನ್ನು ಎತ್ತಿಹಿಡಿಯಲು ಬದ್ಧರಾಗಿದ್ದು , ಸಂಘದ ಹಿತಾಸಕ್ತಿಯನ್ನು ಕಾಪಾಡುವ ಕಾನೂನು ಚೌಕಟ್ಟಿನ ಸಂಪೂರ್ಣ ಅನುಸರಣೆಯನ್ನು ಖಚಿತಪಡಿಸುತ್ತೇವೆ ಎಂದಿದೆ.=

## ಕರಾವಳಿ ಕಿಂಗ್ಸ್‌ಗೆ ಭರ್ಜರಿ ಜಯ

**ಮೈಸೂರು:** ಅನುಭವಿ ಆಟಗಾರರಾದ ಕರುಣ್ ನಾಯರ್ ಹಾಗೂ ಶ್ರೇಯಸ್ ಗೋಪಾಲ್ ಅವರ ಅದ್ಭುತ ಬ್ಯಾಟಿಂಗ್ ನೆರವಿನಿಂದ ಕರಾವಳಿ ಕಿಂಗ್ಸ್ ಮಂಗಳೂರು ತಂಡ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯಲ್ಲಿ ಮೈಸೂರು ವಾರಿಯರ್ಸ್ ವಿರುದ್ಧ ಆರು ವಿಕೆಟ್‌ಗಳ ಭರ್ಜರಿ ಜಯ ದಾಖಲಿಸಿತು.

192 ರನ್‌ಗಳ ಕಠಿಣ ಗುರಿ ಬೆನ್ನಟ್ಟಿದ ಕರಾವಳಿ ಕಿಂಗ್ಸ್ ಆರಂಭದಲ್ಲೇ 42 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತ್ತು. ಆದರೆ ನಾಲ್ಕನೇ ವಿಕೆಟ್‌ಗೆ ಕರುಣ್ ನಾಯರ್ ಮತ್ತು ಶ್ರೇಯಸ್ ಗೋಪಾಲ್ ಕೇವಲ 60 ಎಸೆತಗಳಲ್ಲಿ 123 ರನ್‌ಗಳ ಅಮೋಘ ಜೊತೆಯಾಟ ನಿರ್ಮಿಸಿ ಪಂದ್ಯದಲ್ಲಿ ಜೀವ ತುಂಬಿದರು. ಕರುಣ್ ನಾಯರ್ 32 ಎಸೆತಗಳಲ್ಲಿ 61 ರನ್ ಗಳಿಸಿದರು. ಅವರ ಬ್ಯಾಟಿಂಗ್‌ನಲ್ಲಿ 6 ಬೌಂಡರಿ ಹಾಗೂ 3 ಸಿಕ್ಸರ್‌ಗಳು ಸೇರಿದ್ದವು. ಇನ್ನೊಂದೆಡೆ ಶ್ರೇಯಸ್ ಗೋಪಾಲ್ ಕೊನೆಯವರೆಗೂ ಅಜೇಯರಾಗಿ ಉಳಿದು 43 ಎಸೆತಗಳಲ್ಲಿ 84 ರನ್‌ಗಳ ಪಂದ್ಯಶ್ರೇಷ್ಠ ಇನ್ನಿಂಗ್ಸ್



ಕಟ್ಟಿದರು. 9 ಬೌಂಡರಿ ಮತ್ತು 3 ಸಿಕ್ಸರ್‌ಗಳೊಂದಿಗೆ ಮಿಂಚಿದ ಅವರು ಬೌಲಿಂಗ್‌ನಲ್ಲೂ 2 ವಿಕೆಟ್ ಪಡೆದು ಆಲ್‌ರೌಂಡ್ ಪ್ರದರ್ಶನ ನೀಡಿದರು. ಇದಕ್ಕೂ ಮೊದಲು ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ವಾರಿಯರ್ಸ್ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 191 ರನ್ ಗಳಿಸಿತು. ಕಳೆದ ಪಂದ್ಯದಲ್ಲಿ ಶತಕ ಸಿಡಿಸಿದ್ದ ಚೇತನ್ ಎಲ್.ಆರ್. ಮತ್ತೊಮ್ಮೆ ಮಿಂಚಿ 35 ಎಸೆತಗಳಲ್ಲಿ 67 ರನ್ ಗಳಿಸಿದರು. ಯುವರಾಜ್ ಅರೋರಾ 22 ಎಸೆತಗಳಲ್ಲಿ 37 ರನ್‌ಗಳ ಕಾಣಿಕೆ ನೀಡಿದರು. ಕರಾವಳಿ ಕಿಂಗ್ಸ್ ಪರ ವಾಸುಕಿ ಕೌಶಿಕ್ 3 ವಿಕೆಟ್ ಪಡೆದು ಯಶಸ್ವಿ ಬೌಲರ್ ಎನಿಸಿದರು.


### ಶಿವಮೊಗ್ಗಕ್ಕೆ ಗೆಲುವು

ಬುಧವಾರ ರಾತ್ರಿ ನಡೆದ ಪಂದ್ಯದಲ್ಲಿ ಶಿವಮೊಗ್ಗ ಯೋಧಾಸ್ ತಂಡವು ಹುಬ್ಬಳ್ಳಿಯನ್ನು 42 ರನ್‌ಗಳಿಂದ ಮಣಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಶಿವಮೊಗ್ಗ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 220 ರನ್ ಗಳಿಸಿತು. ನವೀನ್ 75, ಲವನೀತ್ 57 ರನ್ ಗಳಿಸಿದರು. ಸ್ಮರಣ್ 37 ರನ್‌ಗಳಿಸಿ ಸ್ಕೋರ್ ಹಿಗ್ಗಿಸಿದರು. ಗುರಿ ಬೆನ್ನತ್ತಿದ ಹುಬ್ಬಳ್ಳಿ 19.3 ಓವರ್‌ಗಳಲ್ಲಿ 178 ರನ್‌ಗಳಿಸಿ ಆಲೌಟ್ ಆಯಿತು. ತಾಹಾ 44, ಹಾರ್ದಿಕ್ 43 ರನ್ ಗಳಿಸಿದರು. ಶಿವಮೊಗ್ಗ ಪರ ಅಭಿಲಾಷ್ ಶೆಟ್ಟಿ 4 ವಿಕೆಟ್ ಕಿತ್ತರು.

## ಪದಬಂಧ

ರಾಜಾ ಸಂಗಮೇಶ ಹಿರೇಮಠ

6026



**ಎಡದಿಂದ ಬಲಕ್ಕೆ**

1.ವಿದ್ಯೆ-ಕಲೆ-ಬುದ್ಧಿವಂತಿಕೆಯ ದೇವತೆ (4)
3.ನೆಮ್ಮದಿಯಿಂದ ಕೂಡಿದ ರಾಜ್ಯ (4)
5.ಕೊನೆಯಾಯ್ತು-ಮುಗಿಯಿತು ಎಂಬರ್ಥದ ಶಬ್ದ (3)
6.ಆ ವಯಸ್ಕ ವ್ಯಕ್ತಿಯ ದೇಹದ ಅಂಗ (4)
8.ಪಟಾಕಿ-ಬೆಂಕಿಪೊಟ್ಟಣ ತಯಾರಿಕೆಗೆ ಬೇಕಾದ ರಾಸಾಯನಿಕ (3)
10.ಗೌರವ ಪೂರ್ವಕವಾಗಿ ಸಲ್ಲಿಸುವ ನಮಸ್ಕಾರ (3)
12.ಸಮಸ್ಯೆಗೆ ಉತ್ತರ ಸಿಕ್ಕು ವಿವಾದ ಕೊನೆಗೊಳ್ಳುವುದು (4)
14.ಆಸೆಗಳನ್ನು ತೊರೆದ ಸೂಫಿ ಸಾಧಕ (3)
15.ಮಂದಿಯ ಒಕ್ಕೂಟಕ್ಕಿರುವ ಶಕ್ತಿ (4)
16.ಹರಿಗೆ ಈ ನಡುವೆ ಕಂಡ ಮೊಂಡುವ್ಯಕ್ತಿ (4)

**ಮೇಲಿನಿಂದ ಕೆಳಕ್ಕೆ**

1.ಕನಿಕರದಿಂದ ಕೂಡಿದ ಕಳವಳ ತಲೆಕೆಳಗಾಗಿದೆ (3)
2.ಉಲ್ಟಾ ಕಾಣುತ್ತಿರುವ ತಂಗಲು ಇರುವ ಸೌಲಭ್ಯ (3)
3.ಮಲಗಿದಂತಿರುವ ಒಳಗಿನ ಶಕ್ತಿ (5)
4.ಅರಸನು ಇರುವ ನಿವಾಸ (5)
7.ಸ್ಥೂಲಕಾಯದ ವ್ಯಕ್ತಿ ತಲೆಕೆಳಗಾಗಿದ್ದಾನೆ (3)
8.ಕೇಳುಗರನ್ನು ಮೈಮರೆಸುವ ದಿವ್ಯ ಗಾಯನ (5)
9.ಬಾಳೆಹಣ್ಣಿನ ಸಂಸ್ಕೃತನಾಮ (5)
11.ಬೆಣ್ಣೆ ತೆಗೆದ ಮೇಲೆ ಉಳಿವ ದ್ರವ (3)
12.ಕನ್ನಡ ಟೈಪಿಸಲು ಬಳಸುವ ಪ್ರಸಿದ್ಧ ತಂತ್ರಾಂಶ (3)
13.ಕೆಟ್ಟ ಯಂತ್ರ ಸರಿಪಡಿಸುವ ಕ್ರಿಯೆ (3)

### 6025 ಉತ್ತರ

**ಎಡದಿಂದ ಬಲಕ್ಕೆ:**

1.ಪನ್ನಗ 4.ಸುಕೃತಕರ್ಮಿ
6.ನೀರಜ 7.ಸಮಯ
9.ನರಕುಲ 10.ಭಾನುಮತಿ
12.ಗರತಿ 14.ಕೋವಿದ
15.ಅಂತರಪಟ 17.ಕೆದರು

**ಮೇಲಿನಿಂದ ಕೆಳಕ್ಕೆ:**

1.ಪರಿಹಾಸ
2.ಗಣನೀಯ 3.ಶೀತ
4.ಸುಜನ 5.ಕಡಲತೀರ
8.ಮಹಾಭಾರತ
11.ತಿಕೋಟ 12.ಗದರಿಕೆ
13.ತಿಳಿಸಾರು 16.ರಘು

# ನಾಳೆಯಿಂದ ಹುಬ್ಬಳ್ಳಿಯಲ್ಲಿ ಮಹರಾಜ ಟ್ರೋಫಿ

**ಹುಬ್ಬಳ್ಳಿ:** ಹಚ್ಚ ಹಸಿರಿನಿಂದ ಕೂಡಿದ ಇಲ್ಲಿನ ನೃಪತುಂಗ ಬೆಟ್ಟದ ಹತ್ತಿರವಿರುವ ರಾಜನಗರದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ( ಕೆಎಸ್‌ಸಿಎ) ಮೈದಾನ ಕಳೆದ ನಾಲ್ಕು ತಿಂಗಳ ಬಳಿಕ ಮತ್ತೊಂದು ಚುಟುಕು ಕ್ರಿಕೆಟ್ ಹಬ್ಬಕ್ಕೆ ಸಿದ್ಧವಾಗಿದೆ.

ರಣಜಿ ಫೈನಲ್ ಪಂದ್ಯಕ್ಕೆ ವೇದಿಕೆಯಾಗಿದ್ದ ಈ ಮೈದಾನದಲ್ಲಿ ಜೂ.27ರಿಂದ ಜು.3ರ ವರೆಗೆ ಮಹರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯ ಎರಡನೇ ಹಂತದ ಪಂದ್ಯಗಳು ಇಲ್ಲಿ ನಡೆಯಲಿವೆ. ಆರು ತಂಡಗಳು ಸೆಣಸಲಿದ್ದು, ಜನಪ್ರಿಯ ಆಟಗಾರರಾದ ಮನೀಶ್ ಪಾಂಡೆ, ಕರುಣ ನಾಯರ್, ಮಯಾಂಕ್ ಅಗರವಾಲ್, ವೈಶಾಕ ವಿಜಯಕುಮಾರ ಸೇರಿದಂತೆ 150 ಆಟಗಾರರು ಭಾಗವಹಿಸಲಿದ್ದಾರೆ. ಐದು ದಿನತಲಾ

ಎರಡು ಪಂದ್ಯಗಳು ಹಾಗೂ ಎರಡು ದಿನ ತಲಾ ಒಂದು ಪಂದ್ಯ ಸೇರಿ ಒಟ್ಟು 12 ಪಂದ್ಯಗಳು ಇಲ್ಲಿ ನಡೆಯುತ್ತವೆ.

ನಗರದಲ್ಲಿ ಮೋಡ ಕವಿದ ವಾತಾವರಣವಿದ್ದು, ಆಗಾಗ ತುಂತುರು ಮಳೆ ಬೀಳುತ್ತಿದೆ.



## ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್‌ನಲ್ಲಿ ನೇರ ಪ್ರಸಾರ

ಮಹರಾಜ ಟ್ರೋಫಿ ಎರಡನೇ ಹಂತ ಪಂದ್ಯಕ್ಕೆ ರಾಜನಗರ ಮೈದಾನ ಸಿದ್ಧವಾಗಿದೆ. ಸೋನಿ ಸ್ಪೋರ್ಟ್ಸ್ ನೆಟ್‌ವರ್ಕ್‌ನಲ್ಲಿ ಪಂದ್ಯಗಳ ನೇರ ಪ್ರಸಾರ ಇರಲಿದೆ. ಪಂದ್ಯ ವೀಕ್ಷಣೆಗೆ ಬರುವ ಸಾರ್ವಜನಿಕರು, ಕ್ರಿಕೆಟ್ ಪ್ರೇಮಿಗಳ ಅನುಕೂಲಕ್ಕಾಗಿ ಕುಡಿಯುವ ನೀರು, ಶೌಚಾಲಯ ವ್ಯವಸ್ಥೆ ಮಾಡಲಾಗಿದೆ ಎಂದು ಧಾರವಾಡ ವಲಯ ನಿಮಂತ್ರಕ ವೀರಣ್ಣ ಸವಡಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಲ್ಲದೆ, ಆರು ಸ್ಟಾಲ್‌ಗಳನ್ನು ಹಾಕಲಾಗುವುದು. ತುರ್ತು ಸಂದರ್ಭದಲ್ಲಿ ನೆರವಿಗೆ ಎಸ್‌ಡಿಎಂ ಆಸ್ಪತ್ರೆಯಿಂದ ಆಂಬ್ಯುಲೆನ್ಸ್, ವೈದ್ಯರನ್ನು ಒದಗಲಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಚೇರಮನ್ ಅಲ್ತಾಪ್ ಕಿತ್ತೂರ ಇದ್ದರು.

ಟೂರ್ನಿಗೆ ಮಳೆ ಆತಂಕವಿದ್ದರೂ ಸಹ 50ಕ್ಕೂ ಹೆಚ್ಚು ಸಿಬ್ಬಂದಿ ಪರಿಸ್ಥಿತಿ ನಿರ್ವಹಣೆಗೆ ಸಿದ್ಧರಾಗಿದ್ದಾರೆ. ಸಂಪೂರ್ಣ ಮೈದಾನ ಮುಚ್ಚಲು ಟಾರ್ಫಲ್ (ಕವರ್) ತಯಾರಿ ಮಾಡಿಕೊಳ್ಳಲಾಗಿದೆ. ಸೂಪರ್ ಸಾಪರ್, ಲಾಂಗ್ ಓವರ್ ಸೇರಿದಂತೆ ಹಲವು ಯಂತ್ರಗಳಿವೆ. ಫ್ಲಡ್ ಲೈಟ್ ತೆರವು ಮಾಡಿ ಎಲ್‌ಇಡಿ ದೀಪಗಳನ್ನು ನಾಲ್ಕು ಟವರ್‌ಗೆ ಅಳವಡಿಸಲಾಗಿದೆ.

**8 ಸಾವಿರ ಆಸನ ವ್ಯವಸ್ಥೆ:** ಮೈದಾನದಲ್ಲಿ 8 ಸಾವಿರ ಪ್ರೇಕ್ಷಕರ ಕುಳಿತುಕೊಂಡು ಪಂದ್ಯ ವೀಕ್ಷಿಸಲು ಆಸನಗಳ ವ್ಯವಸ್ಥೆ ಮಾಡಲಾಗಿದೆ. 150 ಹಾಗೂ 200 ರೂ. ಟಿಕೆಟ್ ದರ ನಿಗದಿ ಮಾಡಿದ್ದು, ಈಗಾಗಲೇ 33 ಸಾವಿರ ರೂಪಾಯಿ ಟಿಕೆಟ್ ಖರೀದಿಯಾಗಿವೆ. ಮೂರನೇ ಗೇಟ್ ಹಾಗೂ 4ಗೇಟ್‌ನಲ್ಲಿ ಪಂದ್ಯ ವೀಕ್ಷಣೆಗೆ ಬರುವ ಪ್ರೇಕ್ಷಕರಿಗೆ ಟಿಕೆಟ್ ನೀಡುವ ವ್ಯವಸ್ಥೆ ಕಲ್ಪಿಸಲಾಗಿದೆ. ಒಂದು ಪಂದ್ಯ ಮುಗಿದ ಬಳಿಕ ಮತ್ತೊಂದು ಪಂದ್ಯ ವೀಕ್ಷಿಸಲು ಟಿಕೆಟ್ ಮತ್ತೆ ಪಡೆಯುವ ಅವಕಾಶ ನೀಡಲಾಗಿದೆ ಎಂದು ಮಹರಾಜ ಟ್ರೋಫಿ ಆಡಳಿತ ಮಂಡಳಿ ಸದಸ್ಯ ಎ.ವಿ.ಶಶಿಧರ ತಿಳಿಸಿದರು.

ಮೊದಲ ಗೇಟ್‌ನಿಂದ ಆಟಗಾರರು, ಕೆಎಸ್‌ಸಿಎ ಸಿಬ್ಬಂದಿ, ಬಿಸಿಸಿಐ ಭ್ರಷ್ಟಾಚಾರ ನಿಗ್ರಹ ಘಟಕವು ಸಿಬ್ಬಂದಿಗೆ, ಮೂರನೇ ಗೇಟ್‌ನಿಂದ ಪ್ರಾಯೋಜಕರು, ಐದನೇ ಗೇಟ್‌ನಿಂದ ಹು-ಧಾ ಕ್ಲಬ್‌ನ ಆಟಗಾರರಿಗೆ ಉಚಿತ ಪ್ರವೇಶ (300 ಆಸನ ಸಾಮರ್ಥ್ಯ) ಇರಲಿದೆ ಎಂದು ಧಾರವಾಡ ವಲಯ ನಿಮಂತ್ರಕ ವೀರಣ್ಣ ಸವಡಿ ತಿಳಿಸಿದರು.

# ಸಂತ್ರಸ್ತರ ಹಿತ ಕಾಪಾಡಲು ಬದ್ಧ: ಸಚಿವ ಎಂಬಿಪಾ

**ವಿಜಯಪುರ:** ಯುಕೆಪಿ 3ನೇ ಹಂತದಲ್ಲಿ ಬರುವ ಆಲಮಟ್ಟಿ ಜಲಾಶಯ ಎತ್ತರದ ಹಿನ್ನೀರಿನಿಂದ ಬಾಧಿತವಾಗುವ ಎಲ್ಲ ಗ್ರಾಮಸ್ಥರ ಹಿತ ಕಾಪಾಡಲು ಬದ್ಧನಾಗಿದ್ದೇನೆ ಎಂದು ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.

ತಮ್ಮ ಗೃಹ ಕಚೇರಿಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆ ಮುಳುಗಡೆ ಸಂತ್ರಸ್ಥರ ಹೋರಾಟ ಸಮಿತಿ ಪದಾಧಿಕಾರಿಗಳು ಮತ್ತು ರೈತರೊಂದಿಗೆ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಆಲಮಟ್ಟಿ ಜಲಾಶಯದ ಎತ್ತರ ಹೆಚ್ಚಳ ಮತ್ತು ನೀರು ಹಂಚಿಕೆ ಕುರಿತು 2010ರಲ್ಲಿ ತೀರ್ಪು ಬಂದಿತ್ತು. ನಂತರ 2013ರಲ್ಲಿ ನಾನು ಜಲಸಂಪನ್ಮೂಲ ಸಚಿವನಾಗಿದ್ದಾಗ ಒಟ್ಟು 130 ಟಿಎಂಸಿ ನೀರು ಹಂಚಿಕೆಯಾಗಿತ್ತು. ಇದರಿಂದ 1.30 ಲಕ್ಷ ಎಕರೆ ಭೂಸ್ವಾಧೀನ ಅಗತ್ಯವಾಗಿತ್ತು. ಪ್ರತಿ ಎಕರೆ ಒಣಬೇಸಾಯ ಜಮೀನಿಗೆ ರೂ. 8 ಲಕ್ಷ ಮತ್ತು ನೀರಾವರಿ ಜಮೀನಿಗೆ ರೂ. 12 ಲಕ್ಷ ನಿಗದಿ ಪಡಿಸಲಾಗಿತ್ತು. ಆದರೆ, ಅಂದು ಹಣಕಾಸು ಇಲಾಖೆ ಸಧ್ಯಕ್ಕೆ ಆರ್ಥಿಕವಾಗಿ ಯೋಜನೆ ಜಾರಿ ಮತ್ತು ಪರಿಹಾರ ಕಾರ್ಯಸಾಧುವಲ್ಲ ಎಂದು ಯೋಜನೆಯನ್ನು ಮುಂದೂಡಿತ್ತು. ಆದರೆ, 2023ರಲ್ಲಿ ನಮ್ಮ ಸರಕಾರ ಮತ್ತೆ ಅಧಿಕಾರಕ್ಕೆ ಬಂದಮೇಲೆ ನಾನು ಅಂದಿನ ಸಿಎಂ ಸಿದ್ದರಾಮಯ್ಯ, ಜಲಸಂಪನ್ಮೂಲ ಸಚಿವ ಡಿ.ಕೆ. ಶಿವಕುಮಾರ ಅವರಿಗೆ ಒತ್ತಡ ತಂದು ಹೊಸ ನಿಗದಿತ ದರದಂತೆ ಒಣಬೇಸಾಯ ಜಮೀನಿಗೆ ರೂ. 30 ಲಕ್ಷ ಮತ್ತು ನೀರಾವರಿ ಭೂಮಿಗೆ ರೂ. 40 ಲಕ್ಷ ಪರಿಹಾರ ನೀಡಲು ಕ್ರಮ ಕೈಗೊಂಡಿದ್ದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿಯೇ ಬಬಲೇಶ್ವರ ತಾಲೂಕಿನ ಬಾಧಿತ ಗ್ರಾಮಗಳಿಗೆ ಸೂಕ್ತ ಪರಿಹಾರ ಒದಗಿಸಲು ನಾನಾ ಹಂತಗಳಲ್ಲಿ ಅಧಿಸೂಚನೆ ಹೊರಡಿಸಲು ಕ್ರಮ ಕೈಗೊಳ್ಳಲು ಕಾರ್ಯೋನ್ಮುಖನಾಗಿದ್ದೇನೆ ಎಂದು ಅವರು ತಿಳಿಸಿದರು. ಮುಖಂಡರಾದ ಮುತ್ತು ದೇಸಾಯಿ, ವಿ.ಎಚ್ .ಬಿದರಿ, ಜೀರಗಾಳ ವಕೀಲರು, ಕೆ.ಸಿ.ದೇಸಾಯಿ, ಅಶೋಕ ಮಲಘಾಣ, ಕುಮಾರ ದೇಸಾಯಿ, ರಾಮಚಂದ್ರ ಕೊಡಬಾಗಿ, ಬಿ.ಡಿ.ಪಾಟೀಲ, ಬಿ.ಆರ್ .ದೇಸಾಯಿ ಇದ್ದರು.



## 75,563 ಎಕರೆ ಜಮೀನು ಮುಳುಗಡೆಯಾಗುವ ಸಾಧ್ಯತೆ

ಆಲಮಟ್ಟಿ ಜಲಾಶಯವನ್ನು 524.256 ಮೀಟರ್‌ಗೆ ಹೆಚ್ಚಳ ಮಾಡುವುದರಿಂದ ಅಣೆಕಟ್ಟೆಯ ಹಿನ್ನೀರಿನಲ್ಲಿ ಒಟ್ಟು 75,563 ಎಕರೆ ಜಮೀನು ಮುಳುಗಡೆಯಾಗುವ ಸಾಧ್ಯತೆಯಿದೆ. ಅದರಂತೆ ಈ ವರ್ಷದಲ್ಲಿ 49 ಗ್ರಾಮಗಳ ಅಂದಾಜು 15000 ಎಕರೆ ಜಮೀನಿಗೆ ಪರಿಹಾರ ಪಾವತಿಸುವ ಸಾಧ್ಯತೆ ಇದೆ. ಅಲ್ಲದೇ, 2026-27 ಮತ್ತು 2027-28ನೇ ಆರ್ಥಿಕ ವರ್ಷದಲ್ಲಿ ಒಟ್ಟು 79 ಗ್ರಾಮಗಳು ಪ್ರಾಥಮಿಕ ಅಧಿಸೂಚನೆ 11(1) ಅವಾರ್ಡ್ ವರೆಗೆ ನಾನಾ ಹಂತಗಳಲ್ಲಿವೆ. ಅದರಲ್ಲಿ ವಿಜಯಪುರ ಜಿಲ್ಲೆಯ 31 ಗ್ರಾಮಗಳ ಪೈಕಿ ಆರು ಗ್ರಾಮಗಳು ಮಾತ್ರ ಸೇರಿವೆ. 14 ಕಂದಾಯ ಮತ್ತು ಒಂದು ಉಪಗ್ರಾಮಗಳು ಮುಳುಗಡೆ ವ್ಯಾಪ್ತಿಗೆ ಬರುತ್ತವೆ. ಒಟ್ಟು 75563 ಎಕರೆ ಪೈಕಿ ಬಬಲೇಶ್ವರ ತಾಲೂಕಿನ 5600 ಎಕರೆ ಭೂಸ್ವಾಧೀನವಾಗುತ್ತಿದ್ದು, 49 ಗ್ರಾಮಗಳಿಗೆ ಅಂದಾಜು ರೂ. 3000 ಕೋ. ಪರಿಹಾರ ಪಾವತಿ ಸಂದರ್ಭದಲ್ಲಿ ಕನಿಷ್ಠ 1000 ಎಕರೆಗೆ ಸರಾಸರಿ ರೂ. 500 ಕೋ. ಪರಿಹಾರ ಮೀಸಲಿಡಲು ಕೇಳಿದ್ದೇನೆ. ಅಲ್ಲದೇ, ಈಗಾಗಲೇ 11(1) ಪ್ರಾಥಮಿಕ ಅಧಿಸೂಚನೆ ಜಾರಿಯಾಗಿ ನಾನಾ ಹಂತಗಳಲ್ಲಿರುವ ಶಿರಬೂರ, ಕಣಬೂರ, ಚಿಕ್ಕಗಲಗಲಿ ಮತ್ತು ಬಾಕಿ ಉಳಿದ 10 ಗ್ರಾಮಗಳಿಗೂ ಸಹ 11(1) ಅಧಿಸೂಚನೆ ಜಾರಿ ಮಾಡಲು ಸರಕಾರ ಮುಂದಾಗಿದೆ ಎಂದು ಅವರು ತಿಳಿಸಿದರು.

# ಬ್ರಿಟನ್ ವೂಲ್ವರ್ ಹ್ಯಾಂಪ್ಟನ್ ವಿಶ್ವವಿದ್ಯಾಲಯ ಅಧ್ಯಯನ ಪ್ರವಾಸಕ್ಕೆ ಆಯ್ಕೆ

**ವಿಜಯಪುರ:** ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಮಂಡಳಿ (ಕೆಎಸ್‌ಎಚ್ ಇಸಿ), ಕರ್ನಾಟಕ ಸರ್ಕಾರ ಹಾಗೂ ಬ್ರಿಟಿಷ್ ಕೌನ್ಸಿಲ್ ಸಹಯೋಗದಲ್ಲಿ ಆಯೋಜಿಸಿರುವ ಸ್ಕಾಲರ್ಸ್ ಫಾರ್ ಔಟ್ ಸ್ಟ್ಯಾಂಡಿಂಗ್ ಅಂಡರ್ ಗ್ರ್ಯಾಜುಯೇಟ್ ಟ್ಯಾಲೆಂಟ್ ಮತ್ತು ಕ್ಲೈಮೇಟ್ ರೆಸಿಲೆಯನ್ಸ್ ಸಿಟೀಸ್, ಲೀಡರಶಿಪ್ ಹಾಗೂ ಇಕ್ವಿಟಿ ಕಾರ್ಯಕ್ರಮಗಳ ಅಂಗವಾಗಿ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಐವರು ವಿದ್ಯಾರ್ಥಿನಿಯರು ಹಾಗೂ ಒಬ್ಬ ನೋಡಲ್ ಅಧಿಕಾರಿ ಇಂಗ್ಲೆಂಡ್‌ನ ವೂಲ್ವರ್ ಹ್ಯಾಂಪ್ಟನ್ ವಿಶ್ವವಿದ್ಯಾಲಯಕ್ಕೆ ಶೈಕ್ಷಣಿಕ ಅಧ್ಯಯನ ಪ್ರವಾಸಕ್ಕಾಗಿ ಆಯ್ಕೆಯಾಗಿದ್ದಾರೆ.

ಜೂನ್ 27ರಿಂದ ಜುಲೈ 11ರ ವರೆಗೆ ನಡೆಯಲಿರುವ ಈ ಪ್ರತಿಷ್ಠಿತ ಅಂತಾರಾಷ್ಟ್ರೀಯ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾಲಯದ ಹಿಂದಿ ವಿಭಾಗದ ಮುಖ್ಯಸ್ಥೆ ಹಾಗೂ ಕಲಾ ನಿಕಾಯದ ಡೀನ್ ಪ್ರೊ.ರಾಜು ಬಾಗಲಕೋಟ ಅವರು ನೋಡಲ್ ಅಧಿಕಾರಿಯಾಗಿ ಪಾಲ್ಗೊಳ್ಳಲಿದ್ದಾರೆ.



ವಿದ್ಯಾರ್ಥಿನಿಯರಾದ ಕಲ್ಪನಾ ರಾಠೋಡ್, ಅಶ್ವಿನಿ ಕಾಳೇಕರ್, ಐಶ್ವರ್ಯ ಪಾಟೀಲ, ಶಾಹೀನ್ ಬಿರಾದಾರ ಹಾಗೂ ಅಕ್ಷತಾ ಕುಲಕರ್ಣಿ ಅವರು ವಿಶ್ವವಿದ್ಯಾಲಯವನ್ನು ಪ್ರತಿನಿಧಿಸಲಿದ್ದಾರೆ. ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್. ಲಕ್ಕಣ್ಣನವರ, ಹಣಕಾಸು ಅಧಿಕಾರಿ ರಾಮಣ್ಣ ಅಥಣಿ, ಯುಜಿಸಿ ಬ್ಲಾಕ್ ವಿಶೇಷಾಧಿಕಾರಿ ಪ್ರೊ. ಸಕ್ಪಾಲ್ ಹೂವಣ್ಣ, ವಿದ್ಯಾರ್ಥಿ ನಿರ್ದೇಶನಾಲಯದ ನಿರ್ದೇಶಕಿ ಪ್ರೊ. ಜ್ಯೋತಿ ಉಪಾಧ್ಯೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಅಭಿನಂದನೆ ಸಲ್ಲಿಸಿ ಶುಭ ಕೋರಿದ್ದಾರೆ.

# ವಿಷನ್ ಕರ್ನಾಟಕ-2 ಭವ್ಯ ಪ್ರದರ್ಶನ ಯಶಸ್ವಿ

**ಬೆಳಗಾವಿ:** "ವಿಷನ್ ಕರ್ನಾಟಕ-2" ಭವ್ಯ ಪ್ರದರ್ಶನದಿಂದ ಜನರಿಗೆ ದೊರೆತ ಮಾಹಿತಿಯು ಬೆಳಗಾವಿಯ ಅಭಿವೃದ್ಧಿಗೆ ಹೊಸ ದಿಕ್ಕು ನೀಡಲಿದ್ದು, ಅಭಿವೃದ್ಧಿಯ ಬೀಜಗಳನ್ನು ಬಿತ್ತಲಿದೆ ಎಂದು ಸಂಸದ ಜಗದೀಶ ಶೆಟ್ಟರ ಅಭಿಪ್ರಾಯಪಟ್ಟರು.

ಬೆಳಗಾವಿಯ ಕೆಎಲ್‌ಇ ಸೊಸೈಟಿಯ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಿದ್ದ ಮೂರು ದಿನಗಳ "ವಿಷನ್ ಕರ್ನಾಟಕ-2" ಪ್ರದರ್ಶನದ ಸಮಾರೋಪದಲ್ಲಿ ಅವರು ಮಾತನಾಡಿದರು.

ಕಳೆದ ಮೂರು ದಿನಗಳಿಂದ ನಡೆದ ಈ ಪ್ರದರ್ಶನಕ್ಕೆ 22 ಸಾವಿರಕ್ಕೂ ಅಧಿಕ ಶಾಲಾ-ಕಾಲೇಜು ವಿದ್ಯಾರ್ಥಿಗಳು ಹಾಗೂ ಬೆಳಗಾವಿ ನಗರ ಮತ್ತು ಸುತ್ತಮುತ್ತಲಿನ ನಾಗರಿಕರು ಭೇಟಿ ನೀಡಿದ್ದು, ಪ್ರದರ್ಶನಕ್ಕೆ ಅಭೂತಪೂರ್ವ ಸ್ಪಂದನೆ ವ್ಯಕ್ತವಾಗಿದೆ.

ಜನರ ಉತ್ಸಾಹಭರಿತ ಭಾಗವಹಿಸುವಿಕೆಯಿಂದ ಕೇಂದ್ರ ಸರ್ಕಾರದ ಯೋಜನೆಗಳು ಮತ್ತು ವಿವಿಧ ಇಲಾಖೆಗಳ ಕಾರ್ಯಚಟುವಟಿಕೆಗಳು ಮನೆಮನೆಗೂ ತಲುಪಿದಂತಾಗಿದೆ ಎಂದು ಆಯೋಜಕರು ತಿಳಿಸಿದರು.




ರಮೇಶ್ ದೇಶಪಾಂಡೆ, ಮಾಜಿ ಕಾರ್ಪೊರೇಟರ್ ರಮೇಶ್ ಉಪ್ಪಿನ್, ಎಲ್ ಐಸಿ ಹಿರಿಯ ವಿಭಾಗೀಯ ವ್ಯವಸ್ಥಾಪಕ ಎಸ್.ಎ ಅಲ್ಲಾಬಾಷಾ, ಮಾರ್ಕೆಟಿಂಗ್ ವ್ಯವಸ್ಥಾಪಕ ಪಿ. ಹರಿನಾಥ್, ರೈಲ್ವೆ ಹಿರಿಯ ವ್ಯವಸ್ಥಾಪಕ ಮಂಜುನಾಥ್, ಪ್ರಯಾಸ್ ಅಧ್ಯಕ್ಷ ವನೀಶ್ ಗುಪ್ತಾ, ನಿರ್ದೇಶಕಿ ಮೀತು ಪಾಲ್-ಗುಪ್ತಾ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

ಸುನೀತಾ ದೇಸಾಯಿ ಕಾರ್ಯಕ್ರಮ ನಿರೂಪಿಸಿದರು. ಮೀತು ಪಾಲ್ ಧನ್ಯವಾದ ಸಲ್ಲಿಸಿದರು. ಬಿಜೆಪಿ ಕಾರ್ಯದರ್ಶಿ ನಾಗರಾಜ ಪಾಟೀಲ್, ಪಂಕಜ್ ರಾಯಮಾನೆ, ಸಂತೋಷ ಪವಾರ್, ದತ್ತಾ ಥೋರೆ, ಅದಿತಿ ಸಕ್ಸೇನಾ, ಮಹಕ್ ಗಿರ್ಬಾನಿ, ವಿಶಾಲ್ ಮಲಿಕ್, ಅಫ್ಜಲ್ ಖಾನ್ ಹಾಗೂ ವಿನೋದ್ ಕುಮಾರ್ ಸೇರಿದಂತೆ ಅನೇಕರು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದರು.

## ವಿವಿಧ ಸರ್ಕಾರಿ ಇಲಾಖೆಗಳಿಗೆ ಪ್ರಶಸ್ತಿ

ಪ್ರದರ್ಶನದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದ ವಿವಿಧ ಸರ್ಕಾರಿ ಇಲಾಖೆ ಹಾಗೂ ಸಂಸ್ಥೆಗಳಿಗೆ ಅತ್ಯುತ್ತಮ ಪ್ರದರ್ಶನಕ್ಕಾಗಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

## ಕಿರುಸುದ್ದಿ

### ಪರಿಷ್ಕರಣೆ ನೆಪ: ಪಾಟೀಲ



**ಮುಂಡರಗಿ:** ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವ ಮುಂಚೆ ಪಂಚ ಗ್ಯಾರಂಟಿ ಯೋಜನೆ ಘೋಷಣೆ ಮಾಡಿ ಅಧಿಕಾರ ಪಡೆದುಕೊಂಡ ನಂತರ ಈಗ ಗ್ಯಾರಂಟಿ ಯೋಜನೆ ಪರಿಷ್ಕರಣೆ ನೆಪ ಹೇಳಿ ರಾಜ್ಯದ ಮತದಾರರಿಗೆ ವಂಚನೆ ಮಾಡುತ್ತಿದೆ ಎಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಆನಂದಗೌಡ ಪಾಟೀಲ ಆರೋಪಿಸಿದರು. ಅವರು ಸುದ್ದಿಗಾರರೊಂದಿಗೆ ಮಾತನಾಡಿ, ಇವತ್ತು ಯಾರೆಲ್ಲ ತೆರಿಗೆ ಕಟ್ಟುತ್ತಿದ್ದಾರೆ ಅಂಥವರಿಗೆ ಗ್ಯಾರಂಟಿ ಯೋಜನೆಯಿಂದ ಹೊರಗೆ ಇಡಲು ಮುಂದಾಗುತ್ತಿದೆ. ಆ ಮೂಲಕ ಸುಮಾರು 100 ಕೋಟಿ ರೂಪಾಯಿ ಉಳಿಸುತ್ತದೆ ಎನ್ನುವ ಕಾಂಗ್ರೆಸ್ ಅವತ್ತು ಯಾವುದೇ ನಿಯಮಗಳನ್ನು ಹೇಳದೆ ಮತ ಪಡೆದು ಈಗ ನೆಪ ಹೇಳುತ್ತಿರುವುದು ಯಾವ ನ್ಯಾಯ? ತಾಲೂಕಿಗೆ ಒಂದು ಗ್ಯಾರಂಟಿ ಯೋಜನೆ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರ ನೇಮಕ ಮಾಡಿ ಅವರಿಗೆ ತಿಂಗಳಿಗೆ 25,000 ಸಾವಿರಾರದಿಂದ ಹೆಚ್ಚು ಸಾರ್ವಜನಿಕರ ತೆರಿಗೆ ಹಣ ನೀಡುತ್ತಿದ್ದರಲ್ಲಾ ಅವರಲ್ಲಿ ಬಹುತೇಕ ಜನರು ತೆರಿಗೆ ಕಟ್ಟುವವರಿದ್ದಾರೆ. ಅವರಿಗೆ ಏಕೆ ಫ್ರೀ ಹಣ ನೀಡುತ್ತಿರಿ ಎಂದು ಪ್ರಶ್ನಿಸಿದರು.

### ಆರೋಪಿಗೆ 'ಜಾಗೃತಿ' ಶಿಕ್ಷೆ

**ನರಗುಂದ:** ಪಟ್ಟಣದ ರಾಚಯ್ಯ ನಗರದ ನಿವಾಸಿ ಪ್ರತೀಕ್ಷ ವೀರಭದ್ರಪ್ಪ ತಳವಾರ ಈತನ ವಿರುದ್ಧ ಹುಬ್ಬಳ್ಳಿ-ವಿಜಯಪುರ ರಾಷ್ಟ್ರೀಯ ಹೆದ್ದಾರಿಯಲ್ಲಿ ಬೈಕ್ ವ್ಹೀಲಿಂಗ್ ಮಾಡಿರುವುದಾಗಿ ಆರೋಪಿಸಿ ಚಾರ್ಜ್ ಶೀಟ್ ಸಲ್ಲಿಸಲಾಗಿತ್ತು. ಜೆ.ಎಮ್.ಎಫ್.ಸಿ ನ್ಯಾಯಾಲಯದ ನ್ಯಾಯಾಧೀಶ ಜಿನ್ನಪ್ಪಾ ಚೌಗಲಾ ಅವರು ಜೂನ್ 23 ರಂದು ಆರೋಪಿಗೆ ಒಟ್ಟು ರೂ.8,500 ದಂಡದ ಜೊತೆಗೆ ತಾಲೂಕಿನ ಎಲ್ಲಾ ಪಿಯು ಕಾಲೇಜುಗಳಲ್ಲಿ ಪ್ರತಿಯೊಂದು ತರಗತಿಗಳಿಗೆ ತೆರಳಿ ಎಲ್ಲಾ ವಿದ್ಯಾರ್ಥಿಗಳಿಗೆ ತನ್ನ ಆರೋಪದ ಕುರಿತು ಹಾಗೂ ಅದರ ಶಿಕ್ಷೆಯ ಕುರಿತು ಹಾಗೂ ಮೋಟಾರು ವಾಹನ ಕಾಯ್ದೆಗಳ ಬಗ್ಗೆ, ಅಪ್ರಾಪ್ತರ ವಾಹನ ಚಾಲನೆಯಿಂದಾಗುವ ಪರಿಣಾಮಗಳ ಬಗ್ಗೆ, ಕುಡಿದು ವಾಹನ ಚಲಾಯಿಸುವ ಬಗ್ಗೆ ಜಾಗೃತಿ ಮೂಡಿಸುವ ಶಿಕ್ಷೆಯನ್ನು ವಿಧಿಸುವ ಮೂಲಕ ನ್ಯಾಯಾಧೀಶ ಜಿನ್ನಪ್ಪಾ ಚೌಗಲಾ ಅವರು ಯುವ ಸಮುದಾಯಕ್ಕೆ ಜಾಗೃತಿ ಮೂಡಿಸಿದ್ದಾರೆ.

### ತಾತ್ಕಾಲಿಕ ಸ್ಥಗಿತ

**ಗದಗ:** ವಾ.ಕ.ರ.ಸಾ.ಸಂಸ್ಥೆಯ ವಿದ್ಯಾರ್ಥಿ ಬಸ್ ಪಾಸ್ ಅರ್ಜಿ ಸಲ್ಲಿಕೆ/ಬಸ್ ಪಾಸ್ ವಿತರಣೆ ಸೇವೆ ಸೇವಾಸಿಂಧು ಮುಖೇನ ಕೈಗೊಳ್ಳಲಾಗುತ್ತಿದೆ. ಕರ್ನಾಟಕ ರಾಜ್ಯ ದತ್ತಾಂಶ ಕೇಂದ್ರ ಜೂ.25ರ ಸಂಜೆ 8ರಿಂದ ಜೂ.26ರ ರಾತ್ರಿ 10ರವರೆಗೆ ಸೇವಾಸಿಂಧು ತಂತ್ರಾಂಶ ದುರಸ್ಥಿ ಕಾರ್ಯ ನಿರ್ವಹಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ. ಈ ಅವಧಿಯಲ್ಲಿ ಸಂಸ್ಥೆಯ ವಿದ್ಯಾರ್ಥಿ ಬಸ್ ಪಾಸ್ ಪಡೆಯಲು ಅರ್ಜಿ ಸಲ್ಲಿಕೆ ಮತ್ತು ಅರ್ಜಿ ವಿಲೇವಾರಿ ಕಾರ್ಯವು ಲಭ್ಯವಿರುವುದಿಲ್ಲ ಎಂದು ಮುಖ್ಯ ವಾ.ಕ.ರ.ಸಾ. ಸಂಸ್ಥೆ ಕೇಂದ್ರ ಕಚೇರಿ, ಸಂಚಾರ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಮದ್ಯ ನಿಷೇಧ

**ಗದಗ:** ಜಿಲ್ಲೆಯಾದ್ಯಂತ ಜೂ.26ರವರೆಗೆ ಹಿಂದೂ-ಮುಸ್ಲಿಂ ಸಮುದಾಯದವರು ಕೂಡಿಕೊಂಡು ಮೊಹರಂ ಹಬ್ಬದ ಆಚರಣೆ ನಡೆಯುತ್ತಿದ್ದು ಆ ಕಾಲಕ್ಕೆ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಈ ಕೆಳಗಿನಂತೆ ಜಿಲ್ಲೆಯಾದ್ಯಂತ ಮದ್ಯ ಸಾಗಾಟ ಮತ್ತು ಮದ್ಯ ಮಾರಾಟವನ್ನು ನಿಷೇಧಿಸಲಾಗಿದೆ. ಜೂ.25ರಂದು ಮಧ್ಯಾಹ್ನ 2ರಿಂದ ಜೂ.27 ರ ಬೆಳಗ್ಗೆ 6ರವರೆಗೆ ತಾಲೂಕಿನ ಗದಗ ಶಹರ, ಬೆಟಗೇರಿ, ಬೆಟಗೇರಿ ಬಡಾವಣೆ, ಗದಗ ಗ್ರಾಮೀಣ, ಮುಳಗುಂದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ, ಶಿರಹಟ್ಟಿ ಹಾಗೂ ಲಕ್ಷ್ಮೇಶ್ವರ ತಾಲೂಕಿನ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ, ರೋಣ ತಾಲೂಕಿನ ರೋಣ / ನರೇಗಲ್, ಗಜೇಂದ್ರಗಡ ತಾಲೂಕಿನ ಗಜೇಂದ್ರಗಡ/ ನರೇಗಲ್, ಮುಂಡರಗಿ ಹಾಗೂ ನರಗುಂದ ತಾಲೂಕಿನ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮದ್ಯ ಮಾರಾಟ ಮತ್ತು ಸಾಗಾಟ ನಿಷೇಧಿಸಲಾಗಿದೆ ಎಂದು ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

### ಪಲ್ಲಕ್ಕಿ ಉತ್ಸವ ನಾಳೆ

**ಗದಗ:** ಬೆಟಗೇರಿಯ ಹಳೇಬನಶಂಕರಿದೇವಿ ದೇವಸ್ಥಾನದಲ್ಲಿ ಜೂ.26 ರಂದು ಸಾಯಂಕಾಲ 6ರ ದೇವಾಂಗ ಮಹಿಳಾ ಮಂಡಳ ಸದಸ್ಯರಿಂದ ಲಲಿತ ಸಹಸ್ರ ನಾಮಾವಳಿ ಜರುಗಲಿದೆ. ಸಾಯಂಕಾಲ 7ರ ಬನಶಂಕರಿದೇವಿಯ ಪಲ್ಲಕ್ಕಿ ಉತ್ಸವ ಜರುಗಲಿದೆ. ಪಲ್ಲಕ್ಕಿ ಉತ್ಸವದ ಪ್ರಸಾದ ಸೇವೆ ಪ್ರದೀಪ ಕೋಟಿ ಹಾಗೂ ಕುಟುಂಬವರ್ಗದವರು ವಹಿಸಿಕೊಂಡಿದ್ದಾರೆ ಎಂದು ಹಳೇಬನಶಂಕರಿದೇವಿ ದೇವಸ್ಥಾನ ಟ್ರಸ್ಟ್ ಕಮಿಟಿ ತಿಳಿಸಿದೆ.

### ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

| | |
|---|---|
| ಕಡಲೆಕಾಳು | 3412-6050 |
| ಹತ್ತಿ | 7300-7300 |
| ಅಲಸಂದೆ | 6800-6800 |
| ಹೆಸರುಕಾಳು | 1989-4914 |
| ತೆಂಗು | 2553-2553 |
| ಜೋಳ | 2577-4765 |
| ಮೆಕ್ಕೆಜೋಳ | 1237-1669 |
| ಕುಸುಬೆ | 4877-5200 |
| ಗೋಧಿ | 1044-3477 |



ಗದಗ: ರಾಷ್ಟ್ರೀಯ ಎಂಎಸ್ಎಂಇ ದಿನಾಚರಣೆ-2026 ಅಂಗವಾಗಿ ಗದಗ ಜಿಲ್ಲೆಯಲ್ಲಿ ಜಾಗೃತಿ ಅಭಿಯಾನಕ್ಕೆ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಚಾಲನೆ ನೀಡಿ, ಜೂ.27ರಂದು ನಡೆಯುವ ರಾಷ್ಟ್ರವ್ಯಾಪಿ ಎಂಎಸ್ಎಂಇ ದಿನಾಚರಣೆಯಲ್ಲಿ ಉದ್ಯಮಿಗಳು ಹಾಗೂ ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸುವಂತೆ ಹೇಳಿದರು. ಎಂಎಸ್ಎಂಇ ದಿನಾಚರಣೆ-2026ರ ಜಾಗೃತಿ ಪೋಸ್ಟರ್‌ಗಳನ್ನು ಅನಾವರಣಗೊಳಿಸಲಾಯಿತು. ಜಿಪಂ ಉಪಕಾರ್ಯದರ್ಶಿ ಸಿ.ಆರ್.ಮುಂಡರಗಿ, ಲೀಡ್ ಬ್ಯಾಂಕ್ ಮ್ಯಾನೇಜರ್ ಸಂತೋಷ್ ಎಂ.ವಿ. ಸೇರಿದಂತೆ ಬ್ಯಾಂಕ್‌ನವರು ಇದ್ದರು.

## ಮೊಹರಂ: ಹುಲಿವೇಷಧಾರಿಗಳ ಸಂಭ್ರಮ ಜೋರು

**ಗಜೇಂದ್ರಗಡ:** ಗಜೇಂದ್ರಗಡದಲ್ಲಿ ಮೊಹರಂ ಹಬ್ಬದ ಅಂಗವಾಗಿ ಹುಲಿವೇಷಧಾರಿಗಳ ಸಂಭ್ರಮ ಜೋರಾಗಿದೆ. ನಗರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಯುವಕರು ಮತ್ತು ಭಕ್ತರು ಆಕರ್ಷಕ ಹುಲಿವೇಷ ತೊಟ್ಟು ಮನೆ ಮನೆಗೆ ತೆರಳಿ ನೃತ್ಯ ಪ್ರದರ್ಶಿಸುತ್ತಿದ್ದು, ಹಬ್ಬದ ವಾತಾವರಣವನ್ನು ಮತ್ತಷ್ಟು ರಂಗೇರಿಸುತ್ತಿದ್ದಾರೆ. ನಗರದ ಪ್ರಮುಖ ಮಸೀದಿಗಳಾದ ಮೌಲಾಲಿ ಮಸೀದಿ, ಬಿಬೀಫಾತೀಮಾ ಮಸೀದಿ, ಹಟೇಲಭಾಷಾ ಮಸೀದಿ, ಬಾರಾಇಮಾಮ ಮಸೀದಿ, ವಾಡೇ ದೇವರು ಮಸೀದಿ ಇನ್ನೂ ಮುಂತಾದ ಮಸೀದಿಗಳ ಮುಂದೆ ಹರಕೆಯ ಬುತ್ತಿಯನ್ನು ಹೊತ್ತ ಮಹಿಳೆಯರು, ಹುಲಿಗಳ ವೇಷದಲ್ಲಿನ ಯುವಕರು ನಗರದಲ್ಲಿ ಸಾಗುತ್ತಿರುವುದು ಆಕರ್ಷಣೀಯವಾಗಿದೆ. ಮೊಹರಂ ಹಬ್ಬದ ಅಂಗವಾಗಿ ಪ್ರತಿ ವರ್ಷವೂ ನಾವು ಹುಲಿವೇಷ ಧರಿಸಿ ಭಕ್ತಿಭಾವದಿಂದ ಭಾಗವಹಿಸುತ್ತೇವೆ. ಇದು ಕೇವಲ ವೇಷಧಾರಣೆ ಮಾತ್ರವಲ್ಲ, ನಮ್ಮ ಪೂರ್ವಜರಿಂದ ಬಂದಿರುವ ಸಂಪ್ರದಾಯವಾಗಿದೆ. ಹಬ್ಬದ ಸಂದರ್ಭದಲ್ಲಿ ಯುವಕರು ಒಗ್ಗಟ್ಟಿನಿಂದ ಸೇರಿ ಹುಲಿವೇಷ ತೊಟ್ಟು ಜನರಿಗೆ ಮನರಂಜನೆ ನೀಡುವುದರ ಜೊತೆಗೆ ಸೌಹಾರ್ದತೆಯ ಸಂದೇಶ ಸಾರುತ್ತೇವೆ ಎಂದು ಹುಲಿವೇಷಧಾರಿ ರಾಘು ಕಲಾಲ ತಿಳಿಸಿದ್ದಾರೆ. ಮೊಹರಂ ಹಬ್ಬದ ಸಂದರ್ಭದಲ್ಲಿ ಹುಲಿವೇಷಧಾರಿಗಳಿಗೆ ಬಣ್ಣ ಹಚ್ಚುವ ಕೆಲಸವನ್ನು ಹಲವು ವರ್ಷಗಳಿಂದ ಮಾಡುತ್ತಿದ್ದೇನೆ. ಹುಲಿಯ ನೈಜ ರೂಪ ಮೂಡಿಬರಲು ವಿಶೇಷ ಬಣ್ಣಗಳು ಮತ್ತು ವಿನ್ಯಾಸಗಳನ್ನು ಬಳಸಲಾಗುತ್ತದೆ. ಒಬ್ಬ ವ್ಯಕ್ತಿಗೆ ಸಂಪೂರ್ಣವಾಗಿ ಬಣ್ಣ ಹಚ್ಚಲು ಸುಮಾರು 2 ರಿಂದ 3 ಗಂಟೆಗಳ ಸಮಯ ಬೇಕಾಗುತ್ತದೆ. ಹಬ್ಬ ಸಮೀಪಿಸುತ್ತಿದ್ದಂತೆ ಹುಲಿವೇಷಧಾರಿಗಳ ಸಂಖ್ಯೆ ಹೆಚ್ಚಾಗುವುದರಿಂದ ಕೆಲಸವೂ ಜೋರಾಗಿರುತ್ತದೆ. ಗಜೇಂದ್ರಗಡದಲ್ಲಿ ಮೊಹರಂ ಹಬ್ಬದ ಅಂಗವಾಗಿ ನಡೆಯುವ ಈ ಸಂಪ್ರದಾಯವು ಸೌಹಾರ್ದತೆ ಮತ್ತು ಸಾಂಸ್ಕೃತಿಕ ವೈವಿಧ್ಯತೆಯ ಸಂಕೇತವಾಗಿದೆ ಎಂದು ಬಣ್ಣ ಕಲಾವಿದ ಮುಸ್ತಾಕ ಹುಟಗೂರ ಹೇಳಿದ್ದಾರೆ.



ಗಜೇಂದ್ರಗಡ: ಗಜೇಂದ್ರಗಡದಲ್ಲಿ ಮೊಹರಂ ಹಬ್ಬದ ಅಂಗವಾಗಿ ಹುಲಿವೇಷಧಾರಿಗಳ ಸಂಭ್ರಮ ಜೋರಾಗಿದೆ. ನಗರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಯುವಕರು ಮತ್ತು ಭಕ್ತರು ಆಕರ್ಷಕ ಹುಲಿವೇಷತೊಟ್ಟು ಮನೆ ಮನೆಗೆ ತೆರಳಿ ನೃತ್ಯ ಪ್ರದರ್ಶಿಸುತ್ತಿದ್ದು, ಹಬ್ಬದ ವಾತಾವರಣವನ್ನು ಮತ್ತಷ್ಟು ರಂಗೇರಿಸುತ್ತಿದ್ದಾರೆ.

## ಶಿಗ್ಲಿ ರಸ್ತೆ ಅವಸ್ಥೆಗೆ ಬೇಸತ್ತ ಜನ | ರಸ್ತೆ ದುರಸ್ತಿಗೆ ಜನರ ಒತ್ತಾಯ

# ರಸ್ತೆಗಳಲ್ಲಿ ಗುಂಡಿಗಳದ್ದೇ ದರ್ಬಾರ್



- ಹೊಸ ಬಡಾವಣೆಗಳ ಪರಸ್ಥಿತಿ ಹಾಗೆಯೇಯಿದ್ದು, ಅಲ್ಲಿ ಕೆಲವು ಕಡೆ ಸರಿಯಾದ ರಸ್ತೆಗಳು, ಚರಂಡಿಗಳಿಲ್ಲ
- ಮಾಜಿ ಜಿಲ್ಲಾ ಉಸ್ತುವಾರಿ ಸಚಿವರು ಜನತಾದರ್ಶನದಲ್ಲಿ ಗ್ರಾಮಸ್ಥರು ರಸ್ತೆಗಳ ಸುಧಾರಣೆ ಬಗ್ಗೆ ಮನವಿ ಮಾಡಿಕೊಂಡಾಗ ರಸ್ತೆ ಸುಧಾರಣೆಗೆ ಸೂಚಿಸಿದ್ದರು ಕೂಡಾ ತಲೆಕೆಡಿಸಿಕೊಳ್ಳದ ಅಧಿಕಾರಿಗಳು ಎಂಬುದು ಯುವ ಮುಖಂಡ ಮಂಜುನಾಥ ಶಾಂಬೋಜಿ ಹಾಗೂ ಗ್ರಾಮಸ್ಥರ ಅಳಲು

ಶಿವಲಿಂಗಯ್ಯ ಹೊತಗಿಮಠ

**ಲಕ್ಷ್ಮೇಶ್ವರ:** ತಾಲೂಕಿನ ಶಿಗ್ಲಿ ಗ್ರಾಮದಲ್ಲಿ ಇರುವ ರಸ್ತೆಗಳು ಎಲ್ಲಿ ನೋಡಿದರೂ ತೆಗ್ಗು, ಕಿತ್ತು ಹೋದ ಡಾಂಬರ್ ರಸ್ತೆ, ಗುಂಡಿಗಳು. ಅದರಲ್ಲೂ ಮಳೆಗಾಲ ಇರುವುದರಿಂದ ಅಡ್ಡಾಡಲು ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ರಸ್ತೆಗಳು ಸುಧಾರಣೆ ಕಾಣದೆ ದಶಕಗಳೇ ಕಳೆದಿವೆ. ಈ ಬಗ್ಗೆ ಇಲ್ಲಿನ ಜನಪ್ರತಿನಿಧಿಗಳು ಹಾಗೂ ಗ್ರಾಪಂ ಅಧಿಕಾರಿಗಳು ತಲೆಕೆಡಿಕೊಳ್ಳುತ್ತಿಲ್ಲ ಎಂದು ಜನರು ಆರೋಪಿಸಿದ್ದಾರೆ.

ದಿಗಂತ ವಿಶೇಷ

ಗ್ರಾಮವು 8 ವಾರ್ಡ್‌ಗಳು ಹೊಂದಿದ್ದು ಒಟ್ಟು ಅಂದಾಜು 17000 ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿದೆ. ತಾಲೂಕಿನಲ್ಲಿ ಹೆಚ್ಚಿನ ಜನಸಂಖ್ಯೆ ಹೊಂದಿರುವ ಗ್ರಾಮ, ಶಿಕ್ಷಣ ಕಾಶಿ ಎಂದೇ ಹೆಸರು ಪಡೆದಿರುವ ಈ ಗ್ರಾಮದಲ್ಲಿ ದಿನನಿತ್ಯ ಶಾಲಾ ಕಾಲೇಜಿಗೆ ನೂರಾರು ವಿದ್ಯಾರ್ಥಿಗಳು ಬರುತ್ತಾರೆ. ಸುತ್ತಮುತ್ತಲಿನ ಗ್ರಾಮದ ಜನರು ವ್ಯಾಪಾರಕ್ಕೆ ಅಂತಾ ಬರುತ್ತಾರೆ. ಆದರೆ ಬಂದವರು ಇಲ್ಲಿನ ರಸ್ತೆಗಳನ್ನು ನೋಡಿ ಜನಪ್ರತಿನಿಧಿಗಳಿಗೆ, ಅಧಿಕಾರಿಗಳ ಹಾಗೂ ಗ್ರಾಪಂ ವಿರುದ್ಧ ಆಕ್ರೋಶವ್ಯಕ್ತಪಡಿಸುತ್ತಿದ್ದಾರೆ.

### ಮೂಲಸೌಕರ್ಯ ವಂಚಿತ ಗ್ರಾಮ

ಗ್ರಾಮದಲ್ಲಿ ಬಡವರು, ಮಧ್ಯಮ ವರ್ಗದವರು ವಾಸಿಸುವ ಆಶ್ರಯ ನಿವೇಶನ ಪ್ಲಾಟ್‌ಗಳಾದ ಜನತಾಪ್ಲಾಟ್, ಗುರುಬಸಪ್ಪಜ್ಜ ನಗರ ಸೇರಿದಂತೆ ಅನೇಕ ಆಶ್ರಯ ನಿವೇಶನ ಪ್ಲಾಟ್‌ಗಳು ಇದ್ದು ಕೆಲವು ನಿರ್ಮಾಣ ಆಗಿ ದಶಕಗಳೇ ಕಳೆದಿವೆ. ಇನ್ನೂ ಕೆಲವು ಹಲವಾರು ವರ್ಷಗಳು ಕಳೆದರೂ ಅಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ಚರಂಡಿ ನಿರ್ಮಾಣವಾಗಿಲ್ಲ, ಕೇವಲ ಕಚ್ಚಾ ರಸ್ತೆ ಒಂದು ಬಿಟ್ಟರೆ, ಸಿಸಿ ರಸ್ತೆ, ಡಾಂಬರ್ ರಸ್ತೆಗಳನ್ನಾಗಲಿ ನಿರ್ಮಾಣ ಮಾಡುವ ಗೋಜಿಗೆ ಅಧಿಕಾರಿಗಳು, ಜನಪ್ರತಿನಿಧಿಗಳು ಹೋಗುತ್ತಿಲ್ಲ ಎಂದು ಇಲ್ಲಿನ ನಿವಾಸಿಗಳು ದೂರುತ್ತಿದ್ದಾರೆ.

### ಸಂಪೂರ್ಣ ಹಾಳು

ಶಿಗ್ಲಿಯ ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ಜೆಜೆಎಂ ಸಲುವಾಗಿ ಸಿಸಿ ರಸ್ತೆ ಅಗೆದಿದ್ದು ಅವುಗಳ ಪ್ಯಾಚ್ ವರ್ಕ್ ಕೆಲಸ ಚೆನ್ನಾಗಿ ಮಾಡಿಲ್ಲ, ಗ್ರಾಮದ ಹದಗೆಟ್ಟ ರಸ್ತೆಗಳನ್ನು ಸರಿಪಡಿಸಬೇಕಯ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ತಾಲೂಕು ಕಾರ್ಯಾಧ್ಯಕ್ಷ ಆದೇಶ ಹುಲಗೂರ ಆಗ್ರಹಿಸಿದ್ದಾರೆ.

> ಕಳೆದ 2ವರ್ಷದಿಂದ ಗ್ರಾಪಂಗೆ 15ನೇ ಹಣಕಾಸು ಅನುದಾನ ಬಂದಿಲ್ಲ, ಆದರೂ ಈಗಾಗಲೇ ಗ್ರಾಪಂ ಒಳಪಟ್ಟ ರಸ್ತೆಗಳನ್ನು ದುರಸ್ತಿ ಮಾಡಿಕೊಂಡು ಬಂದಿದ್ದೇವೆ. ಜೆಜೆಎಂ ಕಾಮಗಾರಿ ನಡೆದಿದ್ದು ಸಿಸಿ ರಸ್ತೆ ಪ್ಯಾಚ್ ವರ್ಕ್‌ಗೆ ವಾಟರ್ ಸಪ್ಲೈ ಇಲಾಖೆಗೆ ಸರಿಪಡಿಸಲು ತಿಳಿಸಿದ್ದೇನೆ.
>
> ■ ರವಿ ಕೊರಕನವರ, ಶಿಗ್ಲಿ ಗ್ರಾಪಂ ಪಿಡಿಒ

## ವಿದ್ಯಾರ್ಥಿಗಳು ಸರಳತೆ, ಉತ್ತಮ ಸಂಸ್ಕೃತಿ ಬೆಳೆಸಿಕೊಳ್ಳಲಿ

**ಮುಂಡರಗಿ:** ವಿದ್ಯಾರ್ಥಿಗಳು ತಮ್ಮ ಜೀವನವನ್ನು ಸುಂದರವಾಗಿಸಲು ಸರಳತೆ ಮತ್ತು ಸಂಸ್ಕೃತಿಯನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿ ಜೀವನ ಯಾವಾಗಲೂ ಕಷ್ಟದಾಯಕ. ಆ ಕಷ್ಟವನ್ನು ಗೆದ್ದು ,ಆರೋಗ್ಯ ಮತ್ತು ಮನಸ್ಸನ್ನು ಸದೃಢವಾಗಿ ಇಟ್ಟುಕೊಂಡರೆ ನಿಮ್ಮ ಜೀವನ ಬಂಗಾರವಾಗುತ್ತದೆ ಎಂದು ತಾಲೂಕಿನ ಡಂಬಳ ತೋಂಟದಾರ್ಯ ಮಠದ ವ್ಯವಸ್ಥಾಪಕ ಜಿ.ವಿ.ಹಿರೇಮಠ ಹೇಳಿದರು.

ಅವರು ಡಂಬಳದ ಶ್ರೀ ಜಗದ್ಗುರು ತೋಂಟದಾರ್ಯ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ನಡೆದ ವಾರ್ಷಿಕೋತ್ಸವ, ಕೊನೆಯ ವರ್ಷದ ತರಬೇತುದಾರ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಹಾಗೂ ವಿಶ್ವಪರಿಸರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು. ನೀವು ಎಷ್ಟೇ ದೊಡ್ಡವರಾದರೂ ನಿಮಗೆ ಶಿಕ್ಷಣ ನೀಡಿದ ಶಾಲೆಯನ್ನು ಮರೆಯಬೇಡಿ. ತಂದೆ-ತಾಯಿ-ಗುರುಗಳ ಸೇವೆಯಲ್ಲಿ ಸಾರ್ಥಕದ ಬದುಕು ನಡೆಸಿ ಎಂದರು.

ನಿವೃತ್ತ ಪ್ರಾಚಾರ್ಯ ಸಿ.ಎಸ್.ಅರಸನಾಳ ಮಾತನಾಡಿ, ಹಣಗಳಿಕೆಯೇ ಮುಖ್ಯ ಉದ್ದೇಶವನ್ನಾಗಿ ಇಟ್ಟುಕೊಳ್ಳದೆ ಹೃದಯ ಶ್ರೀಮಂತಿಕೆಯನ್ನು ಬೆಳೆಸಿಕೊಳ್ಳಬೇಕು. ಈ ಭೂಮಿಯ ಋಣವನ್ನು ಗಿಡಮರಗಳನ್ನು ಹಚ್ಚಿ ಬೆಳೆಸುವುದರ ಮೂಲಕ ತೀರಿಸಬೇಕು ಎಂದರು. ಡಂಬಳ ಭಾಗದ ಅರಣ್ಯಾಧಿಕಾರಿ ಎಂ.ಪಿ.ಮಡಿವಾಳರ ಮಾತನಾಡಿ, ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ. ಕೇವಲ ಅರಣ್ಯ ಇಲಾಖೆ ಮಾಡಿದರೆ ಸಾಲದು, ಸಾರ್ವಜನಿಕರೂ ಇದರಲ್ಲಿ ಸಕ್ರೀಯವಾಗಿ ಭಾಗವಹಿಸಬೇಕು ಎಂದರು. ಸಂಸ್ಥೆಯ ಹಿರಿಯ ವಿದ್ಯಾರ್ಥಿ ನಿತ್ಯಾನಂದ ಮಾಶ್ಯಾಳ ವಿದ್ಯಾರ್ಥಿಗಳಿಗೆ ಮುಂದಿನ ಅವಕಾಶಗಳು ಮತ್ತು ಅವುಗಳನ್ನು ಹೇಗೆ ಸದುಪಯೋಗ ಪಡಿಸಿಕೊಳ್ಳಬೇಕೆಂದು ತಿಳಿಸಿದರು. ಅಧ್ಯಕ್ಷತೆಯನ್ನು ಸಂಸ್ಥೆಯ ಪ್ರಾಚಾರ್ಯ ಮಹೇಶಗೌಡ ಗೌಡರ ವಹಿಸಿದ್ದರು. ಎಸ್.ಎಸ್.ಕುಂಬಾರ ಸ್ವಾಗತಿಸಿದರು. ಆರ್.ವಿ.ಘಳಗಿ ಪ್ರಾಸ್ತಾವಿಸಿದರು. ಆರ್.ಜಿ.ಕೊರ್ಲಹಳ್ಳಿ ನಿರೂಪಿಸಿದರು. ಐ.ಬಿ.ದಾಸರ ವಂದಿಸಿದರು.



## ಶರಣರು ವಚನಗಳಲ್ಲಿ ಸದ್ಗುಣಗಳು ಅಡಕ: ಬಳಿಗೇರ

**ಶಿರಹಟ್ಟಿ:** ಜೀವನದ ಕಟ್ಟುಪಾಡುಗಳು ಮತ್ತು ಸಾರ್ಥಕ ಬದುಕು ಕಂಡುಕೊಳ್ಳುವ ಸದ್ಗುಣಗಳನ್ನು ಶರಣರು ವಚನಗಳ ಮೂಲಕ ಸಮಾಜಕ್ಕೆ ನೀಡಿದ್ದು, ವಿದ್ಯಾರ್ಥಿಗಳು ವಚನದ ತಿರುಳನ್ನು ಪಠನ ಮಾಡಿಕೊಂಡು ಉಜ್ವಲ ಭವಿಷ್ಯ ಕಂಡುಕೊಳ್ಳಬೇಕು ಎಂದು ಶಸಾಪ ಜಿಲ್ಲಾಧ್ಯಕ್ಷ ಕೆ.ಎ. ಬಳಿಗೇರ ಹೇಳಿದರು.

ತಾಲೂಕಿನ ಮಾಗಡಿ ಗ್ರಾಮದ ಎನ್.ವಿ. ಅಂಗಡಿ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಶರಣ ಸಾಹಿತ್ಯ ಪರಿಷತ್ ವತಿಯಿಂದ ಶರಣರ ನಡೆ ವಿದ್ಯಾರ್ಥಿಗಳ ಕಡೆ ಎಂಬ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. 12ನೇ ಶತಮಾನದ ಶರಣರ ಸಂದೇಶ ಇಂದಿನ ಸಮಾಜಕ್ಕೆ ಸಂಜೀವಿನಿಯಾಗಿದೆ. ವಿದ್ಯಾರ್ಥಿಗಳು ಕಠಿಣ ಅಭ್ಯಾಸ ಮಾಡಬೇಕು. ಜ್ಞಾನ ಒಂದೇ ಮನುಷ್ಯನ ಸ್ವಂತ ಆಸ್ತಿ, ನಮ್ಮ ಜ್ಞಾನವನ್ನು ಯಾರು ಕಸಿದುಕೊಳ್ಳಲು ಸಾಧ್ಯವಿಲ್ಲ, ಹಾಗಾಗಿ ವಿದ್ಯಾರ್ಥಿಗಳು ಆಟ ಪಾಠದ ಜತೆ ಉತ್ತಮ ಸಂಸ್ಕಾರ ಪಡೆದು ಸುಂದರ ಜೀವನ ಕಟ್ಟಿಕೊಳ್ಳಬೇಕು ಎಂದರು.

ಪ್ರಾಚಾರ್ಯ ಎಸ್.ಎಸ್. ಸೋಮಣ್ಣನವರ ಮಾತನಾಡಿ, 12ನೇ ಶತಮಾನದಲ್ಲಿ ಸಮಾಜ ಮೂಢನಂಬಿಕೆ, ಕಂದಾಚಾರ, ಮೇಲುಕೀಳು, ಅಂಧಕಾರದಲ್ಲಿ ಮುಳುಗಿರುವ ಸಮಾಜವನ್ನು ಶರಣರು ತಮ್ಮ ವಚನ ಕ್ರಾಂತಿ ಮೂಲಕ ತಾರತಮ್ಯ ನಿವಾರಿಸಲು ಸಾಕಷ್ಟು ಶ್ರಮಿಸಿದ್ದಾರೆ. ನಾವೆಲ್ಲರೂ ಒಂದೇ ಎಂಬ ಭ್ರಾತೃತ್ವದಡಿ ಸಮ ಸಮಾಜ ಕಟ್ಟಲು ಅವಿರತವಾಗಿ ಪ್ರಯತ್ನಿಸಿದ ಫಲವಾಗಿ ನಾವು ಇಂದು ನೆಮ್ಮದಿ ಜೀವನ ನಡೆಸುತ್ತಿದ್ದೇವೆ. ಶರಣರ ತತ್ವ ಸಿದ್ಧಾಂತ ವಿಶ್ವಕ್ಕೆ ಮಾದರಿಯಾಗಿದೆ ಎಂದರು. ಶಸಾಪ ತಾಲೂಕಾಧ್ಯಕ್ಷ ಎಂ.ಕೆ. ಲಮಾಣಿ ಮಾತನಾಡಿ, ವಿದ್ಯಾರ್ಥಿಗಳು ಶರಣರ ತತ್ವ ಸಿದ್ಧಾಂತ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ತಂದೆ-ತಾಯಿ,ಗುರು-ಹಿರಿಯರಿಗೆ ಗೌರವ ಕೊಡಬೇಕು. ನಿಮ್ಮ ವಿನಯ, ಪೂಜ್ಯ ಭಾವನೆ ನಿಮ್ಮನ್ನು ಉನ್ನತ ಸ್ಥಾನಕ್ಕೆ ಕೊಂಡೊಯ್ಯುತ್ತದೆ. ಸಮಾಜದಲ್ಲಿ ಉತ್ತಮ ಜೀವನ ನಡೆಸಲು ಜ್ಞಾನದ ಜೊತೆ ಸಂಸ್ಕೃತಿ, ಸಂಸ್ಕಾರವು ಮುಖ್ಯವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ನಿತ್ಯವೂ ಪತ್ರಿಕೆ, ಪುಸ್ತಕ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು ಎಂದರು. ಬುದಪ್ಪ ಅಂಗಡಿ, ಬಿ.ಕೆ.ನಿಂಬನಗೌಡ್ರು, ವಾಸುದೇವ ಕಲಾಲ, ಬಿ.ಎಸ್ ಮುಗಳಿ, ಪ್ರಹ್ಲಾದ ಮಾಳದಕರ, ಸುಮಂಗಲ ಯಲವಿಗಿ, ಶಾಂತಕುಮಾರಿ ಪಿ.ಎನ್. ಪಾರ್ವತಿ ಕೆಂಚನಗೌಡ, ಮುತ್ತು ಕುರುಬಗೌಳಿ, ಎಸ್.ಎಸ್. ಪಾಟೀಲ್, ನಿವೇದಿತಾ ಮೇಟಿ, ವಿನೋದ ರಣತೂರ ಸೇರಿದಂತೆ ವಿದ್ಯಾರ್ಥಿಗಳು ಇದ್ದರು.



## ಜೂ.28ರಿಂದ ದುರ್ಗಾದೇವಿ ಜಾತ್ರಾ ಮಹೋತ್ಸವ: ಸಿದ್ದಪ್ಪ ಪಲ್ಲೇದ

**ಗದಗ:** ನಗರದ ಗಂಗಾಪೂರ ಪೇಟೆಯ ದುರ್ಗಾದೇವಿಯ ಜಾತ್ರಾ ಮಹೋತ್ಸವ ಹಾಗೂ ಬೆಳ್ಳಿ ಮೂರ್ತಿ ಪ್ರತಿಷ್ಠಾಪನಾ ಕಾರ್ಯಕ್ರಮವು ಜೂ.28ರಿಂದ ಅದ್ದೂರಿಯಾಗಿ ನಡೆಯಲಿದೆ ಎಂದು ಜಾತ್ರಾ ಮಹೋತ್ಸವ ಕಮಿಟಿ ಅಧ್ಯಕ್ಷ ಸಿದ್ದಪ್ಪ ಪಲ್ಲೇದ ಹೇಳಿದರು.

ಇಲ್ಲಿನ ಪತ್ರಿಕಾ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಜು.4ಕ್ಕೆ ಕಳಸಾರೋಹಣ, ಜು.7 ರಂದು ಉಡಿ ತುಂಬುವುದು, ಜು.8ರಂದು ಮಹಾರಥೋತ್ಸವ, ಜು.9 ರಂದು ಲಘು ರಥೋತ್ಸವ, ಜು.10 ರಂದು ಸಾಮೂಹಿಕ ವಿವಾಹ, ಮಹಾ ಅನ್ನಸಂತರ್ಪಣೆ ನಡೆಯಲಿದೆ ಎಂದರು.

ಜೂ.28ರಿಂದ ಜು.13ರವರೆಗೆ ಹೋಮ, ಧಾರ್ಮಿಕ, ಸಾಂಸ್ಕೃತಿಕ, ಆರೋಗ್ಯ ಶಿಬಿರ, ನಾಟಕ, ರೈತರಿಗೆ ಜಾಗೃತಿ ಕಾರ್ಯಕ್ರಮ, ದೇವಿಯ ಸಹಸ್ರ ನಾಮಾವಳಿ ಪಠಣ ಸೇರಿದಂತೆ ವಿವಿಧ ಮನರಂಜನೆ ಕಾರ್ಯಕ್ರಮಗಳು ನಡೆಯಲಿದೆ. ದುರ್ಗಾದೇವಿಯ ಬೆಳ್ಳಿ ಮೂರ್ತಿಯ ಉದ್ಘಾಟನಾ ಸಮಾರಂಭದ ಸಾನ್ನಿಧ್ಯ ಡಾ.ಗುರು ಸಿದ್ದವೀರ ಶಿವಯೋಗಿ ಶಿವಾಚಾರ್ಯ ಸ್ವಾಮೀಜಿ ವಹಿಸಿಕೊಳ್ಳಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆ ಟ್ರಸ್ಟ್ ಅಧ್ಯಕ್ಷ ಎಂ. ಎಸ್. ಪಾಟೀಲ ವಹಿಸಿಕೊಳ್ಳಲಿದ್ದಾರೆ ಎಂದರು.



ಅನಿಲಕುಮಾರ ಸಿದ್ದಮ್ಮನಹಳ್ಳಿ, ಈಶ್ವರ ಕೊಟೆ, ರವಿ ಶಿದ್ಲಿಂಗ್, ಎಂ.ಎಸ್.ಪಾಟೀಲ, ಬಸವರಾಜ ಬೆಳದಡಿ, ಯಮನಪ್ಪ ಗೊಂದಿ, ಬಸಪ್ಪ ಶಿರೂರ, ದೇವಪ್ಪ ಹುರಕಟ್ಟಿ, ಹುಲಿಗೆಪ್ಪ ಜಡಿ, ಬಸವರಾಜ ಅಣ್ಣಿಗೇರಿ, ಶರಣಪ್ಪ ಗಾಣಿಗೇರ, ಬಸವರಾಜ ಕವಳಿಕಾಯಿ, ಬಸವರಾಜ ಹಿತ್ತಲಗುತ್ತಿ ಇದ್ದರು. ರಥೋತ್ಸವದ ಗಾಲಿ ಮೇಲೆ ಅನ್ಯಕೋಮಿನ ಮಹಿಳೆ ಹೆಸರು ಕೆತ್ತನೆ ಮಾಡಿದ್ದು ಸರಿಯಲ್ಲ ಎಂದು ಹಿಂದೂ ಮುಖಂಡ ರಾಜು ಖಾನಪ್ಪನವರ ಆರೋಪಿಸಿದ್ದರು. ಇದಕ್ಕೆ ಪ್ರತಿಕ್ರೀಯೆ ನೀಡಿದ ಸಿದ್ದಪ್ಪ ಪಲ್ಲೇದ್, ಫೀರಸಾಬ್ ಕೌತಾಳ್ ಅವರು ನವರಾತ್ರಿ ಉತ್ಸವ ಕಾರ್ಯಕ್ರಮಕ್ಕೆ ಆಗಮಿಸಿದ್ದಾಗ ರಥ ನಿರ್ಮಿಸಿಕೊಡುವುದಾಗಿ ಭರವಸೆ ನೀಡಿದ್ದರು. ಅದರಂತೆ 31 ಲಕ್ಷ ರೂಪಾಯಿ ವೆಚ್ಚದಲ್ಲಿ ರಥ ನಿರ್ಮಿಸಿದ್ದಾರೆ. ದಾನಿಗಳು ತಮ್ಮ ಹೆಸರನ್ನು ಬರೆಯಿಸಿದ್ದು ತಪ್ಪಲ್ಲ ಎಂದರು.

## ಸೌಲಭ್ಯ ಸಮರ್ಪಕ ಪಡೆಯಲು ಹಿರಿಯ ನಾಗರಿಕರು ಸಂಘಟಿತರಾಗಲಿ: ಹಿರೇಮಠ

**ಲಕ್ಷ್ಮೇಶ್ವರ:** ಹಿರಿಯ ನಾಗರಿಕರು ಸರ್ಕಾರದ ವಿವಿಧ ಸೌಲಭ್ಯಗಳನ್ನು ಸಮರ್ಪಕವಾಗಿ ಪಡೆಯಬೇಕಾದರೆ ಸಂಘಟಿತರಾಗುವುದು ಅತ್ಯಂತ ಅಗತ್ಯ ಎಂದು ನಿವೃತ್ತ ಶಿಕ್ಷಕಿ ಸುವರ್ಣ ಸಿ. ಹಿರೇಮಠ ಹೇಳಿದರು.

ಅವರು ಗುರುವಾರ ಪಟ್ಟಣದ ಚಂಬಣ್ಣ ಬಾಳಿಕಾಯಿ ಅವರ ಮಿಲ್ ಆವರಣದಲ್ಲಿ ನಡೆದ ಕರ್ನಾಟಕ ರಾಜ್ಯ ಹಿರಿಯ ನಾಗರಿಕರ ಹಾಗೂ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಸಭೆಯಲ್ಲಿ ಮಾತನಾಡಿದರು. ಯುವ ಪೀಳಿಗೆಗೆ ಹಿರಿಯರ



ಮಾರ್ಗದರ್ಶನ ಅಗತ್ಯವಾಗಿದ್ದು, ಮಕ್ಕಳು ಹಿರಿಯರನ್ನು ಗೌರವದಿಂದ ಕಾಣಬೇಕು. ಹಿರಿಯರು ತಮ್ಮ ಆರೋಗ್ಯದ ಕಡೆ ಹೆಚ್ಚಿನ ಗಮನಹರಿಸಿ, ವೃದ್ಧಾಪ್ಯದಲ್ಲಿಯೂ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಬೇಕು. ಸರ್ಕಾರ ಹಿರಿಯ ನಾಗರಿಕರಿಗೆ ಇನ್ನಷ್ಟು ಪ್ರೋತ್ಸಾಹ ಮತ್ತು ಸೌಲಭ್ಯಗಳನ್ನು ನೀಡಬೇಕು ಎಂದು ಒತ್ತಾಯಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಿ.ಆರ್. ಲಕ್ಕುಂಡಿಮಠ ಹಾಗೂ ಗೌರವಾಧ್ಯಕ್ಷ ಚಂಬಣ್ಣ ಬಾಳಿಕಾಯಿ ಮಾತನಾಡಿ, ಹಿರಿಯ ನಾಗರಿಕರಿಗೆ ಸಭೆ ಹಾಗೂ ಚಟುವಟಿಕೆಗಳನ್ನು ನಡೆಸಲು ಸೂಕ್ತ ಸ್ಥಳದ ಅವಶ್ಯಕತೆಯಿದೆ. ಈ ಕುರಿತು ಪುರಸಭೆ ಹಾಗೂ ಜನಪ್ರತಿನಿಧಿಗಳು ಗಮನಹರಿಸಬೇಕು ಎಂದರು.

ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರು, ನಿವೃತ್ತ ನೌಕರರನ್ನು ಸನ್ಮಾನಿಸಲಾಯಿತು. ಕುಬೇರಪ್ಪ ಮಹಾಂತಶೆಟ್ಟರ, ಚನ್ನಪ್ಪ ಕೋಲಕಾರ, ಶಕುಂತಲಾ ಅಳಗವಾಡಿ, ಎಲ್. ಆರ್. ಮಲ್ಲಸಮುದ್ರ, ಚಂದ್ರಶೇಖರ ಸೌದತ್ತಿ, ನಂದಿಕೋಲಮಠ, ನಿಂಗಪ್ಪ ಗೊರವರ, ನೀಲಪ್ಪ ಕರ್ಜಕಣ್ಣವರ, ಸೂಗಿರಪ್ಪ ವಾಲಿಶೆಟ್ಟರ, ನಾಗರಾಜ ಸೂರಣಗಿ ಸೇರಿದಂತೆ ಹಲವರು ಉಪಸ್ಥಿತರಿದ್ದರು. ನಾಗಭೂಷಣ ಪವಾಡಶೆಟ್ಟರ ಹಾಗೂ ಐ.ಎಸ್. ಮಡಿವಾಳರ ನಿರೂಪಿಸಿದರು.

## ಭಾವೈಕ್ಯತೆ ಮೊಹರಂ ಆಚರಣೆಗೆ ಗಜೇಂದ್ರಗಡ ಜನ ಸಜ್ಜು



ಸೀತಲ ಓಲೇಕಾರ

**ಗಜೇಂದ್ರಗಡ:** ಪಟ್ಟಣದಲ್ಲಿ ಮೊಹರಂ ಹಬ್ಬವು ಧಾರ್ಮಿಕ ಶ್ರದ್ಧೆ, ಸೌಹಾರ್ದತೆ ಹಾಗೂ ಸರ್ವಧರ್ಮ ಸಮನ್ವಯದ ವಾತಾವರಣದಲ್ಲಿ ಆಚರಣೆಯಾಗುತ್ತಿದೆ. ಗಜೇಂದ್ರಗಡವು 18 ಮಠಗಳು, 19 ಮಸೀದಿಗಳು ಹಾಗೂ 18 ಬಾವಿಗಳ ನಾಡು ಎಂಬ ಹೆಗ್ಗಳಿಕೆಯನ್ನು ಪಡೆದಿದ್ದು, ಹಲವು ಶತಮಾನಗಳಿಂದ ವಿವಿಧ ಧರ್ಮಗಳ ಜನರು ಸಹಬಾಳ್ವೆಯೊಂದಿಗೆ ಬದುಕುತ್ತಿರುವುದು ನಗರದ ವಿಶೇಷವಾಗಿದೆ.

ಮೊಹರಂ ಹಬ್ಬದ ಅಂಗವಾಗಿ ಪಟ್ಟಣದ ವಿವಿಧ ಮೊಹಲ್ಲಾ (ಮಸೀದಿ)ಗಳಲ್ಲಿ ತಾಜಿಯಾಗಳ(ಅಲೈ ದೇವರು) ನಿರ್ಮಾಣ, ಅಲಂಕಾರ ಹಾಗೂ ಧಾರ್ಮಿಕ ಕಾರ್ಯಕ್ರಮಗಳು ನಡೆಯುತ್ತಿವೆ. ಮುಸ್ಲಿಂ ಸಮುದಾಯದವರು ಶ್ರದ್ಧಾಭಕ್ತಿಯಿಂದ ಆಚರಿಸುವ ಈ ಹಬ್ಬದಲ್ಲಿ ಹಿಂದೂ ಸೇರಿದಂತೆ ಇತರ ಧರ್ಮಗಳ ಜನರು ಸಹ ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ತಾಜಿಯಾ ದರ್ಶನ, ಪಂಜಾ ಪೂಜೆ, ನಜರ್-ನಿಯಾಜ್ ಹಾಗೂ ಮೆರವಣಿಗೆಗಳಲ್ಲಿ ಎಲ್ಲ ಸಮುದಾಯದ ಜನರು ಭಾಗವಹಿಸುತ್ತಾರೆ.

> ಗಜೇಂದ್ರಗಡವು ಸರ್ವಧರ್ಮ ಸಮನ್ವಯ ಮತ್ತು ಭಾವೈಕ್ಯದ ನೆಲೆಯಾಗಿದೆ. 18 ಮಠಗಳು, 19 ಮಸೀದಿಗಳು ಹಾಗೂ 18 ಭಾವಿಗಳ ಪರಂಪರೆಯನ್ನು ಹೊಂದಿರುವ ಪಟ್ಟಣದಲ್ಲಿ ಎಲ್ಲ ಧರ್ಮದವರು ಪರಸ್ಪರ ಪ್ರೀತಿ, ವಿಶ್ವಾಸ ಮತ್ತು ಗೌರವದಿಂದ ಬದುಕುತ್ತಿದ್ದಾರೆ. ಮೊಹರಂ ಕೇವಲ ಮುಸ್ಲಿಂರ ಹಬ್ಬವಲ್ಲ, ತ್ಯಾಗ, ಸತ್ಯ ಮತ್ತು ಮಾನವೀಯ ಮೌಲ್ಯಗಳ ಪ್ರತೀಕವಾಗಿದೆ. ಹಜರತ್ ಇಮಾಮ್ ಹುಸೇನ್ (ಅ.ಸ.) ಅವರ ತ್ಯಾಗದ ಸಂದೇಶವನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.
>
> ■ ಹಜರತ ಸೈಯ್ಯದ ನಿಜಾಮುದ್ದಿನ ಷಾ ಅಶ್ರಫಿ ಮಕಾನದಾರ, ಪೀಠಾಧಿಪತಿ, ಟೆಕ್ಕೆದ ದರ್ಗಾ, ಗಜೇಂದ್ರಗಡ

> ಮೊಹರಂ ಹಬ್ಬವು ತ್ಯಾಗ, ಸತ್ಯ ಮತ್ತು ನ್ಯಾಯಕ್ಕಾಗಿ ಹೋರಾಟದ ಸಂದೇಶವನ್ನು ಸಾರುತ್ತದೆ. ಈ ಸಂದೇಶವು ಎಲ್ಲ ಧರ್ಮದ ಜನರಿಗೆ ಪ್ರೇರಣೆಯಾಗಿದೆ. ಯುವ ಪೀಳಿಗೆಯವರು ಈ ಸೌಹಾರ್ದತೆಯ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗಬೇಕು.
>
> ■ ಹೂವಾಜಿ ಚಂದುಕರ, ಕಾರ್ಯದರ್ಶಿ, ಕಲಾಲ ಸಮಾಜ, ಗಜೇಂದ್ರಗಡ

## ಮಕ್ಕಳಿಗೆ ಉನ್ನತ ಶಿಕ್ಷಣ ನೀಡಿ: ಮೇಟಿ

**ನರಗುಂದ:** ಆಸ್ತಿ-ಅಂತಸ್ತು ಮಾಡುವುದಕ್ಕಿಂತ ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿದರೆ ಸಾಕು. ಅದೇ ಸಮಾಜಕ್ಕೆ ನೀವು ನೀಡುವ ಕೊಡುಗೆ ಎಂದು ಎಸ್‌ಡಿಎಂಸಿ ಅಧ್ಯಕ್ಷ ಹನಮರೆಡ್ಡಿ ಮೇಟಿ ಹೇಳಿದರು.

ತಾಲೂಕಿನ ಅರಿಷಿಣಗೋಡಿ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ನೂತನವಾಗಿ ಆರಂಭಿಸಲಾದ ಎಲ್‌ಕೆಜಿ ತರಗತಿಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪಾಲಕರು ತಮ್ಮ ಮಕ್ಕಳನ್ನು ಶಾಲೆಗೆ ಸೇರಿಸಿದಷ್ಟಕ್ಕೆ ಎಲ್ಲ ಶಿಕ್ಷಣವನ್ನೂ ಶಿಕ್ಷಕರೇ ಕೊಡುತ್ತಾರೆ ಎಂದು ಭಾವಿಸಬಾರದು. ತಾವು ಕೂಡ ಶಿಕ್ಷಕರೊಂದಿಗೆ ಮಗುವಿನ ವಿದ್ಯಾಭ್ಯಾಸದ ಬಗ್ಗೆ ಶಾಲೆಗಳಿಗೆ ಭೇಟಿ ನೀಡಿ ವಿಚಾರಿಸಿದರೆ ತಮ್ಮ ಮಗುವಿನ ದಿನಚರಿ ತಿಳಿಯುತ್ತದೆ. ಆಗ ಆ ಮಗುವಿನ ವಿದ್ಯಾಭ್ಯಾಸಕ್ಕೆ ಮತ್ತಷ್ಟು ಅನುಕೂಲವಾಗುತ್ತದೆ ಎಂದರು. ಶಂಕರಗೌಡ ಪಾಟೀಲ, ಬಿ.ಎಚ್. ರಿತ್ತಿ, ಮಾರುತಿರೆಡ್ಡಿ ಮೇಟಿ, ಚನ್ನಯ್ಯ ಕಾಡದೇವರಮಠ, ಕರಿಯಪ್ಪ ಮಾಳಕನವರ, ಹೇಮರೆಡ್ಡಿ ಮೇಟಿ, ಬಸುರೆಡ್ಡಿ ರಾಯರೆಡ್ಡಿ, ವೆಂಕನರೆಡ್ಡಿ ಕಿಲಬನೂರು, ಕೃಷ್ಣಾರೆಡ್ಡಿ ಮೇಟಿ, ಕುಮಾರರೆಡ್ಡಿ ಮೇಟಿ, ಶಿವಾನಂದ ಮ್ಯಾಗೇರಿ, ದುರ್ಗಪ್ಪ ಮಾದರ, ಡಾ.ಶರಣು ಗೋಗೇರಿ, ಎಸ್.ಎಸ್. ಕುರಿಯವರ, ಗುರುನಾಥ ದೊಡ್ಡಲಿಂಗಪ್ಪನವರ, ಬಿಇಒ ಎಂ.ಎಚ್. ಕಂಬಳಿ, ಸಿಆರ್‌ಪಿ ಎಸ್.ವೈ. ಸುರಕೋಡ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ಡಿ.ಎಚ್. ಅಜ್ಜಿ ಇತರರಿದ್ದರು.



## ಜೂ.28ಕ್ಕೆ ಪಲ್ಸ್ ಪೋಲಿಯೋ ಅಭಿಯಾನ: ಜಿಲ್ಲಾಧಿಕಾರಿ

**ಗದಗ:** ಜಿಲೆಯಲ್ಲಿ ಜೂ.28 ರಂದು ಪಲ್ಸ್ ಪೋಲಿಯೋ ಕಾರ್ಯಕ್ರಮ ಜರುಗಲಿದ್ದು, ಐದು ವರ್ಷದೊಳಗಿನ ಮಗುವಿಗೆ ಪಲ್ಸ್ ಪೋಲಿಯೋ ಲಸಿಕೆ ನೀಡಬೇಕು ಹಾಗೂ ಆರೋಗ್ಯ ಇಲಾಖೆಯೊಂದಿಗೆ ವಿವಿಧ ಇಲಾಖೆಗಳು ಸಮನ್ವಯದಿಂದ ಕಾರ್ಯನಿರ್ವಹಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮದ ಪೂರ್ವ ಸಿದ್ಧತಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಜಿಲ್ಲೆಯ ಎಲ್ಲಾ ಬಸ್ ನಿಲ್ದಾಣಗಳು, ರೈಲ್ವೆ ನಿಲ್ದಾಣಗಳು, ಟೋಲ್ ಗೇಟ್‌ಗಳು ಹಾಗೂ ಪ್ರಮುಖ ಸಾರ್ವಜನಿಕ ಸ್ಥಳಗಳಲ್ಲಿ ಕಡ್ಡಾಯವಾಗಿ ಪೋಲಿಯೋ ಲಸಿಕಾ ಕೇಂದ್ರಗಳನ್ನು (ಬೂತ್) ಸ್ಥಾಪಿಸಬೇಕು ಎಂದರು.

ಜಿಲ್ಲಾ ಆರ್.ಸಿ.ಎಚ್.ಅಧಿಕಾರಿ ಡಾ.ಮೀನಾಕ್ಷಿ ಮಾತನಾಡಿ, ಜೂ.28 ರಂದು ಬೂತ್ ಮಟ್ಟದಲ್ಲಿ ಹಾಗೂ ನಂತರದ ದಿನಗಳಲ್ಲಿ ಮನೆ ಮನೆ ಭೇಟಿ ನೀಡಲಾಗುವುದು. ಜಿಲ್ಲೆಯಲ್ಲಿ ಗ್ರಾಮೀಣ ಭಾಗದಲ್ಲಿ 46,845 ಹಾಗೂ ನಗರ ಪ್ರದೇಶದಲ್ಲಿ 67,035 ಸೇರಿ 1,13,880 ಸೊನ್ನೆಯಿಂದ ಐದು ಮಕ್ಕಳನ್ನು ಗುರುತಿಸಲಾಗಿದೆ. ಗ್ರಾಮೀಣ ಮತ್ತು ನಗರ ಭಾಗದಲ್ಲಿ ಸೇರಿ ಒಟ್ಟು 765 ಬೂತ್‌ಗಳನ್ನು ಗುರುತಿಸಲಾಗಿದೆ. ಇದಲ್ಲದೇ ಬಸ್ ನಿಲ್ದಾಣದಲ್ಲಿ ಬಸ್ ಗಳಲ್ಲಿ ಸಂಚರಿಸುವ ಮಕ್ಕಳಿಗೆ ಹಾಗೂ ರೈಲು ನಿಲ್ದಾಣದಲ್ಲಿ ನಿಲುಗಡೆಯಾದ ರೈಲಿನಲ್ಲಿರುವ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ. 1530 ವ್ಯಾಕ್ಸಿನೇಟರ್‌ಗಳನ್ನು ಹಾಗೂ 156 ಮೇಲ್ವಿಚಾರಕರನ್ನು ನಿಯೋಜಿಸಲಾಗಿದೆ ಎಂದರು.



ಜಿಲ್ಲೆಗೆ ಅಗತ್ಯ ಲಸಿಕೆ ಸರಬರಾಜಾಗಿದೆ. 48 ಕೋಲ್ಡ್ ಚೈನ್ ಪಾಯಿಂಟ್‌ಗಳನ್ನು ಗುರುತಿಸಲಾಗಿದೆ. 723 ಆಶಾ ಕಾರ್ಯಕರ್ತೆಯರು ಹಾಗೂ 514 ಅಂಗನವಾಡಿ ಕಾರ್ಯಕರ್ತೆಯರು ಒಟ್ಟು ಸೇರಿ 1237 ಕಾರ್ಯಕರ್ತೆಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಪಲ್ಸ್ ಪೋಲಿಯೋ ಕಾರ್ಯಕ್ರಮದ ಪೋಸ್ಟರ್‌ನ್ನು ಜಿಲ್ಲಾಧಿಕಾರಿ ಬಿಡುಗಡೆಗೊಳಿಸಿದರು. ಡಿಎಸ್‌ಒ ಡಾ.ವೆಂಕಟೇಶ ರಾಠೋಡ, ಜಿಲ್ಲಾಶಸ್ತ್ರಚಿಕಿತ್ಸಕ ಡಾ.ಬಿ.ಸಿ.ಕರಿಗೌಡ್ರ, ಉಪವಿಭಾಗಾಧಿಕಾರಿ ಗಂಗಪ್ಪ ಎಂ. ಇತರರಿದ್ದರು.

ಆಂಧ್ರ ಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅಭಿಪ್ರಾಯ

# ನದಿ ಜೋಡಣೆಯಲ್ಲಿ ಯಾವ ರಾಜ್ಯಕ್ಕೂ ಅನ್ಯಾಯವಾಗದಿರಲಿ



**• ಕೊಪ್ಪಳ:** ದೇಶದ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ನದಿಗಳ ಜೋಡಣೆ ಅತ್ಯಂತ ತುರ್ತಾಗಿ ಆಗಬೇಕಿದೆ. ನದಿ ಜೋಡಣೆ ಪ್ರಕ್ರಿಯೆಯಲ್ಲಿ ಯಾವುದೇ ರಾಜ್ಯಕ್ಕೆ ಅನ್ಯಾಯವಾಗಬಾರದು ಎಂದು ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದರು.

ಜಲಸಂಪನ್ಮೂಲ ಇಲಾಖೆ ಹಾಗೂ ತುಂಗಭದ್ರಾ ಮಂಡಳಿಯ ಸಹಯೋಗದಲ್ಲಿ ಕೊಪ್ಪಳ ಜಿಲ್ಲೆಯ ಮುನಿರಾಬಾದ್‌ನ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದ್ದ ತುಂಗಭದ್ರಾ ಅಣೆಕಟ್ಟೆಯ 33 ಕ್ರಸ್ಟ್ ಗೇಟುಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಜನದಿ ಜೋಡಣೆ ಯೋಜನೆಯನ್ನು ಜಾರಿಗೊಳಿಸುವಾಗ ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯಗಳ ಹಕ್ಕುಗಳನ್ನು ಸಂಪೂರ್ಣವಾಗಿ ರಕ್ಷಿಸಬೇಕು. ಈ ಮೂರೂ ರಾಜ್ಯಗಳ ಹಕ್ಕುಗಳಿಗೆ ಧಕ್ಕೆ ಬಾರದಂತೆ ಸೂಕ್ತ ಕ್ರಿಯಾ ಯೋಜನೆಯನ್ನು ರೂಪಿಸುವುದರ ಜೊತೆಗೆ, ಅಗತ್ಯ ಬಿದ್ದರೆ ತಮಿಳುನಾಡಿಗೂ ನೀರನ್ನು ಕೊಂಡೊಯ್ಯುವ ವ್ಯವಸ್ಥೆ ಮಾಡಬೇಕು ಎಂದರು.

ಈ ಹಿಂದೆ 1983ರಲ್ಲಿ ಎನ್.ಟಿ.ರಾಮರಾವ್ ಅವರ ನಾಯಕತ್ವದಲ್ಲಿ ಅವಿಭಜಿತ ಆಂಧ್ರಪ್ರದೇಶ, ಕರ್ನಾಟಕ ಮತ್ತು ಮಹಾ ರಾಷ್ಟ್ರ ರಾಜ್ಯಗಳು ಒಟ್ಟಾಗಿ ಸೇರಿ ಚೆನ್ನೈನ ಕುಡಿಯುವ ನೀರಿಗಾಗಿ 15 ಟಿಎಂಸಿ ನೀರನ್ನು ಒದಗಿಸಿದ್ದ ಐತಿಹಾಸಿಕ ಒಕ್ಕೂಟ ವ್ಯವಸ್ಥೆಯ ಉದಾಹರಣೆಯನ್ನು ಸ್ಮರಿಸಿದರು.

ಪ್ರಸ್ತುತ ದೇಶದಲ್ಲಿ ಒಂದು ಕಡೆ ಭೀಕರ ಪ್ರವಾಹ ಬಂದರೆ, ಮತ್ತೊಂದು ಕಡೆ ತೀವ್ರ ಬರಗಾಲವಿರುತ್ತದೆ. ಈ ವರ್ಷ 'ಎಲ್ ನಿನೋ' ಪ್ರಭಾವದಿಂದಾಗಿ ತುಂಗಭದ್ರಾ ಹಾಗೂ ಆಲ್ಮಟ್ಟಿ ಜಲಾಶಯಗಳಿಗೂ ನಿರೀಕ್ಷಿತ ಪ್ರಮಾಣದಲ್ಲಿ ನೀರಿನ ಒಳಹರಿವು ಬಂದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ದೇಶದ ಎಲ್ಲ ನದಿಗಳನ್ನು ಜೋಡಿಸುವುದೊಂದೇ ಇರುವ ಏಕೈಕ ಮಾರ್ಗವಾಗಿದೆ ಎಂದು ಅಭಿಪ್ರಾಯಪಟ್ಟರು.

ಪ್ರಧಾನಿ ನರೇಂದ್ರ ಮೋದಿ ಅವರ ಸಮರ್ಥ ನಾಯಕತ್ವದಲ್ಲಿ ದೇಶವು ತಂತ್ರಜ್ಞಾನ, ಹೆದ್ದಾರಿ ಹಾಗೂ ದೂರಸಂಪರ್ಕ ವಲಯದಲ್ಲಿ ಜಾಗತಿಕ ಮಟ್ಟದಲ್ಲಿ ವೇಗವಾಗಿ ಮುನ್ನಡೆಯುತ್ತಿದ್ದು, ನದಿಗಳ ಜೋಡಣೆ ಪ್ರಕ್ರಿಯೆಯೂ ಅವರ ನೇತೃತ್ವದಲ್ಲಿ ಯಶಸ್ವಿಯಾಗಲಿದೆ ಎಂಬ ದೃಢ ವಿಶ್ವಾಸವನ್ನು ವ್ಯಕ್ತಪಡಿಸಿದರು. ರಾಜ್ಯಗಳ ಒಳಗೆ ನದಿಗಳ ಜೋಡಣೆ ಯಶಸ್ವಿಯಾದ ನಂತರ, ರಾಜ್ಯಗಳ ನಡುವಿನ ಜೋಡಣೆಗೆ ಎಲ್ಲರೂ ಒಪ್ಪಿಗೆ ನೀಡಬೇಕು ಎಂದು ಸಲಹೆ ನೀಡಿದರು.

### ನೀರಿನ ಸಮಸ್ಯೆ ಬಗೆಹರಿಸಿ

ಗದ್ವಾಲ್, ಆಲಂಪುರ ಮತ್ತು ಪಾಲಮೂರು ಜಿಲ್ಲೆಗಳ ವ್ಯಾಪ್ತಿಯ ರಾಜೋಲಿಬಂಡಾ ಡೈವರ್ಷನ್ ಸ್ಕೀಮ್ ಅಡಿಯಲ್ಲಿ ನಿಗದಿಯಾಗಿರುವ 15.9 ಟಿಎಂಸಿ ನೀರಿನಲ್ಲಿ ಪ್ರಸ್ತುತ ರೈತರು ಕೇವಲ 5ರಿಂದ 6ಟಿಎಂಸಿ ನೀರನ್ನು ಮಾತ್ರ ಬಳಸುತ್ತಿದ್ದಾರೆ. ತುಂಗಭದ್ರಾದಲ್ಲಿ ಹೂಳು ತುಂಬಿರುವುದು ಮತ್ತು ನೀರಿನ ಸುಗಮ ಹರಿವಿಗೆ ಇರುವ ಅಡ್ಡಿ ಆತಂಕಗಳಿಂದಾಗಿ ಇನ್ನುಳಿದ 10 ಟಿಎಂಸಿ ನೀರು ಲಭ್ಯವಾಗುತ್ತಿಲ್ಲ. ಈ ಸಮಸ್ಯೆಯನ್ನು ಬಗೆಹರಿಸಿ ಲಕ್ಷಾಂತರ ರೈತರಿಗೆ ನ್ಯಾಯ ಒದಗಿಸಬೇಕೆಂದು ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಮನವಿ ಮಾಡಿದರು.

> **ದೇಶದ ಒಕ್ಕೂಟ ವ್ಯವಸ್ಥೆಯಲ್ಲಿ ಸಂವಿಧಾನವನ್ನು ಎತ್ತಿ ಹಿಡಿಯಲು, ನಮ್ಮ ಹಕ್ಕುಗಳನ್ನು ರಕ್ಷಿಸಲು ಹಾಗೂ ರೈತರನ್ನು ಬದುಕಿಸಲು 'ನಮ್ಮ ನೀರು ನಮ್ಮ ಹಕ್ಕು' ಎಂಬ ಘೋಷಣೆಯಡಿ ಮೂರು ರಾಜ್ಯಗಳ (ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣ) ರೈತರ ಹಿತ ಕಾಯುವ ನಿಟ್ಟಿನಲ್ಲಿ ಈ ಐತಿಹಾಸಿಕ ತೀರ್ಮಾನಕ್ಕೆ ಬರಲಾಗಿದೆ.**
> **■ ಡಿ.ಕೆ.ಶಿವಕುಮಾರ, ಮುಖ್ಯಮಂತ್ರಿ**

ರೈತರ ಆಕಾಂಕ್ಷೆ ಈಡೇರಿಸಲು ತೆಲಂಗಾಣ ಸರ್ಕಾರ ಬದ್ಧ

# ರಾಜಕೀಯ ಬೇಡ, ಪರಿಹಾರ ಬೇಕು: ಸಿಎಂ ರೇವಂತ್ ರೆಡ್ಡಿ



**• ಕೊಪ್ಪಳ:** ನಮಗೆ ಕೇವಲ ರಾಜಕೀಯದ ಪಂಚಾಯಿತಿ ಬೇಡ, ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಬೇಕು. ರೈತರ ಆಕಾಂಕ್ಷೆಗಳನ್ನು ಈಡೇರಿಸಲು ತೆಲಂಗಾಣ ಸರ್ಕಾರ ಬದ್ಧವಾಗಿದೆ. ಕೃಷ್ಣಾ, ಗೋದಾವರಿ ಹಾಗೂ ತುಂಗಭದ್ರಾ ನದಿ ನೀರು ಹಂಚಿಕೆಗೆ ಸಂಬಂಧಿಸಿದ ಅಂತರರಾಜ್ಯ ಜಲ ವಿವಾದಗಳಿಗೆ ಶಾಶ್ವತ ಪರಿಹಾರವನ್ನು ಒದಗಿಸಲಿದೆ ಎಂದು ತೆಲಂಗಾಣ ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಹೇಳಿದರು.

ಜಲಸಂಪನ್ಮೂಲ ಇಲಾಖೆ ಹಾಗೂ ತುಂಗಭದ್ರಾ ಮಂಡಳಿಯ ಸಹಯೋಗದಲ್ಲಿ ಮುನಿರಾಬಾದ್‌ನ ಸರ್ಕಾರಿ ಹೈಸ್ಕೂಲ್ ಮೈದಾನದಲ್ಲಿ ಆಯೋಜಿಸಲಾದ ತುಂಗಭದ್ರಾ ಅಣೆಕಟ್ಟೆಯ 33 ಕ್ರಸ್ಟ್ ಗೇಟುಗಳ ಉದ್ಘಾಟನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಹಿಂದಿನ ಕಾಲದಲ್ಲಿ ರಾಜರು ತಮ್ಮ ರಾಜ್ಯ ವಿಸ್ತರಣೆಗಾಗಿ ಕತ್ತಿ ಹಿಡಿದು ಹೋರಾಡುತ್ತಿದ್ದ ಸಂದರ್ಭದಲ್ಲೂ, ಈ ಭಾಗದ ರೈತರ ಕಲ್ಯಾಣಕ್ಕಾಗಿ ಮೈಸೂರು ಮಹಾರಾಜರು ಹಾಗೂ ಹೈದರಾಬಾದ್ ನಿಜಾಮರು ಜೊತೆಯಾಗಿ ತುಂಗಭದ್ರಾ ಅಣೆಕಟ್ಟನ್ನು ನಿರ್ಮಿಸಿದ್ದರು. ಅಂದು ರಾಜರೇ ರೈತರಿಗಾಗಿ ಮುಂದೆ ಬಂದಿರುವಾಗ, ಇಂದು ಪ್ರಜಾಪ್ರತಿನಿಧಿಗಳಾದ ನಾವು ರೈತರ ಹಿತರಕ್ಷಣೆಗಾಗಿ ಒಂದು ಹೆಜ್ಜೆ ಮುಂದೆ ಇಡುವುದು ನಮ್ಮ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ ಎಂದು ಪ್ರತಿಪಾದಿಸಿದರು.

ಕೇಂದ್ರ ಸಚಿವ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅವರನ್ನು ಉದ್ದೇಶಿಸಿ ಮಾತನಾಡಿದ ಅವರು, ಇದು ಕೇವಲ 8 ವರ್ಷಗಳದ್ದಲ್ಲ, ಬದಲಿಗೆ 100 ವರ್ಷಗಳ ಹಳೆಯ ಸಮಸ್ಯೆಯಾಗಿದೆ. ಕೃಷ್ಣಾ, ಗೋದಾವರಿ ಮತ್ತು ತುಂಗಭದ್ರಾ ನದಿ ನೀರಿನ ಹಂಚಿಕೆಗಾಗಿ ದಶಕಗಳಿಂದ ಹೋರಾಟ ನಡೆಯುತ್ತಿದೆ. ಆರ್‌ಡಿಎಸ್ ಯೋಜನೆಯಲ್ಲಿ ತೆಲಂಗಾಣ ಮತ್ತು ಪಾಲಮೂರು ಭಾಗದ ನೀರಿನ ಸಮಸ್ಯೆಗಳನ್ನು ಬಗೆಹರಿಸಲು ಕರ್ನಾಟಕ ಮತ್ತು ಆಂಧ್ರಪ್ರದೇಶ ಮುಖ್ಯಮಂತ್ರಿಗಳೊಂದಿಗೆ ತಾವು ಚರ್ಚಿಸಲು ಸಿದ್ಧರಿರುವುದಾಗಿ ತಿಳಿಸಿದರು.

ಕೇಂದ್ರ ಸಚಿವರು ಈ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸಿ, ನ್ಯಾಯಾಧೀಶರಂತೆ ಕಾರ್ಯನಿರ್ವಹಿಸುವ ಮೂಲಕ ಈ ಜಲ ವಿವಾದಕ್ಕೆ ಸೂಕ್ತ ಪರಿಹಾರ ಕಲ್ಪಿಸಬೇಕು ಎಂದು ಮನವಿ ಮಾಡಿದರು. ಈ ಐತಿಹಾಸಿಕ ಹೆಜ್ಜೆಯು ದೆಹಲಿಯವರೆಗೂ ಧ್ವನಿಸಲಿದೆ ಹಾಗೂ ದೇಶದಾದ್ಯಂತ ಇರುವ ವಿವಿಧ ರಾಜ್ಯಗಳ ನಡುವಿನ ನೀರಿನ ವಿವಾದಗಳಿಗೆ ಮಾದರಿ ಪರಿಹಾರವಾಗಿ ಹೊರಹೊಮ್ಮಲಿದೆ ಎಂದು ಆಶಯ ವ್ಯಕ್ತಪಡಿಸಿದರು.

### ರೈತರ ಸೇವೆ ಪ್ರಾಮಾಣಿಕವಾಗಿ ಮಾಡುವೆ: ಡಿ.ಕೆ.ಶಿವಕುಮಾರ


ಮೂರು ರಾಜ್ಯಗಳ ನೀರಾವರಿ ಸಮಸ್ಯೆಗಳನ್ನು ಒಟ್ಟಾಗಿ ಹೇಗೆ ಬಗೆಹರಿಸಿ ರೈತರನ್ನು ಬದುಕಿಸಬೇಕು ಎನ್ನುವುದಕ್ಕೆ ಇವತ್ತಿನ ದಿನ ಸಾಕ್ಷಿಯಾಗಿದೆ. ದೇವರು ನಮಗೆ ಎರಡು ಆಯ್ಕೆಗಳನ್ನು ನೀಡಿದ್ದಾನೆ. ಒಂದು ಕೊಟ್ಟು ಹೋಗುವುದು, ಇಲ್ಲವೇ ಬಿಟ್ಟು ಹೋಗುವುದು. ದೇವರು ಯಾರಿಗೂ ವರವನ್ನೂ ಕೊಡುವುದಿಲ್ಲ, ಶಾಪವನ್ನೂ ಕೊಡುವುದಿಲ್ಲ, ಕೇವಲ ಅವಕಾಶವನ್ನು ಮಾತ್ರ ನೀಡುತ್ತಾನೆ. ಈ ಬದುಕಿನಲ್ಲಿ ನಮ್ಮ ಹೆಜ್ಜೆಯ ಗುರುತುಗಳನ್ನು ಉಳಿಸಿ ಹೋಗಲು, ಸಾಕ್ಷಿ ಗುಡ್ಡಗಳನ್ನು ನಿರ್ಮಾಣ ಮಾಡಲು ಸಿಕ್ಕಿರುವ ಈ ಅವಕಾಶದಲ್ಲಿ ಜನಸಾಮಾನ್ಯರ ಹಾಗೂ ರೈತರ ಸೇವೆಯನ್ನು ಪ್ರಾಮಾಣಿಕವಾಗಿ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ನುಡಿದರು.

ಸಚಿವ ರಾಮಲಿಂಗಾರೆಡ್ಡಿ, ಸಂಸದ ಕೆ.ರಾಜಶೇಖರ ಹಿಟ್ನಾಳ್, ಶಾಸಕ ಕೆ.ರಾಘವೇಂದ್ರ ಹಿಟ್ನಾಳ್, ಮಾಜಿ ಸಂಸದ ಕರಡಿ ಸಂಗಣ್ಣ ಇದ್ದರು.



ಕಿರುಸುದ್ದಿ

### 19 ಹಸುಗಳ ರಕ್ಷಣೆ: ಇಬ್ಬರ ಬಂಧನ, ವಾಹನ ಜಪ್ತಿ




**• ಕಲಬುರಗಿ:** ಮೊಹರಂ ಹಬ್ಬದ ಹಿನ್ನೆಲೆಯಲ್ಲಿ ವಿಶೇಷ ಪೆಟ್ರೋಲಿಂಗ್ ನಡೆಸುತ್ತಿದ್ದ ವೇಳೆ ಅಕ್ರಮವಾಗಿ ಹಸುಗಳನ್ನು ಸಾಗಾಣಿಕೆ ಮಾಡುತ್ತಿದ್ದ ಗೂಡ್ಸ್ ವಾಹನವನ್ನು ಸಬ್ ಅರ್ಬನ್ ಪೊಲೀಸ್ ಠಾಣೆ ಪೊಲೀಸರು ವಶಕ್ಕೆ ಪಡೆದು ಇಬ್ಬರನ್ನು ಬಂಧಿಸಿದ್ದಾರೆ. ಜೂನ್ 23ರಂದು ಸಂಜೆ ಆಳಂದ ತಾಲೂಕಿನ ಅಷ್ಟಲಾಪುರ-ಕಲಬುರಗಿ ಮಾರ್ಗದಲ್ಲಿ ಪೊಲೀಸರು ವಾಹನ ತಪಾಸಣೆ ನಡೆಸುತ್ತಿದ್ದ ವೇಳೆ ಗೂಡ್ಸ್ ವಾಹನವನ್ನು ತಡೆದು ಪರಿಶೀಲಿಸಿದರು. ಈ ವೇಳೆ ವಾಹನದಲ್ಲಿ 19 ಹಸುಗಳನ್ನು ತುಂಬಿಕೊಂಡು ಸಾಗಿಸಲಾಗುತ್ತಿರುವುದು ಪತ್ತೆಯಾಗಿದ್ದು, ವಾಹನದಲ್ಲಿದ್ದ ಮಹ್ಮದ ನೂರ್ ತಂದೆ ಫಿರೋಜ್ ಮಿಯಾ ಬೇಪಾರಿ (25) ಹಾಗೂ ಸಮೀರ್ ಬಾಬಾ ತಂದೆ ಗುಲಾಬ್ (24), ಇಬ್ಬರೂ ಮಹಾರಾಷ್ಟ್ರದ ಸೊಲ್ಲಾಪುರ ಜಿಲ್ಲೆಯ ಅಕ್ಕಲಕೋಟ ತಾಲೂಕಿನ ಮೈಂದರ್ಗಿ ನಿವಾಸಿಗಳಾಗಿದ್ದು, ವಿಚಾರಣೆ ವೇಳೆ ಹಸುಗಳನ್ನು ಕಸಾಯಿಖಾನೆಗೆ ಸಾಗಿಸುತ್ತಿದ್ದುದಾಗಿ ತಿಳಿದು ಬಂದಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ವಿಶ್ವ ಹಿಂದೂ ಪರಿಷತ್, ಬಜರಂಗದಳ ಹಾಗೂ ಪೊಲೀಸರ ವಿಶೇಷ ಕಾರ್ಯಾಚರಣೆಯಿಂದ 19 ಹಸುಗಳನ್ನು ರಕ್ಷಿಸಿ ಮಿಣಜಗಿ ಗೋಶಾಲೆಗೆ ಒಪ್ಪಿಸಿದ್ದು, ಸುಮಾರು 11.40 ಲಕ್ಷ ಮೌಲ್ಯದ ಜಾನುವಾರುಗಳು ಹಾಗೂ 5 ಲಕ್ಷ ಮೌಲ್ಯದ ಗೂಡ್ಸ್ ವಾಹನವನ್ನು ಜಪ್ತಿ ಮಾಡಿದ್ದಾರೆ. ಈ ಸಂಬಂಧ ಸಬ್ ಅರ್ಬನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ಕೈಗೊಳ್ಳಲಾಗಿದೆ.

### ಯು.ಟಿ.ಖಾದರ್‌ಗೆ ಉತ್ತರ ಕನ್ನಡ ಜಿಲ್ಲೆ ಉಸ್ತುವಾರಿ



**• ಕಾರವಾರ:** ಉತ್ತರ ಕನ್ನಡ ಜಿಲ್ಲೆಯ ಉಸ್ತುವಾರಿಯ ಜವಾಬ್ದಾರಿಯನ್ನು ಆರೋಗ್ಯ ಸಚಿವ ಯು.ಟಿ.ಖಾದರ್‌ಅವರಿಗೆ ನೀಡಲಾಗಿದ್ದು ದಕ್ಷಿಣ ಕನ್ನಡ, ಉಡುಪಿ, ಕೊಡಗು ಜಿಲ್ಲೆಗಳ ಜೊತೆ ಉತ್ತರ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರಾಗಿ ಯು.ಟಿ.ಖಾದರ್ ಕಾರ್ಯನಿರ್ವಹಿಸಲಿದ್ದಾರೆ.

ರಾಜ್ಯದಲ್ಲಿ ಮುಖ್ಯಮಂತ್ರಿಗಳ ಬದಲಾವಣೆಯ ಜೊತೆಯಲ್ಲಿ ಮಂತ್ರಿಮಂಡಲದಲ್ಲೂ ಬದಲಾವಣೆ ಮಾಡಲಾಗಿದ್ದು ಜಿಲ್ಲೆಯ ಉಸ್ತುವಾರಿ ಮಂತ್ರಿ ಮಂಕಾಳ ವೈದ್ಯ ಅವರು ಜಿಲ್ಲೆಯ ಉಸ್ತುವಾರಿ ಜವಾಬ್ದಾರಿಯಿಂದ ಮುಕ್ತರಾಗಿದ್ದರು.

ರಾಜ್ಯದ ವಿವಿಧ ಜಿಲ್ಲೆಗಳ ಪರಿಸ್ಥಿತಿಯ ನಿರ್ವಹಣೆಗೆ ಉಸ್ತುವಾರಿ ಸಚಿವರುಗಳ ಮಾರ್ಗದರ್ಶನ ಅಗತ್ಯವಿರುವುದರಿಂದ ತುರ್ತು ಸಂದರ್ಭದಲ್ಲಿ ನಿರ್ಣಯಗಳನ್ನು ಕೈಗೊಳ್ಳಲು ಅನುಕೂಲ ಆಗುವಂತೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ ಅವರು ಈಗ ಇರುವ ಸಚಿವರುಗಳಿಗೆ ಜಿಲ್ಲೆಗಳ ಉಸ್ತುವಾರಿ ಜವಾಬ್ದಾರಿಯನ್ನು ನೀಡಿದ್ದು ಉತ್ತರ ಕನ್ನಡ ಜಿಲ್ಲೆಯ ಉಸ್ತುವಾರಿಯನ್ನು ಸಚಿವ ಯು.ಟಿ.ಖಾದರ್ ಅವರು ತಾತ್ಕಾಲಿಕವಾಗಿ ನಿರ್ವಹಿಸಲಿದ್ದು, ಪೂರ್ಣ ಪ್ರಮಾಣದ ಉಸ್ತುವಾರಿ ಸಚಿವರ ನೇಮಕ ಮುಂದಿನ ದಿನಗಳಲ್ಲಿ ನಡೆಯಲಿದೆ ಎಂದು ತಿಳಿದು ಬಂದಿದೆ.

### ಇಂಗ್ಲೆಂಡ್‌ಗೆ ತೆರಳುವ ಕೆಸಿಡಿ ವಿದ್ಯಾರ್ಥಿಗಳು




**• ಧಾರವಾಡ:** ಯುನೈಟೆಡ್ ಕಿಂಗ್‌ಡಮ್‌ನ ವೂಲ್ವರ್‌ಹ್ಯಾಂಪ್ಟನ್ ವಿವಿಯಲ್ಲಿ ಇದೇ ಜೂ.27ರಿಂದ ಜು.11ರವರೆಗೂ ನಡೆಯಲಿರುವ ಅಂತಾರಾಷ್ಟ್ರೀಯ ಸ್ಕೌಟ್ಸ್ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳಿಗೆ ಕುಲಪತಿ ಡಾ. ಎ.ಎಂ. ಖಾನ್ ಶುಭ ಹಾರೈಸಿದರು.

ಇದೊಂದು ಅಂತಾರಾಷ್ಟ್ರೀಯ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮವಾಗಿದ್ದು, ವಿವಿಯ ಸಂಯೋಜಿತ ಕರ್ನಾಟಕ ಕಾಲೇಜಿನ ಕಲಾ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ ಅನುಕೂಲಗುವ ಕುರಿತು ಸಂಯೋಜಕ ಡಾ.ಎಂ.ಬಿ.ದಳಪತಿ ತಿಳಿಸಿದರು.

ಸ್ಕೌಟ್ಸ್ ಅತ್ಯುತ್ತಮ ಮತ್ತು ಪ್ರತಿಭಾವಂತ ಪದವಿ ವಿದ್ಯಾರ್ಥಿಗಳಿಗೆ ಹವಾಮಾನ, ಧೈರ್ಯ, ಸ್ಥೈರ್ಯ, ಭವಿಷ್ಯದ ನಗರಗಳು, ನಾಯಕತ್ವ ಮತ್ತು ಸಮಾನತೆ ಬಗ್ಗೆ ವಿಶೇಷ ಅಂತಾರಾಷ್ಟ್ರೀಯ ಮಟ್ಟದ ವಿವಿಧ ಚಟುವಟಿಕೆಗಳಲ್ಲಿ ಭಾಗವಹಿಸಲಿದ್ದಾರೆ ಎಂದರು.

ಈ ಅಂತಾರಾಷ್ಟ್ರೀಯ ಸ್ಕೌಟ್ಸ್ ವಿನಿಮಯ ಕಾರ್ಯಕ್ರಮದ ವಸತಿ ಮತ್ತು ಊಟ ಸೇರಿದಂತೆ ಸ್ಥಳೀಯ ಪ್ರವಾಸ ಮತ್ತು ವಿವಿಧ ಚಟುವಟಿಕೆಗಳಿಗೆ ಸಂಪೂರ್ಣ ವೆಚ್ಚ ಬ್ರಿಟಿಷ್ ಕೌನ್ಸಿಲ್ ಹಾಗೂ ಭಾರತ ಸರ್ಕಾರ ಭರಿಸಲಿದೆ ಎಂದು ದಳಪತಿ ಮಾಹಿತಿ ನೀಡಿದರು.

ಬಿಎ ವಿದ್ಯಾರ್ಥಿನಿ ಅಸ್ಮಾಶಾನೂರಖಾನ್, ಸಿದ್ದರಾಮ, ಶೃತಿ ಜಾಲವಾದಿ, ವಿಜ್ಞಾನ ಬಿಎಸ್ಸಿ ವಿದ್ಯಾರ್ಥಿನಿ ಶ್ರದ್ಧಾ ಬಸವರಾಜ, ಲಕ್ಷ್ಮೀ ಹಿರೇಮಠ ಪಾಲ್ಗೊಳ್ಳುವ ಇವರಿಗೆ ಪ್ರಾಚಾರ್ಯರಾದ ಡಾ. ಈರಣ್ಣ ಮುಳಗುಂದ ಹಾಗೂ ಡಾ. ಎಂ.ಎಸ್. ಸಾಳುಂಕೆ ಶುಭ ಹಾರೈಸಿದರು.

# ಧಾರವಾಡ ನ್ಯಾಯಾಲಯಕ್ಕೆ ಮತ್ತೆ ಬಾಂಬ್ ಬೆದರಿಕೆ



**• ಧಾರವಾಡ:** ವಾರದ ಹಿಂದೆ ಜಿಲ್ಲಾ ನ್ಯಾಯಾಲಯ ಆವರಣದಲ್ಲಿ ಬಾಂಬ್ ಇಟ್ಟ ಬೆದರಿಕೆ ಸಂದೇಶದ ಘಟನೆ ಮಾಸುವ ಮುನ್ನವೇ, ಗುರುವಾರ ಪುನಃ ಬಾಂಬ್ ಇರಿಸಿದ ಇ-ಮೇಲ್ ಬೆದರಿಕೆ ಸಂದೇಶ ಬಂದಿರುವುದು ಜನರಲ್ಲಿ ತೀವ್ರ ಆತಂಕ ಮೂಡಿಸಿದೆ.

**ಮತ್ತೆ ಇ-ಮೇಲ್-ಅಲರ್ಟ್:** ಗುರುವಾರ ಬೆಳಗ್ಗೆ ಜಿಲ್ಲಾ ನ್ಯಾಯಾಲಯದ ಅಧಿಕೃತ ಇ-ಮೇಲ್ ಖಾತೆಗೆ ಅಪರಿಚಿತರಿಂದ ಸಂದೇಶ ಬಂದಿದ್ದು, ಎಚ್ಚೆತ್ತ ನ್ಯಾಯಾಲಯದ ಸಿಬ್ಬಂದಿ ಮತ್ತು ಪೊಲೀಸರು ತಕ್ಷಣವೇ ಕಾರ್ಯಪ್ರವೃತ್ತರಾಗಿ, ವಕೀಲರು, ಸಿಬ್ಬಂದಿ ಹೊರಗಡೆ ಕಳುಹಿಸಿದರು.

**ಸ್ಥಳಕ್ಕೆ ಶ್ವಾನದಳ-ತಜ್ಞರು:** ಸುದ್ದಿ ತಿಳಿದು ಹಿರಿಯ ಪೊಲೀಸ್ ಅಧಿಕಾರಿಗಳು, ಬಾಂಬ್ ನಿಷ್ಕ್ರಿಯದಳ ಮತ್ತು ಶ್ವಾನದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದರು. ನ್ಯಾಯಾಲಯದ ಮುಖ್ಯ ಕಟ್ಟಡ, ನ್ಯಾಯಾಧೀಶರ ಕೊಠಡಿಗಳು, ವಕೀಲರ ಸಂಘದ ಕಚೇರಿ ಶೋಧ ಕಾರ್ಯ ನಡೆಸಿದರು.

**ವಾರದಲ್ಲಿ ಎರಡನೇ ಘಟನೆ!** ಕೇವಲ (ಕಳೆದ ಶುಕ್ರವಾರ) ಒಂದು ವಾರದ ಹಿಂದೆಯೂ ಇದೇ ಮಾದರಿಯಲ್ಲಿ ನ್ಯಾಯಾಲಯಕ್ಕೆ ಬಾಂಬ್ ಬೆದರಿಕೆ ಸಂದೇಶ ಬಂದಿತ್ತು. ಆಗಲೂ ಸುದೀರ್ಘ ತಪಾಸಣೆ ನಂತರ ಅದೊಂದು ಕೇವಲ 'ಹುಸಿ ಬಾಂಬ್ ಬೆದರಿಕೆ' ಎಂದು ತಿಳಿದು ಬಂದಿತ್ತು.

ಕೇವಲ ಆರೇ ದಿನಗಳ ಅಂತರದಲ್ಲಿ ಗುರುವಾರ ಪುನಃ ಇಮೇಲ್ ಬಂದಿರುವುದು ಸಾರ್ವಜನಿಕರು, ನ್ಯಾಯಾಂಗ ವಲಯದಲ್ಲಿ ಆತಂಕದ ಜೊತೆಗೆ ಆಕ್ರೋಶಕ್ಕೂ ಕಾರಣವಾಗಿದೆ. ಅಲ್ಲದೇ, ಪೊಲೀಸರ ಕಾರ್ಯವೈಖರಿ ಕುರಿತು ಅಸಮಾಧಾನವೂ ವ್ಯಕ್ತವಾಗಿದೆ.

**ಪೊಲೀಸರ ವೈಫಲ್ಯ:** ಪದೇ ಪದೆ ಇಂತಹ ಕೃತ್ಯ ಎಸಗಿ ಸಾರ್ವಜನಿಕ ಶಾಂತಿಗೆ ಭಂಗ ತರುತ್ತಿರುವ ಕಿಡಿಗೇಡಿಗಳ ಪತ್ತೆಗೆ ಪೊಲೀಸ್ ಇಲಾಖೆ ವಿಫಲವಾಗಿದೆ. ಸದ್ಯಕ್ಕೆ ಯಾವುದೇ ಆತಂಕಾರಿ ವಸ್ತುಗಳು ಪತ್ತೆಯಾಗಿಲ್ಲ, ಆದಾಗ್ಯೂ ಕೂಡ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.



ಸಮಾಧಿಯಿಂದ ಮೃತದೇಹ ಹೊರತೆಗೆದು ಮರಣೋತ್ತರ ಪರೀಕ್ಷೆ

# ಆಸ್ತಿ ವಿವಾದ: ತಂದೆಯ ಅನುಮಾನಾಸ್ಪದ ಸಾವು

**• ಸವಣೂರು:** ಆಸ್ತಿ ಹಂಚಿಕೆ ವಿಚಾರವಾಗಿ ಅಣ್ಣ-ತಂಗಿಯರ ನಡುವೆ ಉಂಟಾಗಿದ್ದ ತೀವ್ರ ಮನಸ್ತಾಪ ಮಧ್ಯೆ 75ವರ್ಷದ ವೃದ್ಧನೊಬ್ಬನ ಸಾವು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಅಂತ್ಯ ಸಂಸ್ಕಾರದ ನಂತರ, ಪ್ರಕರಣ ಹೊಸ ತಿರುವು ಪಡೆದುಕೊಂಡು, ಮೃತದೇಹವನ್ನು ಸಮಾಧಿಯಿಂದ ಹೊರ ತೆಗೆದು ಮರಣೋತ್ತರ ಪರೀಕ್ಷೆ ನಡೆಸಿದ ಘಟನೆ ತಾಲೂಕಿನ ಶಿರಬಡಗಿ ಗ್ರಾಮದಲ್ಲಿ ನಡೆದಿದೆ.

ಅಣ್ಣ-ತಂಗಿಯರ ಆರೋಪ, ಪ್ರತ್ಯಾರೋಪ





ಶಿರಬಡಗಿ ಗ್ರಾಮದ ಗುರುಬಸಪ್ಪ ಬಸಾಪುರ (75) ಜೂ.15ರಂದು ತಮ್ಮ ತೋಟದಲ್ಲಿ ಅನುಮಾನಾಸ್ಪದವಾಗಿ ಮೃತಪಟ್ಟಿದ್ದರು. ಆರಂಭದಲ್ಲಿ ಕುಟುಂಬಸ್ಥರು ಅಂತ್ಯಸಂಸ್ಕಾರ ನೆರವೇರಿಸಿದ್ದರು. ಅಲ್ಲದೇ ಅಂತ್ಯ ಸಂಸ್ಕಾರದ ವೇಳೆ ಶವ ಹೂಳುವಾಗ ಸುಣ್ಣದ ಬಳಕೆ ಮಾಡಿದ್ದು, ಈ ಕುರಿತು ಕುಟುಂಬ ಸದಸ್ಯರ ನಡುವೆ ಪರಸ್ಪರ ಆರೋಪ-ಪ್ರತ್ಯಾರೋಪಗಳು ಕೇಳಿಬಂದಿವೆ.

ಇದರ ಬೆನ್ನಲ್ಲೇ ಮೃತ ಗುರುಬಸಪ್ಪನ ಪತ್ನಿ ರುದ್ರವ್ವ ತನ್ನ ಪತಿಯ ಸಾವಿನಲ್ಲಿ ಅನುಮಾನವಿದೆ ಎಂದು ದೂರು ನೀಡಿದ ಹಿನ್ನೆಲೆಯಲ್ಲಿ ಪೊಲೀಸರು ಪ್ರಕರಣದ ತನಿಖೆ ಚುರುಕುಗೊಳಿಸಿದ್ದಾರೆ.

ಮೃತ ಗುರುಬಸಪ್ಪ ಅವರಿಗೆ ಹಿರಿಯ ಪುತ್ರ ರವಿ ಬಸಾಪುರ ಹಾಗೂ ಪುತ್ರಿಯರಾದ ರೇಖಾ, ಸುಜಾತಾ, ಗಿರಿಜಾ ಮತ್ತು ಪಾರ್ವತಿ ಸೇರಿ ಐವರು ಮಕ್ಕಳು ಇದ್ದಾರೆ. ಗುರುಬಸಪ್ಪ ಅವರ ಹೆಸರಿನಲ್ಲಿ ಸುಮಾರು 27 ಎಕರೆ ಕೃಷಿ ಜಮೀನು ಇದ್ದು, ಇತ್ತೀಚೆಗೆ ಪುತ್ರಿಯರಿಗೂ ಆಸ್ತಿಯಲ್ಲಿ ಪಾಲು ನೀಡಿರುವುದಾಗಿ ತಿಳಿದುಬಂದಿದೆ.

ಈ ನಿರ್ಧಾರದಿಂದ ಹಿರಿಯ ಪುತ್ರ ರವಿ ಬಸಾಪುರ ಅಸಮಾಧಾನಗೊಂಡಿದ್ದರು. ಹೆಣ್ಣು ಮಕ್ಕಳಿಗೂ ಆಸ್ತಿ ಹಂಚಿಕೆ ಮಾಡಿದ್ದ ಕಾರಣಕ್ಕೆ ತಂದೆಯನ್ನು ರವಿ ಬಸಾಪುರ ಕೊಲೆ ಮಾಡಿದ್ದಾನೆ ಎಂದು ಸಹೋದರಿಯರು ಆರೋಪಿಸಿದ್ದು, ತಮ್ಮ ತಾಯಿಯ ಮೂಲಕ ಪೊಲೀಸರಿಗೆ ದೂರು ನೀಡಿದ್ದಾರೆ.

ಇದಕ್ಕೆ ಪ್ರತಿಯಾಗಿ ರವಿ ಬಸಾಪುರ, ತಮ್ಮ ಸಹೋದರಿಯರೇ ಆಸ್ತಿ ವಿಚಾರಕ್ಕಾಗಿ ತಂದೆಯನ್ನು ಕೊಲೆ ಮಾಡಿ ತನ್ನ ಮೇಲೆ ಆರೋಪ ಹೊರಿಸುತ್ತಿದ್ದಾರೆ ಎಂದು ಪ್ರತಿದೂರು ದಾಖಲಿಸಿದ್ದಾರೆ. ಆಸ್ತಿ ಹಂಚಿಕೆ ಸಂಬಂಧದ ವಿವಾದ ಈಗಾಗಲೇ ಸಿವಿಲ್ ನ್ಯಾಯಾಲಯದ ಮೆಟ್ಟಿಲೇರಿರುವುದೂ ತನಿಖೆಯಲ್ಲಿ ಬೆಳಕಿಗೆ ಬಂದಿದೆ.

ಪ್ರಕರಣದ ಗಂಭೀರತೆಯನ್ನು ಮನಗಂಡ ಸವಣೂರು ಪೊಲೀಸರು, ತಹಶೀಲ್ದಾರ್ ರವಿ ಕೊರವರ ಅವರ ಸಮ್ಮುಖದಲ್ಲಿ ಗುರುಬಸಪ್ಪ ಅವರ ಶವವನ್ನು ಸಮಾಧಿಯಿಂದ ಹೊರತೆಗೆದು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಾರೆ.

ಮರಣೋತ್ತರ ಪರೀಕ್ಷೆಯ ವರದಿ ಬಂದ ಬಳಿಕ ಸಾವಿನ ನಿಖರ ಕಾರಣ ತಿಳಿಯಲಿದ್ದು, ವರದಿ ಆಧರಿಸಿ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಸವಣೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

## ಕಿರುಸುದ್ದಿ

### ಚಂದನ ವಾಹಿನಿಯಲ್ಲಿ ಅರುಣ ನಾಡಕರ್ಣಿ



**ಅಂಕೋಲಾ :** ದೇಶಿಯ ಉಪ್ಪು ತಯಾರಿಕೆಯಲ್ಲಿ ದೇಶ ವಿದೇಶದಲ್ಲಿ ಹೆಸರುವಾಸಿಯಾಗಿರುವ ಗೋಕರ್ಣ ಸಮೀಪದ ಸಾಣೆಕಟ್ಟದ ದಿ. ನಾಗರಬೈಲ್ ಸಾಲ್ಟ್ ಓನರ್ಸ್ ಕೋ ಆಪ್ ಸೊಸೈಟಿಯ ಕುರಿತಾಗಿ ಅಧ್ಯಕ್ಷ , ಸಹಕಾರಿ ಧುರೀಣ ಅರುಣ ದಯಾನಂದ ನಾಡಕರ್ಣಿ ಜೊತೆ ನಡೆಸಿದ ಸಂದರ್ಶನವು ದೂರದರ್ಶನದ ಚಂದನ ವಾಹಿನಿಯ ರೈತರತ್ನ ಕಾರ್ಯಕ್ರಮದಲ್ಲಿ ಜೂ. 27ರಂದು ಶನಿವಾರ ಸಂಜೆ 6 ಗಂಟೆಗೆ ಮತ್ತು ಮರುಪ್ರಸಾರವು ಜೂ.28ರಂದು ಭಾನುವಾರ ಮಧ್ಯಾಹ್ನ 12 ಗಂಟೆಗೆ ಪ್ರಸಾರವಾಗಲಿದೆ. ಈ ಕಾರ್ಯಕ್ರಮವನ್ನು ಚಂದನ ವಾಹಿನಿಯ ಕಾರ್ಯಕ್ರಮ ನಿರ್ವಾಹಕ ಹಲ್ದೂರ್ ಗೋಪಿನಾಥ ನಡೆಸಿಕೊಟ್ಟಿದ್ದಾರೆ.

### ನಾಳೆ ಕೆಂಪೇಗೌಡ ಜಯಂತಿ

**ಕಾರವಾರ:** ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಜೂ.27 ರಂದು ಬೆಳಗ್ಗೆ 10 ಗಂಟೆಗೆ ನಾಡಪ್ರಭು ಕೆಂಪೇಗೌಡ ಜಯಂತಿಯನ್ನು ಕಾರವಾರದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.ಕರ್ನಾಟಕ ರಾಜ್ಯ ಮಾರ್ಕೆಟಿಂಗ್ ಕಮ್ಯುನಿಕೇಷನ್ ಅಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಅಧ್ಯಕ್ಷ ಹಾಗೂ ಶಾಸಕ ಸತೀಶ ಕೆ. ಸೈಲ್ ಕಾರ್ಯಕ್ರಮದ ಅಧ್ಯಕ್ಷತೆ ಮತ್ತು ಉದ್ಘಾಟನೆ ಮಾಡಲಿದ್ದಾರೆ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ, ಶಾಸಕರಾದ ಆರ್.ವಿ ದೇಶಪಾಂಡೆ, ಶಿವರಾಮ ಹೆಬ್ಬಾರ್, ದಿನಕರ ಕೆ. ಶೆಟ್ಟಿ, ಮಂಕಾಳ ಎಸ್ ವೈದ್ಯ, ಭೀಮಣ್ಣ ಟಿ. ನಾಯ್ಕ, ವಿಧಾನ ಪರಿಷತ್ ಶಾಸಕರಾದ ಎಸ್. ವಿ.ಸಂಕನೂರು, ಶಾಂತಾರಾಮ ಬುಡ್ನ ಸಿದ್ದಿ, ಗಣಪತಿ ಡಿ.ಉಳ್ವೇಕರ ಹಾಗೂ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಸತೀಶ ನಾಯ್ಕ ಮತ್ತಿತರರು ಪಾಲ್ಗೊಳ್ಳಲಿದ್ದಾರೆ. ಕಾರವಾರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲೆ ಹೇಮಲತಾ ಕೆ ಉಪನ್ಯಾಸ ನೀಡಲಿದ್ದಾರೆ.

## ನಿಧನ ಸುದ್ದಿ

### ಈಶ್ವರ ನಾಯ್ಕ



**ಯಲ್ಲಾಪುರ:** ಶಾಸಕ ಶಿವರಾಮ ಹೆಬ್ಬಾರ ಅವರ ಆಪ್ತ ಕಾರ್ಯದರ್ಶಿ ಕಮಲಾಕರ ನಾಯ್ಕ ಅವರ ತಂದೆ ಈಶ್ವರ ತಿಮ್ಮಪ್ಪ ನಾಯ್ಕ (77) ಅವರು ಯಲ್ಲಾಪುರದಲ್ಲಿ ವಯೋಸಹಜ ಕಾರಣದಿಂದ ನಿಧನರಾದರು. ಮೂಲತಹೊನ್ನಾವರ ತಾಲ್ಲೂಕಿನ ಜಲವಳಕರ್ಕಿಯವರಾಗಿದ್ದಾರೆ ಮೃತರು ಪತ್ನಿ ಪಾರ್ವತಿ ನಾಯ್ಕ, ಪುತ್ರ ಕಮಲಾಕರ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಈಶ್ವರ ನಾಯ್ಕ ಅವರ ಅಗಲಿಕೆಗೆ ಶಾಸಕ ಶಿವರಾಮ ಹೆಬ್ಬಾರ ಹಾಗೂ ಕುಟುಂಬದವರು ಸಂತಾಪ ವ್ಯಕ್ತಪಡಿಸಿದ್ದಾರೆ.

## ಎಪಿಎಂಸಿ ಕೃಷಿ ಧಾರಣೆ

| ಶಿರಸಿ | ಕನಿಷ್ಠ | ಗರಿಷ್ಠ |
|---|---|---|
| ಕಾಳುಮೆಣಸು | 62699 | 68399 |
| ಬಿಳಿಗೋಟು | 27309 | 34523 |
| ಕೆಂಪುಗೋಟು | 28699 | 33699 |
| ಬೆಟ್ಟೆ | 40099 | 47200 |
| ರಾಶಿ | 48909 | 52099 |
| ಚಾಲಿ | 44199 | 48215 |
| **ಯಲ್ಲಾಪುರ** | **ಕನಿಷ್ಠ** | **ಗರಿಷ್ಠ** |
| ಆಪಿ | 55299 | 55299 |
| ರಾಶಿ | 48699 | 53735 |
| ಬೆಟ್ಟೆ | 36719 | 46099 |
| ಕೆಂಪುಗೋಟು | 20600 | 35199 |
| ಬಿಳಿಗೋಟು | 21600 | 34109 |
| ಚಾಲಿ | 36009 | 47711 |
| ಕೋಕಾ | 16012 | 27699 |
| ಕಾಳುಮೆಣಸು | 62601 | 65200 |




ಸಿದ್ದಾಪುರ: ಸ್ಥಳೀಯ ತಾಲೂಕು ಪಂಚಾಯತ ಸಭಾಭವನದಲ್ಲಿ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ಜಿ. ನಾಗರಾಜ ಅವರ ಅಧ್ಯಕ್ಷತೆಯಲ್ಲಿ ಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಯಿತು. ಈ ಸಭೆಯಲ್ಲಿ ಗೃಹಲಕ್ಷ್ಮೀ, ಶಕ್ತಿ ಯೋಜನೆ, ಗೃಹಜ್ಯೋತಿ ಹಾಗೂ ಅನ್ನಭಾಗ್ಯ ಯೋಜನೆಗಳ ಅನುಷ್ಠಾನದ ಕುರಿತು ವಿಸ್ತೃತವಾಗಿ ಚರ್ಚಿಸಲಾಯಿತು.

## ಕರ್ನಾಟಕ ಸಂಘ: ಜೂ.28 ರಂದು ದುಂಡುಮೇಜಿನ ಸಭೆ

**ಅಂಕೋಲಾ :** ಕರ್ನಾಟಕ ಸಂಘದ ಆಶ್ರಯದಲ್ಲಿ ದ್ವಿಭಾಷಾ ಮಾಧ್ಯಮ ಮತ್ತು ಕನ್ನಡದ ಭವಿಷ್ಯ ಎಂಬ ವಿಷಯದ ಕುರಿತಾಗಿ ವಿಶೇಷ ದುಂಡು ಮೇಜಿನ ಸಭೆ ಜೂ.28 ರಂದು ಭಾನುವಾರ ಬೆಳಿಗ್ಗೆ 10-30ಕ್ಕೆ ಕನ್ನಡ ಭವನದಲ್ಲಿ ಆಯೋಜಿಸಲಾಗಿದೆ.ಕನ್ನಡ ಕೇವಲ ಒಂದು ಭಾಷೆಯಲ್ಲ,ಅದು ಒಂದು ಪ್ರದೇಶ. ಒಂದು ಜನಪದ.ಒಂದು ಸಂಸ್ಕೃತಿ.ಕರ್ನಾಟಕದಲ್ಲಿ ಕನ್ನಡಕ್ಕೆ ಅಗ್ರ ಮನ್ನಣೆ ಇರಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಶಿಕ್ಷಣ ಸಬಲೀಕರಣದ ಹೆಸರಿನಲ್ಲಿ ಸರಕಾರಿ ಶಾಲಾಶಿಕ್ಷಣದಲ್ಲಿ ದ್ವಿಭಾಷಾ ಮಾಧ್ಯಮವನ್ನು ಜಾರಿಗೆತರಲಾಗಿದೆ. ಇದು ಹೆಸರಿಗೆ ಮಾತ್ರ ದ್ವಿಭಾಷಾ ಮಾಧ್ಯಮವಾಗಿದ್ದು ಕನ್ನಡ ಬದಿಗೆ ತಳ್ಳಲಾಗಿದೆ. ಇದರಿಂದ ಕನ್ನಡ ಜಾಯಮಾನವನ್ನೇ ಅರಿಯದ ತಲೆಮಾರು ಸೃಷ್ಟಿಯಾಗುವ ಅಪಾಯವಿದೆ. ಇದು ಒಟ್ಟಾರೆ ಆಡಳಿತ ವ್ಯವಸ್ಥೆಯ ಮೇಲೂ ಪರಿಣಾಮ ಬೀರುವ ಸಾಧ್ಯತೆಗಳಿವೆ. ಕರ್ನಾಟಕದಲ್ಲಿಯೇ ಕನ್ನಡ ಮಾಧ್ಯಮ ಇಲ್ಲದಿದ್ದರೆ ಇನ್ನೆಲ್ಲಿ ಇರಬೇಕು? ಈ ಹಿನ್ನೆಲೆಯಲ್ಲಿ ದ್ವಿಭಾಷಾ ನೀತಿ ಕನ್ನಡ ಭಾಷೆಯ ಬೆಳವಣಿಗೆ ಅಪಾಯವನ್ನುಂಟು ಮಾಡಬಹುದು ಎಂಬ ಆತಂಕ ಕನ್ನಡ ಅಭಿಮಾನಿಗಳಲ್ಲಿದೆ.ಆದ್ದರಿಂದ ದ್ವಿಭಾಷಾ ಶಿಕ್ಷಣದಿಂದ ಕನ್ನಡ ಭಾಷೆ ಎದುರಿಸಬಹುದಾದ ಸವಾಲುಗಳು,ಉಂಟಾಗಬಹುದಾದ ಬಿಕ್ಕಟ್ಟುಗಳು, ಕನ್ನಡದ ಸಬಲೀಕರಣಕ್ಕಾಗಿ ಕೈಕೊಳ್ಳಬಹುದಾದ ಪರಿಹಾರಗಳನ್ನು ಸ್ಥಳೀಯ ಮಟ್ಟದಲ್ಲಿ ಚರ್ಚಿಸುವ ಉದ್ದೇಶದಿಂದ ಕರ್ನಾಟಕ ಸಂಘವುಈ ವಿಶೇಷ ದುಂಡು ಮೇಜಿನ ಸಭೆಯನ್ನು ಏರ್ಪಡಿಸಿದೆ. ಈ ಸಭೆಗೆ ಕರ್ನಾಟಕ ಸಂಘದ ಸದಸ್ಯರಲ್ಲದೆ, ಅಂಕೋಲೆಯ ಚಿಂತಕರು, ಲೇಖಕರು,ವಿಶ್ರಾಂತ ಶಿಕ್ಷಕರು, ಶಿಕ್ಷಣ ತಜ್ಞರನ್ನು ಆಹ್ವಾನಿಸಲಾಗಿದೆ. ಈ ಮಹತ್ವದ ಸಭೆಯಲ್ಲಿ ಪಾಲ್ಗೊಂಡು ಸಲಹೆಗಳನ್ನು ನೀಡಬೇಕೆಂದು ಕರ್ನಾಟಕ ಸಂಘ ಪ್ರಕಟನೆಯಲ್ಲಿ ಕೋರಿದೆ.



ಗೋಕರ್ಣ: ಇಲ್ಲಿನ ಪೊಲೀಸ್ ಠಾಣೆ ಹಾಗೂ ಕೆನರಾ ಶಿಕ್ಷಣ ಪ್ರಸಾರಕ ಮಂಡಳದ ಭದ್ರಕಾಳಿ ಸಮೂಹ ವಿದ್ಯಾಸಂಸ್ಥೆಯ ವಿದ್ಯಾರ್ಥಿಗಳಿಗೆ ಅಂತಾರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನ ಆಚರಿಸಲಾಯಿತು.ಈ ವೇಳೆ ಪೊಲೀಸ್ ಠಾಣೆಯ ಇನ್ಸ್ಪೆಕ್ಟರ್ ಶ್ರೀಧರ್ ಎಸ್ ಆರ್ ಮಾತನಾಡಿದರು.

### ತಹಶೀಲ್ದಾರ್ ಮೂಲಕ ಜಿಲ್ಲಾಧಿಕಾರಿಗೆ ಮನವಿ
# ವಾಣಿಜ್ಯ ಬಂದರು ಯೋಜನೆಗೆ ವಿರೋಧ

**ಅಂಕೋಲಾ:** ತಾಲೂಕಿನ ಅಲಗೇರಿ ಮತ್ತು ಬಾವಿಕೇರಿ ಗ್ರಾಪಂಗಳ ವ್ಯಾಪ್ತಿಯಲ್ಲಿ ಪರಿಸರ ವಿನಾಶಕ ಅವೈಜ್ಞಾನಿಕ ವಾಣಿಜ್ಯ ಬಂದರು ಯೋಜನೆ ಸಂಬಂಧಿತ ಚಟುವಟಿಕೆಗಳಿಗೆ ಅರಣ್ಯಭೂಮಿ, ಕೃಷಿಭೂಮಿ ಮತ್ತು ಖಾಸಗಿ ಜಮೀನುಗಳಲ್ಲಿ ಅವಕಾಶ ನೀಡಬಾರದು ಹಾಗೂ ಬೊಗ್ರಿಬೈಲಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಜಮೀನು ಮಾರಾಟ ಪ್ರಕ್ರಿಯೆ ನಡೆಸಿರುವ ಕುರಿತಂತೆ ಸಮಗ್ರ ತನಿಖೆ ನಡೆಸಬೇಕು ಎಂದು ಆಗ್ರಹಿಸಿ ಅಂಕೋಲಾ ಸರ್ವ ಸಮಾಜಗಳ ಹಿತರಕ್ಷಣಾ ಒಕ್ಕೂಟ, ಕೇಣಿ ವಾಣಿಜ್ಯ ಬಂದರು ವಿರೋಧಿಸಿ ಉತ್ತರ ಕನ್ನಡ ಉಳಿಸಿ ಹೋರಾಟಗಾರರ ಸಂಘಟನೆಯಿಂದ ತಹಶೀಲ್ದಾರರ ಮೂಲಕ ಜಿಲ್ಲಾಧಿಕಾರಿಗೆ ಮನವಿ ನೀಡಲಾಯಿತು.

ಈ ಹಿಂದೆ ಕಬ್ಬಿಣದ ಅದಿರಿನ ಸಾಗಾಟದ ಸಂದರ್ಭದಲ್ಲಿ ಸುತ್ತ ಮುತ್ತಲಿನ ಜಮೀನುಗಳಲ್ಲಿ ಅದಿರು ಸಂಗ್ರಹ ಮಾಡಿರುವುದು ಸುತ್ತ ಮುತ್ತಲಿನ ಪರಿಸರದ ಮೇಲೆ ಪರಿಣಾಮ ಬೀರಿ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗಿತ್ತು, ದನಕರು, ಪ್ರಾಣಿ ಪಕ್ಷಿಗಳು ಕಲುಷಿತ ಗಾಳಿ, ನೀರಿನಿಂದ ತೊಂದರೆ ಅನುಭವಿಸಿದ್ದವು, ಜನರು ಮಾರಕ ಕಾಯಿಲೆಗಳಿಗೆ ತುತ್ತಾಗಬೇಕಾಯಿತು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ವಾಣಿಜ್ಯ ಬಂದರು ಯೋಜನೆಗೆ ಜನವಸತಿ ಪ್ರದೇಶದ ಸಮೀಪದ ಜಮೀನು ಸ್ವಾಧೀನವಾದರೆ ಮುಂದಿನ ದಿನಗಳಲ್ಲಿ ಸ್ಥಳೀಯ ಜನರು,ಜಾನುವಾರುಗಳು, ಗಿಡ ಮರ, ಅರಣ್ಯ ಪ್ರದೇಶ, ಜಲಮೂಲಗಳು ಸೇರಿದಂತೆ ಸುಂದರ ಪರಿಸರ ನಾಶವಾಗಿ ಜನಜೀವನ ಯಾತನಾಮಯ ಆಗಲಿದೆ ಆದ್ದರಿಂದ ಪ್ರಕೃತಿಯ ವಿನಾಶಕ್ಕೆ ಕಾರಣವಾಗುವ ಅವೈಜ್ಞಾನಿಕ ಯೋಜನೆಗಳ ಉದ್ದೇಶಗಳಿಗೆ ಜನವಸತಿ ಪ್ರದೇಶದ ಸಮೀಪದ ಜಮೀನು ಬಳಕೆಗೆ ಅನುಮತಿ ನೀಡಬಾರದು ಎಂದು ಮನವಿಯಲ್ಲಿ ಆಗ್ರಹಿಸಲಾಗಿದೆ.



> ವಾಣಿಜ್ಯ ಬಂದರು ಯೋಜನೆಯ ವಿರುದ್ಧ ಹಲವಾರು ರೀತಿಯ ಹೋರಾಟ ನಡೆಸಲಾಗಿದ್ದು ವಾಣಿಜ್ಯ ಬಂದರು ಯೋಜನೆ ಸಂಬಂಧಿತ ಬೆಳವಣಿಗೆಗಳನ್ನು ಹೋರಾಟಗಾರರಿಗೆ ತಿಳಿಸುವುದಾಗಿ ಭರವಸೆ ನೀಡಿದ್ದ ಜಿಲ್ಲಾಡಳಿತದಿಂದಾಗಲಿ ತಾಲೂಕು ಆಡಳಿತದಿಂದಾಗಲಿ ಯಾವುದೇ ರೀತಿಯ ಮಾಹಿತಿಯನ್ನು ಇದುವರೆಗೆ ನೀಡಲಾಗಿಲ್ಲ.
> ■ ಸಂಜೀವ ಬಲೆಗಾರ,ಸಂಘಟನೆಗಳ ಪ್ರಮುಖ

ಒಂದು ವೇಳೆ ಒತ್ತಡಕ್ಕೆ ಮಣಿದು ವಾಣಿಜ್ಯ ಬಂದರು ಸಂಬಂಧಿತ ಸರಕುಗಳ ದಾಸ್ತಾನು ಉದ್ದೇಶಗಳಿಗೆ ಅವಕಾಶ ಮಾಡಿಕೊಟ್ಟರೆ ಹೋರಾಟ ತೀವ್ರ ಸ್ವರೂಪ ಪಡೆಯಲಿದೆ ಎಂದು ಮನವಿಯಲ್ಲಿ ಎಚ್ಚರಿಸಲಾಗಿದೆ.

ಅಲಗೇರಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬೊಗ್ರಿಬೈಲಿನ ಸರ್ವೆನಂ 25 ಹಿಸ್ಸಾ1 ರಲ್ಲಿ 7 ಎಕರೆ 26 ಗುಂಟೆ ಜಮೀನನ್ನು ದಾಖಲೆಗಳನ್ನು ತಿದ್ದುಪಡಿ ಮಾಡಿ ಬೇರೆಯವರಿಗೆ ಮಾರಾಟ ಮಾಡಿರುವ ಪ್ರಕ್ರಿಯೆ ಆತಂಕಕಾರಿಯಾಗಿದ್ದು, ಈ ಅಕ್ರಮ ಕಾನೂನುಬಾಹಿರ ಚಟುವಟಿಕೆಯಿಂದ ಸಾರ್ವಜನಿಕರು ವ್ಯವಸ್ಥೆಯ ಮೇಲಿನ ನಂಬಿಕೆ ಕಳೆದುಕೊಳ್ಳುವಂತಾಗಿದೆ ಎಂದು ಮನವಿಯಲ್ಲಿ ಹೇಳಲಾಗಿದ್ದು

ಕೇಣಿ ವಾಣಿಜ್ಯ ಬಂದರು ಸಂಬಂಧಿತ ಚಟುವಟಿಕೆಗಳನ್ನು ಚುರುಕುಗೊಳ್ಳಿಸುವ ಹುನ್ನಾರ ನಡೆಯುತ್ತಿದ್ದು ಸ್ಥಳೀಯ ಜನರಿಗೆ ಸೇರಿದ ಜಮೀನೊಂದನ್ನು ಅವರ ಕುಟುಂಬಕ್ಕೆ ತಿಳಿಯದಂತೆ ಬೇರೆ ಊರಿನವರಿಗೆ ಬೇನಾಮಿಯಾಗಿ ಪರಬಾರೆ ಮಾಡಿರುವ ಹಿಂದೆ ಯಾರ ಕೈವಾಡವಿದೆ ಎನ್ನುವುದು ತಿಳಿಯಬೇಕಿದೆ ಎಂದು ಒತ್ತಾಯಿಸಲಾಗಿದೆ.

ಗುತ್ತಿಗೆ ಕಂಪನಿಯ ದಲ್ಲಾಳಿಗಳು ತಾಲೂಕಿನಲ್ಲಿ ಸತ್ತವರ ಮತ್ತು ಬದುಕಿರವವರ ಹೆಸರಿನಲ್ಲಿರುವ ಜಮೀನುಗಳನ್ನು ಪರಬಾರೆ ಮಾಡುವ ಕಾನೂನುಬಾಹಿರ ಕೆಲಸಗಳಲ್ಲಿ ತೊಡಗಿದ್ದು ಜಮೀನು ಮಾರಾಟ ಜಾಲದ ಕುರಿತಂತೆ ಸಮಗ್ರ ತನಿಖೆ ನಡೆಯಬೇಕು ಎಂದು ಒತ್ತಾಯಿಸಿದರು. ಹೋರಾಟ ಸಮಿತಿಯ ಪ್ರಮುಖರು ಉಪಸ್ಥಿತರಿದ್ದರು.

### ಅರ್ಧಕ್ಕೆ ನಿಂತ ಕಾಮಗಾರಿ
## ಆತಂಕದಲ್ಲಿ ವನಶ್ರೀ ನಗರದ ಜನತೆ

**ಸಂದೇಶ್ ಎಸ್.ಜೈನ್**

ದಿಗಂತ ವಿಶೇಷ

**ದಾಂಡೇಲಿ:** ವನ ಶ್ರೀನಗರ-ಗಣೇಶ ನಗರ ರಸ್ತೆ ಬದಿಯಲ್ಲಿ ಹೊಸದಾಗಿ ನಿರ್ಮಾಣ ಮಾಡಲಾದ ಗಟಾರ ಕಾಮಗಾರಿ ಅರ್ಧಕ್ಕೆ ನಿಂತು ಮೂರು ತಿಂಗಳಾದರೂ, ಕಾಮಗಾರಿ ಮುಗಿಯದೇ ಇರುವುದರಿಂದ ಸ್ಥಳೀಯ ವನಶ್ರೀ ನಗರದ ಜನತೆಗೆ ತೀವ್ರ ಸಂಕಷ್ಟ ಎದುರಾಗಿದೆ.

ಅಲ್ಲಿರುವ ವರು ಹೆಚ್ಚಿನವರು ಹಿರಿಯ ನಾಗರಿಕರೇ ಆಗಿದ್ದಾರೆ. ಅಲ್ಲಿರುವ ಬಹುತೇಕ ಮನೆಗಳಲ್ಲಿ ನಿವೃತ್ತರ ಸಂಖ್ಯೆಯೇ ಹೆಚ್ಚಿದೆ.ಇನ್ನೂ ಅವರಿಗೆ ದೈನಂದಿನ ಕೆಲಸ ಕಾರ್ಯಗಳಿಗಾಗಿ ಮನೆಮುಂಭಾಗದಲ್ಲಿರುವ ರಸ್ತೆಗೆ ಬರಬೇಕಾದರೆ ಅರ್ಧಕ್ಕೆ ನಿಂತ ಗಟಾರ ಕಾಮಗಾರಿಯಿಂದಾಗಿ ಹರಸಾಹಸ ಪಡಬೇಕಾಗಿದೆ. ಗಟಾರ ನಿರ್ಮಾಣ ಕಾರ್ಯ ತ್ವರಿತವಾಗಿ ಮುಗಿಸಬೇಕಾಗಿದ್ದ ಗುತ್ತಿಗೆದಾರ ಇಲ್ಲಿ ಕಾಮಗಾರಿಯನ್ನು ಅರ್ಧಕ್ಕೆ ನಿಲ್ಲಿಸಿರುವುದರಿಂದ ಸ್ಥಳೀಯ ನಿವಾಸಿಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ತಮ್ಮ ಮನೆಯಿಂದ ಹೊರ ಹೋಗಿ ಬರಲು ತೀವ್ರ ತೊಂದರೆಯಾಗಿದೆ. ಗಟಾರ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸುವಂತೆ ಸ್ಥಳೀಯ ನಾಗರಿಕರು ನಗರಸಭೆಗೆ ಎರಡ್ಮೂರು ಬಾರಿ ಭೇಟಿ ನೀಡಿದ್ದಾರೆ. ನಗರಸಭೆಯಲ್ಲಿ ಇವರ ಅಂದದ ಮೌಖಿಕ ಮನವಿಗೆ ಯವುದೇ ಸ್ಪಂದನೆ ದೊರೆತ್ತಿಲ್ಲ.ಇಲ್ಲಿ ಗಟಾರ ನಿರ್ಮಾಣಕ್ಕೆ ಕಬ್ಬಿಣದ ರಾಡ್‌ಗಳನ್ನು ಬಳಸಲಾಗಿದ್ದು, ಕಾಮಗಾರಿ ಪೂರ್ಣವಾಗದೇ ಇರುವುದರಿಂದ, ಅಲ್ಲಿ ಯಾರಾದರೂ ಬಿದ್ದಲ್ಲಿ ಜೀವಕ್ಕೆ ಹಾನಿ ನಿಶ್ಚಿತ ಎಂಬ ಸ್ಥಿತಿಯಿದೆ.



ಅರ್ಧಕ್ಕೆ ನಿಂತಿರುವ ಗಟಾರ ಕಾಮಗಾರಿಯನ್ನು ಕೂಡಲೇ ಪೂರ್ಣಗೊಳಿಸುವಂತೆ ಸ್ಥಳೀಯ ಜನತೆ ಗುರುವಾರ ಮಾಧ್ಯಮದ ಮೂಲಕ ಆಗ್ರಹಿಸಿದ್ದಾರೆ.

ಕಳೆದ ಮೂರು ತಿಂಗಳಿನಿಂದ ನಮಗೆಲ್ಲರಿಗೂ ಸಮಸ್ಯೆ ಎದುರಾಗಿದೆ. ನಾವೆಲ್ಲರೂ ಹಿರಿಯ ನಾಗರಿಕರು. ನಮ್ಮ ಸ್ವಂತ ವಾಹನಗಳನ್ನು ಕೂಡ ಮನೆಯ ಆವರಣಕ್ಕೆ ತರಲಾಗದ ಸ್ಥಿತಿಯಿದೆ. ತಾತ್ಕಾಲಿಕವಾಗಿ ಕಟ್ಟಿಗೆ ತುಂಡುಗಳನ್ನು ಇಟ್ಟು ಗಟಾರ ದಾಟುತ್ತಿದ್ದೇವೆ. ಏನಾದರೂ ಹೆಚ್ಚು ಕಡಿಮೆಯಾದರೆ ಯಾರು ಹೊಣೆ? ನಗರ ಸಭೆಗೆ ಸಾಕಷ್ಟು ಬಾರಿ ಭೇಟಿ ನೀಡಿ, ಸ್ಥಗಿತಗೊಂಡಿರುವ ಕಾಮಗಾರಿಯನ್ನು ಪೂರ್ಣಗೊಳಿಸಲು ಮನವಿ ಮಾಡಿದ್ದೆವು. ಆದರೆ ಮನವಿಗೆ ಸಕಾಲಿಕವಾಗಿ ಸ್ಪಂದನೆ ದೊರೆತಿಲ್ಲ, ಆದ್ದರಿಂದ ಈ ಕೂಡಲೇ ಗಟಾರ ಕಾಮಗಾರಿಯನ್ನು ಪೂರ್ಣಗೊಳಿಸಬೇಕೆಂದು ಸ್ಥಳೀಯರಾದ ಅಬ್ದುಲ್ ವಹಾಬ ಶೇಖ, ಸದಾನಂದ ಪ್ರಭು, ಅಂಟೋನಿ ಗೋನ್ಸಾಲಿಸ್ ಮತ್ತು ಎನ್ .ಡಿ.ಧಾರವಾಡ್ಕರ ಅವರು ಆಗ್ರಹಿಸಿದ್ದಾರೆ.

## ಮಾದಕ ವಸ್ತುಗಳಿಂದ ದೂರವಿರಿ: ಕುಂಬಾರ

**ಬನವಾಸಿ:** ಯುವಜನತೆ ತಮ್ಮ ಜೀವನವನ್ನು ಮಾದರಿಯಾಗಿ ರೂಪಿಸಿಕೊಳ್ಳಲು, ಸಾಧನೆಯ ಹಾದಿಯಲ್ಲಿ ನಡೆಯಲು ಮಾದಕ ವಸ್ತುಗಳ ಬಳಕೆಯಿಂದ ದೂರವಿರುವಂತೆ ಪ್ರತಿಜ್ಞೆ ಮಾಡಬೇಕು ಎಂದು ಬನವಾಸಿ ಪೊಲೀಸ್ ಠಾಣಾ ಪಿಎಸ್ಐ ಮಹಾಂತಪ್ಪ ಕುಂಬಾರ್ ಅಭಿಪ್ರಾಯ ಪಟ್ಟರು.

ಇಲ್ಲಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಗುರುವಾರ ಬನವಾಸಿ ಪೊಲೀಸ್ ಠಾಣಾ ಸಹಯೋಗದಲ್ಲಿ ನಡೆದ ಅಂತಾರಾಷ್ಟ್ರೀಯ ಮಾದಕ ವಸ್ತು ವ್ಯಸನ ಹಾಗೂ ಅಕ್ರಮ ಸಾಗಾಣಿಕೆ ವಿರೋಧಿ ದಿನದ ಅಂಗವಾಗಿ ಕಾಲೇಜಿನ ವಿದ್ಯಾರ್ಥಿಗಳಿಗಾಗಿ ನಡೆದ ಜಾಗೃತಿ ಕಾರ್ಯಾಗಾರ, ರಸಪ್ರಶ್ನೆ ಮತ್ತು ಭಾಷಣ ಸ್ಪರ್ಧೆಗಳ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅವರು ಮಾದಕ ವಸ್ತುಗಳ ವ್ಯಸನ ಮತ್ತು ಸಾಗಾಟ, ಮಾರಾಟಗಳು ಇಂದಿನ ದಿನಮಾನಗಳಲ್ಲಿ ಒಂದು ಸಾಮಾಜಿಕ ಪಿಡುಗಿನಂತೆ ಆಗಿದ್ದು ಇದರಿಂದ ಗ್ರಾಮೀಣ ಹಾಗೂ ನಗರ ತಮ್ಮ ಮಕ್ಕಳ ಬಗ್ಗೆ ಸಾವಿರಾರು ಬಣ್ಣದ ಕನಸುಗಳನ್ನು ಕಟ್ಟಿಕೊಂಡ ಪೋಷಕರು ತಮ್ಮ ಮಕ್ಕಳು ಚಟಗಳ ದಾಸರಾಗಿ ಜೀವನವನ್ನು ಹಾಳು ಮಾಡಿಕೊಳ್ಳುವುದನ್ನು ಕಣ್ಣಾರೆ ಕಂಡು ಪ್ರತಿದಿನ ಕಣ್ಣೀರಿಡುವುದನ್ನು ನಾವು ಕಾಣುತ್ತಿದ್ದೇವೆ. ಸುಂದರ ಬದುಕನ್ನು ಕಟ್ಟಿಕೊಳ್ಳಲು ಮಾದಕ ವಸ್ತುಗಳ ಸಹವಾಸದಿಂದ ದೂರವಿರಬೇಕು ಎಂದು ಸಲಹೆ ನೀಡಿದರು. ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳು ಮತ್ತು ಅವುಗಳ ಬಳಕೆಯ ದುಷ್ಪರಿಣಾಮಗಳು ಎಂಬ ಕಾರ್ಯಾಗಾರ ನಡೆಸಿಕೊಟ್ಟು, ರಸಪ್ರಶ್ನೆ, ಭಾಷಣ ಸ್ಪರ್ಧೆಗಳನ್ನು ಮಾಡಿ ವಿಜೇತ ವಿದ್ಯಾರ್ಥಿಗಳಿಗೆ ಪೊಲೀಸ್ ಇಲಾಖೆಯಿಂದ ಪ್ರಶಂಸಾ ಪತ್ರ ನೀಡಿದರು.ಅಧ್ಯಕ್ಷತೆವಹಿಸಿದ್ದ ಕಾಲೆಸರ್ಕಾರಿ ಪದವಿ ಪೂರ್ವ ಕಾಲೇಜಿನ ಹಿರಿಯ ಉಪನ್ಯಾಸಕರಾದ ಪ್ರಭಾವತಿ ಹೆಗಡೆ ಶೋಭಾ ಮೊಗೆರ್ ಕಾಲೇಜಿನ ಸಿಬಿಸಿ ಸದಸ್ಯರಾದ ಅಸ್ಲಾಂ ಸಾಬ್, ಬನವಾಸಿ ಪೊಲೀಸ್ ಠಾಣಾ ಸಿಬ್ಬಂದಿಗಳಾದ ನಾರಾಯಣ ಎಂ.ಎಸ್, ರಾಘವೇಂದ್ರ ನಾಯ್ಕ್, ಮಲ್ಲೇಶ್ ಮತ್ತು ಕಾಲೇಜಿನ ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.




## ಮ್ಯಾಪಿಂಗ್ ಪ್ರಕ್ರಿಯೆ ಮುಂದುವರಿಕೆ



**ಮುಂಡಗೋಡ:** ಜೂನ್ 30ರಿಂದ ಜುಲೈ 29ರವರೆಗೆ ಮತಗಟ್ಟೆ ಅಧಿಕಾರಿಗಳು ಮನೆಮನೆಗೆ ಭೇಟಿ ನೀಡಿ ಪ್ರತಿಯೊಬ್ಬ ಮತದಾರರಿಗೆ ಎರಡು ಎನ್ಯುಮರೇಷನ್ ಅರ್ಜಿಗಳನ್ನು ನೀಡಲಿದ್ದಾರೆ. ಮತದಾರರು ಅರ್ಜಿಗಳನ್ನು ಸರಿಯಾಗಿ ಭರ್ತಿ ಮಾಡಬೇಕು. ಯಾರಿಗಾದರೂ ಅರ್ಜಿ ಭರ್ತಿ ಮಾಡಲು ತಿಳಿಯದಿದ್ದಲ್ಲಿ ಮತಗಟ್ಟೆ ಅಧಿಕಾರಿಗಳ ಸಹಾಯ ಪಡೆದುಕೊಳ್ಳಬಹುದು ಉಪ ಕೃಷಿ ನಿರ್ದೇಶಕ, ಯಲ್ಲಾಪುರ ವಿಧಾನಸಭಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿ ಕೆ.ಎಚ್ .ಪಾಂಡು ಹೇಳಿದರು.ಪಟ್ಟಣದ ತಹಶೀಲ್ದಾರ ಕಚೇರಿಯ ಸಭಾಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಅರ್ಹ ಮತದಾರರು ಯಾರು ಮತದಾರ ಪಟ್ಟಿಯಿಂದ ಹೋಗಬಾರದು ಹಾಗೂ ಅನರ್ಹ ಮತದಾರರು ಯಾರು ಮತದಾರ ಪಟ್ಟಿಯಲ್ಲಿ ಸೇರಿಕೊಳ್ಳಬಾರದು ಎನ್ನುವುದೇ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯ ಉದ್ದೇಶವಾಗಿದೆ. ಜೂನ್ 30ರಿಂದ ಪ್ರಕ್ರಿಯೆ ಆರಂಭಗೊಳ್ಳಲಿದ್ದು, ಸಾರ್ವಜನಿಕರೆಲ್ಲರೂ ಸಹಕಾರ ನೀಡಬೇಕು. ಭರ್ತಿ ಮಾಡಿದ ಎರಡು ಅರ್ಜಿಗಳಲ್ಲಿ ಒಂದನ್ನು ಮತಗಟ್ಟೆ ಅಧಿಕಾರಿಗಳಿಗೆ ನೀಡಬೇಕು. ಇನ್ನೊಂದು ಅರ್ಜಿಯನ್ನು ಮತದಾರರು ತಮ್ಮ ಬಳಿಯೇ ಇಟ್ಟುಕೊಳ್ಳಬೇಕು. ಎರಡು ಅರ್ಜಿಗಳಿಗೆ ಮತಗಟ್ಟೆ ಮಟ್ಟದ ಅಧಿಕಾರಿಗಳು ಮತ್ತು ಮತದಾರರು ಅಥವಾ ಅವರ ಕುಟುಂಬದ ಸದಸ್ಯರು ಕಡ್ಡಾಯವಾಗಿ ಸಹಿ ಮಾಡಬೇಕು. ಕರಡು ಮತದಾರರ ಪಟ್ಟಿ ಆ.5ರಂದು ಪ್ರಕಟವಾಗಲಿದೆ. ಆ.5ರಿಂದ ಸೆಪ್ಟೆಂಬರ್ 4ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಅಕ್ಟೋಬರ್ 7ರಂದು ಅಂತಿಮ ಮತದಾರರ ಪಟ್ಟಿ ಪ್ರಕಟವಾಗಲಿದೆ ಎಂದು ತಿಳಿಸಿದರು.

ತಹಶೀಲ್ದಾರ ಸಹಾಯಕ ಮತದಾರರ ನೋಂದಣಾಧಿಕಾರಿ ಪ್ರಸಾದ ಎಸ್ .ಎ.ಮಾತನಾಡಿ, ಯಲ್ಲಾಪುರ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 1,89,502 ಮತದಾರಿದ್ದಾರೆ. ಆದರಲ್ಲಿ ತಾಲೂಕಿನಲ್ಲಿ 78,428 ಸಾವಿರ ಮತದಾರರಿದ್ದು, ಮತದಾರರ ಪಟ್ಟಿ ಸಮಗ್ರ ಪರಿಷ್ಕರಣೆ ಪೂರ್ವ ತಯಾರಿಗಾಗಿ ಮತದಾರರ ವಿವರಗಳನ್ನು ಹೋಲಿಸಿ ಕ್ಷೇತ್ರದಲ್ಲಿ ಶೇ.96.04ರಷ್ಟು ಮ್ಯಾಪಿಂಗ್ ಮಾಡಿ ಖಚಿತಪಡಿಸಿಕೊಳ್ಳಲಾಗಿದೆ. ಇನ್ನು 3107 ಮತದಾರರ ಮ್ಯಾಪಿಂಗ್ ಉಳಿದಿದ್ದು, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಆರಂಭವಾಗುವರೆಗೆ ಮ್ಯಾಪಿಂಗ್ ಪ್ರಕ್ರಿಯೆ ಮುಂದುವರೆಯಲಿದೆ ಎಂದು ತಿಳಿಸಿದರು.

## ವಿವಿಧ ಕ್ಲಬ್‌ಗಳ ಉದ್ಘಾಟನಾ ಸಮಾರಂಭ

**ಹೊನ್ನಾವರ:** ಇಲ್ಲಿನ ಮಾರ್ ಥೋಮಾ ಆಂಗ್ಲ ಮಾಧ್ಯಮ ಶಾಲೆಯಲ್ಲಿ 2026-27ನೇ ಸಾಲಿನ ಶಾಲಾ ಸಂಸತ್, ಹೌಸ್‌ಗಳು ಹಾಗೂ ವಿವಿಧ ಕ್ಲಬ್‌ಗಳ ಉದ್ಘಾಟನಾ ಸಮಾರಂಭವು ಶಾಲಾ ಸಭಾಂಗಣದಲ್ಲಿ ನಡೆಯಿತು.

ಶಾಲಾ ವಿದ್ಯಾರ್ಥಿ ವೃಂದದ ಪ್ರಾರ್ಥನೆ ಹಾಗೂ ರಾಷ್ಟಗೀತೆಯೊಂದಿಗೆ ಕಾರ್ಯಕ್ರಮ ಜರುಗಿತು. ಗಣ್ಯರು ಕಾರ್ಯಕ್ರಮ ಉದ್ಘಾಟಿಸಿದರು.

ಶಾಲೆಯ ಶಿಕ್ಷಕಿಯಾದ ಮರ್ಲಿನ್ ಫರ್ನಾಂಡಿಸ್ ಅವರು ನೂತನ ಹೆಡ್ ಬಾಯ್, ಹೆಡ್ ಗರ್ಲ್ ಮತ್ತು ಕ್ಯಾಬಿನೆಟ್ ನಾಯಕರನ್ನು ಪರಿಚಯಿಸಿದರು. ಶಿಕ್ಷಕಿ ನಿಶಾತ್ ಶೇಖ್ ಅವರು ವಿವಿಧ ಹೌಸ್‌ಗಳ ಕ್ಯಾಪ್ಟನ್ ಹಾಗೂ ವೈಸ್ ಕ್ಯಾಪ್ಟನ್‌ಗಳ ಹೆಸರನ್ನು ಘೋಷಿಸಿದರೆ, ಶಿಕ್ಷಕಿ ಅನಿತಾ ರೊಡ್ರಿಗಿಸ್ ಅವರು ಕ್ಲಬ್‌ಗಳ ಉದ್ದೇಶಗಳನ್ನು ವಿವರಿಸಿದರು.

ಪ್ರಭಾರಿ ಮುಖ್ಯೋಪಾಧ್ಯಾಯರಾದ ವಿನೋದ ಲೋಪಿಸ್ ಅವರು ಕ್ಲಬ್‌ಗಳ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರ ಹೆಸರುಗಳನ್ನು ಪ್ರಕಟಿಸಿ, ಪ್ರಮಾಣ ವಚನ ಬೋಧಿಸಿದರು. ನೂತನ ಪದಾಧಿಕಾರಿಗಳಿಗೆ ಗಣ್ಯರು ಸ್ಯಾಶ್ ಮತ್ತು ಬ್ಯಾಡ್ಜ್‌ಗಳನ್ನು ವಿತರಿಸಿದರು.ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಹೊನ್ನಾವರ ಸೆಂಟ್ರಲ್ ಬ್ಯಾಂಕ್ ವ್ಯವಸ್ಥಾಪಕರಾದ ಶ್ರೀ ಜಿಕ್ ಜಾರ್ಜ್ ಅವರು ವಿದ್ಯಾರ್ಥಿಗಳಿಗೆ ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಲು ಕರೆ ನೀಡಿದರು. ಶಾಲೆಯ ಮ್ಯಾನೇಜರ್ ಹಾಗೂ ಪ್ರಾಂಶುಪಾಲರಾದ ವಂದನೀಯ ಫಾದರ್ ಐಸನ್ ಜೊಶ್ವಾ ಅವರು ನೂತನ ನಾಯಕರಿಗೆ ಪ್ರಮಾಣ ವಚನ ಬೋಧಿಸಿ, ಅಧ್ಯಕ್ಷೀಯ ಭಾಷಣ ಮಾಡಿದರು. ಖಜಾಂಚಿಯಾದ ಶ್ರೀ ಕೆ.ಸಿ ವರ್ಗೀಸ್ ಅವರು ಕಾರ್ಯಕ್ರಮಕ್ಕೆ ಶುಭ ಕೋರಿದರು.

ಕಾರ್ಯಕ್ರಮದಲ್ಲಿ ಸಿಬ್ಬಂದಿ ಕಾರ್ಯದರ್ಶಿ ಭಾಗ್ಯವತಿ ನಾಯ್ಕ, ಶಾಲೆಯ ವಿದ್ಯಾರ್ಥಿಗಳು, ಸಹ ಶಿಕ್ಷಕರು ಹಾಗೂ ಶಿಕ್ಷಕೇತರ ಸಿಬ್ಬಂದಿ ಉಪಸ್ಥಿತರಿದ್ದರು. ವಿದ್ಯಾರ್ಥಿನಿ ಅನ್ನಾಲೀ ಸಿ. ಫೆರ್ನಾಂಡಿಸ್ ವಂದಿಸಿದರು. ಶಿಕ್ಷಕಿಯಾದ ಶೀತಲ ಭಂಡಾರಿ ಸ್ವಾಗತಿಸಿದರು. ವಿದ್ಯಾರ್ಥಿಗಳಾದ ಸಿಮ್ರಾ ಖಾನ್ ಹಾಗೂ ಕ್ಷಮಾ ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.




### ನಕಲಿ ದಾಖಲೆ ಸೃಷ್ಟಿಸಿ ಜಮೀನು ಮಾರಾಟ
# ಸೂಕ್ತ ಕ್ರಮಕ್ಕೆ ಆಗ್ರಹಿಸಿ ಪ್ರತಿಭಟನೆ

**ಅಂಕೋಲಾ:** ತಾಲೂಕಿನ ಅಲಗೇರಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಬೊಗ್ರಿಬೈಲಿನಲ್ಲಿ ನಕಲಿ ದಾಖಲೆ ಸೃಷ್ಟಿಸುವ ಮೂಲಕ ಜಮೀನು ಮಾರಾಟ ಮಾಡಿರುವವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಬಾಳೆಗುಳಿ, ಬೊಗ್ರಿಬೈಲ್ ಮತ್ತು ಶಿರಕುಳಿ ಸುತ್ತ ಮುತ್ತಲಿನ ಗ್ರಾಮಸ್ಥರು ತಹಸೀಲ್ದಾರರ ಮೂಲಕ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.



ಬೊಗ್ರಿಬೈಲ್ ಗ್ರಾಮದ ಸರ್ವೆ ನಂಬರ್ 25 ಹಿಸ್ಸಾ 1 ರ ಸುಮಾರು 7 ಎಕರೆ 26 ಗುಂಟೆ ಜಮೀನನ್ನು ಶಿವಮೊಗ್ಗ ಜಿಲ್ಲೆಯ ವ್ಯಕ್ತಿಯೋರ್ವರಿಗೆ ಮಾರಾಟ ಮಾಡಲಾಗಿದ್ದು ಜಮೀನಿನ ಮಾಲಿಕರ ಕುಟುಂಬದವರಿಗೆ ಗೊತ್ತಿಲ್ಲದೇ ನಡೆದಿರುವ ಅಕ್ರಮ ಮಾರಾಟ ಚಟುವಟಿಕೆಯ ಹಿಂದೆ ದೊಡ್ಡ ಜಾಲವೇ ಕೆಲಸ ಮಾಡಿರುವ ಸಾಧ್ಯತೆ ಇದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಮೃತ ವ್ಯಕ್ತಿಗಳ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಜಮೀನಿನ

ಮಾರಾಟದ ಪ್ರಕ್ರಿಯೆಗಳು ನಡೆದಿದ್ದು ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ತಪ್ಪಿತಸ್ಥರ ಮೇಲೆ ಕಠಿಣ ಕ್ರಮ ಕೈಗೊಳ್ಳುವಂತೆ ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಬಿಜೆಪಿ ಪ್ರಮುಖ ನಾಗೇಶ ಕಿಣಿ ಮಾತನಾಡಿ, ಮಾರಾಟ ಮಾಡಲಾಗಿರುವ ಜಮೀನಿಗೆ ಸಂಬಂಧಿಸಿದ ಕುಟುಂಬದವರು ಮಠಾಕೇರಿಯ ವಿಳಾಸದವರಾಗಿದ್ದು ವಿಜಯಪುರದ ವಿಳಾಸ ಇರುವ ದಾಖಲೆ ಸೃಷ್ಟಿಸಿ ವಾರಸಾ ಮಾಡಲಾಗಿದೆ. ಬದುಕಿದ್ದರೆ 130 ವರ್ಷ ದಾಟುವ ವ್ಯಕ್ತಿಗಳ ವಯಸ್ಸನ್ನು 65 ವರ್ಷ ಎಂದು ತೋರಿಸಿ ಸತ್ತವರನ್ನು ದಾಖಲೆಗಳಲ್ಲಿ ಬದುಕಿಸುವ ಕೃತ್ಯ ನಡೆದಿದೆ ಅಧಿಕಾರಿಗಳು ಸೇರಿದಂತೆ

ಈ ಕೃತ್ಯದಲ್ಲಿ ಯಾರೆಲ್ಲ ಶಾಮೀಲಾಗಿದ್ದಾರೆ ಎನ್ನುವುದು ತನಿಖೆಯಾಗಲಿ ಎಂದು ಹೇಳಿದರು

> **ದೂರು ಸಲ್ಲಿಕೆ**
> ತಾಲೂಕಿನ ಬೊಗ್ರಿಬೈಲ್ ನಲ್ಲಿರುವ ಸರ್ವೆ ನಂ 25 ಹಿಸ್ಸಾ 1 ರ ಸುಮಾರು ಏಳು ಎಕರೆಗಳಷ್ಟು ಮಠಾಕೇರಿಯ ನಿವಾಸಿ ಸ್ವಾತಂತ್ರ್ಯ ಹೋರಾಟಗಾರರ ಕುಟುಂಬದ ಜಮೀನನ್ನು ಅವರದ್ದೇ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಶಿವಮೊಗ್ಗದ ವ್ಯಕ್ತಿಯೋರ್ವರಿಗೆ ಮಾರಾಟ ಮಾಡಲಾಗಿದ್ದು ಇದೇ ವರ್ಷ ಫೆಬ್ರುವರಿಯಲ್ಲಿ ನೋಂದಣಿ ಪ್ರಕ್ರಿಯೆ ನಡೆದಿರುವುದು ಇತ್ತೀಚೆಗೆ ಬೆಳಕಿಗೆ ಬಂದಿತ್ತು. ವಿಷಯ ತಿಳಿದ ಕುಟುಂಬಸ್ಥರು ದೂರು ಸಲ್ಲಿಸಿದ್ದರು.

ಜಮೀನಿನ ಮಾಲಿಕರಾಗಿದ್ದ ಮಠಾಕೇರಿಯ ಹರಿ ಪೈ ಕುಟುಂಬದ ವಿಜಯಪೈ,ಬೊಗ್ರಿಬೈಲ್ ಗ್ರಾಮದ ಗೋವಿಂದ ಗೌಡ, ಸವಿತಾ ಕಲ್ಮಠ, ಕೇಣಿಯ ಸಂಜೀವ ಬಲೆಗಾರ, ಬೊಗ್ರಿಬೈಲ್,ಶಿರಕುಳಿ,ಬಾಳೆಗುಳಿ ಸುತ್ತ ಮುತ್ತಲಿನ ಗ್ರಾಮಸ್ಥರು ಉಪಸ್ಥಿತರಿದ್ದರು.

## ಸರ್ಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ: ಜಿವ್ರೋಜಿ

**ಹಳಿಯಾಳ :** ತಾಲೂಕಿನ ಸರಕಾರಿ ಕಚೇರಿಗಳಲ್ಲಿ ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ. ಇದಕ್ಕೆ ನೇರ ಹೊಣೆ ಶಾಸಕರೇ ಆಗಿದ್ದಾರೆ.ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಹಾಗೂ ಸುದ್ದಿ ಮಾಧ್ಯಮಗಳಲ್ಲಿ ಪೊಲೀಸ್ ಇಲಾಖೆಯ ಮಾನ ಹರಾಜು ಹಾಕಿ ಹಳಿಯಾಳ ಕುಖ್ಯಾತಿ ಪಡೆದಿದೆ. ಕಾಟಾಚಾರಕ್ಕಾಗಿ ಮಾತ್ರ ಸರಕಾರಿ ಕಚೇರಿಗಳಲ್ಲಿ ದಾಳಿ ಮಾಡಿದ ನಾಟಕ ವಾಡಿ ಆ ನಂತರ ಏನೂ ನಡೆಯದೇ ಇರುವಂತೆ ತೆಪ್ಪಗಾಗಿದ್ದರ ಅರ್ಥವೇನು? ಎಂದು ರೈತ ಮುಖಂಡ ನಾಗೇಂದ್ರ ಜಿವ್ರೋಜಿ ಪ್ರಶ್ನಿಸಿದರು.

ಮರಡಿಗುಡ್ಡ ಐಬಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಲಂಗುಲಗಾಮಿಲ್ಲದೇ ನಡೆಯುತ್ತಿರುವ ಬಾರ್ ಹಾಗೂ ಲಿಕ್ಕರ್ ಶಾಪ್‌ಗಳು ಮತ್ತು ಮೌರ್ಯ ಕ್ಲಬ್ ಬಂದ್ ಮಾಡದೇ ಇದ್ದಲ್ಲಿ ರೈತರು ಹೆಣ್ಣುಮಕ್ಕಳಾದಿ ಪೊಲೀಸ್ ಸ್ಟೇಷನ್ ಎದುರು ಧರಣಿ ಕುಳಿತುಕೊಳ್ಳಬೇಕಾಗುತ್ತದೆ ಅಲ್ಲದೇ



ಮಧ್ಯವನ್ನು ಕಂಡಕಂಡ ಸಾರ್ವಜನಿಕ ವಾಹನಗಳಿಂದ ಹಳ್ಳಿಗಳಿಗೂ ಲಗಾಮಿಲ್ಲದೇ ಪೂರೈಕೆ ಆಗುತ್ತಿದ್ದು ಹಳ್ಳಿಗರ ಸ್ವಾಸ್ಥ್ಯ ಕೆಡಿಸುವ ಹುನ್ನಾರ ಕೂಡ ನಡೆದಿದ್ದರೂ ಶಾಸಕರು ಕಣ್ಣು ಮುಚ್ಚಿ ಕುಳಿತಿದ್ದಾರೆ ಎಂದು ಕಬ್ಬು ಬೆಳೆಗಾರರ ಸಂಘದ ಜಿಲ್ಲಾಧ್ಯಕ್ಷ ಕುಮಾರ ಬೊಬಾಟಿ ಆರೋಪಿಸಿ ಎಚ್ಚರಿಕೆ ನೀಡಿದರು.

ಈ ಕೂಡಲೇ ಹಳಿಯಾಳದಲ್ಲಿ ಐದು ವರ್ಷಗಳಿಗೂ ಮೇಲ್ಪಟ್ಟು ಉಳಿದುಕೊಂಡಿರುವ ಸರಕಾರಿ ಅಧಿಕಾರಿಗಳನ್ನು ಹಾಗೂ ಸಿಬ್ಬಂಧಿಗಳನ್ನು ಎತ್ತಂಗಡಿ ಮಾಡಲೇ ಬೇಕು ಇಲ್ಲವಾದಲ್ಲಿ ನಾವುಗಳೇ ಅಂತಹವರ ವಿರುದ್ಧ ಹೋರಾಟ ಮಾಡಲು ಅಣಿಯಾಗಿದ್ದೇವೆ ಎಂದು ರೈತ ಮುಖಂಡ ನಾಗೇಂದ್ರ ಜಿವ್ರೋಜಿ ಹೇಳಿ ಆಡಳಿತಕ್ಕೆ ಎಚ್ಚರಿಕೆ ನೀಡಿದರು.

## ಅಂಗನವಾಡಿ ಕಾರ್ಯಕರ್ತೆಯರ ಶ್ರಮ ಅಪಾರ

**ಶಿರಸಿ:** ತಾಪಂ ಹಾಗೂ ರೋಟರಿ ಕ್ಲಬ್‌ನ ಸಂಯುಕ್ತ ಆಶ್ರಯದಲ್ಲಿ ವಿವಿಧ ಅಂಗನವಾಡಿಗಳಿಗೆ ಹಮ್ಮಿಕೊಳ್ಳಲಾಗಿದ್ದ ಪರಿಕರ ವಿತರಣಾ ಕಾರ್ಯಕ್ರಮವನ್ನು ಶಾಸಕ ಭೀಮಣ್ಣ ಟಿ. ನಾಯ್ಕ ಉದ್ಘಾಟಿಸಿದರು. ನಗರದ ಅಂಬೇಡ್ಕರ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರದ ಮಹತ್ವಾಕಾಂಕ್ಷೆಯ ಪಂಚ ಗ್ಯಾರಂಟಿ ಯೋಜನೆಗಳನ್ನು ಜನಸಾಮಾನ್ಯರ ಮನೆಬಾಗಿಲಿಗೆ ತಲುಪಿಸುವಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಶ್ರಮ ಅಪಾರವಾಗಿದೆ. ಪುಟ್ಟ ಮಕ್ಕಳ ಭವಿಷ್ಯವನ್ನು ರೂಪಿಸುವ ಇವರು ಸರ್ಕಾರದ ಮೊದಲ ಶಿಕ್ಷಕರಾಗಿದ್ದಾರೆ ಎಂದು ಶ್ಲಾಘಿಸಿದರು.ಈ ಸಂದರ್ಭದಲ್ಲಿ ಎಸ್ಸೆಸ್ಸೆಲ್ಸಿ ಮರುಪರೀಕ್ಷೆಯ 6 ವಿಷಯಗಳಲ್ಲೂ 100 ಕ್ಕೆ 100 ಅಂಕಗಳನ್ನು ಪಡೆಯುವ ಮೂಲಕ ರಾಜ್ಯಕ್ಕೆ ಪ್ರಥಮ ಸ್ಥಾನಗಳಿಸಿ, ತಾಲೂಕಿಗೆ ಕೀರ್ತಿ ತಂದ ಸಾಧಕಿ ತನ್ಮಯಿ ಹೆಗಡೆ ಅವರನ್ನು ಶಾಸಕರು ಸನ್ಮಾನಿಸಿದರು.ಬಳಿಕ ತಾಲೂಕಿನ ವಿವಿಧ ಅಂಗನವಾಡಿ ಕೇಂದ್ರಗಳಿಗೆ ಅಗತ್ಯವಿದ್ದ ಪರಿಕರಗಳನ್ನು ಅಧಿಕೃತವಾಗಿ ವಿತರಿಸಲಾಯಿತು. ಸರ್ಕಾರದ ಸೌಲಭ್ಯ ಹಾಗೂ ರೋಟರಿ ಕ್ಲಬ್‌ನ ಈ ಜನಪರ ಕಾರ್ಯಕ್ಕೆ ತಾಲೂಕಿನ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಆಯಾ ಭಾಗದ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ತೀವ್ರ ಸಂತಸ ಮತ್ತು ಕೃತಜ್ಞತೆ ವ್ಯಕ್ತಪಡಿಸಿದರು.ರೋಟರಿ ಕ್ಲಬ್ ಅಧ್ಯಕ್ಷ ಶ್ರೀನಿವಾಸ ನಾಯ್ಕ, ಕಾರ್ಯದರ್ಶಿ ಹರೀಶ ಹೆಗಡೆ, ಸರಸ್ವತಿ ಎನ್ ರವಿ, ಸೇರಿದಂತೆ ತಾಲೂಕು ಪಂಚಾಯತ್ ಅಧಿಕಾರಿಗಳು ಉಪಸ್ಥಿತರಿದ್ದರು.



## ಕಿರುಸುದ್ದಿ

### ಉದ್ಯಮಶೀಲತಾ ತಿಳಿವಳಿಕೆ ಶಿಬಿರ ಜೂ.29ರಂದು

**ಹಾವೇರಿ:** ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಹಾಗೂ ಜೀವನೋಪಾಯ ಇಲಾಖೆ ಪ್ರಾಯೋಜಕತ್ವದಲ್ಲಿ ಧಾರವಾಡ ಕರ್ನಾಟಕ ಉದ್ಯಮಶೀಲತಾ ಅಭಿವೃದ್ಧಿ ಕೇಂದ್ರದ ವತಿಯಿಂದ ಸ್ವಂತ ಉದ್ಯೋಗ ಕೈಗೊಳ್ಳಲು ಆಸಕ್ತಿ ಇರುವ ಸಾಮಾನ್ಯ ವರ್ಗದ ಪುರುಷ ಹಾಗೂ ಮಹಿಳೆಯರಿಗೆ ಒಂದು ದಿನದ ಉದ್ಯಮಶೀಲತಾ ತಿಳುವಳಿಕೆ ಶಿಬಿರವನ್ನು ಜೂನ್ 29 ರಂದು ಹಾನಗಲ್ ರೋಷನಿ ಟ್ರಸ್ಟ್‌ನಲ್ಲಿ ಆಯೋಜಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಿಡಾಕ್ ಜಿಲ್ಲಾ ಕಚೇರಿ, ಜಿಲ್ಲಾ ಕೈಗಾರಿಕಾ ಕೇಂದ್ರ, 24 ಬಿಡಿಸಿ ಕಾಂಪ್ಲೆಕ್ಸ್ ದೇವಗಿರಿ-ಹಾವೇರಿ ಈ ವಿಳಾಸದಲ್ಲಿ ಸಂಪರ್ಕಿಸಬಹುದೆಂದು ಸಿಡಾಕ್ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಶುಲ್ಕ ಮರುಪಾವತಿ ಸೌಲಭ್ಯಕ್ಕೆ ಅರ್ಜಿ ಆಹ್ವಾನ

**ಹಾವೇರಿ:** ಪ್ರಸಕ್ತ 2026-27ನೇ ಸಾಲಿಗೆ ಎಸ್ಸೆಸ್ಸೆಲ್ಸಿ ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ಸ್ನಾತಕೋತ್ತರ ವಿದ್ಯಾಭ್ಯಾಸ ಮಾಡುತ್ತಿರುವ ವಿಕಲಚೇತನ ವಿದ್ಯಾರ್ಥಿಗಳಿಂದ ಶುಲ್ಕ ಮರುಪಾವತಿ ಸೌಲಭ್ಯಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯಾರ್ಥಿಯು ವಿಕಲತೆಯ ದೃಢೀಕರಿಸುವ ವೈದ್ಯಕೀಯ ಪ್ರಮಾಣಪತ್ರ, ಯುಡಿಐಡಿ ಕಾರ್ಡ್, ಹಿಂದಿನ ತರಗತಿ ಉತ್ತೀರ್ಣದ ಅಂಕಪಟ್ಟಿ, ಬ್ಯಾಂಕ್ ಖಾತೆ ಸಂಖ್ಯೆ, ಐಎಫ್‌ಎಸ್‌ಸಿ ಕೋಡ, ಶುಲ್ಕ ತುಂಬಿದ ಮೂಲ ರಶೀದಿ ಮತ್ತು ಇತ್ತೀಚಿನ ಎರಡು ಭಾವಚಿತ್ರ, ಜಾತಿ ಮತ್ತು ಆದಾಯ ಪ್ರಮಾಣವನ್ನು ಸಂಬಂಧಿಸದ ಕಾಲೇಜಿನ ಮುಖ್ಯಸ್ಥರ ಶಿಫಾರಸ್ಸಿನೊಂದಿಗೆ ಆಯಾ ತಾಲೂಕಿಗೆ ಸಂಬಂಧಿಸಿದ ಗ್ರಾಮೀಣ, ನಗರ ಪುನರ್ವಸತಿ ಕಾರ್ಯಕರ್ತರಿಗೆ ಜು.30ರೊಳಗಾಗಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿ ಆಯಾ ತಾಲೂಕಿನ ವಿವಿದೋದ್ದೇಶ ಪುನೌಸತಿ ಕಾರ್ಯಕರನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬೈಕ್ ಕಳ್ಳತನ

**ಹಾವೇರಿ:** ಇಲ್ಲಿಯ ವಿದ್ಯಾನಗರ ಬಳಿ ಇರುವ ಖಾಸಗಿ ಹೋಟೆಲ್ ಮುಂಭಾಗದಲ್ಲಿ ನಿಲ್ಲಿಸಿದ್ದ ಬೈಕ್‌ನ್ನು ಕಳ್ಳತನ ಮಾಡಲಾಗಿದೆ. ಸವಣೂರ ತಾಲೂಕು ಕಲಕೋಟಿ ಗ್ರಾಮದ ಪ್ರದೀಪ ಶೇಖಪ್ಪ ಅರಳೇಶ್ವರ ಎಂಬುವವರಿಗೆ ಸೇರಿದ ಸುಮಾರು 65 ಸಾವಿರ ರೂ.ಬೆಲೆ ಬಾಳುವ ಬೈಕ್ ಇದಾಗಿದೆ. ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಬೈಕ್ ಡಿಕ್ಕಿ: ಗಂಭೀರ ಗಾಯ

**ಹಾವೇರಿ:** ಮುಂದೆ ಯೂಟರ್ನ್ ಆಗುತ್ತಿದ್ದ ಬೈಕ್‌ಗೆ ಹಿಂದಿನಿಂದ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ರಾಣೇಬೆನ್ನೂರು ನಗರದ ಬಸ್ ನಿಲ್ದಾಣ ಬಳಿಯಲ್ಲಿ ನಡೆದಿದೆ. ಧಾರವಾಡ ಜಿಲ್ಲೆಯ ಬಂದೂರು ಗ್ರಾಮದ ಲಕ್ಷ್ಮಣ ಬಸಪ್ಪ ಪದಮಣ್ಣನವರ ಎಂಬ ಬೈಕ್ ಸವಾರನ ವಿರುದ್ಧ ದೂರು ದಾಖಲಿಸಲಾಗಿದೆ. ರಾಣೇಬೆನ್ನೂರ ತಾಲೂಕು ಬೆನಕನಕೊಂಡ ಗ್ರಾಮದ ಸೋಮನಗೌಡ ಗುರುಲಿಂಗಪ್ಪಗೌಡ್ರ ಎಂಬ ಬೈಕ್ ಸವಾರರು ಗಂಭೀರವಾಗಿ ಗಾಯಗೊಂಡಿದ್ದಾರೆ. ಆರೋಪಿ ಲಕ್ಷ್ಮಣ ಪದಮಣ್ಣವರ ಹರಿಹರ ಕಡೆಯಿಂದ ವೇಗವಾಗಿ ಬಂದು ಬೈಕ್‌ನ್ನು ನಿಯಂತ್ರಿಸಲಾಗದೆ ಮುಂದೆ ಹೋಗಿ ಯೂಟರ್ನ್ ಆಗುತ್ತಿದ್ದ ಬೈಕ್ ಸವಾರನಿಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದ್ದಾನೆ. ಅಪಘಾತದಲ್ಲಿ ಸೋಮನಗೌಡ ಅವರು ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಗಾಯಾಳು ಸಂಬಂಧಿ ಪ್ರವೀಣ ಗುರುಲಿಂಗಪ್ಪಗೌಡ್ರ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ರಾಣೇಬೆನ್ನೂರು ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಬಸ್-ಬೈಕ್ ಡಿಕ್ಕಿ: ಗಾಯ

**ಹಾವೇರಿ:** ಬೈಕ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಬೈಕ್ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ರಟ್ಟೀಹಳ್ಳಿ ತಾಲೂಕು ಮಾವಿನತೋಪ-ನೇಸ್ವಿ ರಸ್ತೆಯಲ್ಲಿ ನಡೆದಿದೆ. ಮಾವಿನತೋಪ ಗ್ರಾಮದ ವಿನಯ ಜಗದೀಶ ಬಣಕಾರ (19) ಎಂಬ ಬೈಕ್ ಸವಾರ ಗಂಭೀರ ಗಾಯಗೊಂಡಿದ್ದಾರೆ. ಕೆಎಸ್‌ಆರ್‌ಟಿಸಿ ಬಸ್‌ನ ಚಾಲಕ ಸತ್ತಗೀಹಳ್ಳಿಯ ಮಹೇಂದ್ರ ಮಾದೇವಪ್ಪ ಮೇದೂರ ಎಂಬಾತನ ವಿರುದ್ಧ ದೂರು ದಾಖಲಿಸಿದೆ. ಮಾವಿನತೋಪ ಕಡೆಯಿಂದ ನೇಸ್ವಿ ಕಡೆಗೆ ಹೋಗುತ್ತಿದ್ದ ಬೈಕ್ ಸವಾರನಿಗೆ ಅದೇ ಮಾರ್ಗದಲ್ಲಿ ವೇಗವಾಗಿ ಬಂದ ಬಸ್‌ನ ಚಾಲಕ ಬೈಕ್‌ಗೆ ಡಿಕ್ಕಿ ಹೊಡೆದು ಅಪಘಾತ ಪಡಿಸಿದ್ದಾನೆ. ಅಪಘಾತದಲ್ಲಿ ಬೈಕ್ ಸವಾರ ವಿನಯ ಗಂಭೀರವಾಗಿ ಗಾಯಗೊಂಡಿದ್ದಾರೆ ಎಂದು ಸಣ್ಣಗೌಡ ಪಾಟೀಲ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ರಟ್ಟಿಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಹಾನಗಲ್ಲ: ಗುಡಗುಡಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಮೈದಾನದಲ್ಲಿ ವಿದ್ಯಾರ್ಥಿಗಳು ಯೋಗಾಸನ ಮಾಡಿದರು. ಮುಖ್ಯ ಶಿಕ್ಷಕ ಅನಿಲಕುಮಾರ ಗೋಣಣ್ಣನವರ, ಶಿಕ್ಷಕಿ ಅಮೃತಾ ಹಿರೇಮಠ ಇದ್ದರು.

## ಯೋಗದಿಂದ ದೈಹಿಕ, ಮಾನಸಿಕ ಶಾಂತಿ

**ಹಾವೇರಿ:** ಮಾನವ ಕುಲಕ್ಕೆ ಭಗವಂತ ನೀಡಿದ ಅತ್ಯುನ್ನತ ಕೊಡುಗೆ ಯೋಗ, ಇಂದಿನ ಒತ್ತಡ ಜೀವನಕ್ಕೆ ಪ್ರತಿಯೊಬ್ಬರಿಗೆ ಯೋಗ ಅತ್ಯವಶ್ಯಕ. ಯೋಗದಿಂದ ದೈಹಿಕ, ಮಾನಸಿಕ ಶಾಂತಿ ಸಾಧ್ಯ ಎಂದು ಯೋಗ ಗುರು ಸುಂದರ ಕುಲಕರ್ಣಿ ಹೇಳಿದರು. ನಗರದ ಗಾಯತ್ರಿ ಯೋಗ ಕೇಂದ್ರದಲ್ಲಿ ಆಯೋಜಿಸಿದ್ದ ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿ, ಇಂದಿನ ದಿನಗಳಲ್ಲಿ ಪ್ರತಿದಿನ ವೈಯಕ್ತಿಕ ಆರೋಗ್ಯಕ್ಕಾಗಿ ಒಂದು ಗಂಟೆ ಯೋಗ, ವ್ಯಾಯಾಮಕ್ಕೆ ಸೀಮಿತ ಇಡುವುದು ಅವಶ್ಯಕ. ಇಂದಿನ ದಿನದಲ್ಲಿ ಹಣಕ್ಕಿಂತ ಆರೋಗ್ಯ ಮುಖ್ಯ ಆರೋಗ್ಯದಿಂದ ಎಲ್ಲವನ್ನು ಸಂಪಾದಿಸಬಹುದು ಆರೋಗ್ಯ ಇಲ್ಲದಿದ್ದರೆ ಏನನ್ನು ಸಂಪಾದಿಸಲು ಅಸಾಧ್ಯ ಎಂದರು. ಯೋಗಪಟು ರುಕ್ಸಾನಾ ಮಾತನಾಡಿ, ನನ್ನ ಆರೋಗ್ಯದಲ್ಲಿ ವ್ಯತ್ಯಾಸವಾಗಿ ಹಲವು ಅನಾರೋಗ್ಯ ಸಮಸ್ಯೆಗಳನ್ನು ಎದುರಿಸುವಂತಾಯಿತು. ಕಳೆದ ಎರಡು ವರ್ಷಗಳಿಂದ ಪ್ರತಿದಿನ ಯೋಗ ಮಾಡುತ್ತಿದ್ದು ಇದರಿಂದ ಹಲವು ಆರೋಗ್ಯ ಸಮಸ್ಯೆಗಳಿಂದ ದೂರವಾಗಿದ್ದೇನೆ ಎಂದರು. ಮತ್ತೊಬ್ಬ ಯೋಗಪಟು ಗೌರಮ್ಮ ಮಾತನಾಡಿ, ಯೋಗ ಮತ್ತು ಪ್ರಾಣಾಯಾಮಗಳು ರಕ್ತ ಪರಿಚಲನೆಯನ್ನು ಉತ್ತಮಗೊಳಿಸಿ, ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತವೆ ಎಂದರು. ಕಾರ್ಯಕ್ರಮದಲ್ಲಿ ಶಾಂತಾ, ವಿಜು, ತೇಜಸ್ವಿನಿ, ಶೀತಲ್, ಅನಿತಾ, ಗಾಯತ್ರಿ, ಗೀತಾ, ಲಕ್ಷ್ಮೀ, ವಿಜಯಲಕ್ಷ್ಮೀ, ಭಾರತಿ, ಸರಸ್ವತಿ, ಗೌರಮ್ಮ, ರೇಣುಕಾ, ಶಶಿರೇಖಾ, ನಾಗರತ್ನ, ರಾಯಪ್ಪ, ಶಶಿಧರ, ದತ್ತಾತ್ರೇಯ, ಗುರುರಾಜ, ಸಂಗೀತ ಇತರರು ಇದ್ದರು. ನಿರ್ಮಲಾ, ಗೀತಾ ಪ್ರಾರ್ಥಿಸಿದರು. ಭಾರತಿ ಸ್ವಾಗತಿಸಿದರು. ಪ್ರಶಾಂತ ವಂದಿಸಿದರು.



ಹಾವೇರಿ:ನಗರದ ಗಾಯತ್ರಿ ಯೋಗ ಕೇಂದ್ರದಲ್ಲಿ ಆಯೋಜಿಸಿದ್ದ ವಿಶ್ವ ಯೋಗ ದಿನಾಚರಣೆ ಆಚರಿಸಲಾಯಿತು. ಈ ವೇಳೆ ಯೋಗ ಗುರು ಸುಂದರ ಕುಲಕರ್ಣಿ ಮಾತನಾಡಿದರು.

### ಜು.11ಕ್ಕೆ ಲೋಕ ಅದಾಲತ್ | ನ್ಯಾ.ಬಿರಾದಾರ ದೇವಿಂದ್ರಪ್ಪಾ ಹೇಳಿಕೆ

## ರಾಜಿಯಿಂದ ಹಣ, ಸಮಯದ ಉಳಿತಾಯ

**ಹಾವೇರಿ:** ಜಿಲ್ಲಾ ಹಾಗೂ ತಾಲೂಕು ನ್ಯಾಯಾಲಯಗಳಲ್ಲಿ ಜುಲೈ 11ರಂದು ರಾಷ್ಟ್ರೀಯ ಲೋಕ ಅದಾಲತ್ ಜರುಗಲಿದ್ದು, ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥ ಪಡಿಸಿಕೊಂಡಾಗ ಸಮಯ ಹಾಗೂ ಹಣದ ಉಳಿತಾಯವಾಗುತ್ತದೆ ಹಾಗೂ ಸಂಬಂಧಗಳು ಕೆಡುವುದಿಲ್ಲ. ಜೊತೆಗೆ ನೆಮ್ಮದಿ ಕಾಣಬಹುದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಿರಾದಾರ ದೇವಿಂದ್ರಪ್ಪಾ ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯಗಳ ಸಂಕೀರ್ಣದಲ್ಲಿ ಗುರುವಾರ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಲೋಕ ಅದಾಲತ್‌ನಲ್ಲಿ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳು, ವೈವಾಹಿಕ ಹಾಗೂ ಕೌಟುಂಬಿಕ ನ್ಯಾಯಾಲಯದ ಪ್ರಕರಣಗಳು, ಮೋಟರ್ ಅಪಘಾತ ಪ್ರಕರಣಗಳು, ಚೆಕ್ ಅಮಾನ್ಯದ ಪ್ರಕರಣಗಳು, ವಾಣಿಜ್ಯ ಪ್ರಕರಣಗಳು, ವ್ಯಾಜ್ಯಪೂರ್ವ ಪ್ರಕರಣಗಳು, ಸೇವಾ ಪ್ರಕರಣಗಳು, ರಾಜಿ ಆಗಬಲ್ಲ ಅಪರಾಧೀಕ ಪ್ರಕರಣಗಳು, ಗ್ರಾಹಕ ವ್ಯಾಜ್ಯ ಪ್ರಕರಣಗಳು, ಪಾಲುದಾರಿಕಾ ಪ್ರಕರಣಗಳು, ಭೂ ಸ್ವಾಧೀನ ಪ್ರಕರಣಗಳು ಹಾಗೂ ಇತರೆ ಸಿವಿಲ್ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಇತ್ಯರ್ಥ ಮಾಡಿಕೊಳ್ಳಬಹುದಾಗಿದೆ ಎಂದು ತಿಳಿಸಿದರು.

ಸಾರ್ವಜನಿಕರು ತಮ್ಮ ವ್ಯಾಜ್ಯಪೂರ್ವ ಹಾಗೂ ನ್ಯಾಯಾಲಯದಲ್ಲಿ ಬಾಕಿ ಇರುವ ರಾಜಿ ಆಗಬಹುದಾದ ಪ್ರಕರಣಗಳನ್ನು ಲೋಕ ಅದಾಲತ್‌ನ ಮೂಲಕ ತಕ್ಷಣ



**45,068 ಪ್ರಕರಣ ಬಾಕಿ**

ಜಿಲ್ಲಾ ನ್ಯಾಯಾಲಯದಲ್ಲಿ 45,068 ಪ್ರಕರಣಗಳು ಬಾಕಿ ಇದ್ದು, ಈ ಪೈಕಿ 8,262 ಪ್ರಕರಣಗಳನ್ನು ರಾಜಿ ಸಂಧಾನಕ್ಕೆ ಗುರುತಿಸಲಾಗಿದೆ. ಈ ಪೈಕಿ ಈಗಾಗಲೇ 283 ಪ್ರಕರಣಗಳು ರಾಜಿ ಹಂತಕ್ಕೆ ಬಂದಿವೆ. ರಾಷ್ಟ್ರೀಯ ಲೋಕ ಅದಾಲತ್ ಕುರಿತು ಎಲ್.ಐ.ಸಿ., ವಿವಿಧ ಇಲಾಖೆಗಳ ಅಧಿಕಾರಿಗಳ ಸಭೆ ನಡೆಸಿ ಮಾಹಿತಿ ನೀಡಲಾಗಿದೆ.

ಪರಿಹಾರ ಪಡೆದುಕೊಳ್ಳಲು ಒಂದು ಸುವರ್ಣಾವಕಾಶವಾಗಿರುತ್ತದೆ. ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಸುಪ್ರೀಂ ಕೋರ್ಟನಲ್ಲಿ ವಿಚಾರಣೆಗೆ ಬಾಕಿ ಇರುವ ಪ್ರಕರಣಗಳನ್ನು ವಾಸವಿದ್ದ ಸ್ಥಳದಲ್ಲಿ ರಾಜೀ ಸಂಧಾನ ಮಾಡಿಕೊಳ್ಳಲು ಆಗಸ್ಟ್ 21 ರಿಂದ 23ರವರೆಗೆ ಸಮಾದಾನ ಸಮಾರೋಹ-2026ರ ಹೆಸರಿನಲ್ಲಿ ನಡೆಸಲಾಗುತ್ತಿದೆ. ಹಾವೇರಿ ಜಿಲ್ಲೆಗೆ ಸಂಬಂಧಿಸಿದಂತೆ 82 ಪ್ರಕರಣಗಳಿದ್ದು, ಹಾವೇರಿ ತಾಲೂಕಿಗೆ ಸಂಬಂಧಿಸಿದ 17 ಪ್ರಕರಣಗಳಿದ್ದು, ಈ ಪೈಕಿ ಎರಡು ಪ್ರಕರಣಗಳು ರಾಜೀ ಹಂತಕ್ಕೆ ಬಂದಿವೆ.

ಮಧ್ಯಸ್ಥಿಕೆ-2.0 ಹಾಗೂ ಧಾರವಾಡದ ಖಾಯಂ ಜನತಾ ನ್ಯಾಯಾಲಯ ಇದೆ. ಕಕ್ಷಿದಾರರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಹೇಳಿದರು.

ನ್ಯಾಯಾಲಯದಲ್ಲಿ ದಾಖಲಾಗದೇ ಇರುವ ಪ್ರಕರಣಗಳನ್ನು (ವ್ಯಾಜ್ಯಪೂರ್ವ ಪ್ರಕರಣಗಳು) ಸಹ ರಾಜೀ ಸಂಧಾನದ ಮೂಲಕ ಬಗೆಹರಿಸಿಕೊಳ್ಳಲು ಅವಕಾಶವಿದೆ. ವ್ಯಾಜ್ಯಪೂರ್ವ ಪ್ರಕರಣಗಳಲ್ಲಿ ನ್ಯಾಯಾಲಯ ಶುಲ್ಕ (ಕೋರ್ಟ ಫೀ) ಕೊಡಬೇಕಾಗಿಲ್ಲ, ರಾಜೀ ಸಂಧಾನದ ಮೂಲಕ ಪ್ರಕರಣವನ್ನು ಇತ್ಯರ್ಥಪಡಿಸಿಕೊಂಡಲ್ಲಿ ನ್ಯಾಯಾಲಯಕ್ಕೆ ಪಾವತಿಸಲಾದ ನ್ಯಾಯಾಲಯ ಶುಲ್ಕವನ್ನು ಪೂರ್ಣವಾಗಿ ಮರುಪಾವತಿಸಲಾಗುವುದು ಎಂದರು.

ಸಂಚಾರ ನಿಯಮ ಉಲ್ಲಂಘನೆಯ ಬಾಕಿ ಪ್ರಕರಣಗಳ ದಂಡ ಮೊತ್ತ ಪಾವತಿಗೆ ಕರ್ನಾಟಕ ಸರ್ಕಾರ ಆದೇಶದಂತೆ ಶೇ.50ರಷ್ಟು ರಿಯಾಯತಿ ದರದಲ್ಲಿ ದಂಡ ಪಾವತಿಸಲು ಜೂ.21ರಿಂದ ಜುಲೈ 10ರವರೆಗೆ ಅವಕಾಶ ನೀಡಲಾಗಿದೆ ಎಂದು ತಿಳಿಸಿದರು.

ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಇತ್ಯರ್ಥವಾದ ಪ್ರಕರಣಗಳ ಮೇಲೆ ಅಪೀಲ್ ಹೋಗಲು ಅವಕಾಶವಿಲ್ಲ. ಹೆಚ್ಚಿನ ಮಾಹಿತಿಗಾಗಿ ಹಾವೇರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಹಾಗೂ ತಾಲೂಕು ಕಾನೂನು ಸೇವೆಗಳ ಪ್ರಾಧಿಕಾರ ಸಮಿತಿಗಳನ್ನು ಹಾಗೂ ಟೋಲ್ ಫ್ರಿ ಸಂಖ್ಯೆ 15100 ಸಂಪರ್ಕಿಸಬಹುದು ಎಂದು ತಿಳಿಸಿದರು.

ಮಾಧ್ಯಮಗೋಷ್ಠಿಯಲ್ಲಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಉಪಸ್ಥಿತರಿದ್ದರು.

## ಆಡಳಿತಾಧಿಕಾರಿ ನೇಮಕಕ್ಕೆ ಸಾರ್ವಜನಿಕರ ಒತ್ತಾಯ

**ತಡಸ:** ಸ್ಥಳೀಯ ಗ್ರಾಪಂಗೆ ಕಳೆದ ಮೂರು ತಿಂಗಳುಗಳಿಂದ ಆಡಳಿತಾಧಿಕಾರಿಗಳ (ಅಡ್ಮಿನಿಸ್ಟೇಟರ್) ನೇಮಕವಾಗದ ಹಿನ್ನೆಲೆ ಗ್ರಾಮದ ಪ್ರಗತಿ ಸಂಪೂರ್ಣ ಅಭಿವೃದ್ಧಿ ಕುಂಠಿತಗೊಂಡಿದ್ದು ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ತಕ್ಷಣವೇ ಆಡಳಿತಾಧಿಕಾರಿಯನ್ನು ನೇಮಕ ಮಾಡಬೇಕೆಂದು ಗ್ರಾಮಸ್ಥರು ಹಾಗೂ ವಿವಿಧ ಸಂಘಟನೆಗಳ ಪದಾಧಿಕಾರಿಗಳು ತಾಲೂಕು ಆಡಳಿತಕ್ಕೆ ಆಕ್ರೋಶ ವ್ಯಕ್ತಪಡಿಸಿದರು.

ಗ್ರಾಪಂ ವ್ಯಾಪ್ತಿಯಲ್ಲಿ ಜವಾಬ್ದಾರಿಯುತ ಅಧಿಕಾರಿಗಳ ಸಹಿ ಮತ್ತು ಅನುಮೋದನೆ ಇಲ್ಲದೆ ಹಲವು ಪ್ರಮುಖ ಪ್ರಕ್ರಿಯೆಗಳು ನನೆಗುದಿಗೆಬಿದ್ದಿವೆ. ಅಭಿವೃದ್ಧಿಕಾಮಗಾರಿಗಳು ಕಳೆದ 90 ದಿನಗಳಿಂದ ರಸ್ತೆ ದುರಸ್ತಿ, ಚರಂಡಿ ಸ್ವಚ್ಛತೆ, ಬೀದಿ ದೀಪ ಅಳವಡಿಕೆ ಹಾಗೂ ಕುಡಿಯುವ ನೀರಿನ ಯೋಜನೆಗಳ ಫೈಲ್‌ಗಳು ದೂಳು ಹಿಡಿಯುತ್ತಿವೆ.

**ದಾಖಲೆಗಳ ವಿತರಣೆ:** ಸಾರ್ವಜನಿಕರಿಗೆ ತುರ್ತಾಗಿ ಬೇಕಾಗುವ ಜನನ-ಮರಣ ಪ್ರಮಾಣಪತ್ರ, ಆಸ್ತಿ ದಾಖಲೆಗಳು (ಫಾರಂ ನಂ. 9 ಮತ್ತು 11) ಹಾಗೂ ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯಗಳ ಅನುಮೋದನೆ ಸಿಗದೆ ಸಾರ್ವಜನಿಕರು ನಿತ್ಯ ಅಲೆಯುವಂತಾಗಿದೆ.

**ಸಿಬ್ಬಂದಿ ವೇತನ:** ಪಂಚಾಯತ್ ಸಿಬ್ಬಂದಿಗಳ ಮತ್ತು ಸ್ವಚ್ಛತಾ ಕಾರ್ಮಿಕರ ಮಾಸಿಕ ವೇತನ ಪ್ರಕ್ರಿಯೆಗಳಿಗೂ ಅಡಚಣೆ ಉಂಟಾಗಿದ್ದು, ಅವರ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಿವೆ.



ಕಳೆದ ಮೂರು ತಿಂಗಳುಗಳಿಂದ ಸಣ್ಣಪುಟ್ಟ ಕೆಲಸಗಳಿಗೂ ದಿನಗಟ್ಟಲೆ ಪಂಚಾಯತ್ ಕಚೇರಿಗೆ ಅಲೆಯುತ್ತಿದ್ದೇವೆ. ಆಡಳಿತಾಧಿಕಾರಿ ಇಲ್ಲದ ಕಾರಣ ಯಾರನ್ನು ಕೇಳಬೇಕು ಎಂಬುದು ತಿಳಿಯುತ್ತಿಲ್ಲ. ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ನಿರ್ಲಕ್ಷ್ಯಕ್ಕೆ ಸಾಮಾನ್ಯ ಸಾರ್ವಜನಿಕರು ಬಲಿಯಾಗುತ್ತಿದ್ದಾರೆ.

ಗ್ರಾಪಂ ಗೆ ಸಕಾಲದಲ್ಲಿ ಆಡಳಿತಾಧಿಕಾರಿಗಳನ್ನು ನೇಮಿಸಬೇಕಾದ ಜಿಲ್ಲಾಡಳಿತ ಹಾಗೂ ತಾಲೂಕು ಪಂಚಾಯತ್ ಅಧಿಕಾರಿಗಳು ಕಳೆದ ಮೂರು ತಿಂಗಳಿಂದ ಈ ಬಗ್ಗೆ ಮೌನ ವಹಿಸಿರುವುದು ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿದೆ.

ಇನ್ನಾದರೂ ಸಂಬಂಧಪಟ್ಟ ಮೇಲಾಧಿಕಾರಿಗಳು ತಕ್ಷಣವೇ ಎಚ್ಚೆತ್ತುಕೊಂಡು, ತಡಸ ಗ್ರಾಪಂ ಗೆ ದಕ್ಷ ಆಡಳಿತಾಧಿಕಾರಿಯನ್ನು ನೇಮಕ ಮಾಡಿ, ಆಡಳಿತ ಯಂತ್ರಕ್ಕೆ ಚುರುಕು ಮುಟ್ಟಿಸಬೇಕು. ಇಲ್ಲದಿದ್ದರೆ ಮುಂಬರುವ ದಿನಗಳಲ್ಲಿ ಗ್ರಾಮಸ್ಥರೆಲ್ಲರೂ ಸೇರಿ ಪಂಚಾಯತ್ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದ್ದಾರೆ.

## ರೈತರಿಗೆ ಪರಿಹಾರ ಧನ ವಿತರಿಸಲು ಒತ್ತಾಯ

**ಬ್ಯಾಡಗಿ:** ಬ್ಯಾಡಗಿ ತಾಲೂಕಿನಲ್ಲಿ ಮುಂಗಾರು ಮಳೆ ವಿಫಲವಾಗಿ ಬರಗಾಲ ಛಾಯ್ ಇದ್ದು ರೈತರಿಗೆ ಸೂಕ್ತ ಪರಿಹಾರ ಹಾಗೂ 2024-25ರ ಬೆಳೆ ಪರಿಹಾರ ಮತ್ತು ಇತರ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ರೈತ ಹೋರಾಟ ಸಮಿತಿ ಬ್ಯಾಡಗಿ ಇವರು ಇಂದು ಮಾನ್ಯ ತಹಶೀಲ್ದಾರ್ ಅವರ ಮೂಲಕ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದರು.

ಈ ವೇಳೆ ರೈತ ಹೋರಾಟ ಸಮಿತಿಯ ಗೌರವಾಧ್ಯಕ್ಷ ಮುರಗೆಪ್ಪ ಶೆಟ್ಟರ್ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಮುಂಗಾರು ಮಳೆ ವಿಫಲವಾಗಿದ್ದು, ತಾಲೂಕಿನ ರೈತರು ಪ್ರತಿ ವರ್ಷದಂತೆ ಆಶಾಭಾವನೆಯ ಇಂದ ಮುಂಗಾರಿನ ಪ್ರಾರಂಭದಲ್ಲಿ ಆದ ಮಳೆಯಿಂದ ಹುರುಪಿನಿಂದ ತಮ್ಮ ಹೊಲಕ್ಕೆ ಬೀಜ ಗೊಬ್ಬರ ಹಾಕಿ ಬಿತ್ತನೆ ಮಾಡಿದ್ದಾರೆ ದುರ್ದೈವದ ಸಂಗತಿ ಏನೆಂದರೆ ಸಮರ್ಪಕ ಮಳೆ ಆಗದ ಹಿನ್ನೆಲೆಯಲ್ಲಿ ತಾಲೂಕಿನ ಅನೇಕ ರೈತರು ಬಿತ್ತಿದ ಬೆಳೆ ಒಣಗಿದೆ. ಬಿತ್ತಲು ಎಕರೆಗೆ 10,000 ಖರ್ಚು ಮಾಡಿ ಅತಿವ ಕಷ್ಟದಲ್ಲಿದ್ದು ರೈತರು ದಿಕ್ಕು ತೋಚದಂತಾಗಿದೆ. ಕಳೆದ 2024-25 ನೇ ಸಾಲಿನ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಲ್ಲಿ ಹಣ ತುಂಬಿದ ರೈತರಿಗೆ ಪರಿಹಾರ ಹಲವಾರು ಗ್ರಾಮದ ರೈತರಿಗೆ ಘೋಷಣೆಯಾಗಿಲ್ಲ ಕೆಲವೇ ಗ್ರಾಮದ ರೈತರಿಗೆ ಪರಿಹಾರ ಘೋಷಣೆಯಾಗಿದ್ದು ಕಾರಣ ಇಂತಹ ರೈತರ ಕಷ್ಟಕಾಲದಲ್ಲಿ ಸರ್ಕಾರ ಮಧ್ಯಸ್ಥಿಕೆ ವಹಿಸಿ ವಿಮೆ ಕಂಪನಿಯಿಂದ ಬೆಳೆ ವಿಮೆ ಕೊಡಿಸುವ ಕೆಲಸ ಮಾಡಬೇಕು ಎಂದು ಆಗ್ರಹಿಸಿದರು.

ಈ ವೇಳೆ ತಾಲೂಕು ಅಧ್ಯಕ್ಷ ನಿಂಗಪ್ಪ ಮಾಗೋಡ್ ಮಾತನಾಡಿದರು.

ಪ್ರತಿಭಟನೆಯಲ್ಲಿ ಉಪಾಧ್ಯಕ್ಷರಾದ ಈರಪ್ಪ ಸಂಕಣ್ಣನವರ್, ಬಸಯ್ಯ ಹಿರೇಮಠ, ಸತೀಶ್ ಬೆಳಕಿನ ಕೊಂಡ, ಶಶಿಧರಯ್ಯ ಗೊಲ್ಲರಹಳ್ಳಿ, ಗೋಣೆಪ್ಪ ಸಂಕಣ್ಣನವರ್, ಮಲಕಪ್ಪ ಸಂಕಣ್ಣನವರ್, ರುದ್ರಪ್ಪಹೊಸಮನಿ, ಪ್ರಕಾಶ್ ಮಾಮನಿ, ಗುಡ್ಡಪ್ಪ ಬುಡಪ್ಪನಹಳ್ಳಿ, ಚಂದ್ರಪ್ಪ ಮಾಗೋಡ್, ಚಂದ್ರಪ್ಪ ಸಂಕಣ್ಣನವರ್, ಬಸವರಾಜ್ ಸಂಕಣ್ಣನವರ್, ಮುರಿಗೆಪ್ಪ ಚನ್ನಗೌಡ ಹಾಗೂ ಅನೇಕ ರೈತರು ಉಪಸ್ಥಿತರಿದ್ದರು.



## ವಿವಿಧ ಬೇಡಿಕೆ ಈಡೇರಿಕೆಗೆ ಹಾವೇರಿ ವಿವಿಗೆ ಎಬಿವಿಪಿ ಒತ್ತಾಯ

**ಹಾವೇರಿ:** ಹಾವೇರಿ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 4ನೇ ಮತ್ತು 6ನೇ ಸೆಮಿಸ್ಟರ್‌ನ ವೈವಾ ಶುಲ್ಕ ಧಾರವಾಡದ ವಿವಿ ಶುಲ್ಕಕ್ಕಿಂತ ಹೆಚ್ಚಿದ್ದು ಅದನ್ನು ಕಡಿತಗೊಳಿಸಬೇಕು ಹಾಗೂ ಈಗಾಗಲೇ ಶುಲ್ಕ ಪಾವತಿಸಿರುವ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಹಣವನ್ನು ಕಡ್ಡಾಯವಾಗಿ ಮರುಪಾವತಿ ಮಾಡುವುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಹಾವೇರಿ ವಿವಿಗೆ ಎಬಿವಿಪಿ ಆಗ್ರಹಿಸಿದೆ.

ಈ ಕುರಿತು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಹಾವೇರಿ ನಗರ ಶಾಖೆ ವತಿಯಿಂದ ವಿಶ್ವವಿದ್ಯಾಲಯದ ವಿವಿಧ ಸಮಸ್ಯೆಗಳ ಬಗ್ಗೆ ಹಾವೇರಿ ನಗರ ಕಾರ್ಯದರ್ಶಿ ಸಾಗರ ಪೋಲಿಸಗೌಡ್ರ ಕುಲಸಚಿವರಿಗೆ ಮನವಿ ಸಲ್ಲಿಸಿದ್ದು, ಕೆಲವು ಸೆಮಿಸ್ಟರ್‌ಗಳ ಫಲಿತಾಂಶ ಪ್ರಕಟಗೊಂಡು 1 ತಿಂಗಳೇ ಗತಿಸಿದರೂ ಮರುಮೌಲ್ಯಮಾಪನಕ್ಕೆ ಅರ್ಜಿ ಆಹ್ವಾನಿಸದಿರುವುದು ಆತಂಕ ತಂದೊಡ್ಡಿದೆ.



ಕೂಡಲೇ ವಿವಿ ಈ ಕುರಿತು ಮರುಮೌಲ್ಯಮಾಪನ ಲಿಂಕ್ ಮುಕ್ತಗೊಳಿಸಬೇಕು ಎಂದು ಒತ್ತಾಯಿಸಿದ್ದಾರೆ.

ಪ್ರಸ್ತುತ ಪ್ರಕಟಿಸಿರುವ ಪದವಿ ಪರೀಕ್ಷಾ ವೇಳಾಪಟ್ಟಿಯನ್ನು ತಕ್ಷಣವೇ ಪರಿ?ಕ್ರಿಸಿ, ಕನಿಷ್ಠ 15 ದಿನಗಳ ಕಾಲ ಪರೀಕ್ಷೆಯನ್ನು ಮುಂದೂಡಬೇಕು ಮತ್ತು ವಿಷಯಗಳ ನಡುವೆ ಕನಿಷ್ಠ 2 ದಿನಗಳ ಅಂತರ ನೀಡಿ ಓದಲು ಕಾಲಾವಕಾಶ ನೀಡಬೇಕು.

ವಿವಿ ನಿರ್ವಹಣೆಯ ಯುಯುಸಿಎಂಎಸ್ ಪೋರ್ಟಲ್ ಮತ್ತು ಅಪಾರ್ ಐಡಿ ತಾಂತ್ರಿಕ ದೋಷಗಳ ನಿವಾರಣೆಗೆ ಪ್ರತಿ ಕಾಲೇಜಿನಲ್ಲೂ ವಿಶ್ವವಿದ್ಯಾಲಯದ ವತಿಯಿಂದ ವಿಶೇಷ ತಾಂತ್ರಿಕ ಕೋಶ (Technical Cell) ಅಥವಾ ಹೆಲ್ಪ್‌ಲೈನ್ ಆರಂಭಿಸಬೇಕು. ಅಲ್ಲದೇ ಇನ್ನೂ ಹಲವಾರು ಸಮಸ್ಯೆಗಳಿದ್ದು ಕೂಡಲೇ ಪರಿಹಾರ ಕಂಡುಕೊಳ್ಳಬೇಕು. ಸರಿಪಡಿಸದೆ ಇದ್ದಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್, ಹಾವೇರಿ ವಿಶ್ವವಿದ್ಯಾಲಯಕ್ಕೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಲಾಗುವುದು ಎಚ್ಚರಿಸಿದರು.

ಈ ವೇಳೆ ವಿದ್ಯಾರ್ಥಿಗಳಾದ ಚೇತನ್ ಮಟ್ಟಿ, ಪ್ರಜ್ವಲ್ ಹೋಲಿಕಟ್ಟಿ, ಈಶ್ವರಿ ಬಡಿಗೇರ, ಆದಿನೇಶ, ಯಶವಂತ ಕಾರ್ತಿಕ್ ಸೇರಿದಂತೆ ಹಲವರು ಇದ್ದರು.

## ಹಳೆ ಪಿಂಚಣಿ ಯೋಜನೆ ಮರು ಜಾರಿಗೆ ಡಾ.ಪಠಾಣ ಒತ್ತಾಯ

**ಹಾವೇರಿ:** ನೂತನ ಪಿಂಚಣಿ ವ್ಯವಸ್ಥೆಯನ್ನು ರದ್ದು ಪಡಿಸಿ ಹಳೆ ಪಿಂಚಣಿ ಯೋಜನೆಯನ್ನು ಮರು ಜಾರಿಗೊಳಿಸಬೇಕೆಂದು ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ.ಪರ್ಜಾನ ಪಠಾಣ ಒತ್ತಾಯಿಸಿದರು.

ನಗರದ ಹೊರವಲಯದ ಗಾಂಧಿಪುರದ ಸರಕಾರಿ ಪ್ರಥಮದರ್ಜೆ ಕಾಲೇಜಿನಲ್ಲಿ ಸಭಾಪತಿಗಳು ಹಾಗೂ ಹಾವೇರಿಯ ಶಾಸಕ ರುದ್ರಪ್ಪ ಲಮಾಣಿ ಅವರಿಗೆ ಮನವಿ ಸಲ್ಲಿಸಿ ಮಾತನಾಡಿದ ಅವರು, ನೂತನ ಪಿಂಚಣಿ ಯೋಜನೆಯು ಮಾರುಕಟ್ಟೆ ಆಧಾರಿತವಾಗಿರುವುದರಿಂದ ಸರ್ಕಾರಿ ನೌಕರರ ನಿವೃತ್ತಿ ಭದ್ರತೆಗೆ ಧಕ್ಕೆಯಾಗುತ್ತಿದೆ.



ನೌಕರರಲ್ಲಿ ಆರ್ಥಿಕ ಅಭದ್ರತೆ ಮತ್ತು ಭವಿಷ್ಯದ ಚಿಂತೆ ಉಂಟಾಗಿದೆ. ನಿವೃತ್ತಿ ನಂತರ ಬದುಕು ಅತಂತ್ರವಾಗುತ್ತಿರುವ ನೌಕರರ ಮತ್ತು ಅವಲಂಬಿತ ಕುಟುಂಬದ ಭದ್ರತೆಯ ದೃಷ್ಟಿಯಿಂದ ಸರ್ಕಾರವು ಕೂಡಲೇ ಹಳೆ ಪಿಂಚಣಿ ಯೋಜನೆಯನ್ನು ಮರು ಜಾರಿಗೊಳಿಸಬೇಕು ಎಂದರು.

ಈ ಸಂದರ್ಭದಲ್ಲಿ ಉಪನ್ಯಾಸಕರಾದ ಡಾ. ಚಂದ್ರಪ್ರಭಾ ಪಟಗಾರ, ಡಾ.ಜೆ.ಸಿ. ಇಂಡಿಮಠ, ಡಾ.ಜನಾರ್ಧನಕುಮಾರ, ಡಾ. ನಾಗರಾಜ ಹರಿಜನ, ಡಾ.ಎಂ.ಬಿ. ನಾಗಲಾಪುರ, ಡಾ.ಬಸವರಾಜ ಬುದನೂರು, ರಾಜು ಪಿ, ಡಾ.ಕೃಷ್ಣ ಚವರಡ್ಡಿ ಸೇರಿದಂತೆ ಇತರರಿದ್ದರು.

## ವೃತ್ತಿ ಜೀವನಕ್ಕೆ ಕಾನೂನು ಕಾರ್ಯಾಗಾರ ಅನುಕೂಲ

**ಹಾವೇರಿ:** ಈ ಕಾರ್ಯಾಗಾರ ನಿಮ್ಮ ವೃತ್ತಿ ಜೀವನಕ್ಕೆ ತುಂಬಾ ಅನುಕೂಲವಾಗಲಿದ್ದು, ಎಲ್ಲರೂ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರಾದ ಬಿರಾದಾರ ದೇವಿಂದ್ರಪ್ಪಾ ಅವರು ಹೇಳಿದರು.

ನಗರದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸಭಾಭವನದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಬಾಲ ರಕ್ಷಾಭಾರತ ಎನ್.ಜಿ.ಓ., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಪೊಲೀಸ್ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಮಕ್ಕಳ ಯೋಜನೆಗಳು ಹಾಗೂ ಮಕ್ಕಳ ಕಾಯ್ದೆ ಮತ್ತು ಹಕ್ಕುಗಳು, ಪೋಕ್ಸೋ ಕಾಯ್ದೆ, ಮಾನವ ಕಳ್ಳ ಸಾಗಾಣೆ ಕುರಿತು ಹಾಗೂ ನ್ಯಾಯ ಕೀ



ಜಾಗೃತಿ, ಹಿರಿಯ ನಾಗರಿಕರ ರಕ್ಷಣಾ ಕಾಯ್ದೆ, ಬಾಲ್ಯವಿವಾಹ ನಿಷೇಧ, ವರದಕ್ಷಿಣೆ ನಿಷೇಧ ಕಾಯ್ದೆ, ಮಾದಕ ವಸ್ತುಗಳ ಅಕ್ರಮ ಸಾಗಾಣಿಕೆ, ಖಾಯಂ ಜನತಾ ನ್ಯಾಯಾಲಯ ಕುರಿತು ಆಯೋಜಿಸಲಾದ ಒಂದು ದಿನದ ಕಾನೂನು ಅರಿವು ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ತಾವು ತಿಳಿದುಕೊಂಡ ಕಾನೂನು ಮಾಹಿತಿಯನ್ನು ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ತಿಳಿಸುವುದರಿಂದ ಎಲ್ಲರೂ ಕಾನೂನು ಸಾಕ್ಷರತೆ ಹೊಂದುತ್ತಾರೆ. ಇದರಿಂದ ನ್ಯಾಯಾಲಯದಲ್ಲಿ ದಾಖಲಾಗುವ ಪ್ರಕರಣಗಳ ಸಂಖ್ಯೆ ಕಡಿಮೆಯಾಗುತ್ತವೆ. ನಿಮ್ಮ ಸಂಬಂಧಿಕರ ಪ್ರಕರಣಗಳೇನಾದರೂ ಇದ್ದಲ್ಲಿ ರಾಜೀ ಸಂಧಾನ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಹಾಯಕ ಕಾನೂನು ನೆರವು ಅಭಿರಕ್ಷಣಾ ವಕೀಲರಾದ ಎನ್.ಎನ್. ಡಿಳ್ಳೆಪ್ಪನವರ ಪೋಕ್ಸೋ, ಮಕ್ಕಳ ಹಕ್ಕುಗಳ ಕಾಯ್ದೆ, ಮಾನವ ಕಳ್ಳಸಾಗಾಣಿಕೆ, ವಿ.ಎಸ್. ರೇವಡಿಹಾಳ, ಬಾಲ್ಯ ವಿವಾಹ ನಿಷೇಧ, ವರದಕ್ಷಿಣೆ ನಿಷೇಧ ಕಾಯ್ದೆ, ಮಾದಕ ವಸ್ತುಗಳ ನಿಷೇಧ ಮತ್ತು ಅಕ್ರಮ ಸಾಗಾಣಿಕೆ ಹಾಗೂ ಸುರಕ್ಷತೆ, ಬಾಲ ರಕ್ಷಾ ಭಾರತ ಎನ್.ಜಿ.ಓ ಸಹಾಯಕ ಪ್ರಬಂಧಕರಾದ ಎನ್.ಎಂ. ದೇವಿಂದ್ರಪ್ಪ ಅವರು, ಮಕ್ಕಳ ಯೋಜನೆಗಳ ಕುರಿತು ಪೊಲೀಸ್ ಇಲಾಖೆಯ ಮಲ್ಲಪ್ಪ ಜಾಲಗಾರ ಅವರು ಮಕ್ಕಳ ಕಾಯ್ದೆ ಹಾಗೂ ಮಕ್ಕಳ ಹಕ್ಕುಗಳ ಕುರಿತು ಉಪನ್ಯಾಸ ನೀಡಿದರು.

ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಶ್ರೀಶೈಲಜಾ ಎಚ್.ವಿ., ಕಾರ್ಯಕ್ರಮ ವಿಭಾಗದ ಮುಖ್ಯಸ್ಥ ಚಂದ್ರಶೇಖರ ಎನ್.ಎಂ. ಉಪ ಪೊಲೀಸ್ ಅಧೀಕ್ಷಕ ಗಿರಿಮಲ್ಲ ತಳಕಟ್ಟಿ, ಜಿಲ್ಲಾ ನ್ಯಾಯವಾದಿಗಳ ಸಂಘದ ಅಧ್ಯಕ್ಷ ಎಚ್.ಸಿ. ಸಿದ್ದನಗೌಡ್ರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ರೇವತಿ ಹೊಸಮಠ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಜಯಶ್ರೀ ಪಾಟೀಲ, ಸಹಾಯಕ ಪ್ರಬಂಧಕ ದಿನಕರ್ ಇತರರು ಉಪಸ್ಥಿತರಿದ್ದರು.

## ಪುರಸಭೆ ಕಚೇರಿಯಲ್ಲಿ ಬ್ಯಾಂಕ್ ಕೌಂಟರ್

**ಹಾನಗಲ್ಲ:** ಸಾರ್ವಜನಿಕರಿಗೆ ತೆರಿಗೆ ಪಾವತಿಯನ್ನು ಇನ್ನಷ್ಟು ಸುಲಭಗೊಳಿಸುವ ಉದ್ದೇಶದಿಂದ ಸ್ಥಳೀಯ ಪುರಸಭೆ ಕಚೇರಿಯಲ್ಲಿ ಬ್ಯಾಂಕ್ ಆಫ್ ಬರೋಡಾ ಬ್ಯಾಂಕ್ ಕೌಂಟರ್ ಅನ್ನು ಆರಂಭಿಸಲಾಗಿದ್ದು, ಶಾಸಕ ಶ್ರೀನಿವಾಸ ಮಾನೆ ಅವರು ಕೌಂಟರ್‌ಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಶ್ರೀನಿವಾಸ ಮಾನೆ, ಇಲ್ಲಿಯವರೆಗೆ ಸಾರ್ವಜನಿಕರು ಪುರಸಭೆ ತೆರಿಗೆ ಪಾವತಿಸಲು ಬ್ಯಾಂಕ್‌ಗಳಿಗೆ ತೆರಳಿ ಸರದಿಯಲ್ಲಿ ನಿಲ್ಲಬೇಕಾಗುತ್ತಿತ್ತು. ಇದರಿಂದ ಸಮಯ ವ್ಯರ್ಥವಾಗುವುದರ ಜೊತೆಗೆ ಅನಗತ್ಯ ತೊಂದರೆ ಉಂಟಾಗುತ್ತಿತ್ತು. ಇದೀಗ ಪುರಸಭೆಯಲ್ಲಿಯೇ ಬ್ಯಾಂಕ್ ಆಫ್ ಬರೋಡಾ ಕೌಂಟರ್ ಆರಂಭವಾಗಿರುವುದರಿಂದ ನಾಗರಿಕರು ಒಂದೇ ಸ್ಥಳದಲ್ಲಿ ತೆರಿಗೆ ಪಾವತಿ ಸೇರಿದಂತೆ ಅಗತ್ಯ ಸೇವೆಗಳನ್ನು ಪಡೆಯಲು ಅನುಕೂಲವಾಗಲಿದೆ. ಸಾರ್ವಜನಿಕರ ಸೇವೆ ಸುಲಭವಾಗಿಸುವ ಇಂತಹ ಜನಪರ ಕ್ರಮಗಳಿಗೆ ಸರ್ಕಾರ ಹಾಗೂ ಸ್ಥಳೀಯ ಆಡಳಿತ ಸದಾ ಆದ್ಯತೆ ನೀಡುತ್ತಿದೆ ಎಂದು ಹೇಳಿದರು.

ಪುರಸಭೆ ಕಚೇರಿಯಲ್ಲೇ ಬ್ಯಾಂಕ್ ಕೌಂಟರ್ ಆರಂಭವಾಗಿರುವುದರಿಂದ ತೆರಿಗೆ



ಸಂಗ್ರಹಣೆಯಲ್ಲೂ ವೇಗ ಹೆಚ್ಚುವ ನಿರೀಕ್ಷೆ ವ್ಯಕ್ತವಾಗಿದೆ. ಸಾರ್ವಜನಿಕರು ಈ ಸೌಲಭ್ಯದ ಸದುಪಯೋಗ ಪಡೆದುಕೊಳ್ಳುವಂತೆ ಶಾಸಕ ಮಾನೆ ಈ ಸಂದರ್ಭದಲ್ಲಿ ಕರೆ ನೀಡಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ತಾಲೂಕಾಧ್ಯಕ್ಷ ಈರಪ್ಪ ಬೈಲವಾಳ, ಪುರಸಭೆ ಮಾಜಿ ಅಧ್ಯಕ್ಷರಾದ ಯಲ್ಲಪ್ಪ ಕಿತ್ತೂರ, ರಾಧಿಕಾ ದೇಶಪಾಂಡೆ, ನಾಗಪ್ಪ ಸವದತ್ತಿ, ಪರಶುರಾಮ ಖಂಡೂನವರ, ವೀಣಾ ಗುಡಿ, ಖುರ್ಷಿದ್ ಹುಲ್ಲತ್ತಿ, ನಗರ ಕಾಂಗ್ರೆಸ್ ಅಧ್ಯಕ್ಷ ಶಕೀಲ ಬಾಳೂರ, ಮೇಕಾಜಿ ಕಲಾಲ, ಸುರೇಶ ನಾಗಣ್ಣನವರ, ಬಾಬಾಜಾನ ಕೊಂಡೆವಾಡೆ, ಗೌಸ್ ತಾಂಡೂರ, ರಾಜಕುಮಾರ ಶಿರಪಂಥಿ, ಸಿಕಂದರ ವಾಲಿಕಾರ, ಮುಖ್ಯಾಧಿಕಾರಿ ಜಗದೀಶ, ಯೋಜನಾಧಿಕಾರಿ ಶಿವಾನಂದ ಕ್ಯಾಲಕೊಂಡ ಇದ್ದರು.

## ನಾಳೆ ಪದಾಧಿಕಾರಿಗಳ ಪದಗ್ರಹಣ ಸಮಾರಂಭ

**ರಾಣೇಬೆನ್ನೂರ:** ನಗರದ ರೋಟರಿ ಕ್ಲಬ್ ಹಾಗೂ ಇನ್ನರ್‌ವೀಲ್ ಕ್ಲಬ್ ವತಿಯಿಂದ 2026-27ನೇ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಜೂ. 28ರಂದು ಸಂಜೆ 6.30ಕ್ಕೆ ಸ್ಥಳೀಯ ರೈಲ್ವೆಸ್ಟೇಷನ್ ವರ್ತಕರ ಸಂಘದ ಸಭಾಂಗಣದಲ್ಲಿ ನಡೆಯಲಿದೆ. ಕಾರ್ಯಕ್ರಮದಲ್ಲಿ ಎಸ್. ಜಯರಾಮನ್ ಅವರು ಪದಗ್ರಹಣಾಧಿಕಾರಿಯಾಗಿ ಭಾಗವಹಿಸಿ ನೂತನ ಪದಾಧಿಕಾರಿಗಳಿಗೆ ಅಧಿಕಾರ ಹಸ್ತಾಂತರ ಮಾಡಲಿದ್ದಾರೆ. ರೋಟರಿ ಕ್ಲಬ್‌ನ ನೂತನ ಅಧ್ಯಕ್ಷರಾಗಿ ಡಾ. ಪ್ರವೀಣ್ ಎಂ. ಖನ್ನೂರು, ಕಾರ್ಯದರ್ಶಿಯಾಗಿ ಜಿ.ಎಸ್. ರಾಮಚಂದ್ರ ಹಾಗೂ ನಿರ್ದೇಶಕ ಮಂಡಳಿಯ ಸದಸ್ಯರು ಅಧಿಕಾರಸ್ವೀಕರಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ಸಹಾಯಕ ಗವರ್ನರ್ ಬಸವರಾಜ್ ಸುಂಕಾಪುರ ಭಾಗವಹಿಸಲಿದ್ದಾರೆ. ಇನ್ನರ್‌ವೀಲ್ ಕ್ಲಬ್‌ನ ನೂತನ ಅಧ್ಯಕ್ಷೆಯಾಗಿ ಪ್ರಮಿಳಾ ಜಂಬಿಗಿ, ಕಾರ್ಯದರ್ಶಿಯಾಗಿ ತ್ರಿವೇಣಿ ಎನ್. ಪವಾರ್ ಹಾಗೂ ಪದಾಧಿಕಾರಿಗಳ ತಂಡ ಅಧಿಕಾರ ಸ್ವೀಕರಿಸಲಿದ್ದು, ಭಾರತಿ ಕೆ. ಜಂಬಿಗಿ ಅವರು ಪದಗ್ರಹಣಾಧಿಕಾರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಪ್ರಸ್ತುತ ಅಧ್ಯಕ್ಷರಾದ ಕ್ಯಾಪ್ಟನ್ ಬಿ.ಜೆ. ಹಿರೇಮಠ, ಡಾ. ದೀಪಾಲಿ ಪುನೀತ್, ಕಾರ್ಯದರ್ಶಿಗಳಾದ ಡಾ. ನಾರಾಯಣ ಪವಾರ್ ಹಾಗೂ ಪುಷ್ಪಾ ಪಿ. ಮಾಳಗಿ, ಡಾ, ಬಸವರಾಜ ಕೇಲಗಾರ, ಜಿ.ಜಿ. ಹೊಟ್ಟಿಗೌಡ್ರ ಉಪಸ್ಥಿತರಿರುವರು.

## ಕಿರುಸುದ್ದಿ

### ಜನತೆಗೆ ಸೌಕರ್ಯ ಒದಗಿಸುವುದು ನನ್ನ ಕರ್ತವ್ಯ

**ರಾಯಬಾಗ:** ಪಟ್ಟಣದ ಸಾಯಿ ನಗರದ ಜನತೆಯ ಬಹುದಿನಗಳ ಕನಸು ಈ ನೀರಿನ ಟ್ಯಾಂಕಿನಿಂದ ನನಸಾಗುತ್ತದೆ. ಆದಕ್ಕಾಗಿ ನನ್ನ ಮತ ಕ್ಷೇತ್ರದ ಎಲ್ಲ ಜನತೆಗೆ ಮೂಲ ಸೌಕರ್ಯಗಳನ್ನು ಒದಗಿಸುವುದು ನನ್ನ ಮೊದಲ ಆದ್ಯ ಕರ್ತವ್ಯ ಎಂದು ಶಾಸಕ ದುರ್ಯೋಧನ ಐಹೊಳೆ ಹೇಳಿದರು. ಪಟ್ಟಣದ ಸಾಯಿ ನಗರದ ಜನತೆಯ ಕುಡಿಯುವ ನೀರು ಪೂರೈಕೆಗೆ ಪೂರಕವಾಗುವಂತೆ ಸುಮಾರು 60 ಲಕ್ಷ ರೂ. ವೆಚ್ಚದಲ್ಲಿ ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಮಾಡುವ ಕಾಮಗಾರಿಗೆ ಗುರುವಾರ ಭೂಮಿಪೂಜೆ ಕೈಗೊಂಡು ಚಾಲನೆ ನೀಡಿ ಮಾತನಾಡಿದರು. ಈ ವೇಳೆ ಮುಖಂಡರಾದ ಚಿಕ್ಕೋಡಿ ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಸದಾನಂದ ಹಳಿಂಗಳಿ, ಸದಾಶಿವ ಘೋರ್ಪಡೆ, ಅಣ್ಣಾಸಾಹೇಬ್ ಖೇಮಲಾಪುರೆ, ಮಹೇಶ ಕರಮಡಿ, ಸುರೇಶ ಮಾಳಿ, ಜಿಯಾವುಲ್ಲ ಮುಲ್ಲಾ, ಪರಶುರಾಮ ಪೂಜಾರಿ, ಮಜ್ಜಿದ್ ಡಾಂಗೆ, ಅನಿಲ ಕೊರವಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

### ನಾಡಪ್ರಭು ಕೆಂಪೇಗೌಡ ಜಯಂತಿ ನಾಳೆ

**ಬೆಳಗಾವಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಬೆಳಗಾವಿ ಮಹಾನಗರ ಪಾಲಿಕೆ ಇವರ ಸಯುಂಕ್ತ ಆಶ್ರಯದಲ್ಲಿ ನಾಡಪ್ರಭು ಕೆಂಪೇಗೌಡ ಜಯಂತಿ ಉತ್ಸವ ಕಾರ್ಯಕ್ರಮವನ್ನು ಜೂನ್.27ರಂದು ಬೆಳಗ್ಗೆ 11ಕ್ಕೆ ನಗರದ ಬಸವರಾಜ ಕಟ್ಟೀಮನಿ ಸಭಾ ಭವನದಲ್ಲಿ ಆಯೋಜಿಸಲಾಗಿದೆ. ಲೋಕೋಪಯೋಗಿ ಇಲಾಖೆ ಸಚಿವ ಸತೀಶ ಜಾರಕಿಹೊಳಿ ಉದ್ಘಾಟಿಸಲಿದ್ದು, ಶಾಸಕ ಆಸೀಫ್ (ರಾಜು) ಸೇಠ್ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಳಗಾವಿ ಮನರಸಂ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ಡಾ.ಗೀತಾ ದೇಯಣ್ಣವರ ವಿಶೇಷ ಉಪನ್ಯಾಸ ನೀಡಲಿದ್ದಾರೆ. ಸರ್ಕಾರಿ ಮುಖ್ಯ ಸಚೇತಕ ಅಶೋಕ ಪಟ್ಟಣ, ನವದೆಹಲಿ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ–2 ಪ್ರಕಾಶ ಹುಕ್ಕೇರಿ, ವಾಯುವ್ಯ ಸಾರಿಗೆ ನಿಗಮ ನಿಯಮಿತ ಅಧ್ಯಕ್ಷ ಭರಮಗೌಡ ಕಾಗೆ, ಹಣಕಾಸು ಸಂಸ್ಥೆ ಅಧ್ಯಕ್ಷ ಮಹಾಂತೇಶ ಕೌಜಲಗಿ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ಅಧ್ಯಕ್ಷ ಭರಮಣ್ಣ ಉಪ್ಪಾರ ಭಾಗವಹಿಸುವರು. ಸಂಸದರಾದ ಈರಣ್ಣ ಕಡಾಡಿ, ಪ್ರಿಯಾಂಕಾ ಜಾರಕಿಹೊಳಿ, ಜಗದೀಶ್ ಶೆಟ್ಟರ, ವಿಶ್ವೇಶ್ವರ ಹೆಗಡೆ ಕಾಗೇರಿ ಅವರುಗಳು ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ. ಜಿಲ್ಲೆಯ ಎಲ್ಲ ಸಂಸದರು, ಶಾಸಕರು, ಪರಿಷತ್ ಸದಸ್ಯರು, ಜನಪ್ರತಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.

### ಡಾ.ಕೋರೆಗೆ ಪದ್ಮಶ್ರೀ: ವಳಸಂಗ ಹರ್ಷ

**ಚನ್ನಮ್ಮನ ಕಿತ್ತೂರು:** ಸರ್ಕಾರದ ಅತ್ಯುನ್ನತ ಪ್ರಶಸ್ತಿಗಳಲ್ಲಿ ಒಂದಾದ ಪದ್ಮಶ್ರೀ ಪ್ರಶಸ್ತಿಯನ್ನು ಭಾರತ ಸರ್ಕಾರ ಶಿಕ್ಷಣ, ಆರೋಗ್ಯ ರಕ್ಷಣೆ, ಸಂಶೋಧನೆ ಹಾಗೂ ಕೃಷಿ ಕ್ಷೇತ್ರದಲ್ಲಿ ನಿಸ್ವಾರ್ಥ ಸೇವೆಸಲ್ಲಿಸಿದ ಕೆಎಲ್‌ಇ ಸಂಸ್ಥೆಯ ಕುಲಾಧಿಪತಿಗಳೂ ಮಾಜಿ ರಾಜ್ಯಸಭಾ ಸದಸ್ಯ ಡಾ.ಪ್ರಭಾಕರ ಬಿ.ಕೋರೆಯವರಿಗೆ ನೀಡಿರುವುದಕ್ಕೆ ಕಿತ್ತೂರ ನಾಡ ವಿದ್ಯಾವರ್ಧಕ ಸಂಘದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸಲಾಗುವದೆಂದು ಸಂಘದ ಚೇರಮನ್ ಶಂಕರ ವಳಸಂಗ ತಿಳಿಸಿದರು. ಕೆಎಲ್‌ಇ ಸಂಸ್ಥೆಯು ಅತ್ಯುನ್ನತ ಸಂಸ್ಥೆಯಾಗಿ ಬೆಳೆದು ನಿಲ್ಲಲು ಕಾರಣೀಕರ್ತರಾದ ಡಾ.ಪ್ರಭಾಕರ ಕೋರೆಯರು ಪದ್ಮಶ್ರೀ ಪ್ರಶಸ್ತಿಗೆ ಭಾಜನರಾಗಿರುವುದಕ್ಕೆ ಸಂಘದ ಗೌರವ ಅಧ್ಯಕ್ಷ ಮಡಿವಾಳರಾಜಯೋಗೀಂದ್ರ ಸ್ವಾಮಿಜಿ, ಉಪಾಧ್ಯಕ್ಷ ಸಿ.ಎಸ್.ವಳಸಂಗ, ಎ.ಸಿ.ಬಿಕ್ಕಣ್ಣವರ, ವಾಯಿಸ್–ಚೇರಮನ್ ಜಗದೀಶ ಘಟ್ನಟ್ಟಿ, ಗೌರವ–ಕಾರ್ಯದರ್ಶಿ ಜೆ.ಎಸ್.ಬಿಕ್ಕಣ್ಣವರ, ಸದಸ್ಯ ಎನ್.ವಿ.ತಡಕೋಡ, ಎಂ.ಬಿ.ದಳವಾಯಿ, ಯು.ಡಿ.ಭಾರತಿ, ಜೆ.ವಿ.ವಸ್ತ್ರದ, ಎನ್.ಎಸ್.ಹಿರೇಮಠ, ವಿ.ಆರ್.ಶೆಟ್ಟರ, ಡಿ.ಎಲ್.ಪಾಟೀಲ, ವಿ.ಆರ್.ಪಾಟೀಲ ಹಾಗೂ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರುಗಳು ಸಂತಸ ವ್ಯಕ್ತಪಡಿಸಿದ್ದಾರೆಂದು ತಿಳಿಸಿದರು.



### ಕೃತಿಗಳ ಲೋಕಾರ್ಪಣೆ ನಾಳೆ

**ಬೆಳಗಾವಿ:** ರಂಗಸೃಷ್ಟಿ ಸಾಂಸ್ಕೃತಿಕ ಸಂಘ ವತಿಯಿಂದ ಕನ್ನಡ ಸಾಹಿತ್ಯ ಭವನದಲ್ಲಿ ಜೂ.27ರಂದು ಸಂಜೆ 4.30ಕ್ಕೆ ಡಾ.ಪಿ.ಜಿ.ಕೆಂಪಣ್ಣವರ ಅವರ ಜಿನ ದೀವಿಗೆ ಶಿರೀಷ ಜೋಶಿ ಅವರ ಮರಾಠಿಯೊಳಗೊಂದು ಕನ್ನಡ ಗತ ವೈಭವ ಕೃತಿಗಳ ಲೋಕಾರ್ಪಣೆ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ. ಹಿರಿಯ ಸಾಹಿತಿಗಳಾದ ಡಾ.ಬಸವರಾಜ ಜಗಜಂಪಿ, ಎಲ್.ಎಸ್.ಶಾಸ್ತ್ರೀ ಕೃತಿ ಬಿಡುಗಡೆಗೊಳಿಸಲಿದ್ದಾರೆ. ಹಿರಿಯ ಲೇಖಕಿ ಡಾ.ಗುರುದೇವಿ ಹುಲೆಪ್ಪನವರಮಠ, ಪ್ರಾಧ್ಯಾಪಕ ಡಾ.ಎಚ್. ಬಿ.ಕೋಲ್ಕಾರ, ಕೃತಿಗಳ ಕುರಿತು ಪರಿಚಯಸಲಿದ್ದಾರೆ. ರಂಗಸೃಷ್ಟಿ ಸಾಂಸ್ಕೃತಿಕ ಸಂಘ ಅಧ್ಯಕ್ಷ ರಮೇಶ ಜಂಗಲ ಅಧ್ಯಕ್ಷತೆ ವಹಿಸಲಿದ್ದಾರೆ. ಉಪಾಧ್ಯಕ್ಷರಾದ ಶೈಲಜಾ ಜಿಂಗೆ, ಎಂ.ಕೆ.ಹೆಗಡೆ, ಕೋಶಾಧಿಕಾರಿ ಶಾಂತಾ ಆಚಾರ್ಯ, ಕಾರ್ಯದರ್ಶಿ ಶರಣಗೌಡ ಪಾಟೀಲ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಯರಗಟ್ಟಿ: ಪಲ್ಸ್ ಪೋಲಿಯೋ ಅಭಿಯಾನ ನಿರ್ಮೂಲನೆ ಕುರಿತ ಸಭೆ ಜರುಗಿತು. ತಹಶೀಲ್ದಾರ್ ಎಮ್. ವ್ಹಿ. ಗುಂಡಪ್ಪಗೋಳ, ಮಹೇಶ ಭಜಂತ್ರಿ, ಡಾ. ಸಚೇನ ಉಪ್ಪಿನ ಇದ್ದರು.

## ಪಲ್ಸ್ ಪೋಲಿಯೋ ಅಭಿಯಾನ ಯಶಸ್ವಿಗೊಳಿಸಿ

**ಯರಗಟ್ಟಿ:** ಪಲ್ಸ್ ಪೋಲಿಯೋ ಅಭಿಯಾನವನ್ನು ಸಂಘ ಸಂಸ್ಥೆಗಳು ಯಶಸ್ವಿಗೊಳಿಸಬೇಕು ಎಂದು ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ಸಚಿನ ಉಪ್ಪಿನ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ಏರ್ಪಡಿಸಿದ್ದ ಪಲ್ಸ್ ಪೋಲಿಯೋ ಅಭಿಯಾನ ನಿರ್ಮೂಲನೆ ಕುರಿತ ಸಭೆಯಲ್ಲಿ ಮಾತನಾಡಿ, ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಜೂ.28ರಂದು ವಿವಿಧ ಕಡೆಗಳಲ್ಲಿ ನಡೆಸಲಿದ್ದು ಜೂ.28, 30ರಂದು ಮನೆ ಭೇಟಿ, ಸಂಚಾರಿ ವಾಹನದ ಮೂಲಕ ಅಭಿಯಾನ ನಡೆಯಲಿದೆ. ಇದಕ್ಕೆ 5 ವರ್ಷದೊಳಗಿನ ಎಲ್ಲ ಮಕ್ಕಳನ್ನು ಕರೆತಂದು ಲಸಿಕೆ ಹಾಕಿಸಿಕೊಂಡು ಪಾಲಕರು ಸಹಕರಿಸಬೇಕಿದೆ ಎಂದರು.

ನಂತರ ತಹಶೀಲ್ದಾರ್ ಎಂ.ವಿ. ಗುಂಡಪ್ಪಗೋಳ ಮಾತನಾಡಿ, ಪೋಲಿಯೋ ಅಭಿಯಾನ ಯಶಸ್ವಿಗೊಳ್ಳಲು ಸರ್ಕಾರದೊಂದಿಗೆ ಸಂಘ ಸಂಸ್ಥೆಗಳ ಸಹಕಾರವೂ ಅಗತ್ಯವಾಗಿದೆ. ಸರ್ಕಾರಿ ಇಲಾಖೆ ಹಾಗೂ ಖಾಸಗಿ ವ್ಯಕ್ತಿಗಳ ವಾಹನಗಳನ್ನು ಅಭಿಯಾನದಂದು ಇಲಾಖೆಗೆ ನೀಡಿ ಸಹಕಾರ ನೀಡಬೇಕು ಎಂದರು. ಪ ಪಂ. ಮುಖ್ಯಾಧಿಕಾರಿ ಮಹೇಶ ಭಜಂತ್ರಿ, ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷಾಧಿಕಾರಿ ಎಸ್.ವಿ.ಬೆಂಡಿಗೇರಿ, ಪಪಂ ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ನಾಗರಾಜ ಚವಡಪ್ಪನ್ನವರ, ರಾಜ್ಯ ಸಂಪನ್ಮೂಲ ವ್ಯಕ್ತಿ ಎಂ.ಎಂ.ಚೀಲದ, ರಮೇಶ ಮುರಂಕರ, ಗ್ರಾಮ ಆಡಳಿತಾಧಿಕಾರಿಗಳಾದ ಎಲ್.ಬಿ.ದಳವಾಯಿ, ಎ.ಬಿ.ಹುಣಶ್ಯಾಳ, ಹೆಸ್ಕಾಂ ಎಸ್‌ಓ ಮಹಾಂತೇಶ ಯರಗಟ್ಟಿ, ನಸಿಂಗ್ ಆಫೀಸರ್ ಸುನೀಲ ಕಾಶನ್ನವರ ಸೇರಿದಂತೆ ಮತ್ತಿತರರಿದ್ದರು.



ರಾಯಬಾಗ: ಪಟ್ಟಣದ ಸಾಯಿ ನಗರದ ಜನತೆಯ ಕುಡಿಯುವ ನೀರು ಪೂರೈಕೆಗೆ ಪೂರಕವಾಗುವಂತೆ ಸುಮಾರು 60 ಲಕ್ಷ ರೂ. ವೆಚ್ಚದಲ್ಲಿ ಓವರ್ ಹೆಡ್ ಟ್ಯಾಂಕ್ ನಿರ್ಮಾಣ ಮಾಡುವ ಕಾಮಗಾರಿಗೆ ಗುರುವಾರ ಭೂಮಿಪೂಜೆ ಕೈಗೊಂಡು ಶಾಸಕ ದುರ್ಯೋಧನ ಐಹೊಳೆ ಚಾಲನೆ ನೀಡಿದರು.

# ವಿಶೇಷಚೇತನರು ಆತ್ಮವಿಶ್ವಾಸದಿಂದ ಸವಾಲು ಎದುರಿಸಲಿ: ಶಾಸಕ ಸೇಠ್

**ಯಂತ್ರ ಚಾಲಿತ ತ್ರಿಚಕ್ರ ವಾಹನ ವಿತರಣೆ**

**ಬೆಳಗಾವಿ:** ವಿಶೇಷಚೇತನರಲ್ಲಿ ವಿಶೇಷವಾದ ಶಕ್ತಿ ಇದ್ದು, ಅವರು ಯಾವುದೇ ಕಾರಣಕ್ಕೂ ಭಯದಿಂದ ಹಿಂಜರಿಯದೆ ಆತ್ಮವಿಶ್ವಾಸದಿಂದ ಸವಾಲುಗಳನ್ನು ಎದುರಿಸಿ ಬದುಕು ರೂಪಿಸಿಕೊಳ್ಳಬೇಕೆಂದು ಶಾಸಕ ಆಸೀಫ್ ಸೇಠ್ ಹೇಳಿದರು.

ಗುರುವಾರ ಮಹಾನಗರ ಪಾಲಿಕೆಯ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲಿಕೆಯ ಬಡತನ ನಿರ್ಮೂಲನ ಕೋಶದಿಂದ ಶೇ.5 ಅನುದಾನದ ಯೋಜನೆಯಡಿ ವಿಶೇಷಚೇತನರಿಗೆ ಯಂತ್ರ ಚಾಲಿತ ತ್ರಿಚಕ್ರ ವಾಹನಗಳನ್ನು ವಿತರಿಸಿ ಮಾತನಾಡಿದ ಅವರು, ಸರ್ಕಾರ ಹಾಗೂ ಪಾಲಿಕೆ ವಿಶೇಷಚೇತನರಿಗಾಗಿ ಅನೇಕ ಯೋಜನೆಗಳನ್ನು ತಂದಿದ್ದು, ಅದರ ಸದುಪಯೋಗ ಪಡಿಸಿಕೊಳ್ಳಬೇಕೆಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಮೇಯರ್ ಪ್ರೀತಿ ಕಾಮಕರ ಮಾತನಾಡಿ, ಪಾಲಿಕೆಯು ವಿಕಲಚೇತನರಲ್ಲಿ ಧೈರ್ಯ ತುಂಬುವ ನಿಟ್ಟಿನಲ್ಲಿ ವಿವಿಧ ಯೋಜನೆಗಳನ್ನು ತಂದಿದೆ. ಅದರ ಅಡಿಯಲ್ಲಿ ತ್ರಿಚಕ್ರ ವಾಹನಗಳನ್ನು ನೀಡುತ್ತಿದ್ದು, ಅವುಗಳಿಂದ ತಾವು ಸ್ವಾವಲಂಬಿಗಳಾಗಿ ಜೀವಿಸಲು ಅನುಕೂಲವಾಗಲಿದೆ ಎಂದರು.

ಉಪಮೇಯರ್ ಹಣಮಂತ ಕೊಂಗಾಲಿ ಮಾತನಾಡಿ, ಅರ್ಹ ಫಲಾನುಭವಿಗಳಿಗೆ ಮುಂದೆಯೂ ಸಹ ವಿವಿಧ ಯೋಜನೆಗಳ ಅಡಿಯಲ್ಲಿ ಪಾಲಿಕೆಯಿಂದ ಸಹಾಯ ಸಹಕಾರ ಲಭ್ಯವಾಗಲಿದೆ ಎಂದರು.



ಪಾಲಿಕೆ ಆಯುಕ್ತ ಕಾರ್ತಿಕ್ ಎಂ. ಮಾತನಾಡಿ, ಪಾಲಿಕೆಯ ಅನುದಾನದ ಶೇ.5 ಯೋಜನೆ ಅಡಿ ಒಟ್ಟು 26 ಅರ್ಹ ವಿಕಲಚೇತನರಿಗೆ ಯಂತ್ರ ಚಾಲಿತ ತ್ರಿಚಕ್ರವಾಹನ ನೀಡಲಾಗುತ್ತಿದೆ. ಪಾಲಿಕೆಯ ಸದುದ್ದೇಶವನ್ನು ಫಲಾನುಭವಿಗಳು ಸಾಕಾರಗೊಳಿಸಿಕೊಳ್ಳಬೇಕೆಂದು ಹೇಳಿದರು.

ಈ ವೇಳೆ ಜನನ ಮತ್ತು ಮರಣ ಪ್ರಮಾಣ ಪತ್ರ ವಿಭಾಗದ ಅರ್ಜಿ ಸ್ವೀಕೃತಿ ಹಾಗೂ ಸಹಾಯ ಕೇಂದ್ರವನ್ನು ಶಾಸಕರು, ಮೇಯರ್ ಉಪಮೇಯರ್ ಉದ್ಘಾಟಿಸಿದರು. ಆಡಳಿತ ಪಕ್ಷದ ನಾಯಕ ಸಂತೋಷ ಪೇಡ್ನೇಕರ್, ಸ್ಥಾಯಿ ಸಮಿತಿ ಅಧ್ಯಕ್ಷೆ ಲಕ್ಷ್ಮಿ ರಾಥೋಡ, ಮಾಧವಿ ರಾಘೋಚೆ, ಬ್ರಹ್ಮಾನಂದ ಮಿರಜಕರ್ , ಸಮಿತಿ ಸದಸ್ಯರು ಹಾಗೂ ನಗರ ಸೇವಕರು ವೇದಿಕೆಯಲ್ಲಿದ್ದರು.

ಆಡಳಿತ ವಿಭಾಗದ ಉಪ ಆಯುಕ್ತ ಉದಯಕುಮಾರ ಟಿ. ಸ್ವಾಗತಿಸಿ ವಂದಿಸಿದರು. ಕಂದಾಯ ವಿಭಾಗದ ಉಪ ಆಯುಕ್ತ ಡಾ.ಸಿದ್ದು ಹುಲ್ಲೋಳಿ, ಪಾಲಿಕೆ ಕಾರ್ಯದರ್ಶಿ ಲಕ್ಷ್ಮೀ ನಿಪ್ಪಾಣಿಕರ್, ಪರಿಸರ ವಿಭಾಗದ ಅಭಿಯಂತರ ಹಣಮಂತ ಕಲಾದಗಿ ಸೇರಿದಂತೆ ಇತರೆ ಅಧಿಕಾರಿಗಳು, ಸಿಬ್ಬಂದಿ ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಎಫ್‌ಸಿಐ ಕಾರ್ಯಕ್ಕೆ ಈರಣ್ಣ ಕಡಾಡಿ ಮೆಚ್ಚುಗೆ

**ಬೆಳಗಾವಿ:** ಆಹಾರ ಧಾನ್ಯಗಳ ಸುರಕ್ಷಿತ ಸಾಗಣೆ, ಗುಣಮಟ್ಟದ ಸಂಗ್ರಹಣೆ ಹಾಗೂ ಸಾರ್ವಜನಿಕ ವಿತರಣಾ ವ್ಯವಸ್ಥೆಗೆ ನಿರಂತರ ಪೂರೈಕೆ ಒದಗಿಸುವಲ್ಲಿ ಭಾರತೀಯ ಆಹಾರ ನಿಗಮ (ಎಫ್‌ಸಿಐ) ಕರ್ನಾಟಕ ವಲಯ ಅತ್ಯುತ್ತಮ ಸಾಧನೆ ಮಾಡಿದೆ ಎಂದು ರಾಜ್ಯಸಭಾ ಸದಸ್ಯ ಹಾಗೂ ರಾಜ್ಯ ಮಟ್ಟದ ಸಲಹಾ ಸಮಿತಿ ಅಧ್ಯಕ್ಷ ಈರಣ್ಣ ಕಡಾಡಿ ಪ್ರಶಂಸಿಸಿದರು.

ಗುರುವಾರ ನಗರದ ಫೇರ್‌ಫೀಲ್ಡ್ ಮ್ಯಾರಿಯಟ್ ಹೋಟೆಲ್‌ನಲ್ಲಿ ನಡೆದ ಎಫ್‌ಸಿಐ ರಾಜ್ಯ ಮಟ್ಟದ ಸಲಹಾ ಸಮಿತಿ ಸಭೆಯಲ್ಲಿ 2025–26ನೇ ಸಾಲಿನ ಕಾರ್ಯಚಟುವಟಿಕೆಗಳ ಪರಿಶೀಲನೆ ನಡೆಸಿದ ಬಳಿಕ ಅವರು ಮಾತನಾಡಿದರು.

ಆಹಾರ ಧಾನ್ಯಗಳ ಸಂಗ್ರಹಣೆ, ಸಾಗಣೆ ಹಾಗೂ ಗುಣಮಟ್ಟ ನಿರ್ವಹಣೆಯಲ್ಲಿ ಕರ್ನಾಟಕ ವಲಯವು ಕೇಂದ್ರ ಕಚೇರಿ ಮತ್ತು ಆಹಾರ ಹಾಗೂ ಸಾರ್ವಜನಿಕ ವಿತರಣಾ ಇಲಾಖೆಯ ಮಾನದಂಡಗಳನ್ನು ಸಮರ್ಪಕವಾಗಿ ಪಾಲಿಸಿದ್ದು, ಕಳೆದ ಐದು ವರ್ಷಗಳಿಂದ ಧಾನ್ಯಗಳ ಗುಣಮಟ್ಟದಲ್ಲಿ ಯಾವುದೇ ರೀತಿಯ ನಷ್ಟ ಅಥವಾ ಕೊರತೆ ದಾಖಲಾಗಿಲ್ಲ ಎಂದರು.

ರಾಜ್ಯದ ಅಗತ್ಯತೆಗಳನ್ನು ಪೂರೈಸಲು ಇತರೆ ಉತ್ಪಾದನಾ ರಾಜ್ಯಗಳಿಂದ 54.54 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಮತ್ತು ಗೋಧಿಯನ್ನು ರೈಲ್ವೆ ಮೂಲಕ ಸುರಕ್ಷಿತವಾಗಿ ಸಾಗಿಸಲಾಗಿದೆ ಎಂದು ಅಧಿಕಾರಿಗಳು ವಿವರಿಸಿದರು.

ಪ್ರಸ್ತುತ ಕರ್ನಾಟಕದಲ್ಲಿ ಎಫ್‌ಸಿಐನ 61 ಗೋದಾಮುಗಳ ಮೂಲಕ 10.68 ಲಕ್ಷ ಮೆಟ್ರಿಕ್ ಟನ್ ಸಂಗ್ರಹ ಸಾಮರ್ಥ್ಯ ಲಭ್ಯವಿದ್ದು, ಸಾರ್ವಜನಿಕ–ಖಾಸಗಿ ಸಹಭಾಗಿತ್ವದಡಿ ಹೆಚ್ಚುವರಿಯಾಗಿ 2.45 ಲಕ್ಷ ಮೆಟ್ರಿಕ್ ಟನ್ ಸಾಮರ್ಥ್ಯದ ಹೊಸ ಗೋದಾಮುಗಳ ನಿರ್ಮಾಣ ಕಾರ್ಯ ನಡೆಯುತ್ತಿದೆ ಎಂದು ತಿಳಿಸಲಾಯಿತು.

ಸಭೆಯ ಬಳಿಕ ಈರಣ್ಣ ಕಡಾಡಿ ಅವರು ಬೆಳಗಾವಿ ತಾಲೂಕಿನ ಬೆನಕನಹಳ್ಳಿಯಲ್ಲಿರುವ ಎಫ್‌ಸಿಐ ಗೋದಾಮಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸಭೆಯಲ್ಲಿ ಎಫ್‌ಸಿಐ ಜನರಲ್ ಮ್ಯಾನೇಜರ್ ಬಿ.ಓ.ಮಹೇಶ್ವರಪ್ಪ, ಸಹಾಯಕ ಜನರಲ್ ಮ್ಯಾನೇಜರ್ ರಮೇಶ ನಾಯಕ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ಮಲ್ಲಿಕಾರ್ಜುನ ನಾಯಕ ಸೇರಿದಂತೆ ಸಲಹಾ ಸಮಿತಿ ಸದಸ್ಯರು ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಇದ್ದರು.




## ಇಂದಿನ ಪೀಳಿಗೆಗೆ ಎಐ ಕಲಿಕೆ ಅತಿ ಅವಶ್ಯ: ಮಾಳಿ

**ಮುಗಳಖೋಡ:** ಹಿಂದೆ ಪವಾಡ ಪುರುಷರು, ದೈವಿಪುರುಷರು ತಮ್ಮ ದೈವಶಕ್ತಿಯಿಂದ ಕಣ್ಣಿಗೆ ಕಾಣದೆ ಕೆಲವು ಕಾರ್ಯಗಳು ನಡೆಯುತ್ತಿದ್ದವು ಎಂಬುದನ್ನು ಕೇಳಿದ್ದಿವಿ. ಆದರೆ ಅದೇ ಇವತ್ತು ಎಐ, ರೊಬೋಟ್ ಎಂಬ ಯಂತ್ರಗಳ ಮೂಲಕ ನಡೆಯುತ್ತಿರುವುದನ್ನು ನೋಡುತ್ತಿದ್ದೇವೆ. ಈಗಿನ ಪೀಳಿಗೆಗೆ ಎಐ ಬಹಳ ಅವಶ್ಯಕವಾಗಿದೆ. ವಿವಿಧ ಆಟೋಪಕರಣ, ಯಂತ್ರೋಪಕರಣಗಳ ಬಳಕೆಯಿಂದ ಪಾಠ ಮಾಡಲು ಮುಂದಾದ ಈ ರೈನಬೋ ಶಾಲೆಯ ಕಾರ್ಯ ಆದರ್ಶಮಯವಾಗಿದೆ ಎಂದು ಸಾಹಿತಿ ವಿ.ಎಸ್. ಮಾಳಿ ಹೇಳಿದರು.

ಪಟ್ಟಣದ ಶ್ರೀ ಚವಿವ ಸಂಘದ ರೈನಬೋ ಸೆಂಟ್ರಲ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹೊಸದಾಗಿ ಪ್ರಾರಂಭಗೊಂಡ ಪ್ರಯೋಗಾಲಯಗಳನ್ನು ಉದ್ಘಾಟಿಸಿ ಮಾತನಾಡಿದರು.

ಕೆಪಿಸಿಸಿ ಅಸಂಘಟಿತ ಕಾರ್ಮಿಕ ವರ್ಗದ ರಾಜ್ಯ ಉಪಾಧ್ಯಕ್ಷ ಹಾಗೂ ಚವಿವ ಸಂಘದ ನಿಕಟಪೂರ್ವ ಅಧ್ಯಕ್ಷ ಡಾ.ಸಿ.ಬಿ.ಕುಲಿಗೋಡ ಮಾತನಾಡಿದರು.

ಸಾಂಗ್ಲಿಯ ಟೆಕ್ನೋ ಸಂಸ್ಥೆಯ ಸದಸ್ಯ ನಿತಿನ್ ನಾಯಿಕ ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಎಐ ಉಪಯೋಗ, ಅವಶ್ಯಕತೆ, ಮಹತ್ವದ ಕುರಿತು ತಿಳಿಸಿದರು.ಶಾಲೆಯಲ್ಲಿ ಹೊಸದಾಗಿ ಪ್ರಾರಂಭಗೊಂಡ ಕ್ರೀಡೊ, ವಿಜ್ಞಾನ, ಏಟಿಯಲ್ ಮತ್ತು ಎಐ ಪ್ರಯೋಗಾಲಯ ಸೇರಿದಂತೆ ಗ್ರಂಥಾಲಯವನ್ನು ಸಂಸ್ಥೆಯ ಎಲ್ಲ ಸದಸ್ಯರು, ಸಿಬ್ಬಂದಿ ವರ್ಗ ಪಾಲಕರ ಸಭೆ ಕರೆದು ಅವರ ಸಮ್ಮುಖದಲ್ಲಿ ವಿಶೇಷವಾಗಿ ಪೂಜೆ ಸಲ್ಲಿಸಿ ಉದ್ಘಾಟಿಸಲಾಯಿತು.

ಕೆಪಿಸಿಸಿ ಅಸಂಘಟಿತ ಕಾರ್ಮಿಕ ವರ್ಗದ ರಾಜ್ಯ ಉಪಾಧ್ಯಕ್ಷ ಡಾ.ಸಿ.ಬಿ.ಕುಲಿಗೋಡ, ಸಂಸ್ಥೆಯ ಉಪಾಧ್ಯಕ್ಷ ಪ್ರಕಾಶ ಆದಪ್ಪಗೋಳ, ಕಾರ್ಯದರ್ಶಿ ಪರಪ್ಪ ಖೇತಗೌಡರ, ಯಮನಪ್ಪ ಬಾಬಣ್ಣವರ, ಮಹಾವೀರ ಕುರಾಡೆ, ವಿಜಯ ನಾಯಿಕ, ಮುತ್ತಪ್ಪ ಹಿಪ್ಪರಗಿ, ಲಕ್ಷ್ಮಣ ಗೋಕಾಕ, ಪ್ರಯೋಗಾಲಯದ ಮಾರ್ಗದರ್ಶಕರಾಗಿ ಆಗಮಿಸಿದ ವಿಜಯ ಕಾಂಬಳೆ, ಅರ್ಚನಾ ಅಮಾತೆ, ಸಂಸ್ಥೆಯ ವ್ಯವಸ್ಥಾಪಕ ಶ್ರೀಮಂತ ಆಳಂದ, ಶ್ರೀಶೈಲ ಕುಲಿಗೋಡ, ಮಹಾಂತೇಶ ಕುಲಿಗೋಡ, ಅಂಗ ಸಂಸ್ಥೆಗಳ ಮುಖ್ಯಸ್ಥ ಪ್ರಕಾಶ ಕಂಬಾರ, ಎಸ್.ಎಸ್. ಮಧಾಳೆ, ಸೇರಿದಂತೆ ರೈನಬೋ ಆಂಗ್ಲ ಮಾಧ್ಯಮ ಶಾಲೆಯ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು, ಪಾಲಕರು ಇದ್ದರು.

ಪ್ರಾಚಾರ್ಯ ವಿಜಯ ಮಗದುಮ್ಮ ಎಲ್ಲರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕಿ ಭುವನೇಶ್ವರಿ ಹಳ್ಳೆಪ್ಪಗೋಳ ನಿರೂಪಿಸಿ ವಂದಿಸಿದರು.



## ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮ ಯಶಸ್ವಿ

**ಗೋಕಾಕ:** ಭಾರತೀಯ ವೈದ್ಯಕೀಯ ಸಂಘ ಕರ್ನಾಟಕ ಶಾಖೆ, ಕನ್ನಡ ವೈದ್ಯ ಬರಹಗಾರರ ಸಮಿತಿ, ಭಾರತೀಯ ವೈದ್ಯಕೀಯ ಸಂಘ (ಐಎಮ್‌ಎ) ಗೋಕಾಕ ಇವರ ಸಂಯುಕ್ತ ಆಶ್ರಯದಲ್ಲಿ ಆರಂಭಿಕ 19ನೇ ಶತಮಾನದ ಬಿಜಾಪುರಿನ ಸಾಹಿತಿ, ಕನ್ನಡ ಮತ್ತು ಸಂಸ್ಕೃತ ಪಂಡಿತ ಶ್ರೀಬಸವರಾಜ ಶಾಸ್ತ್ರಿ ಕೋಡಿಕೊಪ್ಪಮಠ ಅವರ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.

ಅಧ್ಯಕ್ಷತೆ ಭಾರತೀಯ ವೈದ್ಯಕೀಯ ಸಂಘ ಧಾರವಾಡ ಶಾಖೆಯ ಅಧ್ಯಕ್ಷ ಡಾ.ಜಗದೀಶ ನೀರಡಿ ವಹಿಸಿದ್ದರು. ಭಾರತೀಯ ವೈದ್ಯಕೀಯ ಸಂಘ ಗೋಕಾಕ ಶಾಖೆಯ ಅಧ್ಯಕ್ಷ ಡಾ.ವಿಶ್ವನಾಥ ಸಿಂಧೋಳಿಮಠ ಅವರು ಸ್ವಾಗತ ಭಾಷಣ ಮಾಡಿದರು. ಖ್ಯಾತ ವೈದ್ಯರು, ಕನ್ನಡ ಬರಹಗಾರರು ಹಾಗೂ ಚಿಂತಕ ಡಾ.ಸಂಜೀವ ಕುಲಕರ್ಣಿ ಅವರು ಜೀವ ಜಗತ್ತಿನಲ್ಲಿ ಸಂತಾನೋತ್ಪತ್ತಿಯ ವಿಚಿತ್ರಗಳು ಎಂಬ ವಿಷಯದ ಕುರಿತು ಆಸಕ್ತಿದಾಯಕ ಹಾಗೂ ಜ್ಞಾನವರ್ಧಕ ಉಪನ್ಯಾಸ ನೀಡಿ ಸಭಿಕರ ಮೆಚ್ಚುಗೆಗೆ ಪಾತ್ರರಾದರು. ಪ್ರಕೃತಿಯಲ್ಲಿನ ಸಂತಾನೋತ್ಪತ್ತಿಯ ವೈವಿಧ್ಯತೆ ಮತ್ತು ವೈಶಿಷ್ಟ್ಯಗಳನ್ನು ಅವರು ಸರಳವಾಗಿ ವಿವರಿಸಿದರು.



ಈ ವೇಳೆ ಧಾರವಾಡದ ಹಿರಿಯ ಸಾಹಿತಿ ಹಾಗೂ ಶಿಕ್ಷಣತಜ್ಞ ಪ್ರೊ.ಡಾ.ಸಿ.ಆರ್.ಯರವಿನತಲೆಮಠ ಉಪಸ್ಥಿತರಿದ್ದು, ಉಪನ್ಯಾಸದ ವಿಷಯ ವಸ್ತು ಮತ್ತು ಕಾರ್ಯಕ್ರಮದ ಆಯೋಜನೆಯನ್ನು ಶ್ಲಾಘಿಸಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಡಾ.ಉಮಾ ಚಿಕ್ಕರೆಡ್ಡಿ ನಿರೂಪಿಸಿದರು. ದತ್ತಿ ದಾನಿಗಳು ಡಾ.ಜ್ಯೋತಿ ಎಸ್.ಘೋಂಗಡೆಮಠ, ಉದಾರ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸಲಾಯಿತು. ಈ ವೇಳೆ ವೈದ್ಯರು, ಸಾಹಿತ್ಯಾಸಕ್ತರು ಹಾಗೂ ಜೂಂ ಮೂಲಕ ಭಾಗವಹಿಸಿದ ಭಾವೈಸಂ ರಾಜ್ಯ ಶಾಖೆಯ ಪದಾಧಿಕಾರಿಗಳು, ಸಮಿತಿ ಅಧ್ಯಕ್ಷರು, ಅನೇಕರು ಉಪಸ್ಥಿತರಿದ್ದರು.

## ಕೋರೆಗೆ ಪದ್ಮಶ್ರೀ ಪ್ರಶಸ್ತಿ ಜಿಲ್ಲೆಗೆ ಹೆಮ್ಮೆ: ಮಹಾಂತೇಶ ಪಾಟೀಲ

**ಚಿಕ್ಕೋಡಿ:** ಆರೋಗ್ಯ, ಶಿಕ್ಷಣ, ಸಮಾಜಸೇವೆ ಹಾಗೂ ಸಹಕಾರಿ ಕ್ಷೇತ್ರದಲ್ಲಿ ಅತ್ಯುತ್ತಮ ಕಾರ್ಯನಿರ್ವಹಿಸಿದ ಕೆಎಲ್‌ಇ ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ಅವರು ಪದ್ಮಶ್ರೀ ಪ್ರಶಸ್ತಿ ಪುರಸ್ಕಾರ ಲಭಿಸಿದ್ದು, ಬೆಳಗಾವಿ ಜಿಲ್ಲೆಯ ಹಿರಿಮೆಯಾಗಿದೆ ಎಂದು ಅಂಕಲಿಯ ಡಾ.ಪ್ರಭಾಕರ ಕೋರೆ ಕೋ ಆಪ್ ಕ್ರೆಡಿಟ್ ಸೊಸೈಟಿಯ ಅಧ್ಯಕ್ಷ ಮಹಾಂತೇಶ ಪಾಟೀಲ ಹೆಮ್ಮೆ ಪಟ್ಟರು.

ತಾಲೂಕಿನ ಅಂಕಲಿ ಗ್ರಾಮದಲ್ಲಿ ಇತ್ತೀಚೆಗೆ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜ್ಯಸಭೆ ಮಾಜಿ ಸದಸ್ಯ ಪ್ರಭಾಕರ ಕೋರೆ, ಕೆಎಲ್‌ಇ ಅಧ್ಯಕ್ಷ ಅಮಿತ ಕೋರೆ ಹಾಗೂ ನಿರ್ದೇಶಕಿ ಪ್ರೀತಿ ದೊಡ್ಡವಾಡ ಅವರ ಪ್ರಯತ್ನದಿಂದ ಸೊಸೈಟಿಯು ಭಾರೀ ಪ್ರಮಾಣದಲ್ಲಿ ಬೆಳೆದಿದ್ದು, 2025–26ನೇ ಸಾಲಿನಲ್ಲಿ ಸೊಸೈಟಿಯು 4.64 ಕೋಟಿ ರೂ. ಬಂಡವಾಳ ಹೊಂದಿದ್ದು, 167.02 ಕೋಟಿ ರೂ. ಕಾಯ್ದಿಟ್ಟ ಹಾಗೂ ಇತರೆ ನಿಧಿಗಳನ್ನು ಹೊಂದಿದೆ. 1638 ಕೋಟಿ ರೂ. ಠೇವು ಸಂಗ್ರಹಿಸಿದ್ದು, 1202.02 ಕೋಟಿ ರೂ. ಸಾಲ ವಿತರಿಸಲಾಗಿದೆ ಎಂದರು. 572.85 ಕೋಟಿ ರೂ. ವಾಣಿಜ್ಯ ಮತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಗುಂತಾವಣೆಗಳನ್ನು, 146.55 ಕೋಟಿ ರೂ. ಶಿಲ್ಕು ಹೊಂದಲಾಗಿದೆ. 1809.67 ಕೋಟಿ ರೂ. ದುಡಿಯುವ ಬಂಡವಾಳ ಹೊಂದಿದ್ದು, 23248.92 ಕೋಟಿ ರೂ. ವಹಿವಾಟು ಹೊಂದಿದೆ. ಸೊಸೈಟಿಯ ಎಲ್ಲ ಸಿಬ್ಬಂದಿಗಳಿಗೆ ಶೇ.15ರಷ್ಟು ವೇತನ ಹೆಚ್ಚಳ, ಸೇವಾ ಮತ್ತು ಆರ್ಥಿಕ ಭದ್ರತೆ ಒದಗಿಸಲಾಗಿದೆ ಎಂದರು.



ಸುದ್ದಿಗೋಷ್ಠಿಯಲ್ಲಿ ಸಿ.ಬಿ.ಕೋರೆ ಸಹಕಾರಿ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಮಲ್ಲಿಕಾರ್ಜುನ ಕೋರೆ, ಉಪಾಧ್ಯಕ್ಷ ಸಿದಗೌಡ ಮಗದುಮ್ಮ, ನಿರ್ದೇಶಕ ಪಿಂಟು ಹಿರೇಕುರುಬರ, ಬಸನಗೌಡ ಆಸಂಗಿ, ಸುಕುಮಾರ ಚೌಗಲೆ, ಅಮಿತ ಜಾಧವ, ಪುಪ್ಪುಲ ಶೆಟ್ಟಿ, ಅಶೋಕ ಚೌಗಲಾ, ವ್ಯವಸ್ಥಾಪಕ ನಿರ್ದೇಶಕ ಡಿ.ಎಸ್. ಕರೋಶಿ ಇತರರು ಇದ್ದರು.

## ವಿದ್ಯುತ್ ಖಾಸಗೀಕರಣ: ಬೃಹತ್ ಪ್ರತಿಭಟನೆ ಜೂ.29ಕ್ಕೆ

**ಚನ್ನಮ್ಮನ ಕಿತ್ತೂರು:** ಸರ್ಕಾರವು ವಿದ್ಯುತ್‌ನ್ನು ಖಾಸಗೀಕರಣಗೊಳಿಸಲು ಹೊರಟಿರುವದನ್ನು ಖಂಡಿಸಿ ಜೂ.29ರಂದು ಕಿತೂರಿನಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ವಿವಿಧ ಸಂಘಟನೆಗಳು ಸೇರಿದಂತೆ ವಿದ್ಯುತ್ ಬಳಸುವ ಎಲ್ಲರೂ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಬೇಕೆಂದು ಕಿತ್ತೂರು ಕರ್ನಾಟಕ ರೈತ ಜಾಗೃತಿ ಸಂಘದ ರಾಜ್ಯಾಧ್ಯಕ್ಷ ಎಂ.ಎಫ್.ಜಕಾತಿ ಹೇಳಿದರು.

ಸ್ಥಳೀಯ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಷ್ಟ್ರೀಯ ಹೆದ್ದಾರೆ ಪಕ್ಕದ ಚನ್ನಮ್ಮಾಜಿ ವರ್ತುಳದಿಂದ ಬೆಳಗ್ಗೆ 10ಕ್ಕೆ ಎಲ್ಲರೂ ಸೇರಿ ಅಲ್ಲಿಂದ ಪ್ರತಿಭಟಿಸುತ್ತ ತಹಶೀಲ್ದಾರ್ ಕಚೇರಿಯವರೆಗೆ ಸಾಗಿ ಮನವಿ ಸಲ್ಲಿಸಲಿದ್ದೇವೆ. ವಿದ್ಯುತ್ ಖಾಸಗೀಕರಣವಾದರೆ ಎಲ್ಲರಿಗೂ ತೊಂದರೆಯಾಗುವದೆಂದು ಮಾಹಿತಿ ನೀಡಿದರು.ಕಿತ್ತೂರು ಕರ್ನಾಟಕ ರೈತ ಜಾಗೃತಿ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಅಪ್ಪೇಶ ದಳವಾಯಿ ಮಾತನಾಡಿ, ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಮತ್ತು ಸರ್ ಎಂ.ವಿಶ್ವೇಶ್ವರಯ್ಯನವರು ದೂರ ದೃಷ್ಟಿಯನ್ನು ಇಟ್ಟುಕೊಂಡು ಏಷ್ಯಾ ಖಂಡದಲ್ಲಿಯೇ ಪ್ರಥಮ ವಿದ್ಯುತ್ ಸ್ಥಾಪನಾ ಕೇಂದ್ರವನ್ನು ಶಿವನ ಸಮುದ್ರದಲ್ಲಿ ಪ್ರಾರಂಭವಾಗಿ ಅದು ರಾಜ್ಯಾದ್ಯಂತ ವ್ಯಾಪಿಸಿ ಐದು ವಿಭಾಗಗಳ ಮೂಲಕ ಜನತೆಗೆ ವಿದ್ಯುತ್‌ನ್ನು ಸರಬರಾಜು ಮಾಡುತ್ತ ಬಂದಿದ್ದು, ಈಗ ಅದನ್ನು ಖಾಸಗಿ ಕರಣ ಮಾಡುವದರಿಂದ ಎಲ್ಲ ವರ್ಗದವರಿಗೂ ತೊಂದರೆಯಾಗುವದು ಖಾಸಗೀರಣದ ಹೊಡೆತಕ್ಕೆ ನಮ್ಮ ಜನರು ತಡೆಯುವದಿಲ್ಲ, ಆದ್ದರಿಂದ ಸರ್ಕಾರವು ಈ ಖಾಸಗೀಕರಣದ ನೀತಿ ಕೈಬಿಡಬೇಕು ಇಲ್ಲದಿದ್ದರೆ ಮುಂದೆ ದೊಡ್ಡ ಪ್ರತಿಭಟನೆ ಮಾಡುತ್ತೇವೆಂದು ಎಚ್ಚರಿಕೆ ನೀಡಿದರು.ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಪ್ರವೀಣ ಸರದಾರ ಮಾತನಾಡಿ, ವಿದ್ಯುತ್ ಖಾಸಗೀರಣವಾದರೆ ರಾಜ್ಯದ ಎಲ್ಲ ಜನರು ಮೊಬೈಲ್ ರಿಚಾರ್ಜ್ ಮಾದರಿಯಲ್ಲಿ ಸ್ಮಾರ್ಟ ಕಾರ್ಡ್‌ಗಳ ಮೂಲಕ ವಿದ್ಯುತ್ ಪಡೆಯಬೇಕಾಗುತ್ತದೆ. ನಾವು ಕರೆದಿರುವ ಪ್ರತಿಭಟನೆಗೆ ಎಲ್ಲರೂ ಆಗಮಿಸಬೇಕೆಂದು ತಿಳಿಸಿದರು.

ರೈತ ಮುಖಂಡರಾದ ಮಡಿವಾಳಪ್ಪ ದೇವರಮನಿ, ವಿಜಯಕುಮಾರ ಶಿಂಧೆ, ಜಿ.ಎಸ್.ಹಿರೇಮಠ, ಸತೀಶ ಲಂಗೋಟಿ, ಮಂಜು ಸರದಾರ ಮುಂತಾದವರು ಉಪಸ್ಥಿತರಿದ್ದರು.



## ಪದಾಧಿಕಾರಿಗಳ ಪದಗ್ರಹಣ ಜೂ28ರಂದು





**ಗೋಕಾಕ:** ನಗರದ ರೋಟರಿ ಮತ್ತು ಇನ್ನರ್ ವೀಲ್ ಸಂಸ್ಥೆಗಳ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವು ದಿ.28ರಂದು ಮುಂಜಾನೆ 10ಕ್ಕೆ ನಗರದ ಡಾ.ಬಿ.ಸಿ.ಅಜರಿ ಮೆಮೋರಿಯಲ್ ರೋಟರಿ ರಕ್ತ ಭಂಡಾರ ಸಭಾ ಭವನದಲ್ಲಿ ಜರುಗಲಿದೆ.

ರೋಟರಿ ನೂತನ ಅಧ್ಯಕ್ಷರಾಗಿ ಪ್ರಕಾಶ ವರದಾಯಿ, ಕಾರ್ಯದರ್ಶಿಯಾಗಿ ಪ್ರಸಾದ ಸೊಲಾಪೂರಮಠ, ಖಜಾಂಚಿಯಾಗಿ ಚಂದ್ರಶೇಖರ ಕಡೆವಾಡಿ ಹಾಗೂ ಇನ್ನರ್ ವೀಲ್ ಅಧ್ಯಕ್ಷರಾಗಿ ಅನಸೂಯಾ ಧುಳಾಯಿ, ಕಾರ್ಯದರ್ಶಿಯಾಗಿ ವಿದ್ಯಾ ಮಗದುಮ, ಖಜಾಂಚಿಯಾಗಿ ರಾಜೇಶ್ವರಿ ಕಲ್ಲೋಳಿ ಆಯ್ಕೆಯಾಗಿದ್ದಾರೆ.

ಮುನ್ನವಳ್ಳಿಯ ಮುರುಘರಾಜೇಂದ್ರ ಶ್ರೀಗಳಯ ಸಾನ್ನಿಧ್ಯವಹಿಸುವರು. ಹಸ್ತಾಂತರ ಅಧಿಕಾರಿಯಾಗಿ ಸತೀಶ ಧಾಮನಕರ ಹಾಗೂ ಸೋನಾಲ ಧಾಮನಕರ ಆಗಮಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ರೋಟರಿ ಸಹಾಯಕ ಪ್ರಾಂತಪಾಲ ರಾಜೇಂದ್ರ.ಎಸ್.ಪಾಟೀಲ ಉಪಸ್ಥಿತರಿರುವರು. ರೋಟರಿ ಪರಿವಾರ ಹಾಗೂ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವಂತೆ ಅಧ್ಯಕ್ಷ ಗಿರೀಶ ಝುಂವರ, ಕಾರ್ಯದರ್ಶಿ ಬಸವರಾಜ ಹುಳ್ಳೇರ ಪ್ರಕಟನೆಯಲ್ಲಿ ಕೋರಿದ್ದಾರೆ.

## ಅಂತಿಮ ವರ್ಷದ ತರಬೇತುದಾರರಿಗೆ ಬೀಳ್ಕೊಡುಗೆ

**ಮೂಡಲಗಿ :** ಚೈತನ್ಯ ಸೋಶಿಯಲ್ ವೇಲ್ವೇರ ಸೊಸೈಟಿ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಚೈತನ್ಯ ಐಟಿಐ, ಮೂಡಲಗಿಯಲ್ಲಿ ಅಂತಿಮ ವರ್ಷದ ತರಬೇತಿದಾರರಿಗೆ ಬೀಳ್ಕೊಡುವ ಸಮಾರಂಭವು ಗುರುವಾರ ಅರ್ಥಪೂರ್ಣವಾಗಿ ನಡೆಯಿತು.

ಸಮಾರಂಭದ ಪ್ರಾಸ್ತಾವಿಕ ಭಾಷಣದಲ್ಲಿ ಚೈತನ್ಯ ಐಟಿಐ ಪ್ರಾಚಾರ್ಯ ಎಸ್.ಬಿ.ಕುಳ್ಳೋಳಿ ಅವರು ಸಂಸ್ಥೆಯ ಸಾಧನೆಗಳನ್ನು ವಿವರಿಸಿದರು.ರಾಯಬಾಗ ಪಾಲಿಟೆಕ್ನಿಕ್ ಕಾಲೇಜಿನ ಮೆಕ್ಯಾನಿಕ ವಿಭಾಗದ ಮುಖ್ಯಸ್ಥ ಎಸ್.ಎಸ್.ನಿಡಗುಂದಿ ಅವರನ್ನು ಸಂಸ್ಥೆಯವತಿಯಿಂದ ಸನ್ಮಾನಿಸಲಾಯಿತು. ಅಧ್ಯಕ್ಷತೆ ವಹಿಸಿದ್ದ ಎಸ್.ಎಂ.ಕಮದಾಳ ಮಾತನಾಡಿ, ವೃತ್ತಿ ಪರಶಿಕ್ಷಣವು ಯುವಕರಿಗೆ ಸ್ವಾವಲಂಬಿ ಬದುಕಿನ ದಾರಿಯನ್ನು ತೋರಿಸುತ್ತದೆ. ತರಬೇತಿದಾರರು ತಮ್ಮ ಕೌಶಲ್ಯವನ್ನು ಸಮಾಜದ ಅಭಿವೃದ್ಧಿಗೆ ಬಳಸಿಕೊಳ್ಳಬೇಕು ಎಂದು ಹೇಳಿದರು.

ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ಇಲೆಕ್ಟ್ರಿಷಿಯನ್ ವಿಭಾಗದ ಆದಿತ್ಯ ಪೂಜೇರಿ ಸೇರಿದಂತೆ ಫಿಟ್ಟರ ವಿಭಾಗದ ಶಿವರಾಜ ಬಡಿಗೇರ, ಮೋಟಾರ್‌ಮೆಕ್ಯಾನಿಕಲ್ ವಿಭಾಗದ ಮನೋಜ ಬಡಿಗೇರ ಹಾಗೂ ಸಂಸ್ಥೆಯ ಹಳೆ ವಿದ್ಯಾರ್ಥಿ ಮತ್ತು ಯಶಸ್ವಿ ಸ್ವಾವಲಂಬಿ ಉದ್ಯೋಗಿಯಾಗಿರುವ ಉಮೇಶ ಹಡಗಿನಾಳ ಅವರನ್ನು ಪ್ರಮಾಣಪತ್ರ ನೀಡಿ ಗೌರವಿಸಲಾಯಿತು.

ಹಿರಿಯ ವಿಭಾಗದಲ್ಲಿ ಅಭಿಷೇಕ ಶಿವಾಪೂರ, ಲಕ್ಷ್ಮಣ ಪಾಗದ ಹಾಗೂ ಗಂಗಾರಾಮ ಗದಗೈಗೋಳ ಆಯ್ಕೆಯಾಗಿದ್ದರೆ. ಕಿರಿಯ ವಿಭಾಗದಲ್ಲಿ ಸೃಜನ ಮುಸಳಿ, ಶ್ರೀಶೈಲ ಕಂಕಣವಾಡಿ ಹಾಗೂ ಸುಶಾಂತ ಅರಭಾವಿ ಪ್ರಶಸ್ತಿ ಪಡೆದರು.ಮುಕ್ತಾ ಕಿಣಗಿ ಪ್ರಾರ್ಥಿನಿಸಿದರು. ದಿವಂಗತ ಶಿಕ್ಷಣ ಪ್ರೇಮಿ, ಚೈತನ್ಯ ಸಮೂಹ ಸಂಸ್ಥೆಗಳ ಸಂಸ್ಥಾಪಕ ಸಿದ್ದಣ್ಣ ಎಸ್.ಹೊರಟ್ಟಿ ಭಾವಚಿತ್ರಕ್ಕೆ ಗಣ್ಯರು ದೀಪ ಬೆಳಗಿಸಿ ಗೌರವ ಸಲ್ಲಿಸಿದರು.



ಸಂಸ್ಥೆ ಅಧ್ಯಕ್ಷ ಉದಯಕುಮಾರ ಆರ್.ಜೋಕಿ, ಚೈತನ್ಯ ಅರ್ಬನ್ ಬ್ಯಾಂಕ್ ಅಧ್ಯಕ್ಷರು, ರಾಜ್ಯ ಸಹಕಾರ ಸಂಘ ಮಹಾಮಂಡಳದ ಸದಸ್ಯ ತಮ್ಮಣ್ಣ ಬಿ.ಕೆಂಚರಡ್ಡಿ, ಸಂಸ್ಥೆಯ ಉಪಾಧ್ಯಕ್ಷ ವಿಜಯ ಎಸ್.ಹೊರಟ್ಟಿ, ತಾಲೂಕಾ ಶಿಕ್ಷಕರ ಸಹಕಾರ ಸಂಘದ ಅಧ್ಯಕ್ಷ ವೈ.ಬಿ.ಪಾಟೀಲ ಸೇರಿದಂತೆ ಆಡಳಿತ ಮಂಡಳಿ ಸದಸ್ಯರು, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.ಟಿ.ಆರ್.ಝಾರೆ.ಶಿವಾನಂದ ಪೂಜೇರಿ ಹಾಗೂ ದೀಪಾ ಕಲ್ಯಾಣಿ ನಿರೂಪಿಸಿದರು.ಆರ್.ವೈ.ನಾಯಿಕ ಸ್ವಾಗತಿಸಿದರು. ಜಿತೇಂದ್ರ ಎಸ್.ಸಮಾಜೆ ವಂದಿಸಿದರು.

## ಕಿರುಸುದ್ದಿ

### ಬಿಎಸ್‌ಎನ್‌ಎಲ್ ಟೆಲಿಕಾಂ ಸಲಹಾ ಸಮಿತಿ ಸಭೆ

**ಬೆಳಗಾವಿ:** ಟೆಲಿಕಾಂ ಸಲಹಾ ಸಮಿತಿ ಸಭೆಯನ್ನು ಲೋಕಸಭಾ ಸಂಸದ ಜಗದೀಶ್ ಶೆಟ್ಟರ್ ಅವರ ಅಧ್ಯಕ್ಷತೆಯಲ್ಲಿಗುರುವಾರ ನಗರದ ಸನ್ಮಾನ್ ಹೋಟೆಲ್‌ನಲ್ಲಿ ನಡೆಯಿತು.ಹೊಸದಾಗಿ 4ಜಿ ಟವರ್‌ಗಳನ್ನು ಸ್ಥಾಪಿಸುವ ಮೂಲಕ ವ್ಯಾಪ್ತಿಯನ್ನು ಸುಧಾರಿಸುವ ಕುರಿತು ಚರ್ಚಿಸಲಾಗುವುದು. ಸದಸ್ಯರ ಎಲ್ಲ ಸಲಹೆಗಳನ್ನು ಗಮನಿಸಿ ಜಿಲ್ಲೆಯಲ್ಲಿ ಮೊಬೈಲ್ ಸೇವೆಗಳ ಸುಧಾರಣೆಗಾಗಿ ನವದೆಹಲಿಯ ಸಂವಹನ ಸಚಿವರೊಂದಿಗೆ ಚರ್ಚಿಸಿ, ಸಮಸ್ಯೆಗಳನ್ನು ಪರಿಹರಿಸಲಾಗುವುದು ಎಂದು ಸಂಸದ ಜಗದೀಶ್ ಶೆಟ್ಟರ್ ಭರವಸೆ ನೀಡಿದರು.

ಬಿಎಸ್‌ಎನ್‌ಎಲ್ ಪ್ರಧಾನ ವ್ಯವಸ್ಥಾಪಕ ವಿಕಾಸ್ ಜಯ್ಕರ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ವಿವರಿಸಿದರು. ಹೊಸ ಅಭಿವೃದ್ಧಿ ಮತ್ತು ಸೇವೆಗಳಲ್ಲಿ ಸುಧಾರಣೆಗಾಗಿ ಕುರಿತು ಸದಸ್ಯರಿಗೆ ತಿಳಿಸಿದರು. ಸಭೆಯಲ್ಲಿ ಡಿಜಿಎಂ ಗಳಾದ ಜಿ.ದೇವೇಂದ್ರನ್, ಅರುಣ್ ವೈ ಉಗರ್ಗೋಳ ಮತ್ತು ಮಹಾದೇವ್ ಎಸ್.ಪಾಟೀಲ ಹಾಗೂ 22 ಟೆಲಿಕಾಂ ಸಲಹಾ ಸಮಿತಿ ಸದಸ್ಯರು ಭಾಗವಹಿಸಿದ್ದರು.

### ಮತದಾರರ ಪಟ್ಟಿ ಪರಿಶೀಲನೆ ಜೂ.30ರಿಂದ

**ಕುಡಚಿ:** ಭಾರತ ಚುನಾವಣಾ ಆಯೋಗದ ಆದೇಶದಂತೆ (ECI/PN/086/202, ದಿನಾಂಕ: 14.05.2026), ಕುಡಚಿ ಕ್ಷೇತ್ರದಲ್ಲಿ ಒಟ್ಟು 2,04,777 ಮತದಾರರು ದಾಖಲಾಗಿದ್ದು, ಮತದಾರರ ಪ್ರಮಾಣವು ಸುಮಾರು 95.21% ಆಗಿದೆ ಎಂದು ತಿಳಿಸಲಾಗಿದೆ.

ಮತದಾರರ ಪಟ್ಟಿಯ ಪರಿಶೀಲನೆ, ತಿದ್ದುಪಡಿ ಹಾಗೂ ಹೊಸ ಹೆಸರು ಸೇರಿಸುವ ಕಾರ್ಯಗಳನ್ನು ಸಾರ್ವಜನಿಕರಿಗೆ ಸುಲಭವಾಗುವಂತೆ ನಿಗದಿತ ಅವಧಿಯಲ್ಲಿ ನಡೆಸಲಾಗುತ್ತಿದ್ದು, ಜೂ.30ರಿಂದ ಜು.29ರವರೆಗೆ ಅರ್ಜಿ ಸ್ವೀಕರಿಸಲಾಗುತ್ತದೆ. ಸಾರ್ವಜನಿಕರು ತಮ್ಮ ಹೆಸರುಗಳನ್ನು ಪರಿಶೀಲಿಸಿ, ತಪ್ಪಿದ್ದರೆ ತಿದ್ದುಪಡಿ ಮಾಡಿಸಿಕೊಳ್ಳಲು ಅಥವಾ ಹೊಸದಾಗಿ ನೋಂದಾಯಿಸಿಕೊಳ್ಳಲು ಸಂಬಂಧಪಟ್ಟ ಬಿಎಲ್‌ಒ ಅಥವಾ ಅಧಿಕಾರಿಗಳನ್ನು ಸಂಪರ್ಕಿಸಲು ಸೂಚಿಸಲಾಗಿದೆ. ಇದಲ್ಲದೆ, ಅರ್ಹ ಮತದಾರರು ತಮ್ಮ ಮತದಾನದ ಹಕ್ಕನ್ನು ಬಳಸಿಕೊಳ್ಳುವಂತೆ ಹಾಗೂ ಯಾವುದೇ ತಪ್ಪುಗಳಿದ್ದರೆ ಅವುಗಳನ್ನು ಸರಿಪಡಿಸಿಕೊಳ್ಳುವಂತೆ ಚುನಾವಣಾ ನೋಂದಣಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಎನ್‌ಸಿಇಆರ್‌ಟಿ ಕನ್ನಡ ಪಠ್ಯಪುಸ್ತಕ ಹಿಂಪಡೆಯಲು ಆಗ್ರಹ

**ಬೆಳಗಾವಿ:** ಎನ್‌ಸಿಇಆರ್‌ಟಿ ಬಿಡುಗಡೆ ಮಾಡಿರುವ ಸಿಬಿಎಸ್‌ಇ 6ನೇ ತರಗತಿಯ ಕನ್ನಡ ಪಠ್ಯಪುಸ್ತಕ ಕೃಷ್ಣ ಕನ್ನಡದ ವೈಚಾರಿಕ ಪರಂಪರೆ ಹಾಗೂ ಸಾಂಸ್ಕೃತಿಕ ಅಸ್ಮಿತೆಗೆ ಧಕ್ಕೆ ಉಂಟುಮಾಡುವಂತಿದ್ದು, ಅದನ್ನು ತಕ್ಷಣ ಹಿಂಪಡೆಯಬೇಕೆಂದು ಎಐಡಿಎಸ್‌ಒ (ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟೂಡೆಂಟ್ಸ್ ಆರ್ಗನೈಸೇಶನ್) ಆಗ್ರಹಿಸಿದೆ.

ಈ ಕುರಿತು ಪ್ರಕಟಣೆ ನೀಡಿರುವ ಎಐಡಿಎಸ್‌ಒ ಜಿಲ್ಲಾ ಸಂಚಾಲಕ ಮಹಾಂತೇಶ ಬಿಳೂರ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ ಪ್ರಕಟಿಸಿರುವ ಪಠ್ಯಪುಸ್ತಕಗಳಿದ್ದರೂ ಅವುಗಳನ್ನು ಕಡೆಗಣಿಸಿ ಎನ್‌ಸಿಇಆರ್‌ಟಿ ಹೊಸ ಪುಸ್ತಕವನ್ನು ಹೇರುವುದು ಕನ್ನಡದ ಅಸ್ಮಿತೆಗೆ ಅಪಚಾರವಾಗಿದೆ ಎಂದು ಆರೋಪಿಸಿದರು. ಈ ಪಠ್ಯಪುಸ್ತಕದ ತಯಾರಿಯಲ್ಲಿ ರಾಜ್ಯದ ಶಿಕ್ಷಣ ತಜ್ಞರು ಹಾಗೂ ಚಿಂತಕರೊಂದಿಗೆ ಸಮಾಲೋಚನೆ ನಡೆಸದಿರುವುದು ಅಪ್ರಜಾತಾಂತ್ರಿಕ ಮತ್ತು ದಮನಕಾರಿ ನಡೆ ಎಂದು ಟೀಕಿಸಿದರು.

ಅಲ್ಲದೆ, ಪುಸ್ತಕದಲ್ಲಿನ ಸಮತೋಲನ ಆಹಾರ ಪಾಠದಲ್ಲಿ ಮೀನು ಮತ್ತು ಮಾಂಸದಂತಹ ಆಹಾರ ಪದಾರ್ಥಗಳ ಉಲ್ಲೇಖವನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟು ಕೇವಲ ಸಸ್ಯಾಹಾರವನ್ನು ಮಾತ್ರ ಪ್ರಸ್ತಾಪಿಸಲಾಗಿದೆ ಎಂದು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕನ್ನಡದ ಶ್ರೀಮಂತ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆ ಪರಿಚಯ ಈ ಪಠ್ಯಪುಸ್ತಕದಲ್ಲಿ ಕಾಣಿಸದಿರುವುದು ವಿಷಾದನೀಯ ಸಂಗತಿಯಾಗಿದೆ ಎಂದು ಹೇಳಿರುವ ಅವರು, ರಾಜ್ಯದ ಆಚಾರ-ವಿಚಾರ, ಸಾಹಿತ್ಯ ಹಾಗೂ ಸಂಸ್ಕೃತಿಯನ್ನು ಒಳಗೊಂಡ ಪಠ್ಯಪುಸ್ತಕವನ್ನು ಸಿದ್ಧಪಡಿಸಿ ವಿದ್ಯಾರ್ಥಿಗಳಿಗೆ ಒದಗಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

## ನಿಧನಸುದ್ದಿ

### ಬಾಬುರಾವ್ ಹಂಪಣ್ಣವರ

**ಸವದತ್ತಿ:** ಸ್ಥಳೀಯ ಗಣ್ಯ ಬಾಬುರಾವ್ ಸಿದ್ದೇಶ್ವರ ಹಂಪಣ್ಣವರ(74) ನಿಧನರಾದರು.



ಮೃತರಿಗೆ ಓರ್ವ ಪುತ್ರ, ಓರ್ವ ಪುತ್ರಿ, ಪತ್ನಿ ಹಾಗೂ ಅಪಾರ ಬಂಧು ಬಳಗ ಇದ್ದರು. ಮೃತರ ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 3ಕ್ಕೆ ಕರಿಕಟ್ಟಿ ರಸ್ತೆ ಪಕ್ಕದಲ್ಲಿರುವ ಫಾರ್ಮ್ ಹೌಸ್ ಹತ್ತಿರ ನೆರವೇರಲಿದೆ.




ಬೆಳಗಾವಿ: ಟೆಲಿಕಾಂ ಸಲಹಾ ಸಮಿತಿ ಸಭೆಯನ್ನು ಲೋಕಸಭಾ ಸಂಸದ ಜಗದೀಶ್ ಶೆಟ್ಟರ್ ಅವರ ಅಧ್ಯಕ್ಷತೆಯಲ್ಲಿಗುರುವಾರ ನಗರದ ಸನ್ಮಾನ್ ಹೋಟೆಲ್‌ನಲ್ಲಿ ನಡೆಯಿತು. ಸಭೆಯಲ್ಲಿ ಡಿಜಿಎಂ ಗಳಾದ ಜಿ.ದೇವೇಂದ್ರನ್, ಅರುಣ್ ವೈ ಉಗರ್ಗೋಳ ಮತ್ತು ಮಹಾದೇವ್ ಎಸ್.ಪಾಟೀಲ ಹಾಗೂ 22 ಟೆಲಿಕಾಂ ಸಲಹಾ ಸಮಿತಿ ಸದಸ್ಯರು ಭಾಗವಹಿಸಿದ್ದರು.

### ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಜು.2ರಂದು

**ಬೆಳಗಾವಿ:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಬೆಳಗಾವಿ ಇವರ ಸಯುಂಕ್ತ ಆಶ್ರಯದಲ್ಲಿ ವಚನ ಪಿತಾಮಹ ಡಾ.ಫ. ಗು. ಹಳಕಟ್ಟಿ ಜನ್ಮದಿನ, ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ ಕಾರ್ಯಕ್ರಮವನ್ನು ಜುಲೈ 2 ಬೆಳಗ್ಗೆ 11ಕ್ಕೆ ನಗರದ ಕುಮಾರ ಗಂಧರ್ವ ರಂಗ ಮಂದಿರದಲ್ಲಿ ಆಯೋಜಿಸಲಾಗಿದೆ.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಬೆಳಗಾವಿ ನಾಗನೂರು ರುದ್ರಾಕ್ಷಿಮಠದ ಡಾ.ಅಲ್ಲಮಪ್ರಭು ಸ್ವಾಮಿಗಳು ದಿವ್ಯ ಸಾನ್ನಿಧ್ಯ ವಹಿಸುವರು.

ಶಾಸಕ ಆಸೀಫ್ ಸೇಠ್ ಅಧ್ಯಕ್ಷತೆ ವಹಿಸಲಿದ್ದು, ಬೆಳಗಾವಿ ಬೀಮ್ಸ್ ಆಸ್ಪತ್ರೆಯ ವೈದ್ಯಾಧಿಕಾರಿ ಡಾ.ಭವ್ಯ ಅಶೋಕ ಸಂಪಗಾರ ವಿಶೇಷ ಉಪನ್ಯಾಸ ನೀಡಲಿದ್ದಾರೆ.

ಸರ್ಕಾರಿ ಮುಖ್ಯ ಸಚೇತಕ ಅಶೋಕ ಪಟ್ಟಣ, ಕರ್ನಾಟಕ ಸರ್ಕಾರದ ಮಾನ್ಯ ವಿಶೇಷ ಪ್ರತಿನಿಧಿ-2 ನವದೆಹಲಿ ಪ್ರಕಾಶ ಹುಕ್ಕೇರಿ, ವಾಯುವ್ಯ ಸಾರಿಗೆ ನಿಗಮ ನಿಯಮಿತ ಅಧ್ಯಕ್ಷ ಭರಮಗೌಡ ಕಾಗೆ, ಹಣಕಾಸು ಸಂಸ್ಥೆ ಅಧ್ಯಕ್ಷ ಮಹಾಂತೇಶ ಕೌಜಲಗಿ, ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ ಅಧ್ಯಕ್ಷ ಭರಮಣ್ಣ ಉಪ್ಪಾರ ಭಾಗವಹಿಸುವರು.

ಸಂಸದರಾದ ಈರಣ್ಣ ಕಡಾಡಿ, ಪ್ರಿಯಾಂಕಾ ಜಾರಕಿಹೊಳಿ, ಜಗದೀಶ್ ಶೆಟ್ಟರ, ವಿಶ್ವೇಶ್ವರ ಹೆಗಡೆ ಕಾಗೇರಿ ಗೌರವಾನ್ವಿತ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಜಿಲ್ಲೆಯ ಎಲ್ಲ ಸಂಸದರು, ಶಾಸಕರು, ಪರಿಷತ್ ಸದಸ್ಯರು, ಜನಪ್ರತಿಧಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ.



ಮುಗಳಖೋಡ: ಪಟ್ಟಣದ ಶ್ರೀ ಚವಿವ ಸಂಘದ ರೈನಬೋ ಸೆಂಟ್ರಲ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹೊಸದಾಗಿ ಪ್ರಾರಂಭಗೊಂಡ ಪ್ರಯೋಗಾಲಯ ಸಾಹಿತಿ ವಿ.ಎಸ್. ಮಾಳಿ ಉದ್ಘಾಟಿಸಿದರು.

ಶೆಟ್ಟರ ಭರವಸೆ | ಕಾಂಟೋನ್ಮೆಂಟ್ ಮಂಡಳಿಯಿಂದ ಸಕಾರಾತ್ಮಕ ಸ್ಪಂದನೆ

## ಭವ್ಯ ಹಾಕಿ ಮೈದಾನ ನಿರ್ಮಾಣಕ್ಕೆ ವೇಗ

**ಬೆಳಗಾವಿ:** ಹಾಕಿಯ ಪವಿತ್ರ ನೆಲೆ ಎಂದೇ ಖ್ಯಾತಿ ಪಡೆದಿರುವ ಬೆಳಗಾವಿಯಲ್ಲಿ ಮತ್ತೊಮ್ಮೆ ಕ್ರೀಡಾ ಚಟುವಟಿಕೆಗಳಿಗೆ ಹೊಸ ಚೈತನ್ಯ ತುಂಬುವ ಮಹತ್ವದ ಬೆಳವಣಿಗೆ ನಡೆದಿದ್ದು, ಕೇಂದ್ರ ಸರ್ಕಾರದ 'ಖೇಲೋ ಇಂಡಿಯಾ' ಯೋಜನೆಯಡಿ ಭವ್ಯ ಹಾಗೂ ಆಧುನಿಕ ಸೌಲಭ್ಯಗಳನ್ನು ಒಳಗೊಂಡ ಹಾಕಿ ಮೈದಾನ ನಿರ್ಮಾಣಕ್ಕೆ ಸಕಾರಾತ್ಮಕ ಹೆಜ್ಜೆ ಇಡಲಾಗಿದೆ.

ಬೆಳಗಾವಿಯ ಕ್ರೀಡಾ ಪರಂಪರೆಯನ್ನು ಪುನರುಜ್ಜೀವನಗೊಳಿಸುವ ಉದ್ದೇಶದಿಂದ 'ಹಾಕಿ ಬೆಳಗಾವಿ' ಸಂಘಟನೆ ಪದಾಧಿಕಾರಿಗಳು ಸಕಲ ಮರಾಠಾ ಸಮಾಜದ ಮುಖಂಡ ಹಾಗೂ ಬಿಜೆಪಿ ಹಿರಿಯ ನಾಯಕ ಕಿರಣ್ ಜಾಧವ ಅವರ ನೇತೃತ್ವದಲ್ಲಿ ಬೆಳಗಾವಿ ಸಂಸದ ಜಗದೀಶ ಶೆಟ್ಟರ ಹಾಗೂ ಕ್ಯಾಂಟೋನ್ಮೆಂಟ್ ಮಂಡಳಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುದಾಮ್ ಮಂಚನವಾರ್ ಅವರನ್ನು ಭೇಟಿ ಮಾಡಿ ಮಹತ್ವದ ಚರ್ಚೆ ನಡೆಸಿದರು.

ಸಭೆಯಲ್ಲಿ ಬೆಳಗಾವಿಯ ಹಾಕಿ ಕ್ರೀಡೆಯ ಇತಿಹಾಸ, ನಗರದ ಕ್ರೀಡಾಪಟುಗಳು ಎದುರಿಸುತ್ತಿರುವ ಮೂಲಸೌಕರ್ಯ ಕೊರತೆ ಹಾಗೂ ಆಧುನಿಕ ಮೈದಾನದ ಅಗತ್ಯತೆಯ ಕುರಿತು ವಿವರವಾಗಿ ಚರ್ಚೆ ನಡೆಯಿತು.

ಬೆಳಗಾವಿ ದೇಶದ ವಿವಿಧ ಭಾಗಗಳಿಗೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಹಾಕಿ ಆಟಗಾರರನ್ನು ನೀಡಿರುವ ಹೆಗ್ಗಳಿಕೆ ಹೊಂದಿದ್ದು, ಇಲ್ಲಿನ ಕ್ರೀಡಾ ಪರಂಪರೆ ಉಳಿಸಿ ಬೆಳೆಸಲು ಗುಣಮಟ್ಟದ ಮೈದಾನದ ಅವಶ್ಯಕತೆ ಇದೆ ಎಂದು ಪದಾಧಿಕಾರಿಗಳು ಮನವರಿಕೆ ಮಾಡಿಕೊಟ್ಟರು.

ಸಂಸದ ಜಗದೀರ ಶೆಟ್ಟರ ಮಾತನಾಡಿ, ಬೆಳಗಾವಿಯಲ್ಲಿ ಭವ್ಯವಾದ ಹಾಕಿ ಮೈದಾನ ನಿರ್ಮಾಣಕ್ಕೆ ಅಗತ್ಯವಿರುವ ಎಲ್ಲ ಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದರು. ಕೇಂದ್ರ ಸರ್ಕಾರದ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ಮಹತ್ವಾಕಾಂಕ್ಷಿ 'ಖೇಲೋ ಇಂಡಿಯಾ' ಯೋಜನೆಯಡಿ ವಿಶೇಷ ಅನುದಾನ ಮತ್ತು ಅನುಮೋದನೆ ಪಡೆಯಲು ಪ್ರಸ್ತಾವನೆ ಸಲ್ಲಿಸಲಾಗುವುದು ಎಂದರು.



ಹಲವು ವರ್ಷಗಳಿಂದ ಬೆಳಗಾವಿ ಹಾಕಿ ಕ್ರೀಡಾಪಟುಗಳು ಸೂಕ್ತ ಮೈದಾನದ ಕೊರತೆ ಎದುರಿಸುತ್ತಿದ್ದಾರೆ. ಈ ಯೋಜನೆ ಸಾಕಾರಗೊಂಡರೆ ಯುವ ಪ್ರತಿಭೆಗಳಿಗೆ ಉತ್ತಮ ಅವಕಾಶಗಳು ದೊರೆಯಲಿದ್ದು, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳನ್ನು ಬೆಳೆಸಲು ಸಹಕಾರಿಯಾಗಲಿದೆ.

■ ಹಾಕಿ ಬೆಳಗಾವಿ ಸಂಘಟನೆ ಪ್ರತಿನಿಧಿಗಳು

ಕ್ಯಾಂಟೋನ್ಮೆಂಟ್ ಮಂಡಳಿಯ ಸಿಇಒ ಸುದಾಮ್ ಮಂಚನವಾರ್ ಅವರು ಸಹ ಈ ಯೋಜನೆಗೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು.

ಮೈದಾನ ನಿರ್ಮಾಣಕ್ಕೆ ಸಂಬಂಧಿಸಿದ ಪ್ರಸ್ತಾವನೆಯನ್ನು ತ್ವರಿತವಾಗಿ ಸಿದ್ಧಪಡಿಸಿ ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕಳುಹಿಸುವುದಾಗಿ ಅವರು ಭರವಸೆ ನೀಡಿದರು. ಯೋಜನೆಯ ತಾಂತ್ರಿಕ ಅಂಶಗಳ ನಿರ್ವಹಣೆಯ ಜವಾಬ್ದಾರಿಯನ್ನು ಕ್ಯಾಂಟೋನ್ಮೆಂಟ್ ಮಂಡಳಿಯ ಕಾರ್ಯಪಾಲಕ ಅಭಿಯಂತರ ಸತೀಶ್ ಮನೋಲ್ಕರ್ ಅವರಿಗೆ ವಹಿಸಲಾಗಿದೆ ಎಂದು ತಿಳಿಸಿದರು.

ಬಿಜೆಪಿ ನಾಯಕ ಹಾಗೂ ಸಕಲ ಮರಾಠಾ ಸಮಾಜದ ಮುಖಂಡ ಕಿರಣ್ ಜಾಧವ್, 'ಹಾಕಿ ಬೆಳಗಾವಿ' ಪದಾಧಿಕಾರಿಗಳಾದ ಗೋಪಾಲಪ್ಪ ಹೊಸಮನಿ, ಕಾರ್ಯದರ್ಶಿ ಸುಧಾಕರ್ ಚಾಳ್ಕೆ, ಪ್ರಕಾಶ್ ಬೆಳಗೋಜಿ, ಉತ್ತಮ್ ಶಿಂಧೆ, ನಾಮದೇವ್ ಸಾವಂತ್, ಸಾಗರ್ ಪಾಟೀಲ್, ಕವಿತಾ ವೇಸಣೆ ಸೇರಿದಂತೆ ಸಂಘಟನೆಯ ಅನೇಕ ಪದಾಧಿಕಾರಿಗಳು ಮತ್ತು ಕ್ರೀಡಾಭಿಮಾನಿಗಳು ಉಪಸ್ಥಿತರಿದ್ದರು.

ಬೆಳಗಾವಿಯ ಯುವ ಪ್ರತಿಭೆಗಳಿಗೆ ಪ್ರೇರಣೆಯ ಕೇಂದ್ರವಾಗಲಿದೆ ಎಂಬ ವಿಶ್ವಾಸವನ್ನು ಸಭೆಯಲ್ಲಿ ವ್ಯಕ್ತಪಡಿಸಲಾಯಿತು.

## ತರಬೇತಿ ಕಾರ್ಯಾಗಾರ ಯಶಸ್ವಿ

**ಬೆಳಗಾವಿ:** ರಾಜ್ಯ ಚುನಾವಣಾ ಆಯೋಗ, ಕರ್ನಾಟಕ, ಬೆಂಗಳೂರು, ಹಾಗೂ ಜಿಲ್ಲಾಚುನಾವಣಾಧಿಕಾರಿಗಳ ನಿರ್ದೇಶನದಂತೆ, 13-ಬೆಳಗಾವಿ ಗ್ರಾಮೀಣ ಮತಕ್ಷೇತ್ರದ ಸಂಬಂಧ ಮತದಾರರ ವಿಶೇಷ ಸಮಗ್ರ ಪರಿಷ್ಕರಣೆರ ಕುರಿತು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಣೆ ಮಾಡುವ ಪ್ರಯುಕ್ತ ಮತಗಟ್ಟೆ ಮಟ್ಟದ ಅಧಿಕಾರಿಗಳಿಗೆ ಇತ್ತೀಚಿಗೆ ಬೆನನ್ ಬೆಳಗಾವಿ ಸ್ಮಿತ ಡಿಗ್ರಿ ಕಾಲೇಜ್‌ನಲ್ಲಿ ಜರುಗಿತು.

ಅದೇ ರೀತಿಯಲ್ಲಿ ರಾಜಕೀಯ ಪಕ್ಷದಿಂದ ನೇಮಕಗೊಂಡ ಮತಗಟ್ಟೆ ಮಟ್ಟದ ಏಜೆಂಟರುಗಳಿಗೆ ಇತ್ತೀಚಿಗೆ ಕುಮಾರ ಗಂಧರ್ವ ರಂಗ ಮಂದಿರದಲ್ಲಿ ತರಬೇತಿಹಮ್ಮಿಕೊಳ್ಳಲಾಯಿತು ಎಂದು 13-ಬೆಳಗಾವಿ ಗ್ರಾಮೀಣ ಮತಕ್ಷೇತ್ರದ ಮತದಾರರ ನೋಂದಣಾಧಿಕಾರಿಗಳ ಸಿ.ಡಬ್ಲ್ಯು.ಶಕೀಲಅಹ್ಮದಹಾಗೂಸಹಾಯಕ ನೋಂದಣಾಧಿಕಾರಿ ತಹಶೀಲ್ದಾರ್ ಎಚ್. ಎನ್. ಶಿರಹಟ್ಟಿ ತಿಳಿಸಿದರು.

ಸದರಿ ಮತಕ್ಷೇತ್ರದ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ನಡೆಯುತ್ತಿದ್ದು, ಎಲ್ಲ ಸಹಭಾಗಿತ್ವ ಅತೀ ಮುಖ್ಯವಾಗಿರುತ್ತದೆ. ಎಲ್ಲ ರಾಜಕೀಯ ಮುಖಂಡರು, ಸಾರ್ವಜನಿಕರು ಮತದಾರರ ವಿಶೇಷಸಮಗ್ರ ಪರಿಷ್ಕರಣೆಯಲ್ಲಿ ಭಾಗಿಯಾಗಿ ಮತದಾನ ಪ್ರಮಾಣ ಹೆಚ್ಚಿಸಿ ಸದೃಢ ದೇಶದ ಬುನಾದಿಗೆ ಸಹಕರಿಸಬೇಕು ಅದಲ್ಲದೆ ಸಾರ್ವಜನಿಕರೊಂದಿಗೆ ಸೌಜನ್ಯಯುತವಾಗಿ ವರ್ತಿಸಿ ಮಾಹಿತಿ ಕಲೆ ಹಾಕಿ ಈ ಪರಿಷ್ಕರಣೆ ಕಾರ್ಯದ ಗುರಿ ಸಾಧಿಸಬೇಕೆಂದು ತರಬೇತುದಾರರು ತರಬೇತಿ ನೀಡಿದರು.

13-ಬೆಳಗಾವಿ ಗ್ರಾಮೀಣ ಮತಕ್ಷೇತ್ರದಲ್ಲಿ 2,68,282 ಮತದಾರರಿದ್ದು, ಅದರಲ್ಲಿ ಈಗಾಗಲೇ 2,58,103 ಮತದಾರರನ್ನು ಸಮಗ್ರ ಪರಿಷ್ಕರಣೆ ಮಾಡಲಾಗಿದ್ದು, ಇನ್ನೂ ಕೆಲ ಮತದಾರರನ್ನು ಪರಿಷ್ಕರಣೆ ಮಾಡಿದರೆ 100% ಪ್ರತಿಶದಷ್ಟು ಗುರಿ ಸಾಧಿಸಿದಂತಾಗುತ್ತದೆ. ಆ ಯಶಸ್ಸಿಗೆ ಎಲ್ಲರೂ ಕೈಜೋಡಿಸಬೇಕೆಂದು ಹೇಳಿದರು.

ಮಾಸ್ಟರ್ ಟ್ರೇನರ್ ಡಾ.ಎನ್ .ಬಿ.ಮರೇನ್ನವರ, ಕೆ.ಶ್ಯಾಮ್ ಪ್ರಸಾದ, ಕಾಶೀನಾಥ ಮೇಳೆದ, ಪುಂಡಲೀಕ ಮುಂಚಂಡಿಕರ, ಡಾ.ರಾಘವೇಂದ್ರ ಕೆ, ಎಂ.ಎನ್.ತಮುಚೆ, ಸಂತೋಷ ಮೇದಾರ, ಸಾಗರ ಹರಡೆ ಹಾಗೂ ಚುನಾವಣೆ ಶಾಖೆಯ ಶಿರಸ್ತೇದಾರ ಎಂ. ಪಾವಲಿ, ಅಶೋಕ ಕಬ್ಬಲಿಗೇರ ಹಾಗೂ ಕಲಿಮುಲ್ಲಾ ಸೇರಿದಂತೆ ಎಲ್ಲ ಬಿಎಲ್‌ಒ ಸೂಪರ್ ವೈಜರ್, ಬಿಎಲ್ ಒಗಳು, ಬಿಎಲ್‌ಎಗಳು ಉಪಸ್ಥಿತರಿದ್ದರು.



## ಮಾದಕ ವ್ಯಸನಕ್ಕೆ ಬಲಿಯಾಗದಿರಿ: ಬಡಿಗೇರ




**ಸುರೇಬಾನ:** ಯುವಜನರು ಮಾದಕ ವ್ಯಸನಕ್ಕೆ ಬಲಿಯಾಗದಂತೆ ಜಾಗೃತರಾಗಬೇಕೆಂದು ರಾಮದುರ್ಗ ಸಿಪಿಐ ವಿನಾಯಕ ಬಡಿಗೇರ ತಿಳಿಸಿದರು.

ಅವರು ಸ್ಥಳೀಯ ಪೊಲೀಸ್ ಠಾಣೆ ಹಾಗೂ ಶ್ರೀಫಲಾಹಾರೇಶ್ವರ ಶಿಕ್ಷಣ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಗುರುವಾರ ಸುರೇಬಾನ-ಮನಿಹಾಳ ಅವಳಿ ಗ್ರಾಮಗಳಲ್ಲಿ ಜಾಗೃತಿ ಜಾಥಾ, ಅರಿವು ಕಾರ್ಯಕ್ರಮದಲ್ಲಿ ಮಾತನಾಡಿ, ಮಾದಕ ವಸ್ತುಗಳ ಸೇವನೆಯು ವ್ಯಕ್ತಿ ಆರೋಗ್ಯದ ಮೇಲೆ, ಕುಟುಂಬ-ಸಮಾಜದ ಮೇಲೂ ಗಂಭೀರ ಪರಿಣಾಮ ಬೀರುತ್ತದೆ. ಇಂತಹ ದುಷ್ಪವೃತ್ತಿಗಳನ್ನು ತಡೆಯಲು ಪೊಲೀಸ್ ಇಲಾಖೆ ನಿರಂತರವಾಗಿ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳುತ್ತಿದೆ ಎಂದರು.

ಜಾಥಾಕ್ಕೆ ಸುರೇಬಾನ ಪೊಲೀಸ್ ಠಾಣೆ ಪಿಎಸ್‌ಐ ಗುರುರಾಜ ಕಲಬುರ್ಗಿ ಚಾಲನೆ ನೀಡಿದರು.

ವಿದ್ಯಾರ್ಥಿಗಳು, ಪೊಲೀಸ್ ಸಿಬ್ಬಂದಿ, ಕಂದಾಯ ಇಲಾಖೆ, ಗ್ರಾಮ ಪಂಚಾಯಿತಿ ಸಿಬ್ಬಂದಿ ಹಾಗೂ ವಿವಿಧ ಸಂಘಟನೆಗಳ ಸದಸ್ಯರು ಜಾಥಾದಲ್ಲಿ ಭಾಗವಹಿಸಿ ಘೋಷಣೆಗಳನ್ನು ಕೂಗುವ ಮೂಲಕ ಜನರಲ್ಲಿ ಜಾಗರತಿ ಮೂಡಿಸಿದರು.

ಜಾಥಾವು ಸುರೇಬಾನ-ಮನಿಹಾಳ ಅವಳಿ ಗ್ರಾಮಗಳ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ಆರೋಗ್ಯ, ಆರ್ಥಿಕ ಹಾಗೂ ಸಾಮಾಜಿಕ ದುಷ್ಪರಿಣಾಮಗಳ ಕುರಿತು ಸಾರ್ವಜನಿಕರಿಗೆ ಸಂದೇಶ ನೀಡಿತು.

ಶ್ರೀಫಲಾಹಾರೇಶ್ವರ ಶಿಕ್ಷಣ ಸಂಸ್ಥೆಯ ಪ್ರಾಚಾರ್ಯ ಡಿ.ಟಿ.ಹೊಸಮನಿ, ನಾಡಕಚೇರಿ ಉಪತಹಶೀಲ್ದಾರ್ ಶಿವಪ್ಪ ಮಡಿವಾಳರ, ಸುರೇಬಾನ ಪೊಲೀಸ್ ಠಾಣೆ ಎಎಸ್‌ಐ ಎಲ್ .ಟಿ. ಪವಾರ, ಎಸ್.ಯು. ಮೆಣಸಿನಕಾಯಿ, ಹವಾಲ್ದಾರ್ ರಮೇಶ ಚಿಕ್ಕಣ್ಣವರ, ಯು.ಎಂ. ಕೊಡ್ಲಿವಾಡ, ಆರ್.ಎನ್.ಗಾಣಿಗೇರ, ಬಿ.ಎಸ್. ಪತ್ತಾರ ಸೇರಿದಂತೆ ಪೊಲೀಸ್ ಸಿಬ್ಬಂದಿ, ಶಿಕ್ಷಕರುಗಳಾದ ಎಸ್.ಎಸ್.ಬೆಂಡಿಗೇರಿಮಠ, ಎಂ.ಜಿ.ಹಿರೇಮಠ, ಎ.ಪಿ.ಕಮ್ಮಾರ, ಬಿ.ಎಸ್. ಕುಲಕರ್ಣಿ, ಬಿ.ವಿ.ಪಾಟೀಲ, ವಾಯ್ .ವಿ.ಗೊರವನಕೊಳ್ಳ, ಎನ್.ಎಂ.ಎಲಿಗಾರ, ಎಂ.ಡಿ.ಮುಲ್ಲಾ, ಸೀಮಾ ವರ್ಣೇಕರ, ರಾಘವೇಂದ್ರ ಜೋರಾಪುರ, ವಿನೋದ ಡೊಂಬರ, ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

## ಖೇತ್ ಬಚಾವೋ ಅಭಿಯಾನ



ರಾಯಬಾಗ: ತಾಲೂಕಿನಲ್ಲಿ ಕೃಷಿ ಇಲಾಖೆ, ಕೃಷಿ ವಿಜ್ಞಾನ ಕೇಂದ್ರ ತುಕ್ಕಾನಟ್ಟಿ ಹಾಗೂ ಧಾರವಾಡ ಕೃಷಿ ವಿಶ್ವವಿದ್ಯಾಲಯದ ಸಂಯುಕ್ತ ಆಶ್ರಯದಲ್ಲಿ ಕೃಷಿ ತಂತ್ರಜ್ಞಾನ ನಿರ್ವಹಣಾ ಸಂಸ್ಥೆ (ಆತ್ಮಾ) ಯೋಜನೆಯಡಿ ಖೇತ್ ಬಚಾವೋ ಅಭಿಯಾನವನ್ನು ವಿವಿಧ ಗ್ರಾಮಗಳಲ್ಲಿ ಆಯೋಜಿಸಲಾಯಿತು.

ಕುಡಚಿ ಹೋಬಳಿಯ ಹಿಡಕಲ್, ಪಾಲಬಾವಿ, ರಾಯಬಾಗ ಹೋಬಳಿಯ ಬಾವನ ಸೌಂದತ್ತಿ, ನಂದಿಕುರಳಿ ಗ್ರಾಮಗಳಲ್ಲಿ ಖೇತ್ ಬಚಾವೋ ಅಭಿಯಾನವನ್ನು ಆಯೋಜಿಸಲಾಯಿತು.

ಈ ಕಾರ್ಯಕ್ರಮದಲ್ಲಿ ರೈತರಿಗೆ ಮಣ್ಣಿನ ಆರೋಗ್ಯ, ಮಣ್ಣಿನ ಫಲವತ್ತತೆ, ನೀರಿನ ಸಮರ್ಪಕ ಬಳಕೆ ಹಾಗೂ ಕಡಿಮೆ ಖರ್ಚಿನಲ್ಲಿ ಹೆಚ್ಚು ಇಳುವರಿ ಪಡೆಯುವ ತಂತ್ರಜ್ಞಾನಗಳ ಕುರಿತು ಸಮಗ್ರ ಮಾಹಿತಿ ನೀಡಲಾಯಿತು. ಕೃಷಿಯಲ್ಲಿ ಎದುರಾಗುತ್ತಿರುವ ವಿವಿಧ ಸಮಸ್ಯೆಗಳ ಕುರಿತು ರೈತರು ಚರ್ಚಿಸಿ ತಜ್ಞರಿಂದ ಸೂಕ್ತ ಸಲಹೆ ಹಾಗೂ ಮಾರ್ಗದರ್ಶನ ಪಡೆದರು.

ರಾಯಬಾಗ ಹೋಬಳಿಯ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರ ತುಕ್ಕಾನಟ್ಟಿಯ ತಜ್ಞರಾದ ಎನ್. ಆರ್.ಸಾಲಿಮಠ ರೈತರಿಗೆ ಮಣ್ಣಿನ ಆರೋಗ್ಯ, ಮಣ್ಣಿನ ಫಲವತ್ತತೆ, ನೀರಿನ ಸಮರ್ಪಕ ಬಳಕೆ ಹಾಗೂ ಕಡಿಮೆ ವೆಚ್ಚದಲ್ಲಿ ಹೆಚ್ಚು ಇಳುವರಿ ಪಡೆಯುವ ತಂತ್ರಜ್ಞಾನಗಳ ಕುರಿತು ಮಾಹಿತಿ ನೀಡಿದರು.

ಕುಡಚಿ ಹೋಬಳಿಯ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರ ತುಕ್ಕಾನಟ್ಟಿಯ ವಿಜ್ಞಾನಿ ಎಸ್.ಎಸ್.ಶರ್ಮಾ ಅವರು ಮಣ್ಣಿನ ಆರೋಗ್ಯ ಹಾಗೂ ಸಮಗ್ರ ಕೃಷಿ ಪದ್ಧತಿಗಳ ಕುರಿತು ಮಾಹಿತಿ ನೀಡಿದರು. ಸಹಾಯಕ ಕೃಷಿ ನಿರ್ದೇಶಕ ವಿನೋದ್ ಮಾವರಕರ್, ಕೃಷಿ ಅಧಿಕಾರಿ ರಘುನಾಥ ಪಾಟೀಲ, ಸಿಬ್ಬಂದಿಯಾದ ಎಸ್.ಕೆ.ಕುಂಬಾರ ಹಾಗೂ ಕೃಷಿ ಸಂಜೀವಿನಿ ತಂಡದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಾವಯವ ಕೃಷಿಕರಾದ ಕಲ್ಲಪ್ಪ ಮಾಳಿ ಹಾಗೂ ಪ್ರಗತಿಪರ ರೈತರು ತಮ್ಮ ಅನುಭವಗಳನ್ನು ಹಂಚಿಕೊಂಡರು.

## ಮಹಿಳೆಯರ ಆರ್ಥಿಕತೆಗೆ ಸಂಜೀವಿನಿ ಒಕ್ಕೂಟ ನೆರವು

**ಯರಗಟ್ಟಿ:** ಸಂಜೀವಿನಿ ಒಕ್ಕೂಟಗಳು ಮಹಿಳೆಯರನ್ನು ಆರ್ಥಿಕವಾಗಿ ಸಬಲರನ್ನಾಗಿ ಸುವಲ್ಲಿ ಯಶಸ್ವಿಯಾಗಿದ್ದು, ಮಹಿಳಾಸಬಲೀಕರಣ ಆಶಯ ಸಾಕಾರಗೊಳ್ಳುತ್ತದೆ ಎಂದು ಜಿಲ್ಲಾ ವ್ಯವಸ್ಥಾಪಕ ಕಿರಣ ಶಿಂದೆ ಹೇಳಿದರು.

ಸಮೀಪದ ತಲ್ಲೂರ ಗ್ರಾಮ ಪಂಚಾಯತಿ ಸಭಾಭವನದಲ್ಲಿ ಇತ್ತೀಚಿಗೆ ಮಹಿಳಾ ಸಂಜೀವಿನಿ ಒಕ್ಕೂಟ ಹಮ್ಮಿಕೊಂಡಿದ್ದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಮಹಿಳೆಯರಲ್ಲಿ ಕೌಶಲ್ಯ ಅಭಿವೃದ್ಧಿಗೊಳಿಸಿ ಅವರನ್ನು ಆರ್ಥಿಕವಾಗಿ ಪ್ರಗತಿಶೀಲರನ್ನಾಗಿಸುವ ಸಲುವಾಗಿ ರಾಜ್ಯದೆಲ್ಲೆಡೆ ಸಂಜೀವಿನಿ ಒಕ್ಕೂಟಗಳನ್ನು ರಚಿಸಲಾಗಿದ್ದು, ಪ್ರತಿ ಗ್ರಾಪಂ ಮಟ್ಟದಲ್ಲೂ ಸ್ವಸಹಾಯ ಸಂಘಗಳ ಸಂಜೀವಿನಿ ಒಕ್ಕೂಟಗಳಿವೆ ಎಂದರು.



ಪಿಡಿಒ ರಾಘವೇಂದ್ರಕುಮಾರ ಎಸ್.ಪಿ ಮಾತನಾಡಿ, ಮಹಿಳಾ ಸಂಜೀವಿನಿ ಒಕ್ಕೂಟದಿಂದ ಗ್ರಾಮೀಣ ಪ್ರದೇಶಗಳ ಜನರ ಜೀವನ ಮಟ್ಟ ಸುಧಾರಣೆ ಸಾಧ್ಯ ಎಂದರು.

ಒಕ್ಕೂಟದ ಅಧ್ಯಕ್ಷೆ ಕಸ್ತೂರಿ ಹೊಸೂರ ಅಧ್ಯಕ್ಷತೆ ವಹಿಸಿದ್ದರು. ಸವದತ್ತಿ ತಾಲೂಕ ವ್ಯವಸ್ಥಾಪಕ ಶ್ರೀಕಾಂತ ಹೊಳೆನ್ನವರ, ಪುಂಡಲೀಕ ಹಟ್ಟಿಹೊಳಿ, ಶ್ರೀಕಾಂತ ಪಾಟೀಲ, ಪವನ ಪೋಳ, ರೂಪಶ್ರೀ ಪಾಟೀಲ, ಬಸವರಾಜ ಪಟ್ಟಣಶಟ್ಟಿ, ಶಾಂತಾ ಹಿರೇಮಠ, ಸವಿತಾ ಬೆನಕಟ್ಟಿ, ಲಕ್ಷ್ಮೀ ಪಾಟೀಲ, ಹುಸೇನಬಿ ಕುದರಿ, ಪ್ರೇಮಾ ಹುಬ್ಬಳ್ಳಿ, ಯಶೋಧಾ ಕಾಶಪ್ಪನವರ, ಸುಜಾತಾ ಬೆನಕಟ್ಟಿ, ನಿರ್ಮಲಾ ಭಜಂತ್ರಿ, ಗೌರವ್ವ ಉಪ್ಪಾರ ಹಾಗೂ ಸ್ವಸಹಾಯ ಸಂಘದ ಸದಸ್ಯರು ಇದ್ದರು.

## ಮಾದಕ ವ್ಯಸನ ವಿರೋಧಿ ಜಾಗೃತಿ ಜಾಥಾ

**ಮೂಡಲಗಿ:** ಇಂದಿನ ವಿದ್ಯಾರ್ಥಿಗಳು ಮತ್ತು ಸಮಾಜದ ಮೇಲೆ ಮಾದಕ ವಸ್ತು ಸಮಾಜದ ಕೊಡಲಿಯಂತೆ, ಜೀವನವನ್ನು ಕೊರೆಯುವ ವಿಷಯವಾಗಿದೆ. ಗಾಂಜಾ ಕೋಕೆನ್, ತಂಬಾಕು, ಹೇರಾಯಿನ್ ನಂತಹ ವಸ್ತುಗಳು ಮಕ್ಕಳ ದೇಹವನ್ನು ಮತ್ತು ಮನಸ್ಸನ್ನು ಕಿತ್ತುಕೊಳ್ಳುತವೆ. ಇವು ಯುವಕರ ಭವಿಷ್ಯ ಕಸಿದು ಕುಟುಂಬವನ್ನು ಒಡೆಯುತ್ತವೆ. ಆರೋಗ್ಯದ ಮೇಲೆ ಮತ್ತು ಮಾನಸಿಕ ಸಮತೋಲನ ಕಳೆದುಕೊಂಡು ಕಾನೂನು ಸಮಸ್ಯೆಗೆ ಸಿಲುಕುವಂತೆ ಮಾಡುತ್ತವೆ ಇವುಗಳನ್ನು ಉಪಯೋಗಿಸ ಬಾರದೆಂದು ಮೂಡಲಗಿ ಪೊಲೀಸ್ ಠಾಣೆಯ ಪಿಎಸ್‌ಐ ರಾಜೀವ ಪೂಜೇರಿ ಹೇಳಿದರು.

ಗುರುವಾರ ಮೂಡಲಗಿ ಶಿಕ್ಷಣ ಸಂಸ್ಥೆ ಶಿವಬೋಧರಂಗ ಪದವಿ ಪೂರ್ವ ಮಹಾವಿದ್ಯಾಲಯ ಮತ್ತು ಮೂಡಲಗಿ, ಘಟಪ್ರಭಾ ಹಾಗೂ ಕುಲಗೋಡ್ ಪೊಲೀಸ್ ಠಾಣೆ ಇವುಗಳ ಸಂಯುಕ್ತ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಮಾದಕ ವಸ್ತುಗಳ ವ್ಯಸನ ವಿರೋಧಿ ಕಾರ್ಯಕ್ರಮದ ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದರು.

ಕಾಲೇಜ್ ಪ್ರಾಚಾರ್ಯ ಎಂ.ಎಸ್.ಪಾಟೀಲ ಮಾತನಾಡಿ, ಮಾದಕ ವಸ್ತುಗಳಿಂದಾಗಿ ವೈಯಕ್ತಿಕ ಜೀವನವಷ್ಟೇ ಅಲ್ಲ, ಸಮಾಜವು ಕುಸಿಯುತ್ತದೆ. ಯುವಕರು ಈ ವಿಷಕ್ಕೆ ಸಿಕ್ಕಿ ಬಿದ್ದರೆ ಶಿಕ್ಷಣ, ಕನಸು, ಮತ್ತು ಗುರಿಗಳು ಛಿದ್ರವಾಗುತ್ತವೆ. ಅಪರಾಧ, ಕಳ್ಳತನ, ಹಿಂಸೆಯಂತಹ ಸಮಸ್ಯೆಗಳು ಮಾದಕ ವಸ್ತುಗಳಿಂದಲೇ ಹೆಚ್ಚಾಗುತ್ತವೆ ಎಂದರು.




ಸಮಾರಂಭಕ್ಕೂ ಮುನ್ನ ಎಂಇಎಸ್ ಶಿಕ್ಷಣ ಸಂಸ್ಥೆಯಿಂದ ಶಿವಬೋಧರಂಗಪದವಿಪೂರ್ವಕಾಲೇಜಿನವಿದ್ಯಾರ್ಥಿಗಳೊಂದಿಗೆ ಮೂಡಲಗಿ ಪೊಲೀಸ್ ಠಾಣೆಯಿಂದ ಕಲ್ಮೇಶ್ವರ ವೃತ್ತ, ಚನ್ನಮ್ಮಾ ವೃತ್ತ, ಗಾಂಧೀ ಚೌಕ ಹಾಗೂ ಕಾಯಿಪಲ್ಯೆ ಮಾರುಕಟ್ಟೆಯಿಂದ ಶಿವಬೋಧರಂಗ ಪದವಿ ಪೂರ್ವ ಕಾಲೇಜಿನವರೆಗೆ ಜಾಥಾ ಕಾರ್ಯಕ್ರಮವನ್ನು ಹಮ್ಮಿಕೊಂಡು ಮಾದಕ ವಸ್ತುಗಳ ವಿರುದ್ಧ ಜಾಗೃತಿ ಘೋಷಣೆ ವಿದ್ಯಾರ್ಥಿಗಳು ಕೂಗಿ ಜನರಲ್ಲಿ ಅರಿವು ಮೂಡಿಸುವ ಪ್ರಯತ್ನ ಮಾಡಿದರು.

ಈ ಜಾಥಾ ಕಾರ್ಯಕ್ರಮದಲ್ಲಿ ಮೂಡಲಗಿ ಪೊಲೀಸ್ ಠಾಣೆಯ ಸಿಪಿಐ ಶ್ರೀಶೈಲ್ ಬ್ಯಾಕೂಡ್, ಮೂಡಲಗಿ ಪೊಲೀಸ್ ಠಾಣೆ ಪಿಎಸ್‌ಐ ರಾಜು ಪೂಜೇರಿ, ಕುಲಗೋಡ ಪೊಲೀಸ್ ಠಾಣೆಯ ಪಿಎಸ್‌ಐ ಆನಂದ ಬಿ., ಮುಂತಾದ ಪೊಲೀಸ್ ಸಿಬ್ಬಂದಿಯವರು ಹಾಗೂ ಕಾಲೇಜ್ ಸಿಬ್ಬಂದಿಯವರು ಭಾಗವಹಿಸಿದ್ದರು. ಮೂಡಲಗಿ ಪೊಲೀಸ್ ಠಾಣೆ ಎಎಸ್‌ಐ ವಾಳಕೆ, ಕಲ್ಮೇಶ್ ಬಾಗಲಿ ಹಾಗೂ ಕಾಲೇಜ್ ಎಲ್ಲ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

### ಗೃಹಲಕ್ಷ್ಮಿಯಲ್ಲಿ ಭಾರೀ ಹಗರಣ: ತನಿಖೆಗೆ ಆಗ್ರಹ

**ಬೆಳಗಾವಿ:** ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗೃಹಲಕ್ಷ್ಮೀ ಯೋಜನೆಯಲ್ಲಿ ಸಾವಿರಾರು ಕೋಟಿ ರೂ. ಅವ್ಯವಹಾರ ನಡೆದಿರುವ ಶಂಕೆ ವ್ಯಕ್ತವಾಗಿದ್ದು, ಪ್ರಕರಣವನ್ನು ತಕ್ಷಣ ಸಿಬಿಐಗೆ ವಹಿಸಿ ಸಮಗ್ರ ತನಿಖೆ ನಡೆಸಬೇಕು ಎಂದು ಬಿಜೆಪಿ ಬೆಳಗಾವಿ ಜಿಲ್ಲಾಧ್ಯಕ್ಷ ಸುಭಾಷ್ ಪಾಟೀಲ ಆಗ್ರಹಿಸಿದರು.



ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿದ ಅವರು, ರಾಜ್ಯದ ಇತಿಹಾಸದಲ್ಲೇ ಗೃಹಲಕ್ಷ್ಮೀ ಯೋಜನೆ ಅತ್ಯಂತ ದೊಡ್ಡ ಹಗರಣವಾಗಿ ಹೊರಹೊಮ್ಮಿದೆ ಎಂದು ಆರೋಪಿಸಿದರು. ಸಿಎಜಿ ವರದಿ ಪ್ರಕಾರ 19,020 ಫಲಾನುಭವಿಗಳಿಗೆ ಒಂದೇ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆಯಾಗಿದ್ದು, ಬ್ಯಾಂಕ್ ಖಾತೆಯೇ ಇಲ್ಲದ 23,262 ಮಂದಿಗೆ 46.52 ಕೋಟಿ ರೂ. ಪಾವತಿಯಾಗಿರುವುದು ಬಹಿರಂಗವಾಗಿದೆ ಎಂದರು.

2024-25 ಹಾಗೂ 2025-26ನೇ ಸಾಲಿನ ಅವಧಿಯಲ್ಲಿ ಹಲವು ಕಂತುಗಳ ಹಣ ಬಿಡುಗಡೆಯಾಗಿದ್ದರೂ, ಇನ್ನೂ ಮೂರು ಕಂತುಗಳ ಹಣ ಬಾಕಿ ಉಳಿದಿದೆ. ಬಡ ತಾಯಂದಿರಿಗೆ ನೀಡಬೇಕಾದ ಸುಮಾರು 5,000 ಕೋಟಿ ರೂ. ಎಲ್ಲಿಗೆ ಹೋಗಿದೆ ಎಂಬುದನ್ನು ರಾಜ್ಯ ಸರ್ಕಾರ ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

ಈ ಹಗರಣದ ಕುರಿತು ಸಿಬಿಐ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದರೆ ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಬೃಹತ್ ಹೋರಾಟವನ್ನು ಹಮ್ಮಿಕೊಳ್ಳಲಿದೆ ಎಂದು ಸುಭಾಷ್ ಪಾಟೀಲ ಎಚ್ಚರಿಕೆ ನೀಡಿದರು.

### ಮುರುಘರಾಜೇಂದ್ರ ಶ್ರೀಗಳ 55 ತುಲಾಭಾರ ಜೂ.28ರಂದು

**ಗೋಕಾಕ:** ಸಾಂಸ್ಕೃತಿಕ, ಸಾಹಿತ್ಯಿಕ, ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ ಸೇವೆಗಳ ಮೂಲಕ ಬಸವಾದಿ ಶರಣರ ತತ್ವಗಳೊಂದಿಗೆ ಜನರಲ್ಲಿ ಭಕ್ತಿ, ಜ್ಞಾನದ ಅರಿವು ಮೂಢಿಸುತ್ತಿರುವ ಶೂನ್ಯ ಸಂಪಾದನ ಮಠದ ಮುರುಘರಾಜೇಂದ್ರ ಶ್ರೀಗಳ 55ನೇ ಜನ್ಮ ದಿನದ ನಿಮಿತ್ತ ಜೂ.28ರ ರಂದು ಬೆಳಗ್ಗೆ 9ಕ್ಕೆ 55 ತುಲಾಭಾರ ಹಾಗೂ ಗುರುವಂದನೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಅಡವಿಸಿದ್ದೇಶ್ವರ ಮಠ ಅಂಕಲಗಿ-ಕುಂದರಗಿಯ ಅಮರಸಿದ್ದೇಶ್ವರ ಶ್ರೀಗಳು ಹೇಳಿದರು.

ಅವರು, ನಗರದ ಶೂನ್ಯ ಸಂಪಾದನ ಮಠದಲ್ಲಿ ಗುರುವಾರದಂದು ಕರೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿ, ಕಾಯಕಯೋಗಿ ಬಸವ ಸ್ವಾಮಿಜಿಯವರ ಪುಣ್ಯಸ್ಮರಣೋತ್ಸವ ನಿಮಿತ್ತ ಪ್ರತಿ ವರ್ಷ ಶರಣ ಸಂಸ್ಕೃತಿ ಉತ್ಸವ ಆಯೋಜನೆ ಮಾಡುವ ಮೂಲಕ ಮುರುಘರಾಜೇಂದ್ರ ಶ್ರೀಗಳು ದೇಶದ ಹಲವಾರು ಕಾಯಕಯೋಗಿಗಳಿಗೆ ಕಾಯಕಶ್ರೀ ಪ್ರಶಸ್ತಿ ಪ್ರಧಾನ ಮಾಡುತ್ತ ಬಂದಿದ್ದಾರೆ ಎಂದರು.

ಗುರುವಂದನಾ ಸಮಿತಿಯ ಅಧ್ಯಕ್ಷ ಮಲ್ಲಿಕಾರ್ಜುನ ಈಟಿ ಮಾತನಾಡಿ, ಸಾನ್ನಿಧ್ಯವನ್ನು ಘಟಪ್ರಭಾದ ಡಾ.ಮಲ್ಲಿಕಾರ್ಜುನ ಶ್ರೀಗಳು, ನೇತೃತ್ವವನ್ನು ಶೂನ್ಯ ಸಂಪಾದನ ಮಠದ ಕಿರಿಯ ಬಸವಪ್ರಭು ಸ್ವಾಮಿಗಳು ವಹಿಸುವರು. ಶಾಸಕ ರಮೇಶ ಜಾರಕಿಹೊಳಿ



ಉದ್ಘಾಟಿಸುವರು. ಅತಿಥಿಗಳಾಗಿ ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ, ರಾಜ್ಯಸಭಾ ಮಾಜಿ ಸದಸ್ಯ ಈರಣ್ಣ ಕಡಾಡಿ, ಕಾಂಗ್ರೆಸ್ ಮುಖಂಡ ಅಶೋಕ ಪೂಜಾರಿ, ಬೆಂಗಳೂರಿನ ಎಡ್ರಿಸ್ ಟೆಕ್ನಾಲಜಿ ಸಿಇ ಕಿರಣ ಮುಚ್ಚಂಡಿಮಠ ಭಾಗವಹಿಸುವರು. ಗೋಕಾಕ ಮತ್ತು ಮೂಡಲಗಿ ತಾಲೂಕಿನ ಎಲ್ಲ ಮಠಾಧೀಶರು ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ.

ಚೆನ್ನಬಸವೇಶ್ವರ ವಿದ್ಯಾಪೀಠದ ಆವರಣದಲ್ಲಿ ಶ್ರೀಗಳ ಹುಟ್ಟುಹಬ್ಬದ ಸವಿನೆನಪಿಗಾಗಿ 55 ಸಸಿ ನೆಡಲಾಗುವುದು. ಬಡ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶಾಲಾ ಬ್ಯಾಗ, ನೋಟ್ ಬುಕ್ ಮತ್ತು ಇತರ ಪರಿಕರಗಳನ್ನು ವಿತರಿಸಲಾಗುವುದು. ಎಲ್ಲ ಸದ್ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.ಬಸವಪ್ರಭು ಸ್ವಾಮಿಗಳು, ವಿವೇಕ ಜತ್ತಿ, ನ್ಯಾಯವಾದಿ ಶಂಕರ ಗೋರೋಶಿ ಇದ್ದರು.

## ಕಿರುಸುದ್ದಿ

## ಕಾಳಿದಾಸ ಪದವಿ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ





• **ಬಾದಾಮಿ:** ಇಲ್ಲಿನ ಕಾಳಿದಾಸ ಶಿಕ್ಷಣ ಸಂಸ್ಥೆಯ ಕಾಳಿದಾಸ ಬಿ.ಎಸ್.ಡಬ್ಲ್ಯೂ, ಬಿಎ ಮತ್ತು ಬಿಕಾಂ ಪದವಿ ಮಹಾ ವಿದ್ಯಾಲಯದ ವಿದ್ಯಾರ್ಥಿಗಳು ಪದವಿ 6ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ. ಬಾಗಲಕೋಟೆ ವಿಶ್ವವಿದ್ಯಾಲಯ ಜಮಖಂಡಿ ಇದರ ಮೇ–ಜೂನ್ 2026ರ ಪದವಿ ಬಿಎ 6ನೇ ಸೆಮಿಸ್ಟರ ಫಲಿತಾಂಶ ಪ್ರಕಟಗೊಂಡಿದ್ದು, ಪದವಿ ಮಹಾವಿದ್ಯಾಲಯದ ಅಂತಿಮ ವರ್ಷದ ವಿದ್ಯಾರ್ಥಿನಿ ದೀಪಾ ಕೋಟಗಿ(650/579)ಪ್ರಥಮ ಸ್ಥಾನ, ಮುತ್ತು ಕಾಮಣ್ಣವರ(650/578)ದ್ವಿತೀಯ ಸ್ಥಾನ, ಹಾಗೂ ಭುವನೇಶ್ವರಿ ಹೊಸಕೋಟೆ(650/565)ತೃತಿಯ ಸ್ಥಾನ ಪಡೆದಿದ್ದಾರೆ. ಹಾಗೂ ಕಾಲೇಜಿನ ಸರಾಸರಿ ಫಲಿತಾಂಶ 100 ಕ್ಕೆ 90.69% ಫಲಿತಾಂಶ ಲಭ್ಯವಾಗಿದ್ದು, ಉತ್ತಮ ಸಾಧನೆ ಮಾಡಿದ್ದಾರೆ. ಉತ್ತಮ ಅಂಕಗಳನ್ನು ಗಳಿಸಿದ ಮೂರು ವಿದ್ಯಾರ್ಥಿಗಳಿಗೆ ಕಾಳಿದಾಸ ಶಿಕ್ಷಣ ಸಂಸ್ಥೆಯ ಅಧ್ಯಕ್ಷ, ಮಾಜಿ ಸಚಿವ ಬಿ.ಬಿ.ಚಿಮ್ಮನಕಟ್ಟಿ, ಸಂಸ್ಥೆಯ ಕಾರ್ಯದರ್ಶಿ, ಶಾಸಕ ಭೀಮಸೇನ ಚಿಮ್ಮನಕಟ್ಟಿ, ಸಂಸ್ಥೆಯ ಸಂಪರ್ಕ ಅಧಿಕಾರಿಗಳು, ಪ್ರಾಚಾರ್ಯರು ಹಾಗೂ ಸಿಬ್ಬಂದಿ ಅಭಿನಂದನೆ ಸಲ್ಲಿಸಿದ್ದಾರೆ.

## ಎಸ್.ಆರ್.ಕಂಠಿ ಕಾಲೇಜಿಗೆ ಉತ್ತಮ ಫಲಿತಾಂಶ







• **ಮುಧೋಳ:** ಬಾಗಲಕೋಟೆ ವಿವಿ ಜಮಖಂಡಿ 2025–26ನೇ ಸಾಲಿನ ಬಿಎ 6ನೇ ಸೆಮ್ ಗೆ ನಡೆಸಿದ ಪರೀಕ್ಷೆಯ ಫಲಿತಾಂಶ ಪ್ರಕಟಿಸಿದೆ. ಒಟ್ಟು 27 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು ಈ ಪೈಕಿ 13 ಡಿಸ್ಟಿಂಕ್ಷನ್, 6 ಪ್ರಥಮ ದರ್ಜೆ,7 ದ್ವಿತೀಯ ದರ್ಜೆ, 1 ತೃತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ, ಒಟ್ಟಾರೆ ಶೇ.100ಕ್ಕೆ 100ರಷ್ಟು ಫಲಿತಾಂಶ ಬಂದಿದೆ. ಬಾಗಲಕೋಟೆ ಬಿವಿವಿ ಸಂಘದ ಮುಧೋಳದ ಎಸ್.ಆರ್.ಕಂಠಿ ಮಹಾವಿದ್ಯಾಲಯದ ಕಲಾ ವಿಭಾಗದ ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗದ 6ನೇ ಸೆಮ್ ಪತ್ರಿಕೆ –1ರ ಡಿಜಿಟಲ್ ಮಾಧ್ಯಮದಲ್ಲಿ ಪರಿಚಯ ಐಚ್ಛಿಕ ವಿಷಯದಲ್ಲಿ ಕಾವೇರಿ ಧನಗರ (ಶೇ.94), ರಾಜೇಶ್ವರಿ ಬಿರಡಿ (ಶೇ.92), ತೃಪ್ತಿ ದಿಂಡೆ (ಶೇ.90), ಗಂಗವ್ವ ಉಳ್ಳಾಗಡ್ಡಿ (ಶೇ.88.66), ಅನುಪಮಾ ಹೊಸಮನಿ (ಶೇ.87.33) ಅತೀ ಹೆಚ್ಚು ಅಂಕಪಡೆದು ವಿಭಾಗಕ್ಕೆ ಟಾಪರ್ಸ್ ಆಗಿ ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗಕ್ಕೆ ಹಾಗೂ ಮಹಾವಿದ್ಯಾಲಯಕ್ಕೆ ಕೀರ್ತಿ ತಂದಿರುವದಕ್ಕೆ ಬಿವ್ಹಿ ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ, ಗೌರವ ಕಾರ್ಯದರ್ಶಿ ಮಹೇಶ ಎನ್. ಅಥಣಿ, ಸಂಘದ ಕಾಲೇಜುಗಳ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಗುರುಬಸವ ಸೂಳಿಭಾವಿ, ಸಂಘದ ಕಾಲೇಜುಗಳ ಆಡಳಿತಾಧಿಕಾರಿ ಡಾ.ವಿಜಯಕುಮಾರ ಕಟಗಿಹಳ್ಳಿಮಠ, ಸಂಘದ ಕಾಲೇಜುಗಳ ಪದ ನಿಮಿತ್ಯ ಕಾರ್ಯದರ್ಶಿ ಡಾ.ಎಸ್.ಎನ್.ಗಾಂವಕರ ಹಾಗೂ ಸದಸ್ಯರು ಮತ್ತು ಕಾಲೇಜಿನ ಪ್ರಾಚಾರ್ಯ ಡಾ.ಮಲ್ಲಿಕಾರ್ಜುನ ಜರಕುಂಟಿ, ಪತ್ರಿಕೋದ್ಯಮ ಹಾಗೂ ಸಮೂಹ ಸಂವಹನ ವಿಭಾಗದ ಮುಖ್ಯಸ್ಥ ವಿಶ್ವನಾಥ ಮುನವಳ್ಳಿ ಸಿಬ್ಬಂದಿ ಅಭಿನಂದಿಸಿದ್ದಾರೆ.

## ನಿಧನಸುದ್ದಿ

## ಅಶೋಕ ಭಾವಿ



• **ಬಾದಾಮಿ:** ತಾಲೂಕಿನ ಬೆಳವಲಕೊಪ್ಪ ಗ್ರಾಮದ ನಿವಾಸಿ, ಹೇಮ ವೇಮ ಚಾರಿಟೇಬಲ್ ಸಂಸ್ಥೆಯ ನಿರ್ದೇಶಕ ಹಾಗೂ ಶ್ರೀಶೈಲ ಮಲ್ಲಿಕಾರ್ಜುನ ಸೌಹಾರ್ದ ಪತ್ತಿನ ಸಹಕಾರಿ ಸಂಘದ ಉಪಾಧ್ಯಕ್ಷ ಅಶೋಕ ಭಾವಿ(64) ಅವರು ಮಂಗಳವಾರ ನಿಧನರಾದರು. ಮೃತರಿಗೆ ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.



ದೇವರ ಹಿಪ್ಪರಗಿ: ತಾಲೂಕಿನ ಚಿಕ್ಕರೂಗಿ ಗ್ರಾಮದ ಮಚ್ಚೇಂದ್ರ ಗೆರಡೆ ಹಾಗೂ ಕವಿತಾ ಗೆರಡೆ ದಂಪತಿ ಪುತ್ರ ದುಂಡಪ್ಪ ಗೆರಡೆ ಭಾರತೀಯ ಸೇನೆಯ ಅಗ್ನಿವೀರ ಹುದ್ದೆಗೆ ಆಯ್ಕೆಯಾದ ಹಿನ್ನೆಲೆ ಗ್ರಾಮಸ್ಥರು ಸನ್ಮಾನಿಸಿ ತರಬೇತಿಗೆ ಬೀಳ್ಕೊಟ್ಟರು. ಹಿರಿಯರಾದ ಶ್ರೀಮಂತ ಬಾಗಲಕೋಟೆ, ಕುಮಾರಗೌಡ ಪಾಟೀಲ, ಚಂದ್ರಶೇಖರ ಶಿರಕನಳ್ಳಿ, ಗುರಪ್ಪ ಉಡಗಿ, ಅಮೋಘಸಿದ್ದ ಮಾಶ್ಯಾಳ, ರಾವತ ಸಾರವಾಡ, ಸಂತೋಷ ಹಾದಿಮನಿ, ಅಂಬರೀಶ ಗೊಳ್ಳಗಿ, ಮಂಜುನಾಥ ಗೆರಡೆ, ಶಂಕರಲಿಂಗ ಬೆನಕನಹಳ್ಳಿ, ಸಿದ್ದು ಕಡ್ಲೆವಾಡ, ಪ್ರಭು ಸಾರವಾಡ ಉಪಸ್ಥಿತರಿದ್ದರು.

## ಜೀವನದಲ್ಲಿ ಯೋಗಕ್ಕೆ ಆದ್ಯತೆ ನೀಡಿ

• **ತೇರದಾಳ:** ಬಾಹುಬಲಿ ವಿದ್ಯಾಪೀಠದ ಜೆವಿ ಮಂಡಳದ ಗ್ರಾಮೀಣ ಆಯುರ್ವೇದ ವೈದ್ಯಕೀಯ ವಿದ್ಯಾಲಯದ ವಿದ್ಯಾರ್ಥಿಗಳು ಯೋಗ ನೃತ್ಯ ಆಧಾರಿತ ರೋಗ ನಿರ್ದಿಷ್ಟ ಆಸನಗಳನ್ನು ಪ್ರದರ್ಶಿಸುವ ಮೂಲಕ ಎಲ್ಲರ ಮನಸೂರೆಗೊಂಡರು. ನೃತ್ಯದಲ್ಲಿ ಯೋಗ ಸಂಗಮಗೊಳಿಸಿದ್ದು ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದು ಸಂಸ್ಥೆಯ ಕಾರ್ಯದರ್ಶಿ ಡಾ.ಜಿ.ಬಿ.ಆಲಗೂರ ಅಭಿನಂದನೆ ಸಲ್ಲಿಸಿದರು. ಪಟ್ಟಣದ ಗುರುಕುಲ ಸಂಸ್ಥೆ ಆವರಣದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗದಿನದ ನಿಮಿತ್ತ ಯೋಗ ಸಂಗಮ–2026 ಎಂಬ ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ಯೋಗ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎಲ್ಲ ಸಂಪತ್ತಿಗಿಂತ ಆರೋಗ್ಯ ಸಂಪತ್ತು ಹೆಚ್ಚಿನದು ನಾವೆಲ್ಲ ಆರೋಗ್ಯವಿದ್ದರನೇ ನಮ್ಮ ಬದುಕಿಗೆ ಅರ್ಥಬರುತ್ತದೆ. ಅನಾರೋಗ್ಯದ ಬದುಕು ವ್ಯರ್ಥವಾಗಿ ಹೋಗುತ್ತದೆ. ಕಾರಣ ನಾವು ನಮ್ಮ ದಿನನಿತ್ಯದ ಚಟುವಟಿಕೆಯಲ್ಲಿ ಯೋಗಕ್ಕೆ ಪ್ರಥಮ ಆದ್ಯತೆ ನೀಡಬೇಕು. ನಾವು ಮನಸ್ಸು ಮಾಡಿದರೆ ನಮ್ಮ ಆರೋಗ್ಯ ಖಂಡಿತವಾಗಿ ನಮ್ಮ ಕೈಯಲ್ಲಿರುತ್ತದೆ ಇಲ್ಲದಿದ್ದರೆ ಬೇರೊಬ್ಬರ ಕೈಯಲ್ಲಿ ಎಂಬುದನ್ನು ಯಾರು ಮರೆಯಬಾರದು. ಕಾರಣ ಯೋಗವು ಪ್ರತಿಯೊಬ್ಬರ ಬದುಕಿನ ಮುಖ್ಯ ಅಂಗವಾಗಬೇಕು ಎಂದರು. ಡಿ.ಆರ್.ಪಾಟೀಲ, ಡಾ. ಎಸ್.ಸಿ.ನುಚ್ಚಿ, ಡಾ.ಬಿ.ಎಸ್.ಜಂಬಗಿ ಮತು ಡಾ.ಸೌಭಾಗ್ಯ ಮಠಪತಿ ಕಾರ್ಯಕ್ರಮ ಸಂಯೋಜಿಸಿದ್ದರು. ಜೆ.ವಿ ಮಂಡಳದ ಎಲ್ಲಾ ಶಾಖೆಗಳಿಂದ 650 ಹೆಚ್ಚು ವಿದ್ಯಾರ್ಥಿಗಳು, ಸಿಬ್ಬಂದಿ ಭಾಗವಹಿಸಿದ್ದರು.




ತೇರದಾಳ: ಪಟ್ಟಣದ ಗುರುಕುಲ ಸಂಸ್ಥೆ ಆವರಣದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗದಿನದ ನಿಮಿತ್ತ ಯೋಗ ಸಂಗಮ–2026 ಎಂಬ ಶಿರ್ಷಿಕೆಯಡಿ ಯೋಗ ದಿನಾಚರಣೆ ಕಾರ್ಯಕ್ರಮ ನಡೆಯಿತು. ಸಂಸ್ಥೆಯ ಕಾರ್ಯದರ್ಶಿ ಡಾ.ಜಿ.ಬಿ.ಆಲಗೂರ, ಡಿ.ಆರ್.ಪಾಟೀಲ, ಡಾ. ಎಸ್.ಸಿ.ನುಚ್ಚಿ ಸೇರಿದಂತೆ ಎಲ್ಲ ಅಂಗಸಂಸ್ಥೆಗಳ ಮುಖ್ಯಸ್ಥರು ಇದ್ದರು.

# ಎಸ್‌ಐಆರ್ ಜಾಗೃತಿ ಜಾಥಾಕ್ಕೆ ಚಾಲನೆ

• **ಬಾಗಲಕೋಟೆ:** ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ನಿಟ್ಟಿನಲ್ಲಿ ಹಮ್ಮಿಕೊಂಡ ಜಾಗೃತಿ ಜಾಥಾಕ್ಕೆ ಜಿಲ್ಲಾಧಿಕಾರಿ ಸಂಗಪ್ಪ, ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಜಾನನ ಬಾಲೆ ಜಂಟಿಯಾಗಿ ಚಾಲನೆ ನೀಡಿದರು.

ನಗರದ ಶಕ್ತಿ ಟಾಕೀಜ ಹತ್ತಿರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ, ಜಿಲ್ಲಾ ಸ್ವೀಪ್, ಸರಕಾರಿ ಪದವಿ ಪೂರ್ವ ಕಾಲೇಜ ಹಾಗೂ ಸಕ್ರಿ ಪದವಿ ಪೂರ್ವ ಕಾಲೇಜ ಸಹಯೋಗದಲ್ಲಿ ಹಮ್ಮಿಕೊಂಡ ಜಾಗೃತಿ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಜಿಲ್ಲಾಧಿಕಾರಿಗಳು ಮತದಾರರ ಪಟ್ಟಿಯಲ್ಲಿ ವಿಶೇಷ ಪರಿಷ್ಕರಣೆ ಹಾಗೂ ಪ್ಯಾಪಿಂಗ್ ಕಾರ್ಯದಲ್ಲಿ ಪ್ರತಿಯೊಬ್ಬ ಅರ್ಹ ಮತದಾರರು ಸಕ್ರಿಯವಾಗಿ ಭಾಗವಹಿಸಬೇಕು. ಮತದಾನ ಹಕ್ಕು ಪ್ರಜಾಪ್ರಭುತ್ವದ ಮೂಲ ಅಡಿಪಾಯವಾಗಿದ್ದು, ಅರ್ಹ ನಾಗರಿಕರು ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರನ್ನು ಪರಿಶೀಲಿಸಿ ಅಗತ್ಯ ತಿದ್ದುಪಡಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದರು.




ನಗರದಶಕ್ತಿಟಾಕೀಸ್‌ರಸ್ತೆಯಿಂದಪ್ರಾರಂಭವಾಗಿ ಕೆನರಾ ಬ್ಯಾಂಕ್, ಹಳೆ ಸಿಂಡಿಕೇಟ್ ಬ್ಯಾಂಕ್ ಹೊಳೆ ಆಂಜನೇಯ ದೇವಾಸ್ಥಾನ, ಬಸವೇಶ್ವರ ಸರ್ಕಲ್, ಮೆಳ್ಳಿಗೇರಿ ಕಾಂಪ್ಲೇಕ್ಸ್, ಕೆರೂಡಿ ಆಸ್ಪತ್ರೆ, ಲಯನ್ಸ್ ಕ್ಲಬ್, ಸೆಟಲ್‌ಮೆಂಟರ್ ಏರಿಯಾ ಕಾಲೋನಿ, ಹಳೆ ಐಬಿ ಸರ್ಕಲ್ ಮಾರ್ಗವಾಗಿ ಸಕ್ರಿ ಪದವಿ ಪೂರ್ವ ಕಾಲೇಜಗೆ ಮುಕ್ತಾಯಗೊಂಡಿತು. ಜಾಥಾದಲ್ಲಿ ಸರಕಾರಿ ಪದವಿ ಪೂರ್ವ ಕಾಲೇಜ ಹಾಗೂ ಸಕ್ರಿ ಪದವಿ ಪೂರ್ವ ಕಾಲೇಜನ ವಿದ್ಯಾರ್ಥಿಗಳು ಜಾಗೃತಿ ಘೋಷಣೆಗಳನ್ನು ಕೂಗುತ್ತಾ ಫಲಕಗಳನ್ನು ಪ್ರದರ್ಶಿಸಿದರು.

ಜಿಪಂ ಉಪ ಕಾರ್ಯದರ್ಶಿ ಎನ್.ವಾಯ್. ಬಸರಿಗಿಡದ, ಜಿಪಂ ಮುಖ್ಯ ಯೋಜನಾಧಿಕಾರಿ ಅಲ್ಲಮಪ್ರಭು, ಮುಖ್ಯ ಲೆಕ್ಕಾಧಿಕಾರಿ ಸಿದ್ದರಾಮೇಶ್ವರ ಉಕ್ಕಲಿ, ತಹಶೀಲ್ದಾರ ವಾಸುದೇವ ಸ್ವಾಮಿ, ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ರವೀಂದ್ರ ಹಕಾಟಿ, ಜಂಟಿಕೃಷಿನಿರ್ದೇಶಕ ಟಿ.ಎಸ್. ರುದ್ರೇಶಪ್ಪ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಕೆ.ಪ್ರಭಾಕರ, ಜಿಲ್ಲಾ ವಿಕಲಚೇತನರ ಕಲ್ಯಾಣಾಧಿಕಾರಿ ಮಹಾಂತೇಶ, ಜಿ.ಪಂ ಸಹಾಯಕ ಯೋಜನಾಧಿಕಾರಿ ಭೀಮಪ್ಪ ತಳವಾರ, ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಗುರುಪಾದ ಡೂಗನವರ, ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಗೋಪಾಲ, ಸಕ್ರಿ ಪಿಯು ಕಾಲೇಜಿನ ಪ್ರಾಚಾರ್ಯ ಕಂದಗಲ್ಲ ಪಾಲ್ಗೊಂಡಿದ್ದರು.

## ಮಕ್ಕಳ ಸುರಕ್ಷತೆ ನಮ್ಮ ಹೊಣೆ



• **ಮಹಾಲಿಂಗಪುರ:** ಮಕ್ಕಳ ಸುರಕ್ಷತೆ ನಮ್ಮೆಲ್ಲರ ಹೊಣೆ. ಮಕ್ಕಳ ಬದುಕುವ ಹಕ್ಕು, ಅಭಿವೃದ್ಧಿ ಹೊಂದುವ ಹಕ್ಕು,ರಕ್ಷಣೆಯ ಹಕ್ಕು ಹಾಗೂ ಭಾಗವಹಿಸುವ ಹಕ್ಕುಗಳನ್ನು ರಕ್ಷಿಸಬೇಕು, ಶಾಲೆಗಳು ಮಕ್ಕಳ ಸುರಕ್ಷಿತ ತಾಣವಾಗಬೇಕು ಆ ನಿಟ್ಟಿನಲ್ಲಿ ಸರ್ಕಾರಿ ಶಾಲೆಯ ಮುಖ್ಯೋಪಾಧ್ಯಾಯರು ಶಿಕ್ಷಕರು ಹಾಗೂ ಎಸ್‌ಡಿಎಂಸಿ ಸದಸ್ಯರು ಗಮನ ಹರಿಸಬೇಕು ಎಂದು ಮುಧೋಳ ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಎಂ.ಮುಲ್ಲಾ ಹೇಳಿದರು. ಸ್ಥಳೀಯ ಸರ್ಕಾರಿ ಪ್ರೌಢ ಶಾಲೆಯಲ್ಲಿ ಶಿಕ್ಷಣ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಶಾಲಾ ಮಕ್ಕಳ ಸುರಕ್ಷತೆ ಹಾಗೂ ಆರೋಗ್ಯ ಜಾಗೃತಿ ಸಭೆ ಉದ್ಘಾಟಿಸಿ ಮಾತನಾಡಿದರು.ತಾಲೂಕು ದೈಹಿಕ ಪರೀವೀಕ್ಷಣಾಧಿಕಾರಿ ಎಸ್.ಎಂ.ಕುರಣೆ ಮಾತನಾಡಿ ಕ್ರೀಡೆ, ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿಯೂ ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ಸುರಕ್ಷತೆ ನಮ್ಮೆಲ್ಲರ ಕರ್ತವ್ಯವಾಗಿದೆ ಎಂದರು.ಸ್ಥಳೀಯ ಎಂಪಿಎಸ್, ಕೆಜಿಎಸ್, ಉರ್ದು ಹಾಗೂ ಸೈದಾಪುರ,ಮದಬಾವಿ, ಬೆಳಗಲಿ ಈ 6 ಕ್ಲಸ್ಟರಿನ ಸರಕಾರಿ ಪ್ರೌಢ ಶಾಲೆ ಹಾಗೂ ಪ್ರಾಥಮಿಕ ಶಾಲೆಗಳ ಮುಖ್ಯೋಪಾಧ್ಯಾಯರು, ಎಸ್‌ಡಿಎಂಸಿ ಅಧ್ಯಕ್ಷರು ಭಾಗವಹಿಸಿದ್ದರು. ಮುಖ್ಯೋಪಾಧ್ಯಾಯ ಧನಂಜಯ ಕುಲಕರ್ಣಿ ಸ್ವಾಗತಿಸಿದರು. ಶಿಕ್ಷಕ ಸದಾಶಿವ ಕಂಬಾರ ನಿರೂಪಿಸಿ, ಶಿಕ್ಷಕ ಗುರು ಅಂಗಡಿ ವಂದಿಸಿದರು.

## ಸರ್ಕಾರಿ ಸೌಲಭ್ಯದ ಸದುಪಯೋಗ ಪಡೆಯಿರಿ

• **ಬಾದಾಮಿ:** ಗ್ರಾಮೀಣ ಭಾಗದ ವಿದ್ಯಾರ್ಥಿಗಳು ನಗರಕ್ಕೆ ಬಂದು ಶಾಲೆ ಕಲಿಯಲು ಅನುಕೂಲವಾಗುವಂತೆ ಬಸ್ ಪಾಸ್ ನೀಡುತ್ತಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ಶಾಸಕ ಭೀಮಸೇನ ಚಿಮ್ಮನಕಟ್ಟಿ ಹೇಳಿದರು.

ಪಟ್ಟಣದ ಬಸ್ ನಿಲ್ದಾಣದಲ್ಲಿ ಹಮ್ಮಿಕೊಂಡಿದ್ದ ವಿದ್ಯಾರ್ಥಿಗಳ ಉಚಿತ ಬಸ್ ಪಾಸ್ ವಿತರಣಾ ಸಮಾರಂಭದಲ್ಲಿ ಉಚಿತ ಬಸ್ ಪಾಸ್ ವಿತರಣೆ ಮಾಡಿ ಮಾತನಾಡಿದರು. ವಿದ್ಯಾರ್ಥಿಗಳ ಉಜ್ವಲ ಭವಿಷ್ಯನಿರ್ಮಾಣದ ಉದ್ದೇಶದಿಂದ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಜನಪರ ಯೋಜನೆಗಳ ಪ್ರಯೋಜನ ಪ್ರತಿಯೊಬ್ಬ ವಿದ್ಯಾರ್ಥಿಗೂ ತಲುಪಬೇಕು ಎಂಬ ಆಶಯದೊಂದಿಗೆ ಉಚಿತ ಬಸ್ ಪಾಸ್‌ಗಳನ್ನು ವಿತರಿಸಲಾಗುತ್ತಿದ್ದು, ಈ ಯೋಜನೆಯು ವಿಶೇಷವಾಗಿ ಗ್ರಾಮೀಣ ಪ್ರದೇಶದ ಹಾಗೂ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ವಿದ್ಯಾರ್ಥಿಗಳಿಗೆ ಶಿಕ್ಷಣ ಮುಂದುವರಿಸಲು ದೊಡ್ಡ ನೆರವಾಗಲಿದೆ ಎಂದರು.

ರಾಜ್ಯಸರ್ಕಾರದಮಹತ್ವಾಕಾಂಕ್ಷೆಯ ಪಂಚ ಗ್ಯಾರಂಟಿ ಯೋಜನೆಗಳು ಜನಸಾಮಾನ್ಯರ ಬದುಕಿನಲ್ಲಿ ಹೊಸ ಆಶಾಕಿರಣ ಮೂಡಿಸಿದ್ದು, ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡಿರುವುದು ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಕಾರಿ ನಿರ್ಧಾರವಾಗಿದೆ ಎಂದು ಹೇಳಿದರು. ಉಚಿತ ಬಸ್ ಪಾಸ್‌ನಿಂದ ಬಡ ಹಾಗೂ ಗ್ರಾಮೀಣ ವಿದ್ಯಾರ್ಥಿಗಳು ಪ್ರತಿದಿನ ಯಾವುದೇ ಆರ್ಥಿಕ ಹೊರೆಯಿಲ್ಲದೆ ಶಾಲೆ ಹಾಗೂ ಕಾಲೇಜುಗಳಿಗೆ ಪ್ರಯಾಣಿಸಬಹುದಾಗಿದೆ. ಇದರಿಂದ ಶಿಕ್ಷಣದಿಂದ ಯಾರೂ ವಂಚಿತರಾಗದೆ ತಮ್ಮ ಕನಸುಗಳನ್ನು ನನಸು ಮಾಡಿಕೊಳ್ಳಲು ಅವಕಾಶ ಸಿಗುತ್ತದೆ. ವಿದ್ಯಾರ್ಥಿಗಳು ಈ ಯೋಜನೆಯ ಸದುಪಯೋಗ ಪಡೆದುಕೊಂಡು ಉತ್ತಮ ಶಿಕ್ಷಣ ಪಡೆದು ವೈದ್ಯರು, ಇಂಜಿನಿಯರ್‌ಗಳು, ಐಎಎಸ್, ಐಪಿಎಸ್ ಅಧಿಕಾರಿಗಳು, ವಿಜ್ಞಾನಿಗಳು, ಶಿಕ್ಷಕರು ಹಾಗೂ ವಿವಿಧ ಉನ್ನತ ಹುದ್ದೆಗಳನ್ನು ಅಲಂಕರಿಸಿ ತಮ್ಮ ಕುಟುಂಬ, ಊರು, ಜಿಲ್ಲೆ, ರಾಜ್ಯ ಹಾಗೂ ದೇಶಕ್ಕೆ ಕೀರ್ತಿ ತರಬೇಕು ಎಂದು ಸಲಹೆ ನೀಡಿದರು.

ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಶಿವುಕುಮಾರ ಹಿರೇಮಠ, ಅವಳಿ ಹಾಲು ಒಕ್ಕೂಟದ ನಿರ್ದೇಶಕ, ಮಾಜಿ ಪುರಸಭೆ ಸದಸ್ಯರು, ಸರ್ಕಾರದ ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಎಂ.ಎಂ.ಬೂದಿಹಾಳ, ಘಟಕ ವ್ಯವಸ್ಥಾಪಕ ಅಶೋಕ ಕೋರಿ ಹಾಗೂ ಸದಸ್ಯರು, ಕೆಡಿಪಿ ನಾಮನಿರ್ದೇಶಿತ ಸದಸ್ಯರು, ವಿವಿಧ ಮುಖಂಡರು, ಶಾಲಾ–ಕಾಲೇಜುಗಳ ಪ್ರಾಂಶುಪಾಲರು, ಶಿಕ್ಷಕರು, ಸಾರಿಗೆ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಇದ್ದರು.



## ಮೂಲ ಸೌಲಭ್ಯ ಕಲ್ಪಿಸಲು ಆಗ್ರಹಿಸಿ ಮನವಿ

• **ಬೀಳಗಿ:** ಪಟ್ಟಣದ ವಾರ್ಡ್ ನಂ: 11 ನೇಕಾರ ಕಾಲೋನಿಯಲ್ಲಿ ಸಮರ್ಪಕ ರಸ್ತೆ ಮತ್ತು ಗಟಾರ ದುರಸ್ತಿ, ಶೌಚಾಲಯ ಸೇರಿದಂತೆ ಇನ್ನಿತರ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕೆಂದು 56 ಆಶ್ರಯ ನಿವಾಸಿಗಳು ತಹಶೀಲ್ದಾರ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿ ತಹಶಿಲ್ದಾರ್ (ಗ್ರೇಡ–2) ಸಂಗಮೇಶ ಚರಂತಿಮಠ ಅವರಿಗೆ ಮನವಿ ಸಲ್ಲಿಸಿದರು.

ನೇಕಾರ ಸಮಾಜದ ಮುಖಂಡ ಸಿದ್ದಪ್ಪ ಬಾಡಗಿ ಮಾತನಾಡಿ, ಬೀಳಗಿ ಪಟ್ಟಣದ ವಾರ್ಡನಂ:11ರಲ್ಲಿಕೈಮಗ್ಗಮತ್ತು ವಿದ್ಯುತ್ ಮಗ್ಗ ನೇಕಾರರಿಗೆ ಜವಳಿ ಇಲಾಖೆಯವರು ನೇಕಾರರು ಸಾಮಾಜಿಕ ಬದುಕನ್ನ ರೂಪಿಸಿ ಆರ್ಥಿಕವಾಗಿ ಸದೃಢಗೊಳಿಸಲು 2002ರಲ್ಲಿ ರಾಜೀವಗಾಂಧಿ ಗ್ರಾಮೀಣ ವಸತಿ ನಿಗಮ ಹಾಗೂ ಕೈಮಗ್ಗ ಮತ್ತು ಜವಳಿ ಇಲಾಖೆಯ ವತಿಯಿಂದ ಮನೆ ಇಲ್ಲದ ನೇಕಾರರಿಗೆ ಉತ್ತಮ ಕಾರ್ಯಸ್ಥಳ ಪರಿಸರ ಉತ್ತಮವಾದ ಬೆಳಕಿನ ವಾತಾವರಣ ಹಾಗೂ ಕೆಲಸದ ಅವಧಿಯಲ್ಲಿ ಹೆಚ್ಚಳಹೊಂದಲು ಮೂಲಭೂತ ಸೌಕರ್ಯಗಳೊಂದಿಗೆ ನೇಕಾರರ ತಲೆಯ ಮೇಲೆ ಸೂರನ್ನು ನೀಡುವ ಉದ್ದೇಶದಿಂದ ಆಶ್ರಯ ಮನೆ ನೀಡಿದ್ದು, ಯಾವುದೇ ಮೂಲ ಸೌಲಭ್ಯಗಳನ್ನು ನೀಡದೇ ಇರುವದು ಖಂಡನೀಯ ಎಂದರು.

ನೇಕಾರ ಕಾಲೋನಿ ನಿವಾಸಿ ರಾಜೇಶ್ವರಿ ಮರೆಣ್ಣೆ ಮಾತನಾಡಿ, ನೇಕಾರರು 18 ವರ್ಷಗಳಿಂದ ಆಶ್ರಯ ಯೋಜನೆ ಮನೆಯಲ್ಲಿ ವಾಸಿಸುತ್ತಿದ್ದು, ಸಮರ್ಪಕ ರಸ್ತೆ ಇಲ್ಲದಿರುವರಿಂದ ವಯೋವೃದ್ಧರು, ಮಕ್ಕಳು ನಡೆದಾಡಲು ತುಂಬಾ ತೊಂದರೆಯಾಗಿದ್ದು, ಈ ಬಗ್ಗೆ ಪಟ್ಟಣ ಪಂಚಾಯತಿ ಕಾರ್ಯಾಲಯಕ್ಕೆ ಹಾಗೂ ಜನ ಪ್ರತಿನಿಧಿಗಳಿಗೆ ಸಾಕಷ್ಟು ಬಾರಿ ಅರ್ಜಿ ಸಲ್ಲಿಸಿದರೂ ಯಾರು ಸರಿಯಾಗಿ ಸ್ಪಂದಿಸದೆ ಇರುವದು ನಮ್ಮ ದುರಂತ ಎಂದರು.

ಮನವಿಗೆ ಜು.13 ರ ಒಳಗಾಗಿ ಸ್ಪಂದಿಸಬೇಕು. ಇಲ್ಲದಿದ್ದಲ್ಲಿ ನೇಕಾರ ಕಾಲೋನಿಯ 56 ಕುಟುಂಬದವರು ಮಕ್ಕಳುಮರಿಯೊಂದಿಗೆ ಜು.14ರಂದು ಬೀಳಗಿಯ ತಹಶೀಲ್ದಾರ್ ಕಚೇರಿಯ ಮುಂದೆ ಉಪವಾಸ, ರಸ್ತಾ ರೋಖೋ ಚಳುವಳಿ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದರು. ಎಸ್.ಬಿ.ಬಾದರದಿನ್ನಿ, ಪಿ.ಎಂ. ಸೊನ್ನ, ವಿ.ಎಸ್.ಬಾದರದಿನ್ನಿ, ಶಂಕ್ರವ್ವ , ನಾಗವೇಣಿ ಕಡಕೋಳ, ಅನುಸೂಯಾ ಕೋಟಿ, ಶೋಭಾ ನಾಗರಾಳ, ವಿಜಯಲಕ್ಷ್ಮಿ ಕೋಟಿ, ಲಕ್ಷ್ಮೀ ಖವಾಸಿ, ಮಂಜುಳಾ ಬಾಡಗಿ, ಪೂರ್ಣಿಮಾ ಹಿಪ್ಪರಗಿ, ನಾಗಮ್ಮ ಕುಂದರಗಿ ಮತ್ತಿತರಿದ್ದರು.



## ಪರಿಸರ ರಕ್ಷಣೆ ಪ್ರತಿಯೊಬ್ಬರ ಕರ್ತವ್ಯ: ವಿಪ ಸದಸ್ಯ ಪೂಜಾರ

• **ಬಾಗಲಕೋಟೆ:** ತಾಲೂಕಿನ ಶಿರೂರು ಗ್ರಾಮದಲ್ಲಿ ಓಂಕಾರ್ ಮಾನೆ ಫೌಂಡೇಶನ್ ವತಿಯಿಂದ ಪ್ರಧಾನಿ ನರೇಂದ್ರ ಮೋದಿ ಅವರ ಆಶಯದಂತೆ ಒಂದು ಮರ ತಾಯಿಯ ಹೆಸರಿನ ಮೇಲೆ ಅಭಿಯಾನ ಕಾರ್ಯಕ್ರಮ ನಡೆಯಿತು.

ಅಭಿಯಾನ ಉದ್ಘಾಟಿಸಿ ಮಾತನಾಡಿದ ವಿಧಾನ ಪರಿಷತ್ ಶಾಸಕ ಪಿ.ಎಚ್.ಪೂಜಾರ, ಪ್ರತಿಯೊಬ್ಬರು ಇಂದು ಮೊಬೈಲ್ ಯುಗದಲ್ಲಿ ಜೀವನ ನಡೆಸುತ್ತಿದ್ದು, ಪರಿಸರ ಸಂರಕ್ಷಣೆ ಮರೆಯುತ್ತಿದ್ದೇವೆ ಎಂದು ಹೇಳಿದರು.

ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ ಅವರ ಈ ಅಭಿಯಾನ ಪರಿಸರ ಸಂರಕ್ಷಣೆ ಜೊತೆಗೆ ಸಮಾಜ ಭಾವನಾತ್ಮಕ ಬೆಸೆಯುತ್ತಿದೆ. ಈ ನಿಟ್ಟಿನಲ್ಲಿ ಓಂಕಾರ್ ಮಾನೆ ಫೌಂಡೇಶನ್ ಅವರು ಪ್ರತಿ ಗ್ರಾಮ ಗ್ರಾಮಗಳಿಗೆ ಈ ಅಭಿಯಾನ



ತಲುಪಿಸುತ್ತಿರುವ ಈ ಕಾರ್ಯ ಶ್ಲಾಘನೀಯ ಎಂದರು.

ಓಂಕಾರ್ ಮಾನೆ ಫೌಂಡೇಶನ್ ಅಧ್ಯಕ್ಷ ಡಾ.ಶೇಖರ್ ಮಾನೆ ಮಾತನಾಡಿ, ಸಣ್ಣದಾಗಿ ಶುರುವಾದ ಈ ಅಭಿಯಾನಕ್ಕೆ ಸಿಕ್ಕ ಸ್ಪಂದನೆ ನಿಜಕ್ಕೂ ನಮಗೆ ಖುಷಿ ನೀಡಿದೆ, ಪ್ರತಿಯೊಬ್ಬರು ಪ್ರಧಾನಿಗಳಾದ ನರೇಂದ್ರ ಮೋದಿ ಅವರ ಆಶಯದಂತೆ ತಮ್ಮ ತಾಯಿಯ ಹೆಸರಿನಲ್ಲಿ ಸಸಿ ನೆಟ್ಟು ಅದನ್ನು ಪೋಷಿಸಿ ಬೆಳಸಬೇಕು ಎಂದರು.

ಕುಮಾರ ಗಿರ್ಜಾ, ಪಾಪು ರೆಡ್ಡಿ ಕೋಟಿಕಲ್, ಮುತ್ತು ಜಾಗಿರ್ದಾರ, ಮಾಂತೇಶ ಗಿರಿಜಾ, ನಾಗೇಶ ಬಾಂಬೆ, ರಮೇಶ್ ಸೂಳಿಬಾವಿ, ನೀಲಪ್ಪ ಬಾರಟ್ಟಿ, ಯಮನಪ್ಪ ಹೂಗಾರ, ಶೇಕಪ್ಪ ಅಂಗಡಿ, ದ್ಯಾವಪ್ಪ ಗಾಣಗೇರ, ಮುದಿಯಪ್ಪ ಹೊಸ್ಮನಿ, ಸಿದ್ದು ಚೇತವಾಡಗಿ, ಪ್ರಶಾಂತ ಚಿತ್ತವಾಡಗಿ, ಪ್ರಭು ಪೆಟ್ ಶೆಟ್ರು, ಮಾಂತೇಶ ಕಲಗುಡಿ, ಮಂಜುನಾಥ ಮೆಣಸ್ಗಿ, ಸಿದ್ದು ಸಂಕೀನ, ಭೀಮಪ್ಪ ಕೊರಟ್ಟಿ, ಮನೋಜ ಸಂಜನ್, ಸಾಯಿ ಕುಮಾರ ಸುಳಿಕೇರಿ, ಆಕಾಶ ಕುಂಬಾರ್, ಹನುಮಂತ ಬಸರಿಕಟ್ಟಿ, ಸಂತೋಷ ಹೂಗಾರ, ನಿಂಗು ಲಂಕಾದ, ಹಣಮಂತ ಹಾವರ್ಗಿ, ಸಿದ್ದಪ್ಪ ಪಲ್ಲೇದ ಉಪಸ್ಥಿತರಿದ್ದರು.

## ಮಾದಕ ವ್ಯಸನ ದುಷ್ಪರಿಣಾಮ ಬಗ್ಗೆ ಜಾಗೃತಿ ಅವಶ್ಯ: ಐಗಳಿ

• **ಸಾವಳಗಿ:** ವ್ಯಸನಿಗಳಿಗೆ ಸೂಕ್ತ ಪುನರ್ವಸತಿ, ಕಟ್ಟುನಿಟ್ಟಾದ ಕಾನೂನು ಕ್ರಮ ಮೂಲಕ ವ್ಯಸನ ಮುಕ್ತ ಸಮಾಜ ನಿರ್ಮಾಣ ಸಾಧ್ಯ. ಇದಕ್ಕಾಗಿ ಶಿಕ್ಷಣ ಮತ್ತು ಜಾಗೃತಿ ಅಗತ್ಯ. ಶಾಲೆ ಮತ್ತು ಕಾಲೇಜು ಹಂತದಿಂದಲೇ ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿವಳಿಕೆ ನೀಡಬೇಕು. ಯುವ ಸಮೂಹವನ್ನು ಕ್ರೀಡೆ, ಸಾಹಿತ್ಯ ಮತ್ತು ಸೃಜನಾತ್ಮಕ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡಬೇಕಿದೆ ಎಂದು ಸಾವಳಗಿ ಪಿಎಸ್‌ಐ ಅಪ್ಪಣ್ಣ ಐಗಳಿ ತಿಳಿಸಿದರು.

ಸಮೀಪದ ತುಂಗಳ ಗ್ರಾಮದ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಸಾವಳಗಿ ಪೊಲೀಸ್ ಠಾಣೆಯ ವತಿಯಿಂದ ಏರ್ಪಡಿಸಿದ್ದ ಅಂತರರಾಷ್ಟ್ರೀಯ ಮಾದಕ ವಸ್ತುಗಳ ವಿರೋಧಿ ಜಾಗೃತಿ ಕಾರ್ಯಕ್ರಮ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು, ಕಾರ್ಯಕ್ರಮಗಳಿಂದ ಜನರಲ್ಲಿ ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ತಿಳುವಳಿಕೆ ಮತ್ತು ಜಾಗೃತಿ ಮೂಡುತ್ತದೆ. ಇಂತಹ ಕಾರ್ಯಕ್ರಮಗಳು ಹೆಚ್ಚು ನಡೆಯುವ ಮೂಲಕ ಅರಿವು ಮೂಡಿಸುವ



ಕೆಲಸವಾಗಬೇಕು ಎಂದು ಸಲಹೆ ನೀಡಿದರು. ಪ್ರಾಂಶುಪಾಲ ಹಣಮಂತ ಮಗದುಮ ಮಾತನಾಡಿ, ಮಾದಕ ವಸ್ತುಗಳ ಬಳಕೆ ಮತ್ತು ಅಕ್ರಮ ಸಾಗಣೆ ವಿರುದ್ಧ ಎಚ್ಚೆತ್ತುಕೊಳ್ಳದೆ ಹೋದಲ್ಲಿ ಯುವಪೀಳಿಗೆ ಇದಕ್ಕೆ ದಾಸರಾಗಿ ವಿನಾಶದ ಅಂಚಿಗೆ ತಲುಪುತ್ತಾರೆ ಎಂದರು. ಕಾಲೇಜು ಸಲಹಾ ಸಮಿತಿಯ ಅಧ್ಯಕ್ಷ ಚಿದಾನಂದ ಬಿರಾದಾರ, ಪೊಲೀಸ್ ಠಾಣೆಯ ಸಿಬ್ಬಂದಿಗಳಾದ ಶಿವಾನಂದ ಭಜಂತ್ರಿ, ಸದಾಶಿವ ಶೆಟ್ಟನ್ನವರ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಸಹಕಾರ ಕ್ಷೇತ್ರದ ಬೆಳವಣಿಗೆಗೆ ನೆರವು



• **ಬಾಗಲಕೋಟೆ:** ತಾಲೂಕು ಒಕ್ಕಲುತನ ಹುಟ್ಟುವಳಿ ಮಾರಾಟ ಸಹಕಾರಿ ಸಂಘ(ನಿ)ದಿಂದ ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ಉಮೇಶ ಎಚ್. ಮೇಟಿ ಅವರಿಗೆ ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಶಾಸಕ ಉಮೇಶ ಮೇಟಿ ಅವರು, ತಮ್ಮ ತಂದೆ ದಿವಂಗತ ಎಚ್.ವೈ.ಮೇಟಿ ಅವರು ಈ ಸಂಘದ ಮೂಲಕವೇ ರಾಜಕೀಯ ಜೀವನಕ್ಕೆ ಪ್ರವೇಶಿಸಿ, ನಿರ್ದೇಶಕರಾಗಿ ಹಾಗೂ ಅಧ್ಯಕ್ಷರಾಗಿ ಸೇವೆ ಸಲ್ಲಿಸುವ ಮೂಲಕ ಸಂಘದ ಅಭಿವೃದ್ಧಿಗೆ ಮಹತ್ವದ ಕೊಡುಗೆ ನೀಡಿದ್ದರು ಎಂದು ಸ್ಮರಿಸಿದರು.ಅವರ ಆದರ್ಶಗಳನ್ನು ಮುಂದುವರಿಸಿಕೊಂಡು ನಾನು ಸಹ ಸರ್ಕಾರದ ಸಹಕಾರದೊಂದಿಗೆ ಸಹಕಾರ ಕ್ಷೇತ್ರದ ಅಭಿವೃದ್ಧಿಗೆ ಅಗತ್ಯ ನೆರವು ಹಾಗೂ ಸೇವೆ ನೀಡಲು ಬದ್ಧನಾಗಿದ್ದೇನೆ. 2013ರಲ್ಲಿ ತಮ್ಮ ತಂದೆ ಎಚ್.ವೈ.ಮೇಟಿ ಅವರ ಅಧ್ಯಕ್ಷತೆಯಲ್ಲಿ ಸಂಘದ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಗಿತ್ತು. ಇಂದು ಆ ಕಟ್ಟಡ ಸಂಘದ ಪ್ರಗತಿ ಹಾಗೂ ಅಭಿವೃದ್ಧಿಯ ಪ್ರತೀಕವಾಗಿ ನಿಂತಿರುವುದು ಸಂತಸದ ಸಂಗತಿಯಾಗಿದೆ ಎಂದು ತಿಳಿಸಿದರು.ಸಂಘದ ಅಧ್ಯಕ್ಷ ವಿ.ವೈ.ರಂಗಣ್ಣವರ, ಉಪಾಧ್ಯಕ್ಷ ಎಸ್.ಜಿ.ಹಿರೇಮಠ, ನಿರ್ದೇಶಕರಾದ ಮಂಜುನಾಥ ಬಿಲಕೇರಿ, ಮುತ್ತಪ್ಪ ಹುಗ್ಗಿ, ಲಕ್ಷ್ಮಣ ದಡ್ಡಿ, ವೈ.ವೈ.ತಿಮ್ಮಾಪುರ ಸೇರಿದಂತೆ ಆಡಳಿತ ಮಂಡಳಿಯ ಸದಸ್ಯರು ಹಾಗೂ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಇಂದಿನಿಂದ ಅಂತಾರಾಷ್ಟ್ರೀಯ ಸಮ್ಮೇಳನ

• **ಬಾಗಲಕೋಟೆ:** ನವನಗರದ ಎಂ.ಆರ್‌ಎನ್.ಆಯುರ್ವೇದಿಕ್ ಮೆಡಿಕಲ್ ಕಾಲೇಜಿನಲ್ಲಿ ಜೂ.26 ಮತ್ತು 27ರಂದು ಎಂಆರ್‌ಎನ್ ಜ್ಞಾನ ಸಂಕೀರ್ಣ ಅಂತರಾಷ್ಟ್ರೀಯ ಸಮ್ಮೇಳನ ಮತ್ತು ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕಾಲೇಜಿನ ಪ್ರಾಚಾರ್ಯ ಶಿವುಕುಮಾರ ಗಂಗಲ್ ತಿಳಿಸಿದರು.

ನವನಗರದ ಪತ್ರಿಕಾಭವನದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1200ಕ್ಕಿಂತ ಹೆಚ್ಚು ಆಯುರ್ವೇದ ವಿದ್ಯಾರ್ಥಿಗಳು ಸೇರಿ ಸ್ನಾತಕ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು, ಉಪನ್ಯಾಸಕರು, ವೈದ್ಯರು ಭಾರತದ ವಿವಿಧ ರಾಜ್ಯದಿಂದ ಪ್ರತಿನಿಧಿಸುವರು. 350 ವೈಜ್ಞಾನಿಕ ಪ್ರಬಂಧಗಳು, 120 ಭಿತ್ತಿ ಪತ್ರಗಳು, 80 ನಿಬಂಧಗಳು, ಮತ್ತು 52 ವಿಡಿಯೋಗಳನ್ನು ಎಂ.ಆರ್.ಎನ್. ಜ್ಞಾನ ಸಂಕೀರ್ಣ ಅಂತಾರಾಷ್ಟ್ರೀಯ ಸಮ್ಮೇಳನ ಮತ್ತು ಕಾರ್ಯಾಗಾರದಲ್ಲಿ ಪೂರ್ವಭಾವಿಯಾಗಿ ಮಂಡಿಸಲಿದ್ದಾರೆ ಎಂದರು. ಮಾಜಿ ಸಚಿವ ಮುರಗೇಶ ನಿರಾಣಿ, ಬೆಂಗಳೂರಿನ ರಾಜೀವ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಉಪಕುಲಪತಿ ಡಾ.ಬಿ.ಸಿ.ಭಗವಾನ್ ಕಾರ್ಯಕ್ರಮ ಉದ್ಘಾಟಿಸುವರು. ಬೆಂಗಳೂರಿನ ರಾಜೀವ್ ಗಾಂಧಿ ಆರೋಗ್ಯ ವಿವಿ ಸಿಂಡಿಕೇಟ್ ಸದಸ್ಯ ಡಾ.ಸಿದ್ದನಗೌಡ ಪಾಟೀಲ ಮತ್ತು ಡಾ.ಲೀಲಾಧರ ಡಿ.ವಿ, ಸಂಸ್ಥೆಯ ಅಧ್ಯಕ್ಷೆ ಮಾಧುರಿ ಮುಧೋಳ ಉಪಸ್ಥಿತರಿರುವರು ಎಂದರು. ಪತ್ರಿಕಾಗೋಷ್ಠಿಯಲ್ಲಿ ಡಾ.ಮಹಾಂತೇಶ ಹಿರೇಮಠ, ಡಾ.ಎ.ಹಬೀಬ್ ಬಾಳಿಕಾಯಿ, ಡಾ.ಸೌಮ್ಯ ಮಂಗಳೂರ, ಡಾ.ದೀಪಾ ಗಂಗಲ್, ಡಾ.ವಿಜಯಕುಮಾರ ಚವಡಿ, ಡಾ.ಈಶ್ವರ್ ಪಾಟೀಲ ಪತ್ರಿಕಾಗೋಷ್ಠಿಯಲ್ಲಿದ್ದರು.



## ಮೊಹರಂ: ಶಾಂತಿಪಾಲನಾ ಸಮಿತಿ ಸಭೆ



• **ಕಲಾದಗಿ:** ಗ್ರಾಮದಲ್ಲಿ ನಡೆಯುವ ಜೂ.26ರಂದು ಶುಕ್ರವಾರ ನಡೆಯುವ ಮೊಹರಂ ಹಬ್ಬವನ್ನು ಭಾವೈಕ್ಯತೆಯಿಂದ ಆಚರಿಸಬೇಕು. ಯಾರಿಂದಲೂ ಕಾನೂನು ಚೌಕಟ್ಟನ್ನು ಮೀರುವ ಕೆಲಸ ಆಗಬಾರದು ಎಂದು ಬಾಗಲಕೋಟೆ ಗ್ರಾಮೀಣ ಸಿಪಿಐ ಆರ್.ಎಸ್.ಬಿರಾದಾರ ಹೇಳಿದರು. ಇಲ್ಲಿನ ಪೋಲಿಸ್ ಠಾಣೆಯಲ್ಲಿ ಮೊಹರಂ ಹಬ್ಬದ ನಿಮಿತ್ತ ನಡೆದ ಶಾಂತಿಪಾಲನಾ ಸಮಿತಿ ಸಭೆಯಲ್ಲಿ ಮಾತನಾಡಿದರು.

ಕಲಾದಗಿ ಪಿಎಸ್‌ಐ ಪ್ರವೀಣ ಬೀಳಗಿ ಮಾತನಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಾಕಾರಿ ಪೋಸ್ಟ್‌ಗಳನ್ನು ಹರಿಬಿಡುವ ಕೆಲಸವನ್ನು ಯುವಕರು ಮಾಡಬಾರದು. ಹಾಗೇನಾದರು ಆದರೆ ಕಾನೂನಿನ ಚೌಕಟ್ಟಿನಲ್ಲಿ ಅದಕ್ಕೆ ತಕ್ಕ ಕ್ರಮವನ್ನು ಅನುಭವಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಹಸನ್ಮಹದ ರೋಣ, ಕೆ.ಆರ್.ಶಿಲ್ಪಿ, ಎ.ಜಿ.ಬಾರೂದವಾಲೆ, ಸಂಗಪ್ಪ ಛಬ್ಬಿ, ಮಲ್ಲಪ್ಪ ಜಮಖಂಡಿ, ರೆಹಮಾನಸಾಬ ಮಕಾನದಾರ, ಸಂಜಯ ಗಣಾಚಾರಿ ಮಾತನಾಡಿ, ಗ್ರಾಮದಲ್ಲಿ ಎಲ್ಲಾ ಧರ್ಮದವರು ಸಹೋಧರತ್ವದಿಂದ ಇದ್ದು ಭಾವೈಕ್ಯತೆ ಧರ್ಮ ಪಾಲಿಸುತ್ತೇವೆ ಎಂದು ಭರವಸೆ ನೀಡಿದರು.ಅಂಜುಮನ್ ಕಮಿಟಿ ಅಧ್ಯಕ್ಷ ಆರ್.ಬಿ.ಬೇಪಾರಿ, ರಾಜೇಸಾಬ ಗೋಠೆ, ಉಸ್ಮಾನಸಾಬ ರೋಣ. ದಯಾನಂದ ಆಲಗುಂಡಿ, ಅಮೀನಸಾಬ ಬೀಳಗಿ, ಶ್ಯಾಮಕಾಳೆ, ಸುಭಾಷ ದುರ್ವೆ, ಸದಾಶಿವ ಪೂಜಾರಿ, ಮಂಜು ಕಾಳೆ ಇದ್ದರು.

## ಶ್ರವಣ ಸಾಧನ ಉಚಿತ ವಿತರಣೆ

• **ಬಾಗಲಕೋಟೆ:** ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಗಳನ್ನು ಸಾರ್ವಜನಿಕರಿಗೆ ತಲುಪಿಸಿ ಆ ಮೂಲಕ ಆರೋಗ್ಯಕರ ಸಮಾಜ ನಿರ್ಮಾಣ ಮಾಡುವುದು ಅವಶ್ಯಕವಾಗಿದ್ದು, ವಿಶಿಷ್ಟಚೇತನರು ಸಮಾಜದ ಮುಖ್ಯವಾಹಿನಿಗೆ ಕರೆತರುವುದು ಅಗತ್ಯವಿದೆ ಎಂದು ಬಿವಿವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಹೇಳಿದರು.

ಬಿವಿವಿ ಸಂಘದ ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಹಾನಗಲ್ಲ ಕುಮಾರೇಶ್ವರ ಆಸ್ಪತ್ರೆಯಲ್ಲಿ ರೋಗಿಗಳಿಗೆ ಉಚಿತ ಶ್ರವಣ ಸಾಧನಗಳನ್ನು ವಿತರಿಸಿ ಮಾತನಾಡಿದ ಅವರು, ಅನೇಕ ಆರೋಗ್ಯ ಯೋಜನೆಗಳನ್ನು ಜಾರಿಗೆ ತರಲಾಗಿದ್ದು, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆಯ ಅಡಿಪ್ ಯೋಜನೆಯಡಿ ರೋಗಿಗಳಿಗೆ ಶ್ರವಣ ಸಾಧನಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ಒಟ್ಟು 32 ಫಲಾನುಭವಿಗಳಿಗೆ 64



ಶ್ರವಣ ಸಾಧನಗಳನ್ನು ವಿತರಿಸಿದ್ದೇವೆ. ಕೇಂದ್ರ ಸರ್ಕಾರದ ಕಾರ್ಯ ಯೋಜನೆಗಳನ್ನು ಸಾರ್ವಜನಿಕರಿಗೆ ತಲುಪಿಸಲುಕುಮಾರೇಶ್ವರಆಸ್ಪತ್ರೆಯ ಮೂಲಕ ಪ್ರಯತ್ನಿಸಲಾಗುತ್ತಿದೆ ಎಂದರು. ಬಿವಿವಿ ಸಂಘದ ಗೌರವ ಕಾರ್ಯದರ್ಶಿ ಮಹೇಶ ಅಥಣಿ, ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್. ಸಜ್ಜನ(ಬೇವೂರ), ಕಾಲೇಜಿನ ಪ್ರಾಚಾರ್ಯ ಡಾ.ಭುವನೇಶ್ವರಿ ಯಳಮಲಿ, ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ, ಉಪಪ್ರಾಚಾರ್ಯ ಡಾ.ಸಿ.ಎಸ್ .ಹಿರೇಮಠ, ಬಿವಿವಿಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ಪ್ರಾಚಾರ್ಯ ಡಾ.ಶ್ರೀವಿದ್ಯಾ ಇದ್ದರು.

## ಕಿರುಸುದ್ದಿ

### ವುಮೆನ್ ಸೈಕ್ಲಿಂಗ್ ಸಿಟಿ ಲೀಗ್ ನಾಳೆ

**ಕೊಲ್ಹಾರ:** ಪಟ್ಟಣದಲ್ಲಿ ಜೂ.27ರಂದು ಶನಿವಾರ ತಾಲೂಕುಮಟ್ಟದ 'ಅಸ್ಮಿತಾ' ಖೇಲೋ ಇಂಡಿಯಾ ವುಮೆನ್ಸ್ ಸೈಕ್ಲಿಂಗ್ ಸಿಟಿ ಲೀಗ್ ಎಂದು ಜಿಲ್ಲಾ ಅಮೇಚೂರು ಸೈಕ್ಲಿಂಗ್ ಅಸೋಸಿಯೇಶನ್ ಸದಸ್ಯರಾದ ರಾಜಶೇಖರ್ ಶೀಲವಂತ ತಿಳಿಸಿದರು. ಪಟ್ಟಣದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಕ್ರೀಡಾ ಪ್ರಾಧಿಕಾರ, ಸೈಕ್ಲಿಂಗ್ ಫೆಡರೇಷನ್ ಆಫ್ ಇಂಡಿಯಾ, ಕರ್ನಾಟಕ ರಾಜ್ಯ ಅಮೇಚೂರು ಸೈಕ್ಲಿಂಗ್ ಅಸೋಸಿಯೇಶನ್, ಜಿಲ್ಲಾ ಸೈಕ್ಲಿಂಗ್ ಅಸೋಸಿಯೇಶನ್, ಸಂಗಮೇಶ್ವರ ವಿದ್ಯಾವರ್ಧಕ ಸಂಘ ಕೊಲ್ಹಾರ, ವಿಶಾಲ್ ಸೈಕಲ್ ಮಾಲ್, ಜಿಲ್ಲಾಡಳಿತ, ಯುವ ಜನ ಸೇವೆ ಮತ್ತು ಯುವ ಸಬಲೀಕರಣ ಕ್ರೀಡಾ ಇಲಾಖೆಯ ಸಹಯೋಗದಲ್ಲಿ ಈ ಸೈಕ್ಲಿಂಗ್ ಸಿಟಿ ಲೀಗ್ ನಡೆಯಲಿದೆ ಎಂದರು.

ಪಟ್ಟಣದ ಸಂಗಮೇಶ್ವರ ವಿದ್ಯಾವರ್ಧಕ ಸಂಘದ ಸಂಗಮೇಶ್ವರ ಪದವಿ ಪೂರ್ವ ಕಾಲೇಜನಿಂದ ಪಟ್ಟಣದ ವಿವಿಧ ಸುತ್ತುಗಳಲ್ಲಿ ಸ್ಪರ್ಧೆ ನಡೆಯಲಿದೆ ಎಂದು ಹೇಳಿದರು. ವೃತ್ತಿಪರ ಸೈಕಲ್ ಪಟುಗಳ ವಿಭಾಗದಲ್ಲಿ 13ರಿಂದ 16 ವರ್ಷದೊಳಗಿನ ಬಾಲಕಿಯರಿಗಾಗಿ 5 ಕಿ.ಮೀ, 17ರಿಂದ 18 ವರ್ಷದೊಳಗಿನ ಬಾಲಕಿಯರಿಗಾಗಿ 10 ಕಿ.ಮೀ ಸೈಕ್ಲಿಂಗ್ ಆಯೋಜಿಸಲಾಗಿದೆ ಎಂದು ಹೇಳಿದರು. ಅದೇ ಸಾಮಾನ್ಯ ಸೈಕಲ್ ಸವಾರರಿಗೆ 16 ವರ್ಷದ ಬಾಲಕಿಯರಿಗಾಗಿ 3 ಕಿ.ಮೀ. 18 ವರ್ಷದ ಬಾಲಕಿಯರಿಗಾಗಿ 6 ಕಿ.ಮೀ ಸೈಕ್ಲಿಂಗ್ ನಡೆಯಲಿದೆ. ಇದುವರೆಗೂ 25 ಜನರು ತಮ್ಮ ಹೆಸರು ನೋಂದಾಯಿ-ಸಿಕೊಂಡಿದ್ದು, ಒಟ್ಟು 100 ಪಟುಗಳು ಭಾಗವಹಿಸುವ ನಿರೀಕ್ಷೆ ಇದೆ ಎಂದು ಮಾಹಿತಿ ನೀಡಿದರು. ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದವರೆಗೆ ಪದಕ, ಪ್ರಮಾಣಪತ್ರ ಜತೆಗೆ ಎಲ್ಲ ಸ್ಪರ್ಧಿಗಳಿಗೆ ಪ್ರಮಾಣಪತ್ರ ನೀಡಲಾಗುತ್ತದೆ. ಗೆದ್ದವರು ಆಗಸ್ಟ್‌ನಲ್ಲಿ ನಡೆಯುವ ರಾಜ್ಯ ಮಟ್ಟದ ಲೀಗ್ ಗೆ ಅರ್ಹತೆ ಪಡೆಯಲಿದ್ದಾರೆ ಎಂದು ವಿವರಿಸಿದರು. ಅಂದು ಬೆಳಗ್ಗೆ 6 ರಿಂದ 12 ರ ವರೆಗೂ ನಡೆಯಲಿರುವ ಲೀಗ್‌ಗೆ ಪಿಎಸ್‌ಐ ಅಶೋಕ ನಾಯಕ ಚಾಲನೆ ನೀಡಲಿದ್ದಾರೆ. ಪಟ್ಟಣ ಪಂಚಾಯತಿ ಸದಸ್ಯರಾದ ಅಪ್ಪಾಸಿ ಮತ್ಯಾಳ, ಶ್ರೀಶೈಲ ಮಲ್ವಾಡ್ ಸೇರಿದಂತೆ ಗಣ್ಯರು ಉಪಸ್ಥಿತರಿರುವರು ಎಂದರು. ಜಿಲ್ಲಾ ಅಮೇಚೂರು ಸೈಕ್ಲಿಂಗ್ ಅಸೋಸಿಯೇಶನ್ ಸದಸ್ಯರಾದ ಎಸ್.ಎನ್. ಗಿಡ್ಡಪ್ಪಗೋಳ, ಹಾಗೂ ಅಲ್ಲಾಭಕ್ಷ ಪಕಾಲಿ ಇದ್ದರು.

### ಬಿತ್ತನೆ ಬೀಜ ಮಾರಾಟ ಮಳಿಗೆಗೆ ಅರ್ಜಿ ಆಹ್ವಾನ

**ವಿಜಯಪುರ:** ಜಿಲ್ಲೆಯಲ್ಲಿನ ಬೀಜ ಮಾರಾಟ ಮಳಿಗೆಗಳು, ಕೃಷಿ ಸೇವಾ ಕೇಂದ್ರಗಳು ಹಾಗೂ ಕೃಷಿ ಸಂಬಂಧಿತ ವಹಿವಾಟು ನಡೆಸುತ್ತಿರುವ ಅರ್ಹ ವ್ಯಾಪಾರಿಗಳು ಬಿತ್ತನೆ ಬೀಜ ಮಾರಾಟಕ್ಕೆ ಅಗತ್ಯವಾದ ಬೀಜ ಮಾರಾಟ ಪರವಾನಗಿ (ಸೀಡ್ ಲೈಸೆನ್ಸ್) ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ. ಬೀಜ ಕಾಯ್ದೆ-1966 ಹಾಗೂ ಬೀಜ ನಿಯಮ-1968ರ ಅನ್ವಯ ರೈತರಿಗೆ ಗುಣಮಟ್ಟದ ಮತ್ತು ಪ್ರಮಾಣಿತ ಬೀಜಗಳನ್ನು ಮಾತ್ರ ಮಾರಾಟ ಮಾಡಬೇಕು. ಅದರಂತೆ ತರಕಾರಿ ಮತ್ತು ಹೂವಿನ ಬೀಜಗಳನ್ನು ಮಾರಾಟ ಮಾಡುವ ವ್ಯಾಪಾರಸ್ಥರು ಬೀಜಗಳ ನಿಯಂತ್ರಣ ಆದೇಶ-1983ರ ಪ್ರಕಾರ ತೋಟಗಾರಿಕೆ ಇಲಾಖೆಯಿಂದ ಬೀಜ ಮಾರಾಟ ಪರವಾನಗಿ ಪಡೆಯುವುದು ಕಡ್ಡಾಯವಾಗಿದೆ. ಆದ್ದರಿಂದ ಜಿಲ್ಲೆಯಲ್ಲಿನ ಎಲ್ಲಾ ಬೀಜ ಮಾರಾಟ ವ್ಯಾಪಾರಿಗಳು ಜುಲೈ 15ರೊಳಗಾಗಿ ಸೇವಾ ಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿ ಬೀಜ ಮಾರಾಟ ಪರವಾನಗಿ ಪತ್ರವನ್ನು ಪಡೆಯಬೇಕು.ಪರವಾನಗಿ ಪಡೆಯದೇ ಬೀಜ ಮಾರಾಟ ನಡೆಸುತ್ತಿರುವುದು ಕಂಡು ಬಂದಲ್ಲಿ ಸಂಬಂಧಪಟ್ಟವರ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖೆ ಎಚ್ಚರಿಕೆ ನೀಡಿದೆ.

ಪರವಾನಗಿ ಪಡೆಯಲು ಅರ್ಜಿ ನಮೂನೆ ಜೊತೆಗೆ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಜಿಎಸ್‌ಟಿ ನೋಂದಣಿ ಪ್ರಮಾಣಪತ್ರ, ಬೀಜ ಉತ್ಪಾದನಾ ಸಂಸ್ಥೆಯಿಂದ ಪಡೆದ ಬೀಜ ಮೂಲ ಪ್ರಮಾಣಪತ್ರ, ಮಳಿಗೆಯ ಸ್ವಂತ ಅಥವಾ ಬಾಡಿಗೆ ದಾಖಲಾತಿಗಳು, ನಗರಸಭೆ ಅಥವಾ ಗ್ರಾಮ ಪಂಚಾಯಿತಿಯಿಂದ ಪಡೆದ ಮಳಿಗೆ ನೋಂದಣಿ ಪ್ರಮಾಣಪತ್ರ, ಹಾಗೂ ಇತ್ತೀಚಿನ ತೆರಿಗೆ ಪಾವತಿ ರಶೀದಿ ಸೇರಿದಂತೆ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆಯೂ ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಸಮೀಪದ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ ಸಂಪರ್ಕಿಸಬಹುದು ಎಂದು ತೋಟಗಾರಿಕೆ ಇಲಾಖೆ ಪ್ರಕಟಣೆ ತಿಳಿಸಿದೆ.

### ಜೈನಾಬಿ ಕುಳಗೇರಿ ನಿಧನ

**ನಿಡಗುಂದಿ:** ಪಟ್ಟಣದ ಹಾಜಿ ಜೈನಾಬಿ ಕುಳಗೇರಿ (84) ಅವರು ಮಂಗಳವಾರ ನಿಧನರಾದರು. ಮೃತರಿಗೆ ಓರ್ವ ಪುತ್ರ ಸೇರಿದಂತೆ ಬಂಧು ಬಳಗ ಇದ್ದಾರೆ. ಅವರ ನಿಧನಕ್ಕೆ ಬಂಧು-ಬಳಗ ಹಾಗೂ ಸಾರ್ವಜನಿಕರು ಸಂತಾಪ ಸೂಚಿಸಿದ್ದಾರೆ.





ಬಸವನಬಾಗೇವಾಡಿ: ತಾಲೂಕಿನ ಮನಗೂಳಿ ಪಟ್ಟಣದ ಆರಕ್ಷಕ ಠಾಣೆಯ ಸಹಯೋಗದಲ್ಲಿ ಮಾದಕ ದ್ರವ್ಯ ದುರ್ಬಳಕೆ ಮತ್ತು ಅಕ್ರಮ ಸಾಗಾಣಿಕೆ ವಿರುದ್ಧ ಅಂತರರಾಷ್ಟ್ರೀಯ ದಿನಾಚರಣೆಯ ನಿಮಿತ್ತ ಮನಗೂಳಿ ಪಟ್ಟಣದಲ್ಲಿ ವಿದ್ಯಾರ್ಥಿಗಳು ಒಳಗೊಂಡ ಜಾಗೃತಿ ಜಾಥಾ ಮಾಡುವುದರ ಮೂಲಕ ಜಾಗೃತಿ ಮೂಡಿಸಲಾಯಿತು. ಪಿಎಸ್‌ಐ ವಿಜಯಕುಮಾರ ರಾಠೋಡ, ಎಎಸ್‌ಐ ಬಿ.ಕೆ.ಚೌರಿ, ಸಿಬ್ಬಂದಿಗಳಾದ ಸದಾನಂದ ಬಿರಾದಾರ, ಅಕ್ಷಯ ಕುಲಕರ್ಣಿ, ಪಿ.ಜಿ. ಬಜಂತ್ರಿ, ಎಂ.ಜಿ.ಹೊಸಮನಿ, ರಾಜು ಹಡಪದ ಉಪಸ್ಥಿತರಿದ್ದರು.

## ಅಧ್ಯಕ್ಷ, ಕಾರ್ಯದರ್ಶಿಗಳ ನೇಮಕ

**ವಿಜಯಪುರ:** ವಿಜಯಪುರಜಿಲ್ಲಾ ಹಪಡದ ಅಪ್ಪಣ್ಣ ಸಮಾಜ ಸೇವಾ ಸಂಘದ ನೂತನ ಅಧ್ಯಕ್ಷರಾಗಿ ಬಿ.ಎಸ್.ಶಿವಶರಣ ಹಾಗೂ ಕಾರ್ಯದರ್ಶಿಯಾಗಿ ಪಿ.ಎಸ್. ಹಡಪದ ಅವರನ್ನು ಆಯ್ಕೆ ಮಾಡಲಾಯಿತು. ಶರಣ ಹಡಪದ ಅಪ್ಪಣ್ಣ ಸಮುದಾಯ ಭವನದಲ್ಲಿ ನಡೆದ ಪಾಲಿಕೆ ಸದಸ್ಯರಾಜುಕುರಿಯವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಣಯ ಸ್ವೀಕರಿಸಲಾಯಿತು. ನೂತನ ಅಧ್ಯಕ್ಷರನ್ನಾಗಿ ಆಯ್ಕೆಯಾದ ಬಸವರಾಜ ಶಿವಶರಣರ ಮಾತನಾಡಿ, ಶರಣ ಹಡಪದ ಅಪ್ಪಣ್ಣ ಕಾಯಕ, ದಾಸೋಹ, ಶರಣ ನಿಷ್ಠೆಗೆ ಇನ್ನೊಂದು ಹೆಸರಾಗಿದ್ದರು, ಅವರ ಸಮಾಜದಲ್ಲಿ ನಾವು ಜನಿಸಿರುವುದೇ ಪುಣ್ಯ, ಸತ್ಯ, ಶುದ್ಧಕಾಯಕವನ್ನು ಉಸಿರಾಗಿಸಿಕೊಂಡು ಶರಣ ಹಡಪದ ಅಪ್ಪಣ್ಣ ಹಾಗೂ ಬಸವಾದಿ ಶರಣರು ತೋರಿದ ದಾರಿಯಲ್ಲಿ ನಾವು ಸಾಗಬೇಕಿದೆ, ಹಡಪದ ಅಪ್ಪಣ್ಣ ಸಮುದಾಯ ರಾಜಕೀಯವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಬಲವರ್ಧನೆಯಾಗಬೇಕು, ಈ ನಿಟ್ಟಿನಲ್ಲಿ ಸಮಾಜದ ಪ್ರತಿ ಹಂತದ ಧ್ವನಿಯಾಗಿ ಕಾರ್ಯನಿರ್ವಹಿಸುವೆ ಎಂದರು. ಸಮಾಜದ ಹಿರಿಯರಾದ ಜಿ.ಎಸ್. ಹೊಸಟ್ಟಿ, ದಶರಥಎಸ್. ನಾವಿ, ಎಸ್.ಜಿ. ದೇವೂರ, ಬಸವರಾಜ ಶ್ರೀಶೈಲ ಬೆಕಿನಾಳ, ಬಾಬು ತಿಪ್ಪಣ್ಣ ಹಡಪದ, ಬಸವರಾಜ ಬ್ಯಾಲ್ಯಾಳ, ರಮೇಶ ಬ್ಯಾಲ್ಯಾಳ, ಸಚಿನ ಹಡಪದ, ರವಿಚಂದ್ರ ಹಡಪದ, ಡಾ. ಪ್ರಕಾಶಗುರಲಿಂಗಪ್ಪ ಹಡಪದ, ಪರಶುರಾಮ ಶಿ. ಹಡಪದ, ಗಿರಿಮಲ್ಲ ಹಡಪದ, ನಾಗಪ್ಪ ನಾವಿ, ಸಿದ್ದಪ್ಪ ಹಡಪದ ಮಾಂತೇಶ ಹಡಪದ, ಅಶೋಕುಮಾರ, ಆರ್.ವೈ.ಬುರ್ಲಿ ಇದ್ದರು.



ವಿಜಯಪುರ: ವಿಜಯಪುರಜಿಲ್ಲಾ ಹಪಡದ ಅಪ್ಪಣ್ಣ ಸಮಾಜ ಸೇವಾ ಸಂಘದ ನೂತನ ಅಧ್ಯಕ್ಷರಾಗಿ ಬಿ.ಎಸ್.ಶಿವಶರಣ ಹಾಗೂ ಕಾರ್ಯದರ್ಶಿಯಾಗಿ ಪಿ.ಎಸ್.ಹಡಪದ ಅವರನ್ನು ಆಯ್ಕೆ ಮಾಡಲಾಯಿತು. ಜಿ.ಎಸ್.ಹೊಸಟ್ಟಿ, ದಶರಥಎಸ್. ನಾವಿ, ಎಸ್.ಜಿ.ದೇವೂರ, ಬಸವರಾಜ ಶ್ರೀಶೈಲ ಬೆಕಿನಾಳ, ಬಾಬು ತಿಪ್ಪಣ್ಣ ಹಡಪದ, ಬಸವರಾಜ ಬ್ಯಾಲ್ಯಾಳ, ರಮೇಶ ಬ್ಯಾಲ್ಯಾಳ, ಸಚಿನ ಹಡಪದ, ರವಿಚಂದ್ರ ಹಡಪದ, ಡಾ.ಪ್ರಕಾಶ ಹಡಪದ, ಪರಶುರಾಮ ಶಿ. ಹಡಪದ, ಗಿರಿಮಲ್ಲ ಹಡಪದ, ನಾಗಪ್ಪ ನಾವಿ, ಸಿದ್ದಪ್ಪ ಹಡಪದ ಮಾಂತೇಶ ಹಡಪದ, ಅಶೋಕುಮಾರ, ಆರ್.ವೈ.ಬುರ್ಲಿ ಇದ್ದರು.

# ಆಲಮಟ್ಟಿ ಅಣೆಕಟ್ಟು ಎತ್ತರಿಸಲು ಸಚಿವ ಪಾಟೀಲರಿಗೆ ಮನವಿ

**ವಿಜಯಪುರ:** ಕೃಷ್ಣಾ ಕೊಳ್ಳ ಜಲ ಸಂರಕ್ಷಣಾ ಹೋರಾಟ ಸಮಿತಿಯ ಸದಸ್ಯರು ಕರ್ನಾಟಕ ರಾಜ್ಯದ ಬೃಹತ್ ಹಾಗೂ ಮಧ್ಯಮ ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ಅವರನ್ನು ಭೇಟಿ ಮಾಡಿ, ಆಲಮಟ್ಟಿ ಅಣೆಕಟ್ಟಿನಲ್ಲಿ 524.256 ಮೀಟರ್ ಮಟ್ಟದವರೆಗೆ ನೀರು ಸಂಗ್ರಹಣೆ ಮತ್ತು ಅದರ ಪೂರ್ಣ ಪ್ರಮಾಣದ ಬಳಕೆಗೆ ಸಂಬಂಧಿಸಿದಂತೆ ಮಹತ್ವದ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಮಿತಿಯು, ಎರಡನೇ ಕೃಷ್ಣಾ ನ್ಯಾಯ ಮಂಡಳಿಯ ಅಂತಿಮ ತೀರ್ಪು ನೀಡಿದ ಬಳಿಕವೂ ಕೇಂದ್ರ ಸರ್ಕಾರ ಗೆಜೇಟ್ ನೋಟಿಫಿಕೇಶನ್ ಪ್ರಕಟಿಸದೆ ಕಾಲಹರಣ ಮಾಡುತ್ತಿರುವುದು ಉತ್ತರ ಕರ್ನಾಟಕದ ಜನರಿಗೆ ಮಾಡುತ್ತಿರುವ ಸ್ಪಷ್ಟ ಅನ್ಯಾಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿತು.

ನೀರಿನ ವಿಚಾರದಲ್ಲಿ ರಾಜಕೀಯ ಲಾಭ-ನಷ್ಟದ ಲೆಕ್ಕಾಚಾರ ನಡೆಯಬಾರದು. ರೈತರ ಬದುಕು, ಜನರ ಭವಿಷ್ಯ ಮತ್ತು ಉತ್ತರ ಕರ್ನಾಟಕದ ಅಭಿವೃದ್ಧಿಗಿಂತ ಯಾವುದೇ ಸರ್ಕಾರದ ರಾಜಕೀಯ ಆದ್ಯತೆ ದೊಡ್ಡದಾಗಬಾರದು. ಹಲವು ವರ್ಷಗಳಿಂದ ಜನರ ನ್ಯಾಯಸಮ್ಮತ ಬೇಡಿಕೆಗಳು ಕಡತಗಳಲ್ಲೇ ಸಿಲುಕಿರುವುದು ಅತ್ಯಂತ ದುರದೃಷ್ಟಕರ ಎಂದು ಸಮಿತಿ ತಿಳಿಸಿತು.

ಆಲಮಟ್ಟಿ ಯೋಜನೆ ಪೂರ್ಣ ಪ್ರಮಾಣದಲ್ಲಿ ಜಾರಿಯಾದರೆ ಲಕ್ಷಾಂತರ ರೈತರಿಗೆ ನೀರಾವರಿ, ಕುಡಿಯುವ ನೀರು ಹಾಗೂ ಕೈಗಾರಿಕಾ ಅಭಿವೃದ್ಧಿಗೆ ಹೊಸ ದಿಕ್ಕು ಸಿಗಲಿದೆ. ಆದರೆ, ರಾಜಕೀಯ ಇಚ್ಛಾಶಕ್ತಿಯ ಕೊರತೆ ಮತ್ತು ಆಡಳಿತಾತ್ಮಕ ವಿಳಂಬದಿಂದ ಉತ್ತರ ಕರ್ನಾಟಕದ ಅಭಿವೃದ್ಧಿಯನ್ನೇ ಬಂಧಕವಾಗಿಟ್ಟಿರುವ ಪರಿಸ್ಥಿತಿ ನಿರ್ಮಾಣವಾಗಿದೆ ಎಂದರು.



ಇದೇ ವೇಳೆ ನೀರಿನ ಸಂಗ್ರಹ ಮಟ್ಟ ಹೆಚ್ಚಳದಿಂದ ಸ್ಥಳಾಂತರಗೊಳ್ಳಬೇಕಿರುವ 22 ಹಳ್ಳಿಗಳ ಜನರಿಗೆ ನ್ಯಾಯಯುತ ಪುನರ್ವಸತಿ ಮತ್ತು ಸಮರ್ಪಕ ಪರಿಹಾರ ನೀಡುವುದು ಸರ್ಕಾರದ ಸಂವಿಧಾನಬದ್ಧ ಜವಾಬ್ದಾರಿಯಾಗಿದೆ. ಅಭಿವೃದ್ಧಿಯ ಹೆಸರಿನಲ್ಲಿ ಸಂತ್ರಸ್ತರನ್ನು ಅನಿಶ್ಚಿತತೆಯಲ್ಲಿ ಬಿಡುವುದು ಯಾವ ಸರ್ಕಾರಕ್ಕೂ ಶೋಭೆ ತರುವುದಿಲ್ಲ ಎಂದು ಒತ್ತಾಯಿಸಲಾಯಿತು.

ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ, ಕೇಂದ್ರ ಸರ್ಕಾರದ ಮೇಲೆ ಅಗತ್ಯ ಒತ್ತಡ ತಂದು ಗ್ಯಾಜೆಟ್ ನೋಟಿಫಿಕೇಶನ್ ಪ್ರಕಟಿಸುವಂತೆ ಹಾಗೂ ರಾಜ್ಯ ಸರ್ಕಾರದಿಂದ ಪುನರ್ವಸತಿ ಪ್ರಕ್ರಿಯೆಯನ್ನು ತ್ವರಿತಗೊಳಿಸುವಂತೆ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ.

ಸಚಿವ ಎಂ.ಬಿ.ಪಾಟೀಲ ಅವರು ಸಮಿತಿಯ ಮನವಿಯನ್ನು ಆಲಿಸಿ, ವಿಷಯದ ಗಂಭೀರತೆಯನ್ನು ಅರಿತುಸಂಬಂಧಿಸಿದಹಂತಗಳಲ್ಲಿ ಅಗತ್ಯ ಕ್ರಮಕೈಗೊಳ್ಳಲು ಪ್ರಯತ್ನಿಸುವುದಾಗಿ ಸಕಾರಾತ್ಮಕ ಭರವಸೆ ನೀಡಿದರು.

ಈ ಸಂದರ್ಭ ಅರವಿಂದ ಕುಲಕರ್ಣಿ, ಪಂಚಪ್ಪ ಕಲ್ಬುರ್ಗಿ, ಎಸ್.ವಿ.ಪಾಟೀಲ, ಅಕ್ರಮ ಮಾಶಾಳ್ಕರ್, ಲಲಿತಾ ಬಿಜ್ಜರಗಿ, ಸುರೇಶ್ ಜೀಬಿ, ಸುರೇರ ಬಿಜಾಪುರ, ಸಿದ್ದಲಿಂಗ ಬಾಗೇವಾಡಿ, ಭೋಗೇರ ಸೋಲಾಪುರ್, ಸತೀಶ ಭಾವಿ, ಗುರುರಾಜ್ ಪಡಶೆಟ್ಟಿ, ಗಿರೀಶ್ ಕಲಘಟಗಿ, ಲಕ್ಷ್ಮಣ್ ಕಂಬಾಗಿ, ನೀಲಾಂಬಿಕಾ ಬಿರಾದಾರ್, ಶ್ರೀಕಾಂತ ಕೊಂಡಗೂಳಿ ಇದ್ದರು.

## ಪ್ರೌಢಶಾಲಾ ನಿರ್ಮಾಣಕ್ಕೆ ಚೆಕ್ ವಿತರಣೆ

**ಸಿಂದಗಿ:** ಮತಕ್ಷೇತ್ರದ ಬೊಮ್ಮನಹಳ್ಳಿ ಗ್ರಾಮದ ಮಕ್ಕಳು ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಮತ್ತೊಂದೆಡೆಗೆ ತೆರಳಬಾರದು ಎಂಬ ದಿಸೆಯಲ್ಲಿ ಗ್ರಾಮಸ್ಥರೆಲ್ಲರು ಸೇರಿಕೊಂಡು ಪ್ರೌಢಶಾಲಾ ನಿರ್ಮಾಣಕ್ಕೆ ಹೊಸ ಜಮೀನು ಖರೀದಿ ಮಾಡಲು ಮುಂದಾಗಿದ್ದು, ಅದರ ಖರೀದಿಗಾಗಿ ಸಿಂದಗಿಯ ಎಂ.ಸಿ.ಮನಗೂಳಿ ಪ್ರತಿಷ್ಠಾನದಿಂದ ರೂ.5 ಲಕ್ಷ, ಹಾಗೂ ಸಚಿವ ಡಾ.ಎಂ.ಬಿ.ಪಾಟೀಲ ಅವರು ನೀಡಿದ ರೂ.5ಲಕ್ಷ ಚೆಕ್‌ನ್ನು ಗ್ರಾಮಸ್ಥರಿಗೆ ಶಾಸಕ ಅಶೋಕ ಮನಗೂಳಿ ಹಸ್ತಾಂತರಿಸಿದರು.

ನಗರದ ಶಾಸಕರ ಕಾರ್ಯಾಲಯದಲ್ಲಿ ಬಮ್ಮನಳ್ಳಿ ಗ್ರಾಮದ ಶಾಲೆಯ ಭೂಮಿ ಖರೀದಿಗೆ ರೂ.10ಲಕ್ಷಗಳ ಚೆಕ್ಕನ್ನು ಹಸ್ತಾಂತರಿಸಿ ಮಾತನಾಡಿದ ಅವರು, ಬೊಮ್ಮನಹಳ್ಳಿ ಗ್ರಾಮಸ್ಥರ ಬೇಡಿಕೆಯ ಅನುಗುಣವಾಗಿ ಈ ಹಿಂದೆ ನೂತನ ಗ್ರಾಪಂ ಕಟ್ಟಡದ ಲೋಕಾರ್ಪಣೆ ಸಂದರ್ಭದಲ್ಲಿ ಸಚಿವ ಎಂ.ಬಿ.ಪಾಟೀಲರು ಹಾಗೂ ನಾನು ತಲಾ 5ಲಕ್ಷದಂತೆ ಶಾಲಾ ನಿರ್ಮಾಣಕ್ಕಾಗಿ ಜಮೀನು ಖರೀದಿಗಾಗಿ ನೀಡುವುದಾಗಿ ಭರವಸೆ ನೀಡಿದ್ದೇವು. ಅದರಂತೆ ರೂ.10ಲಕ್ಷ ಚೆಕ್ಕನ್ನು ಹಸ್ತಾಂತರ ಮಾಡಲಾಗಿದೆ. ಈ ಪಬ್ಲಿಕ್ ಶಾಲೆ ಮಂಜೂರು ಮಾಡುವ ಮೂಲಕ ರೂ.4ಕೋಟಿ ಮಂಜೂರು ಮಾಡಿಸಲಾಗಿದೆ ಎಂದರು.

ಗ್ರಾಮದ ಪ್ರಮುಖರಾದ ಬಿ.ಎಚ್ .ಬಿರಾದಾರ ಮಾತನಾಡಿ, ಕಳೆದ 18ವರ್ಷಗಳಿಂದ ಶಾಲೆಗಾಗಿ ಜಮೀನು ಖರೀದಿಸಬೇಕೆಂಬುದು ಗ್ರಾಮಸ್ಥರ ಆಶಯವಾಗಿತ್ತು. ಗ್ರಾಮಸ್ಥರು ಪ್ರೌಢಶಾಲಾ ನಿರ್ಮಾಣಕ್ಕಾಗಿ ಜಮೀನು ಖರೀದಿಗೆ ಮುಂದಾಗಿದ್ದು, ಅದಕ್ಕೆ ಶಾಸಕ ಅಶೋಕ ಮನಗೂಳಿ ಅವರು ಹೆಚ್ಚಿನ ಮುತುವರ್ಜಿ ವಹಿಸಿ ಪಬ್ಲಿಕ್ ಶಾಲೆ ಮಂಜೂರು ಮಾಡಿಸಿ ರೂ.4ಕೋಟಿ ಅನುದಾನ ಮಂಜೂರು ಮಾಡಿಸಿದ್ದಾರೆ. ಅಲ್ಲದೆ ಜಮೀನ ಖರೀದಿಗೆ ರೂ.10ಲಕ್ಷ ಹಣ ನೀಡಿದ್ದಾರೆ ಎಂದರು.

ಆಲಮೇಲ ಪಪಂ ಅಧ್ಯಕ್ಷ ಸಾದಿಕ್ ಸುಂಬಡ, ಗ್ಯಾರಂಟಿ ಸಮಿತಿ ಅಧ್ಯಕ್ಷ ಅಶೋಕ ಕೋಳಾರಿ, ಜಿಲ್ಲಾ ಕೆಡಿಪಿ ಸದಸ್ಯ ನೂರಹಮ್ಮದ ಅತ್ತಾರ, ನಗರ ಯೋಜನಾ ಪ್ರಾಧಿಕಾರ ಅಧ್ಯಕ್ಷ ಹಣಮಂತ ಸುಣಗಾರ, ಪ್ರವೀಣ ಕಂಠಿಗೊಂಡ, ಭೀಮು ಬಮ್ಮನಹಳ್ಳಿ, ಕುಮಾರ ದೇಸಾಯಿ ಸೇರಿದಂತೆ ಗ್ರಾಮಸ್ಥರಿದ್ದರು.



## ಹೆಚ್ಚುವರಿ ಹಣ ಬಿಡುಗಡೆಗೆ ಒತ್ತಾಯ

**ವಿಜಯಪುರ:** ಅಕ್ಷರ ದಾಸೋಹ ಯೋಜನೆಯಡಿ ಶಾಲೆಗಳಲ್ಲಿ ಮಧ್ಯಾಹ್ನ ಬಿಸಿ ಊಟಕ್ಕೆ ಮಕ್ಕಳಿಗೆ ವಿತರಿಸುವ ಮೊಟ್ಟೆಗಳ ಖರೀದಿ ವೆಚ್ಚದಲ್ಲಿ ಭಾರಿ ಏರಿಕೆಯಾಗಿದ್ದು ಹೆಚ್ಚುವರಿ ದರ ಅನ್ವಯ ಶಾಲೆಗೆ ಹಣ ಬಿಡುಗಡೆ ಮಾಡಬೇಕೆಂದು ವಿಜಯಪುರ ನಗರವಲಯ ಶಿಕ್ಷಕ ಸಂಘದ ಅಧ್ಯಕ್ಷ ಜುಬೇರ ಎಸ್. ಕೆರೂರ ಅವರು ಅಕ್ಷರ ದಾಸೋಹ ಯೋಜನೆಯ ಸಹಾಯಕ ನಿರ್ದೇಶಕ ಎಸ್. ಎಂ.ಕುಂಬಾರ ಹಾಗೂ ತಾಪಂ ಕಾರ್ಯ ನಿರ್ವಾಹಕ ಅಧಿಕಾರಿ ಬಾಬು ರಾಠೋಡ ಅವರಿಗೆ ಗುರುವಾರ ಮನವಿ ಸಲ್ಲಿಸಿದರು.

ಮನವಿ ಸಲ್ಲಿಸಿ ಮಾತನಾಡಿದ ಜುಬೇರ ಕೇರೂರ ಪ್ರಸ್ತುತ ದೈನಂದಿನ ಮಾರುಕಟ್ಟೆಯಲ್ಲಿ ಒಂದು ಮೊಟ್ಟೆಯ ಬೆಲೆ? 8 ಇದೆ. ಸರ್ಕಾರ ಪ್ರತಿ ಮೊಟ್ಟೆಗೆ? 6 ಮಾತ್ರ ಅನುದಾನ ಮಾತ್ರ ನೀಡುತ್ತಿದೆ. ಇದರಿಂದ ಪ್ರತಿ ಮೊಟ್ಟೆಗೆ ಸುಮಾರು? 2 ಹೆಚ್ಚುವರಿ ವೆಚ್ಚವಾಗುತ್ತಿದ್ದು, ಈ ಹೆಚ್ಚುವರಿ ಮೊತ್ತವನ್ನು ಶಾಲಾ ಮುಖ್ಯೋಪಾಧ್ಯಾಯರು ಮತ್ತು ಶಿಕ್ಷಕರು ಸ್ವಂತ ಜೇಬಿನಿಂದ ಭರಿಸಬೇಕಾದ ಅನಿವಾರ್ಯತೆ ಎದುರಾಗಿದೆ ಎಂದರು.

ಇಂತಹ ಪರಿಸ್ಥಿತಿಯಿಂದ ಮಧ್ಯಾಹ್ನ ಬಿಸಿ ಊಟ ಯೋಜನೆಯ ಸಮರ್ಪಕ ನಿರ್ವಹಣೆ ಕಷ್ಟವಾಗುತ್ತಿದೆ. ಅಲ್ಲದೆ ಶಿಕ್ಷಕರಲ್ಲಿ ಆತಂಕ ಮತ್ತು ಅಸಮಾಧಾನಕ್ಕೆ ಕಾರಣವಾಗುತ್ತಿದೆ. ಶಾಲಾ ಶಿಕ್ಷಣದ ಜೊತೆಗೆ ಯೋಜನೆಯ ನಿರ್ವಹಣೆಯಲ್ಲಿಯೂ ಹೆಚ್ಚುವರಿ ಭಾರವನ್ನು ಹೊರುವ ಪರಿಸ್ಥಿತಿ ನಿರ್ಮಾಣವಾಗಿದೆ.

ಆದ್ದರಿಂದ ಪ್ರಸ್ತುತ ಮಾರುಕಟ್ಟೆ ದರಕ್ಕೆ ಅನುಗುಣವಾಗಿ ಮೊಟ್ಟೆ ವಿತರಣೆಗೆ ನೀಡಲಾಗುತ್ತಿರುವ ಅನುದಾನವನ್ನು ತಕ್ಷಣ ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಹಾಗೂ ಅಲ್ಲಿವರೆಗೂ ಕೇವಲ ಬಾಳೆಹಣ್ಣುಗಳನ್ನು ಮಾತ್ರ ವಿತರಿಸಲು ಅನುಮತಿ ನೀಡಬೇಕೆಂದು ಮನವಿ ಸಲ್ಲಿಸಿದರು.

ಶೈಕ್ಷಣಿಕ ವರ್ಷ ಆರಂಭವಾಗಿ ಜೂನ ತಿಂಗಳು ಮುಗಿಯುತ್ತಾ ಬಂದರೂ ಶಾಲೆಗಳಿಗೆ ಬೇಳೆ ಹಾಗೂ ಎಣ್ಣೆ ಪೂರೈಕೆಯಾಗಿಲ್ಲ, ಮುಖ್ಯಗುರುಗಳು ಬೇಳೆ ಹಾಗೂ ಎಣ್ಣೆ ಸಹ ಅಂಗಡಿ ಮೂಲಕ ಖರೀದಿಸುತ್ತಾ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಕೇಜಿ ಎಣ್ಣೆಗೆ ? 180 , ಕೇಜಿ ಬೇಳೆಗೆ ? 120 ರಂತೆ ಮುಖ್ಯಗುರುಗಳು ಖರೀದಿಸುತ್ತಿದ್ದಾರೆ.

ಜಿಲ್ಲಾ ಶಿಕ್ಷಕ ಸಂಘದ ಸಂಘಟನಾ ಕಾರ್ಯದರ್ಶಿ ಕಬೂಲ್ ಕೊಕಟನೂರ, ನಗರವಲಯ ಶಿಕ್ಷಕರ ಸಂಘದ ಪ್ರದಾನ ಕಾರ್ಯದರ್ಶಿ ಮಂಜುನಾಥ ಆರೇಶಂಕರ, ಉಪಾಧ್ಯಕ್ಷ ಅಜೀಜ ಅರಳಿಮಟ್ಟಿ , ಸಹಕಾರ್ಯದರ್ಶಿ ಬಸೀರ್ ನದಾಫ್, ಜಮೀರ ನಾಗರಬಾವಡಿ, ಇದ್ದರು.



## ವಿದ್ಯಾರ್ಥಿಗಳಿಗೆ ಶಿಸ್ತು, ಭಾವೈಕ್ಯತೆ ಮೂಡಿಸಲು ಸೇವಾದಳ ಸಹಕಾರಿ

**ವಿಜಯಪುರ:** ಪ್ರಾಥಮಿಕ ಹಂತದಲ್ಲಿಯೇ ವಿದ್ಯಾರ್ಥಿಗಳಿಗೆ ಶಿಸ್ತು, ದೇಶಪ್ರೇಮ, ಭಾವೈಕ್ಯತೆ ಮೂಡಿಸಲು ಭಾರತ ಸೇವಾದಳದ ಘಟಕಗಳನ್ನು ಪ್ರಾಥಮಿಕ ಶಾಲಾ ಹಂತದಿಂದ ಆರಂಭಿಸಿರುವದು ಶ್ಲಾಘನೀಯ ಎಂದು ವಿಜಯಪುರ ನಗರ ವಲಯದ ತಾಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಎಸ್.ಜೆ. ಬಿರಾದಾರ ಹೇಳಿದರು.

ಭಾರತ ಸೇವಾದಳ ಜಿಲ್ಲಾ ಸಮಿತಿ ವಿಜಯಪುರ, ಶಾಲಾ ಶಿಕ್ಷಣ ಇಲಾಖೆ ಹಾಗೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ನಂ. 12 ಸಹಯೋಗದಲ್ಲಿ ನಗರದ ಭಾರತ ಸೇವಾದಳ ಜಿಲ್ಲಾಕಾರ್ಯಾಲಯದಲ್ಲಿ ಆಯೋಜಿಸಿದ್ದ ವಿಜಯಪುರತಾಲೂಕು ಮಟ್ಟದ ಭಾರತ ಸೇವಾದಳ ಶಿಕ್ಷಕರ ಪುನಃಶ್ಚೇತನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಶಿಸ್ತು, ಆರೋಗ್ಯ, ಭಾತೃತ್ವ, ಭಾವೈಕ್ಯತೆ ಹಾಗೂ ದೇಶ ಪ್ರೇಮ, ಸೇವಾ ನಿಷ್ಠತೆ ಈ ಎಲ್ಲ ಭಾವನೆಗಳನ್ನು ಬೆಳೆಸುವಲ್ಲಿ ಸೇವಾದಳದ ಪಾತ್ರಅನನ್ಯಎಂದರು. ರಾಷ್ಟಗೀತೆ, ರಾಷ್ಟ ಧ್ವಜಕ್ಕೆ ಗೌರವ ನೀಡುವ ಭಾವನೆ ವೃದ್ಧಿಸುವಲ್ಲಿಯೂ ಸೇವಾದಳದ ಪಾತ್ರ ಪ್ರಮುಖ ಎಂದರು.

ಸೇವಾದಳ ಜಿಲ್ಲಾಸಮಿತಿ ಸದಸ್ಯ ಬಿ.ಎಂ.ಕೋಕರೆ ಮಾತನಾಡಿ, ಸೇವಾದಳವು ಶಿಸ್ತು ಹಾಗೂ ದೇಶಾಭಿಮಾನದ ಪ್ರತೀಕ, ಶತಮಾನೋತ್ಸವಕಂಡಿರುವ ಸೇವಾದಳ ರಾಷ್ಟದ ಹೆಮ್ಮೆಯ ಸಂಸ್ಥೆ ಎಂದರು.



ಅಧ್ಯಕ್ಷತೆ ವಹಿಸಿದ್ದ ಸೇವಾದಳದ ಜಿಲ್ಲಾ ಅಧ್ಯಕ್ಷ ಎಸ್.ಪಿ.ಬಿರಾದಾರ ಕಡ್ಲೇವಾಡ ಮಾತನಾಡಿ, ಭಾರತ್ ಸೇವಾದಳವು ದೇಶದ ಸ್ವಾತಂತ್ರ್ಯ ಚಳುವಳಿಯಲ್ಲಿ ತನ್ನದೇ ಪಾತ್ರವಹಿಸಿದೆ. ಈ ಸಂಸ್ಥೆಯು ವಿದ್ಯಾರ್ಥಿಗಳಲ್ಲಿ, ಯುವಕರಲ್ಲಿ ಶಿಸ್ತು, ದೇಶ ಪ್ರೇಮ, ಸಹೋದರತೆ, ಭಾವೈಕ್ಯತೆಕುರಿತುಇಂದು ನಾಡಿನಲ್ಲಿಜಾಗೃತಿ ಮೂಡಿಸುವಕಾರ್ಯದಲ್ಲಿತೊಡಗಿದೆ. ಶಿಕ್ಷಕ ಭಾಂದವರುಇದರ ಸದುಪಯೋಗ ಪಡೆದುಕೊಂಡು ವಿದ್ಯಾರ್ಥಿಗಳನ್ನು ಭವ್ಯ ಭಾರತದ ಸತ್ಪ್ರಜೆಗಳನ್ನಾಗಿ ರೂಪಿಸಬೇಕು ಎಂದರು.

ಭಾರತೀಯ ಕಿಸಾನ್ ಸಂಘದ ಉಪಾಧ್ಯಕ್ಷ ಮಲ್ಲನಗೌಡ ಪಾಟೀಲ, ಜಿ.ಎನ್. ಪತ್ತಾರ, ನಾಗೇಶ ಡೋಣೂರ, ಸೇವಾದಳ ಸಂಪನ್ಮೂಲ ಶಿಕ್ಷಕಿ ಎಂ.ಎಂ.ತೆಲಗಿ, ಆರ್.ಆರ್.ಪವಾರ, ಆರ್.ವಿ.ಚವ್ಹಾಣ ಪಾಲ್ಗೊಂಡಿದ್ದರು.

## ಕಡ್ಡಾಯವಾಗಿ ಪಲ್ಸ್ ಪೋಲಿಯೋ ಲಸಿಕೆ ಹಾಕಿಸಿ: ತಹಶೀಲ್ದಾರ್ ವಿನಯಾ

**ತಾಳಿಕೋಟೆ:** ತಾಲೂಕಿನಾದ್ಯಂತ ಜೂ.28ರಿಂದ ಜು.ರ ವರೆಗೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು, 5 ವರ್ಷದೊಳಗಿನ ಯಾವುದೇ ಮಗುವೂ ಲಸಿಕೆಯಿಂದ ವಂಚಿತರಾಗದಂತೆ ಪೋಷಕರು ಕಡ್ಡಾಯವಾಗಿ 2 ಹನಿ ಪೋಲಿಯೋ ಲಸಿಕೆ ಹಾಕಿಸಬೇಕು ಎಂದು ತಹಶೀಲ್ದಾರ್ ವಿನಯಾ ಹೂಗಾರ ಮನವಿ ಮಾಡಿದರು.

ಗುರುವಾರ ತಾಲೂಕು ತಹಶೀಲ್ದಾರ್ ಕಚೇರಿಯಲ್ಲಿ ನಡೆದ ಪಲ್ಸ್ ಪೋಲಿಯೋ ಲಸಿಕಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದ ಅವರು, ಜೂ.28ರಂದು ತಾಲೂಕಿನ ನಿಗದಿಪಡಿಸಿದ ಎಲ್ಲಾ ಬೂತ್‌ಗಳಲ್ಲಿ ಲಸಿಕೆ ನೀಡಲಾಗುವುದು. ನಂತರದ 3 ದಿನ ಆರೋಗ್ಯ ಸಿಬ್ಬಂದಿ, ಆಶಾ ಕಾರ್ಯಕರ್ತೆಯರು ಜಂಟಿಯಾಗಿ ಮನೆ-ಮನೆಗೆ ತೆರಳಿ ಬಿಟ್ಟುಹೋದ ಮಕ್ಕಳಿಗೆ ಪೋಲಿಯೋ ಹನಿ ಹಾಕಲಿದ್ದಾರೆ ಎಂದು ತಿಳಿಸಿದರು.


ಸಾರ್ವಜನಿಕ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಶ್ರೀಶೈಲ ಹುಕ್ಕೇರಿ ಮಾತನಾಡಿ, ತಾಲೂಕಿನಾದ್ಯಂತ 5 ವರ್ಷದೊಳಗಿನ ಒಟ್ಟು 11,112 ಮಕ್ಕಳನ್ನು ಗುರುತಿಸಲಾಗಿದ್ದು, ಲಸಿಕೆ ನೀಡಲು ಒಟ್ಟು 62 ಬೂತಗಳನ್ನು ಸ್ಥಾಪಿಸಲಾಗಿದೆ.



ಪ್ರತಿ ಬೂತ್‌ಗೆ ಇಬ್ಬರು ಸದಸ್ಯರು ಕಾರ್ಯನಿರ್ವಹಿಸಲಿದ್ದು, ಪ್ರತಿ 5 ತಂಡಗಳಿಗೆ ಒಬ್ಬರಂತೆ ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ.

ಕೆಎಸ್‌ಆರ್‌ಟಿಸಿಯ ಶಿವಪ್ಪ ಕನ್ನೊಳ್ಳಿ, ಡಿ.ಎಚ್.ಬಾಗೇವಾಡಿ ಎಎಸ್‌ಐ, ಮಲ್ಲಿಕಾರ್ಜುನ ಕೊಳ್ಳಿ, ಸುರೇಶ ಅಂಬಣ್ಣನವರ, ತಾಳಿಕೋಟೆ ಎಸ್‌ಕೆ ಕಾಲೇಜಿನ ಕಿಶೋರಕುಮಾರ ಕೆ., ಆರೋಗ್ಯ ಶಿಕ್ಷಣಾಧಿಕಾರಿ ಅನುಸೂಯಾ ತೇರದಾಳ, ಕಿರಿಯ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಎಫ್.ಎ.ಅತ್ತಾರ ಹಾಗೂ ಕಾಂಚನಾ ಪಾಟೀಲ, ಪಿಎಚ್‌ಸಿಗಳಾದ ಎನ್.ಎಚ್.ಬೋರಗಿ ಮತ್ತು ಎಂ.ಎಸ್.ಟಕ್ಕಳಕಿ ಸೇರಿದಂತೆ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ವೈದ್ಯರ ನೇಮಿಸಲು ಆಗ್ರಹ



**ಇಂಡಿ:** ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಗರ್ಭಿಣಿಯರ ಚಿಕಿತ್ಸೆಗೆ ವೈದ್ಯರಿಲ್ಲ ಎಂದು ಆಗ್ರಹಿಸಿ ಇಂದು ಅಯೂಬ್ ನಾಟಿಕಾರ ಅವರ ನೇತೃತ್ವದಲ್ಲಿ ಜೆಡಿಎಸ್ ಕಾರ್ಯಕರ್ತರು ಆಡಳಿತಸೌಧ ಎದುರು ಪ್ರತಿಭಟನೆ ಮಾಡಿದರು.

ಜೆಡಿಎಸ್ ಧುರೀಣ ಅಯೂಬ್ ನಾಟಿಕಾರ ಮಾತನಾಡಿ, ಚಿಕಿತ್ಸೆಗಾಗಿ ಆಗಮಿಸುತ್ತಿರುವ ಬಡ ರೋಗಿಗಳಿಗೆ ಅಗತ್ಯವಾದ ಸ್ತ್ರೀ ರೋಗ ತಜ್ಞರಿಲ್ಲ. ಇದರಿಂದ ತಾಲೂಕಿನ ಗರ್ಭಿಣಿಯರಿಗೆ ಅತೀವ ತೊಂದರೆಯಾಗುತ್ತದೆ. ಅಲ್ಲಿಯ ವೈದ್ಯರು ಹೆಚ್ಚಿನ ಚಿಕಿತ್ಸೆಗಾಗಿ ವಿಜಯಪುರ ಸೋಲಾಪುರಕ್ಕೆ ಹೋಗಿರಿ ಎಂದು ಹೇಳುತ್ತಾರೆ ಎಂದರು. ಈ ಕುರಿತು ತಾಲೂಕಾ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿಗಳಿಗೆ ಹಲವಾರು ಬಾರಿ ಮನವಿ ಸಲ್ಲಿಸಿದರೂ ಏನೂ ಪ್ರಯೋಜನವಾಗಿಲ್ಲ ಎಂದರು. ಒಂದು ವೇಳೆ ಸಮಸ್ಯೆ ಬಗೆ ಹರಿಸದಿದ್ದರೆ ಜಿಲ್ಲಾ ವೈದ್ಯಾಧಿಕಾರಿ ಕಚೇರಿ ಎದುರು ಪ್ರತಿಭಟನೆ ಮಾಡಲಾಗುವದೆಂದು ಎಚ್ಚರಿಕೆ ನೀಡಿದರು.

ವಿಕಾಸ ಹೊಸಮನಿ, ಇರಫಾನ ಅಥಣಿಕರ ಸೇರಿದಂತೆ ಜೆಡಿಎಸ್ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಕಂದಾಯ ಉಪವಿಬಾಗಾಧಿಕಾರಿ ಚಿದಾನಂದ ಗುರುಸ್ವಾಮಿ ಇವರಿಗೆ ಮನವಿ ಸಲ್ಲಿಸಿದರು.

## ಹನುಮಾನ ಮಂದಿರಕ್ಕೆ ಕಣ್ವಶ್ರೀ ಭೇಟಿ

**ವಿಜಯಪುರ:** ಕಣ್ವ ಮಠಾಧೀಶ ವಿದ್ಯಾಕಣ್ವ ವೀರಾಜತೀರ್ಥ ಸ್ವಾಮಿಜಿಗಳು ಇಲ್ಲಿನ ಗಣೇಶನಗರದ ಸಾಕ್ಷಿ ಹನುಮಾನ, ಸಿದ್ಧಿವಿನಾಯಕ ದೇವಸ್ಥಾನಕ್ಕೆ ಭೇಟಿ ನೀಡಿ ಭಕ್ತಾಧಿಗಳಿಗೆ ಆಶೀರ್ವಚನ ನೀಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಏಕಾದಶಿ ವ್ರತವನ್ನು ಕೇವಲ ಬ್ರಾಹ್ಮಣರು ಆಚರಿಸಬೇಕು ಎಂಬ ನಿಯಮವಿಲ್ಲ. ಎಲ್ಲ ಜಾತಿ ಜನಾಂಗದವರು ಏಕಾದಶಿ ಉಪವಾಸ ಮಾಡಿ ಶ್ರೀಹರಿಯ ಕೃಪೆಗೆ ಪಾತ್ರರಾಗಬೇಕು ಎಂದರು.

ಪಂ.ಮಧ್ವೇಶಾಚಾರ್ಯ ಮುತ್ತಗಿ, ನಿರ್ಜಲ ಏಕಾದಶಿ ಮಹಿಮೆ ಕುರಿತು ಪ್ರವಚನ ನೀಡಿದರು. ವಿದ್ವಾನ್ ಗುರುರಾಜ ಆಚಾರ್ಯ ಹೆರಕಲ್ಲ,

ಶ್ರೀಕಾಂತಾಚಾರ್ಯ ಆಶ್ರೀತ, ಮುರಳಿಧರ ಜ್ಯೋಶಿ, ಸಚಿನ ಕುಲಕರ್ಣಿ, ರಾಘವೇಂದ್ರ ಕುಲಕರ್ಣಿ, ಸತೀಶ ಕುಲಕರ್ಣಿ, ಮಠಾಧಿಕಾರಿಗಳಾದ ಸುರೇಶ ಕುಲಕರ್ಣಿ, ಕೃಷ್ಣಾಚಾರ್ಯ ತುರಡಗಿ, ಸುಧೀಂದ್ರ ಜ್ಯೋಶಿ, ಶ್ರೀಕಾಂತ ಜ್ಯೋಶಿ, ಎಸ್.ಎಸ್.ಬೊಮ್ಮನಹಳ್ಳಿ, ಪರಮಾನಂದ ನಂದಿಹಾಳ, ಶ್ರೀದೇವಿ ಜ್ಯೋಶಿ, ಭಾರತಿ ಜ್ಯೋಶಿ, ಪ್ರಾರ್ಥನಾ ಕುಲಕರ್ಣಿ, ರಂಜಿತಾ ಕುಲಕರ್ಣಿ, ಧೀಕ್ಷಿತ ಕುಲಕರ್ಣಿ, ರಾಘವೇಂದ್ರ ಕುರಡಿ ಇದ್ದರು.



## ಅಂತಾರಾಷ್ಟ್ರೀಯ ಯೋಗ ದಿನಾಚರಣೆ



**ವಿಜಯಪುರ:** ಅಂತಾರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ನಗರದಎಕ್ಸಲಂಟ್ ವಿಜ್ಞಾನ ಪದವಿ ಪೂರ್ವಕಾಲೇಜು ಹಾಗೂ ಈಶಾ ಫೌಂಡೇಷನ್ ಸಹಯೋಗದಲ್ಲಿ ಎರಡು ದಿನಗಳ ಕಾಲ ಆಯೋಜಿಸಲಾಗಿದ್ದ ಯೋಗ ಶಿಬಿರದಲ್ಲಿ ಈಶಾ ಫೌಂಡೇಷನ್ ನ ಯೋಗ ಸಾಧಕರುಯೋಗದ ಮಹತ್ವದ ಜೊತೆಗೆ ಯೋಗ ಸಾಧನೆಯಿಂದಾಗುವ ಲಾಭಗಳನ್ನು ಮನದಟ್ಟಾಗುವಂತೆ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

ಧ್ಯಾನ ಮಾಡುವ ವಿಧಾನ ಹಾಗೂ ಧ್ಯಾನದ ಮೂಲಭೂತ ತತ್ವಗಳನ್ನು ತಿಳಿಸುವುದರೊಂದಿಗೆ ಯೋಗಾಭ್ಯಾಸವನ್ನು ಹೇಳಿಕೊಟ್ಟರು. ವಿದ್ಯಾರ್ಥಿ ಜೀವನದಲ್ಲಿ ಚೇತೋಹಾರಿ ಬದಲಾವಣೆ ಕಾಣಬೇಕಾದರೆ ಅದು ಯೋಗದಿಂದ ಸಾಧ್ಯವಾಗುತ್ತದೆ. ಮಕ್ಕಳಲ್ಲಿ ಜ್ಞಾಪಕ ಶಕ್ತಿಯ ಜೊತೆಗೆ ಏಕಾಗ್ರತೆ ಕಂಡುಕೊಳ್ಳುವುದಕ್ಕೆ ಯೋಗವು ರಾಮಬಾಣವಾಗಿ ಕಾರ್ಯಮಾಡುತ್ತದೆ. ಹೀಗಾಗಿ ದಿನಕ್ಕೆ ಒಂದಷ್ಟು ಸಮಯವನ್ನುಯೋಗಕ್ಕೆ ಮೀಸಲಾಗಿಟ್ಟರೆ ಬದುಕಿನಕಲ್ಲಿ ಬದಲಾವಣೆಯನ್ನುಕಾಣಬಹುದುಎಂದು ಹೇಳಿದರು. ಹಲವಾರು ಆಸಗಳನ್ನು ಮಾಡುವುದರಿಂದ ಆಗುವ ಲಾಭಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿ ಹೇಳಿದರು.

ಎಕ್ಸಲಂಟ್ ಸಮೂಹ ಶಿಕ್ಷಣ ಸಂಸ್ಥೆಗಳ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಕೌಲಗಿ, ಪ್ರಾಂಶುಪಾಲ ಮಂಜುನಾಥ ಮ. ಜುನಗೊಂಡ, ಶೈಕ್ಷಣಿಕ ಸಂಯೋಜಕ ಮಂಜುನಾಥ ತುಮ್ಮರಮಟ್ಟಿ, ಸೇರಿದಂತೆ ಸಿಬ್ಬಂದಿ ಇದ್ದರು.

## ಅಶೋಕ ಹಾರಿವಾಳ ಆರೋಪ ಸತ್ಯಕ್ಕೆ ದೂರ

**ಬಸವನಬಾಗೇವಾಡಿ:** ಅಶೋಕ ಹಾರಿವಾಳ ಅವರು ಮಾಡಿರುವ ಆರೋಪ ನಿರಾಧಾರವಾಗಿದೆ. ಅವರು ಯಾವುದೇ ದಾಖಲೆ ಹಾಗೂ ಸಾಕ್ಷ್ಯಾಧಾರಗಳಿಲ್ಲದೆ ಸತ್ಯಾಸತ್ಯೆ ಅರಿಯದೆ (ಹೆಸ್ಕಾಂ ಕಾರ್ಯ ಮತ್ತು ಪಾಲನೆ ವಿಭಾಗದ ಇಇ ಸಿದ್ದರಾಮ ಬಿರಾದಾರ) ನನ್ನ ಮೇಲೆ ಮಾಡಿರುವ ಆರೋಪ ಸತ್ಯಕ್ಕೆ ದೂರವಾಗಿದೆ ಎಂದು ಹೆಸ್ಕಾಂ ಇಲಾಖೆಯ ಕಾರ್ಯ ಮತ್ತು ಪಾಲನೆ ವಿಭಾಗದ ಇಇ ಸಿದ್ದರಾಮ ಬಿರಾದಾರ ದೂರಿದರು.



ಪಟ್ಟಣದ ಹೆಸ್ಕಾಂ ವಿಭಾಗ ಕಚೇರಿಯಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಹೆಸ್ಕಾಂನ ನಿಯಮಗಳು ಮತ್ತು ಮಾರ್ಗಸೂಚಿಗಳ ಹಾಗೂ ಸರ್ಕಾರದ ಆದೇಶಗಳಿಗೆ ಅನುಗುಣವಾಗಿ ನನ್ನ ಕರ್ತವ್ಯ ನಿರ್ವಹಿಸಲಾಗುತ್ತಿದೆ, ಕಳೆದ ಸು. ಮೂರು ತಿಂಗಳಗಳಿಂದ ಕಾರ್ಯ ಮತ್ತು ಪಾಲನೆ ವಿಭಾಗದಲ್ಲಿ ವಿದ್ಯುತ್ ಪರಿವರ್ತಕಗಳ ವೈಫಲ್ಯದ ಪ್ರಮಾಣ ಅಸಾಮಾನ್ಯವಾಗಿ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ನಾನು ಹಾಗೂ ನನ್ನ ಸಿಬ್ಬಂದಿಯವರು ಹೆಸ್ಕಾಂನ ನಿಯಮಗಳ ಪ್ರಕಾರ ಹಾನಿಗೊಳಗಾದ ವಿದ್ಯುತ್ ಪರಿವರ್ತಕಗಳನ್ನು ಆದ್ಯತೆ ಮೇರೆಗೆ ಸಾಧ್ಯವಾದಷ್ಟು ಶೀಘ್ರದಲ್ಲಿ ಬದಲಾಯಿಸಿ ರೈತರಿಗೆ ಹಾಗೂ ಸಾರ್ವಜನಿಕರಿಗೆ ನಿರಂತರ ವಿದ್ಯುತ್ ಪೂರೈಸಲು ಶ್ರಮ ವಹಿಸುತ್ತಿದ್ದೇವೆ ಆದರೆ ಅಶೋಕ ಹಾರಿವಾಳ ಅವರು ನನ್ನ ಮೇಲೆ ಸುಳ್ಳು ಆರೋಪಗಳನ್ನು ಮಾಡಿ ರೈತರಿಗೆ ದಾರಿ ತಪ್ಪಿಸಿ ನನ್ನ ವೈಯಕ್ತಿಕ ಗೌರವಕ್ಕೆ ಧಕ್ಕೆವುಂಟು ಮಾಡುವುದರ ಜೊತೆಗೆ ಇಲಾಖೆ ಮೇಲಿನ ವಿಶ್ವಾಸಕ್ಕೂ ಧಕ್ಕೆ ತರುವ ಪ್ರಯತ್ನ ಮಾಡಲಾಗಿದೆ ಎಂದರು.

## ಕಿರುಸುದ್ದಿ

### ಸಂಸ್ಕೃತ ಗುರುಕುಲ ಲೋಕಾರ್ಪಣೆ

**ಗಂಗಾವತಿ:** ಆನೆಗುಂದಿ ಗ್ರಾಮದ ಪಂಪ ಸರೋವರದ ಬಳಿ ಸರಸ್ವತಿ ಬೆಟ್ಟದ ಹತ್ತಿರ ಸರಸ್ವತಿ ಶ್ರೀಪ್ರಸನ್ನ ಗಣಪತಿ ದೇವಸ್ಥಾನದ ಶ್ರೀಮದ್ ಜಗದ್ಗುರು ಆನೆಗುಂದಿ ಮಹಾ ಸಂಸ್ಥಾನ ಪಂಚ ಸಿಂಹಾಸನ ಸರಸ್ವತಿ ಪೀಠದಲ್ಲಿ ಶ್ರೀವಿಶ್ವಕರ್ಮ ಸಂಸ್ಕೃತ ಗುರುಕುಲ ಲೋಕಾರ್ಪಣೆ ಜರುಗಿತು. ಕಾರ್ಯಕ್ರಮದಲ್ಲಿ ಜಗದ್ಗುರು ಅನಂತ ವಿಭೂಷಿತ ಕಾಳಹಸ್ತೇಂದ್ರ ಸರಸ್ವತಿ ಮಹಾಸ್ವಾಮೀಜಿ ದಿವ್ಯ ಸಾನಿಧ್ಯ ಅವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಗಂಗಾವತಿ ಮಾಜಿ ಶಾಸಕ ಪರಣ್ಣ ಮುನವಳ್ಳಿ ಅವರು ಭಾಗವಹಿಸಿ ಜಗದ್ಗುರುಗಳ ಆಶೀರ್ವಾದ ಪಡೆದರು. ಸಭಾಧ್ಯಕ್ಷರಾಗಿ ದಿನೇಶ್ ಆಚಾರ್ಯ ಪಡುಬಿದ್ರಿ, ವಿ.ಶ್ರೀಧರಾಚಾರ್ಯ, ಪೃಥ್ವಿರಾಜ ಆಚಾರ್ಯ, ನಾಗಲಿಂಗಪ್ಪ ಪತ್ತಾರ್ ಇತರರಿದ್ದರು.

### ಮಹಾಂತೇಶ್ವರ ಹೂಗಾರಗೆ ಪಿಎಚ್‌ಡಿ

**ಕಲಬುರಗಿ:** ಶ್ರೀಮಹಾಂತೇಶ್ವರ ಹೂಗಾರ ಅವರು ಮಂಡಿಸಿದ 'ಎ ಸ್ಟಡಿ ಆನ್ ಕ್ವಾಲಿಟಿ ಆಫ್ ಹೆಲ್ತ್‌ಕೇರ್ ಸರ್ವಿಸೆಸ್ ಪ್ರೊವೈಡೆಡ್ ಬೈ ಪ್ರೈವೇಟ್ ಹಾಸ್ಪಿಟಲ್ಸ್ ಇನ್ ಕಲಬುರಗಿ ಆ್ಯಂಡ್ ಬೀದರ್ ಸಿಟೀಸ್' ಎಂಬ ಮಹಾಪ್ರಭಂದಕ್ಕೆ



ಕಲಬುರಗಿಯ ಶರಣಬಸವ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪದವಿ ಪಡೆದಿದ್ದಾರೆ. ವ್ಯವಹಾರ ಅಧ್ಯಯನ ನಿಕಾಯದ ಡಾ.ಶ್ರೀನಾಥ ಎಚ್.ಶಹಾಪುರೆ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದಾರೆ.

### ಕನ್ನಡ ಕ್ರಿಯಾ ಸಮಿತಿಗೆ ನೇಮಕ

**ಯಾದಗಿರಿ:** ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಯಾದಗಿರಿ ವಿಭಾಗದ ಕನ್ನಡ ಅನುಷ್ಠಾನ ಸಮಿತಿಗೆ ನಾಲ್ಕು ಜನ ಸಿಬ್ಬಂದಿಗಳನ್ನು ನೇಮಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕನ್ನಡ ಕ್ರಿಯಾ ಸಮಿತಿ ರಾಜ್ಯಾಧ್ಯಕ್ಷ ಕೆ.ಎಸ್.ಪ್ರಭುಸ್ವಾಮಿ ಆದೇಶ ಹೊರಡಿಸಿದ್ದಾರೆ.



ನಿಗಮದ ಸಿಬ್ಬಂದಿಗಳಾದ ಎಂ.ಎಚ್.ಬಡಿಗೇರ (ಅಧ್ಯಕ್ಷ), ಚಂದ್ರಶೇಖರ ಶಾರದಳ್ಳಿ (ಉಪಾಧ್ಯಕ್ಷ), ಮಹೇಶ ಬೊಜ್ಜಿ (ಪ್ರಧಾನ ಕಾರ್ಯದರ್ಶಿ), ಪರಮಪ್ಪ (ಖಜಾಂಜಿ), ಪ್ರಶಾಂತ (ಕಾರ್ಯದರ್ಶಿ) ನೇಮಿಸಲಾಗಿದೆ. ಯಾದಗಿರಿ ನಿಗಮದಲ್ಲಿ ನಾಡು, ನುಡಿ, ಸಂಸ್ಕೃತಿ ರಕ್ಷಣೆಗಾಗಿ ಶ್ರಮಿಸುವ ಮೂಲಕ ಕನ್ನಡ ಭಾಷಾ ಬೆಳವಣಿಗೆಗೆ ಸಹಕರಿಸುವಂತೆ ಅವರು ಆದೇಶದಲ್ಲಿ ತಿಳಿಸಿದ್ದಾರೆ.

### ಅರ್ಜಿ ಆಹ್ವಾನ

**ವಿಜಯನಗರ:** 2026-27ನೇ ಸಾಲಿನ ಹಗರಿಬೊಮ್ಮನಹಳ್ಳಿ ತೋಟಗಾರಿಕೆ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ಯೋಜನೆಯಡಿ ಆಸಕ್ತರಿಂದ ಸಹಾಯಧನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಹನಿ ನೀರಾವರಿ, ರಾಷ್ಟ್ರೀಯ ಖಾದ್ಯತೈಲ ಅಭಿಯಾನ-ತಾಳೆ ಬೆಳೆ ಯೋಜನೆಯಡಿ ತಾಳೆ ಹೊಸ ಪ್ರದೇಶ ವಿಸ್ತರಣೆ, ರಾಷ್ಟ್ರೀಯ ತೋಟಗಾರಿಕೆ ಮಿಷನ್ ಯೋಜನೆಯಡಿ ಹೊಸ ಪ್ರದೇಶ ವಿಸ್ತರಣೆ, ಸಂರಕ್ಷಿತ ಬೇಸಾಯಕ್ಕೆ ಸಹಾಯಧನ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಹಗರಿಬೊಮ್ಮನಹಳ್ಳಿ ತಾಲೂಕಿನ ಸಹಾಯಕ ತೋಟಗಾರಿಕೆ ಅಧಿಕಾರಿ, ರೈತ ಸಂಪರ್ಕ ಕೇಂದ್ರ: ಹಗರಿಬೊಮ್ಮನಹಳ್ಳಿ, ಹಂಪಸಾಗರ, ತಂಬ್ರಹಳ್ಳಿ ಅಥವಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು(ಜಿ.ಪಂ), ಹಗರಿಬೊಮ್ಮನಹಳ್ಳಿ ಕಚೇರಿಗೆ ಜು.5ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### 10 ಕುರಿಗಳ ಸಾವು

**ಕುಷ್ಟಗಿ:** ತಾಲೂಕಿನ ದೋಟಿಹಾಳ ಗ್ರಾಮದ ರಾಜಸಾಬ್ ನೀಲಗಾರ ಎಂಬವರ 12 ಕುರಿಗಳು ಇದ್ದು, ಎರಡು ವಾರದಲ್ಲಿ 10 ಕುರಿಗಳು ಸಾವನ್ನಪ್ಪಿರುವ ಘಟನೆ ನಡೆದಿದೆ. ಈ ವಿಷಯವಾಗಿ ಸ್ಥಳೀಯ ಚಿಕಿತ್ಸಾಲಯಕ್ಕೆ ಭೇಟಿ ಕೊಟ್ಟರು ಅಲ್ಲಿ ವೈದ್ಯರೇ ಇಲ್ಲ ನಂತರ ತಾಲೂಕು ಪಶು ಆಸ್ಪತ್ರೆಗೆ ಕುರಿಗಳನ್ನು ಕೊಂಡೊಯ್ಯುವುದರೊಳಗೆ ಸಾವನ್ನಪ್ಪಿದ್ದು ಮತ್ತು ಪಶು ಚಿಕಿತ್ಸಾಲಯದ ಆಂಬುಲೆನ್ಸ್‌ಗೆ ಸಂಖ್ಯೆಗೆ ಕರೆ ಮಾಡಿದರೆ ಸರಿಯಾದ ಸಮಯಕ್ಕೆ ಬರುತ್ತಿಲ್ಲ. ತಾಲೂಕಿನಲ್ಲಿ ಆಂಬ್ಯುಲೆನ್ಸ್ ಇದ್ದರೂ ಇಲ್ಲದಂತಾಗಿದೆ. ಹೀಗಾದರೆ ತಾಲೂಕು ಆಸ್ಪತ್ರೆ ಇದ್ದರೂ ಇಲ್ಲದಂತಾಗಿದೆ ಹಾಗೂ ತಾಲೂಕಾ ಆಸ್ಪತ್ರೆಗೆ ಹೋದರೆ ಅಲ್ಲಿ ವೈದ್ಯರೇ ಇಲ್ಲ. ಕಾಂಪೌಂಡರ್ ಮೇಲೆ ತಾಲೂಕು ಆಸ್ಪತ್ರೆ ನಡೆಸುತ್ತಿದ್ದಾರೆ ಎಂದು ರಾಜಾಸಾಬ್ ನೀಲಗಾರ್ ಆರೋಪಿಸಿದ್ದಾರೆ.



ಗಂಗಾವತಿ: ಆನೆಗುಂದಿ ಗ್ರಾಮದ ಪಂಪ ಸರೋವರದ ಬಳಿ ಸರಸ್ವತಿ ಬೆಟ್ಟದ ಹತ್ತಿರ ಸರಸ್ವತಿ ಶ್ರೀಪ್ರಸನ್ನ ಗಣಪತಿ ದೇವಸ್ಥಾನದ ಶ್ರೀಮದ್ ಜಗದ್ಗುರು ಆನೆಗುಂದಿ ಮಹಾ ಸಂಸ್ಥಾನ ಪಂಚ ಸಿಂಹಾಸನ ಸರಸ್ವತಿ ಪೀಠದಲ್ಲಿ ಶ್ರೀವಿಶ್ವಕರ್ಮ ಸಂಸ್ಕೃತ ಗುರುಕುಲ ಲೋಕಾರ್ಪಣೆ ಜರುಗಿತು.

## ಸಮರ್ಪಕ ವಿದ್ಯುತ್ ಒದಗಿಸಲು ಒತ್ತಾಯ

**ಕುಷ್ಟಗಿ:** ತಾಲೂಕಿನ ಗುಮಗೇರಾ ಗ್ರಾಮಸ್ಥರು ಪಟ್ಟಣದ ಕೆಇಬಿ ಕಚೇರಿಗೆ ಭೇಟಿ ನೀಡಿ ಗ್ರಾಮೀಣ ಭಾಗದ ರೈತರಿಗೆ ಸರಿಯಾಗಿ ವಿದ್ಯುತ್ ಪೂರೈಕೆ ಮಾಡುವಂತೆ ಒತ್ತಾಯಿಸಿ ಮನವಿ ಸಲ್ಲಿಸಿದರು.

ಜೊತೆಗೆ ಲೈನ್‌ಮ್ಯಾನ್‌ಗಳು ರೈತರ ದೂರವಾಣಿ ಕರೆಗಳನ್ನು ಸರಿಯಾಗಿ ಸ್ವೀಕರಿಸುವುದಿಲ್ಲ. ಇಂತಹ ಲೈನ್‌ಮ್ಯಾನ್‌ಗಳನ್ನು ಬೇರೆ ಕಡೆ ವರ್ಗಾವಣೆ ಮಾಡಿ ನಮಗೆ ಉತ್ತಮ ಕೆಲಸ ಮಾಡುವ ಲೈನ್‌ಮ್ಯಾನ್ ಅವರನ್ನು ನೇಮಕ ಮಾಡಿ ಕೊಡುವಂತೆ ಒತ್ತಾಯಿಸಿದ್ದಾರೆ.

ರೈತರಿಗೆ ಪ್ರತಿ ಕನಿಷ್ಠ ಏಳು ಗಂಟೆಗಳ ಕಾಲ 3ಫೇಸ್ ವಿದ್ಯುತ್ ಪೂರೈಕೆ ಮಾಡುವಂತೆ ಎಇಇ ಕೆಂಚಪ್ಪ ಅವರಿಗೆ ಒತ್ತಾಯಿಸಿದರು.

ರೈತರ ಮನವಿ ಸ್ವೀಕರಿಸಿ ಮಾತಾಡಿದ ಎಇಇ ಕೆಂಚಪ್ಪ ಮಾತನಾಡಿ, ನಮ್ಮ ಸಿಬ್ಬಂದಿಯೊಂದಿಗೆ ಮಾತನಾಡಿ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳುತ್ತೇವೆ ಎಂದು ರೈತರಿಗೆ ಭರವಸೆ ನೀಡಿದರು.

ರೈತರಾದ ನಾಗಪ್ಪ ಕುಷ್ಟಗಿ, ಶಿವಪುತ್ರಪ್ಪ ಜರಗಡ್ಡಿ ಶೇಖಪ್ಪ ಗಂಗನಾಳ, ಚೇತನ್ ಕುಮಾರ್ ಸಂಗನಾಳ, ಗಣೇಶ ಪಾಟೀಲ, ಮರಿಸ್ವಾಮಿ, ಚಿಪ್ರಿ, ಎಸ್‌ಡಿಎಂಸಿ ಅಧ್ಯಕ್ಷ ರಾಜಸಾಬ ಭಾವಿಕಟ್ಟಿ, ಪತ್ರಕರ್ತರಾದ ಆರ್.ಶರಣಪ್ಪ ಗುಮಗೇರಾ, ಯಮನೂರಸಾಬ, ಅಪ್ಪಯ್ಯ ಹಿರೇಮಠ, ಯಮನೂರು ಚೌಡ್ಕಿ, ಶರಣಪ್ಪ ಸೇರಿದಂತೆ ಗ್ರಾಮದ ರೈತರು ಉಪಸ್ಥಿತರಿದ್ದರು.



ಕುಷ್ಟಗಿ: ತಾಲೂಕಿನ ಗುಮಗೇರಾ ಗ್ರಾಮಸ್ಥರು ಪಟ್ಟಣದ ಕೆಇಬಿ ಕಚೇರಿಗೆ ಭೇಟಿ ನೀಡಿ ಗ್ರಾಮೀಣ ಭಾಗದ ರೈತರಿಗೆ ಸರಿಯಾಗಿ ವಿದ್ಯುತ್ ಪೂರೈಕೆ ಮಾಡುವಂತೆ ಒತ್ತಾಯಿಸಿ ಮನವಿ ಸಲ್ಲಿಸಿದರು. ರೈತರಾದ ನಾಗಪ್ಪ ಕುಷ್ಟಗಿ, ಶಿವಪುತ್ರಪ್ಪ ಜರಗಡ್ಡಿ ಶೇಖಪ್ಪ ಗಂಗನಾಳ, ಚೇತನ್‌ಕುಮಾರ್ ಸಂಗನಾಳ, ಗಣೇಶ ಪಾಟೀಲ, ಮರಿಸ್ವಾಮಿ, ಚಿಪ್ರಿ, ಎಸ್‌ಡಿಎಂಸಿ ಅಧ್ಯಕ್ಷ ರಾಜಸಾಬ ಭಾವಿಕಟ್ಟಿ, ಪತ್ರಕರ್ತರಾದ ಆರ್.ಶರಣಪ್ಪ ಗುಮಗೇರಾ, ಯಮನೂರಸಾಬ, ಅಪ್ಪಯ್ಯ ಹಿರೇಮಠ, ಯಮನೂರು ಚೌಡ್ಕಿ, ಶರಣಪ್ಪ ಇದ್ದರು.

### ಮೂಲ ಸೌಕರ್ಯದ ಕೊರತೆ | ಸಭಾಪತಿ ಎದುರು ವಿದ್ಯಾರ್ಥಿಗಳ ಅಳಲು

## ಶಾಸಕರ ತವರೂರಲ್ಲೇ ಶೌಚಕ್ಕೆ ಸಮಸ್ಯೆ

ಕನಕರಾಯ ಕೆ.ಭಜೇಂತ್ರಿ

**ಕುಕನೂರು:** ಶಾಲೆಯಲ್ಲಿ ಶೌಚಾಲಯ ಸಮಸ್ಯೆ ಇದೆ ಎಂದು ಸಭಾಪತಿಯ ಮುಂದೆ ವಿಷಯ ಮಂಡನೆ ಮಾಡಿದ ವಿದ್ಯಾರ್ಥಿಗಳು ಶಾಸಕರು ಶಾಶ್ವತ ಪರಿಹಾರ ನಿಡಲು ಮುಂದಾಗುವವರೆ ಎಂಬುವುದು ವಿದ್ಯಾರ್ಥಿಗಳ ಪ್ರಶ್ನೆಯಾಗಿದೆ.

ಇದು ಬೆರೆ ಯಾವ ಗ್ರಾಮವಲ್ಲ ಇದು ನಮ್ಮ ಶಾಸಕರ ತವರೂರಾದ ತಳಕಲ್ಲ್ ಗ್ರಾಮದಲ್ಲಿರುವ ಅಂಬೇಡ್ಕರ್ ಪ್ರಾಥಮಿಕ ಶಾಲೆಯ ಪರಿಸ್ಥಿತಿ. ಬಹಳ ದಿನಗಳಿಂದ ಶೌಚಾಲಯ ಸಮಸ್ಯೆ ಇದೆ. ಆದರೆ ಇಲ್ಲಿಯವರೆಗೂ ಸಮಸ್ಯೆ ಬಗೆಹರಿಯದ ಕಾರಣ ವಿಸ್ತಾರ ಸಂಸ್ಥೆಯ ವತಿಯಿಂದ ಇತ್ತೀಚೆಗೆ ನಡೆದಿದ್ದ ಕನಸು ಕಿಶೋರಿಯ ಪಾರ್ಲಿಮೆಂಟ್ ರಚನೆಯಾಯಿತು. ನಂತರ ವಿವಿಧ ಗ್ರಾಮಗಳ ಸಮಸ್ಯೆಯ ಬಗ್ಗೆ ವಿದ್ಯಾರ್ಥಿಗಳು ಹೇಳುತೊಡಗಿದಾಗ ಅಲ್ಲಿ ಮೊದಲಿಗೆ ಶಿಕ್ಷಣ ಮಂತ್ರಿಗಳು ಎದ್ದು ಸಭಾಪತಿಯವರೆ ತಳಕಲ್ಲ್ ಗ್ರಾಮದಲ್ಲಿ ಹೆಣ್ಣು ಮಕ್ಕಳ ಶೌಚಾಲಯಕ್ಕೆ ಮೂಲ ಸೌಕರ್ಯಗಳ ಕೊರತೆಯಿದೆ. ಇದನ್ನು ಯಾವಾಗ ಬಗೆಹರಿಯುವುದು ಎಂದು ಪ್ರಶ್ನಿಸಿದರು.

ಆಗ ಅಲ್ಲಿದ್ದ ಎಲ್ಲ ಸಾರ್ವಜನಿಕರು ಒಂದು ನಿಮಿಷ ಕಕ್ಕಾಬಿಕ್ಕಿ ಆದರೂ ಮತ್ತು ಶಾಸಕರ ಊರಲ್ಲಿ ಶಾಲೆಯ ಶೌಚಾಲಯ ಸಮಸ್ಯೆ ಇದೆಯೇ ಎಂಬುದು ಮುಜುಗರಕ್ಕೆ ಉಂಟು ಮಾಡಿತು ತಾಲೂಕಿನ ಶಾಸಕರ ಗ್ರಾಮದಲ್ಲಿ ಈ ರೀತಿಯಾದ ಸಮಸ್ಯೆ ಕಾಡುತ್ತಿರುವುದು ನೀಜಕ್ಕೂ ಬೇಸರದ ಸಂಗತಿ ಪ್ರಜ್ಞಾವಂತರ ಆಶಯವಾಗಿದೆ

ಶಾಲೆಯಲ್ಲಿ ಒಟ್ಟಾರೆಯಾಗಿ 156 ಶಾಲಾ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದು, ಇದರಲ್ಲಿ ಹೆಣ್ಣು 80 ಗಂಡು 76 ಸೇರಿ ಎಷ್ಟೋ ಮಕ್ಕಳು ಇಲ್ಲಿ ಕಲಿಯಲು ಇಷ್ಟವಿದ್ದರೂ ಶೌಚಾಲಯದ ಮೂಲ ಸೌಕರ್ಯದ ಕೊರತೆ ಕಾಣುವುದನ್ನು ಕಂಡು ಬೇರೆಯಡಿಯಲ್ಲಿ ಮಕ್ಕಳನ್ನು ವಿದ್ಯಾಭ್ಯಾಸ ಮಾಡಲು ಬಿಡುತ್ತಿದ್ದಾರೆ. ಪಾಲಕರು ಇನ್ನೂ ಮುಂದೇಯಾದರೂ ಶಾಲಾ ಮಕ್ಕಳ ಶೌಚಾಲಯಕ್ಕೆ ಮೂಲ ಸೌಕರ್ಯಗಳನ್ನು ನೀಗಿಸಲು ಮುಂದಾಗುತ್ತಾರೆಯೇ ಸಂಬಂಧಪಟ್ಟ ಅಧಿಕಾರಿಗಳು ಎಂದು ಕಾದು ನೊಡಬೇಕಿದೆ.

ಈಗಾಗಲೇ 2ರಿಂದ 3 ಬಾರಿ ನಾವು ಶಾಲಾ ಮಕ್ಕಳು ಶೌಚಲಯದ ಮೂಲ ಸೌಕರ್ಯಗಳನ್ನು ಒದಗಿಸಿಕೊಡಲು ಗ್ರಾ.ಪಂ ಅಧಿಕಾರಿಗಳಿಗೆ ಮನವಿ ನೀಡಲಾಗಿದೆ. ಆದರೆ ಇಲ್ಲಿಯವರೆಗೂ ಯಾವುದೇ ಪರಿಹಾರ ಕೈಗೊಳ್ಳಲು ಮುಂದಾಗಿಲ್ಲ ಎಂದು ಶಾಲಾ ಮುಖ್ಯೋಪಾಧ್ಯಾಯ ಮಹೇಶ ಬೇದವಟ್ಟಿ ಹೇಳಿದರು.



### ಕಕ್ಕಾಬಿಕ್ಕಿಯಾದ ಪಿಡಿಒ

ಕಿಶೋರಿಯರ ಪಾರ್ಲಿಮೆಂಟ್ ಸಭೆಯಲ್ಲಿ ಶಿಕ್ಷಣಮಂತ್ರಿ ಕೇಳಿದ ಪ್ರಶ್ನೆಗೆ ಕೇಲವೊತ್ತು ಕಕ್ಕಾಬಿಕ್ಕಿಯಾಗಿ ಗ್ರಾಪಂ ಪಿಡಿಒ ನಂತರ ನನಗೇ ಅರ್ಜಿಗಳು ಬಂದಿಲ್ಲ, ಆದಷ್ಟು ಬೇಗ ಮೂಲ ಸೌಕರ್ಯವನ್ನು ಶಾಲಾ ಶೌಚಾಲಯಕ್ಕೆ ಒದಗಿಸಲಾಗುವುದು ಎಂದು ಹೇಳಿದರು.

ದಿಗಂತ ವಿಶೇಷ

> ಶಾಲಾ ಮೂಲ ಸೌಕರ್ಯಗಳನ್ನು ನೀಗಿಸಲ ಶಿಕ್ಷಣ ಇಲಾಖೆಯಲ್ಲಿ ಯಾವುದೇ ರೀತಿಯಾದಂತಹ ಅನುದಾನ ಇಲ್ಲ. ಬದಲಾಗಿ ಸ್ಥಳೀಯ ಗ್ರಾಪಂ ಆಡಳಿತ ಮಂಡಳಿ ಅದನ್ನು ನೀಗಿಸಲು ಮುಂದಾಗಬೇಕು. ಇಲ್ಲಿಯವರೆಗೂ ಶಾಲಾ ಶೌಚಾಲಯಕ್ಕೆ ಮೂಲ ಸೌಕರ್ಯ ನೀಡದಿರುವುದು ಬೇಸರದ ಸಂಗತಿ. ಮುಂದಿನ ಕ್ರಮವನ್ನು ಸಂಬಂಧಪಟ್ಟ ಮೇಲಧಿಕಾರಿಗಳಿಗೆ ತಿಳಿಸಿ, ಸರಿದೂಗಿಸಲು ಕ್ರಮ ಕೈಗೊಳ್ಳಲಾಗುವುದು
>
> ■ ಅಶೋಕ್ ಗೌಡ್ರು, ಬಿಇಒ

## ನಾಳೆಯಿಂದ ಮಹಾದೇವಿಯಕ್ಕಗಳ ಸಮ್ಮೇಳನ

**ಕಲಬುರಗಿ:** ಬಸವ ಸಮಿತಿಯ ಅಕ್ಕನ ಬಳಗವು ಸತತವಾಗಿ 16 ಪ್ರತಿ ವರ್ಷಗಳಿಂದ ಮಹಾದೇವಿಯಕ್ಕಗಳ ಸಮ್ಮೇಳನಗಳನ್ನು ನಡೆಸಿಕೊಂಡು ಬರುತ್ತಿದ್ದು, ಜೂನ್.27 ಹಾಗೂ 28 ಎರಡು ದಿನಗಳ ಕಾಲ ಜಯನಗರದಲ್ಲಿರುವ ಅನುಭವ ಮಂಟಪದಲ್ಲಿ ಮಹಾದೇವಿಯಕ್ಕಗಳ 16 ಸಮ್ಮೇಳನ ಜರುಗಲಿದೆ ಎಂದು ಬಸವ ಸಮಿತಿ ಅಧ್ಯಕ್ಷೆ ಡಾ.ವಿಲಾಸವತಿ ಖೂಬಾ ಹಾಗೂ ಸಂಚಾಲಕಿ ಡಾ.ಜಯಶ್ರೀ ದಂಡೆ ತಿಳಿಸಿದರು.

ನಗರದ ಜಯನಗರದ ಡಾ.ಬಿ.ಡಿ.ಜತ್ತಿ ವಚನ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ಅನುಭವ ಮಂಟಪದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,ಎರಡು ದಿನಗಳ ಈ ಸಮ್ಮೇಳನದ ಅಧ್ಯಕ್ಷರಾಗಿ ಲೇಖಕಿ ಮತ್ತು ವಿಶ್ರಾಂತ ಪ್ರಾಧ್ಯಾಪಕಿ ಡಾ.ನೀಲಮ್ಮ ಕತ್ನಳ್ಳಿ ಅವರು ಆಯ್ಕೆಯಾಗಿದ್ದಾರೆ ತಿಳಿಸಿದರು.

ಬಿ.ಡಿ.ಜತ್ತಿ ವೈರಾಗ್ಯನಿಧಿ ಅಕ್ಕ ಪ್ರಶಸ್ತಿ-2026 ಈ ಪ್ರಶಸ್ತಿಯನ್ನು ಮತ್ತೊಬ್ಬ ಲೇಖಕಿ ಪ್ರೊ.ಗಂಗಮ್ಮ ಸತ್ಯಂಪೇಟೆ ಅವರಿಗೆ ಪ್ರದಾನ ಮಾಡಲಾಗುತ್ತಿದೆ. ಇದೇ ಸಂದರ್ಭದಲ್ಲಿ ಸ್ಥಳೀಯ ಶಾಲೆಗಳಲ್ಲಿ 35 ರಿಂದ 50 ವರ್ಷ ಶಿಕ್ಷಕರಾಗಿ, ಆಡಳಿತಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವ ಶಾರದಾ ರಾಂಪೂರ, ಶಶಿಕಲಾ ಸಾಲೋಕ್ಯ, ಶಾಂತಾ ಪಾಟೀಲ, ಉಮಾ ಪಾಟೀಲ, ನಂದಾ ಪಾಟೀಲ ಅವರುಗಳಿಗೆ ಗೌರವ ಸನ್ಮಾನ ಮಾಡಲಾಗುತ್ತಿದೆ ಎಂದು ಹೇಳಿದರು.

ಈ ಸಮ್ಮೇಳನದ ವಿಶೇಷವೆಂದರೆ ಸುಮಾರು 200 ಜನ ಮಹಿಳೆಯರು, ವಿದ್ಯಾರ್ಥಿನಿಯರು ವೇದಿಕೆಯಲ್ಲಿ ತಮ್ಮ ಅನುಭವ ಮತ್ತು ಪ್ರತಿಭೆಯನ್ನು ವ್ಯಕ್ತಿಪಡಿಸುತ್ತಾರೆ. 27 ರಂದು ಬೆಳಗ್ಗೆ ಈ ಸಮ್ಮೇಳನವನ್ನು ಭಾಲ್ಕಿಯ ಡಾ. ಗೀತಾ ಖಂಡ್ರೆ ಅವರು ಉದ್ಘಾಟಿಸುವವರು. 5 ಸಾಹಿತ್ಯಕ ಗೋಷ್ಠಿಗಳು,ವಿಶೇಷ ಉಪನ್ಯಾಸಗಳಿರುತ್ತವೆ. ಏಳು ಭಾಗಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ. ಸಮ್ಮೇಳನಕ್ಕೂ ಮುನ್ನ ಮಹಿಳೆಯರಿಗೆ, ವಿದ್ಯಾರ್ಥಿನಿಯರಿಗೆ ವಿವಿಧ ಸ್ಪರ್ಧೆಗಳಿರುತ್ತವೆ ಎಂದರು.

ಕಾರ್ಯದರ್ಶಿ ಅನಸೂಯಾ ನಡಕಟ್ಟಿ, ಶರಣಮ್ಮ,ಪುಷ್ಪಾ ವಾಲಿ, ಮಂಜುಳಾ ಹೊಟ್ಟಿ, ಅನುರಾಧ ಹ'ಡ'ಗ'ಲಿವ'ಂಠ', ಉದ'್ದ'ಂಡ'ಯ್ಯ ಕಲ್ಲಬಂಡಿಮಠ ಇದ್ದರು.

> ಶರಣರ ತತ್ವಗಳನ್ನು ಆಧಾರವಾಗಿಟ್ಟುಕೊಂಡು ಕಳೆದ 15 ವರ್ಷಗಳಿಂದ ಸಮ್ಮೇಳನ ಆಯೋಜನೆ ಮಾಡಲಾಗುತ್ತಿದೆ.ಸಮ್ಮೇಳನಾಧ್ಯಕ್ಷರ ಪರಿಚಯ ಆದಿಯಾಗಿ ಆರೋಗ್ಯದ ಕುರಿತು ತಿಳುವಳಿಕೆ ಎರಡು ವಿಶೇಷ ಉಪನ್ಯಾಸ ಕಾರ್ಯಕ್ರಮ ಹಾಗೂ ರಸಪ್ರಶ್ನೆ ಕಾರ್ಯಕ್ರಮಗಳು ನಡೆಯಲಿದ್ದು, ಗೃಹಿಣಿಯರು ಹಾಗೂ ವಿದ್ಯಾರ್ಥಿಗಳು ಒಳಗೊಂಡಂತೆ ಭಾಗಿಯಾಗಬಹುದು.
>
> ■ ಡಾ.ವಿಲಾಸವತಿ ಖೂಬಾ, ಅಧ್ಯಕ್ಷೆ, ಕಲಬುರಗಿ ಬಸವ ಸಮಿತಿ ಅನುಭವ ಮಂಟಪ

## 6 ಕಿಶೋರಿ ಕೇಂದ್ರ ಆರಂಭ: ಜಿಪಂ ಸಿಇಒ

**ರಾಯಚೂರು:** ಬಾಲ್ಯವಿವಾಹ, ಬಾಲ್ಯ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಜಿಲ್ಲಾದ್ಯಂತ ಪೈಲಟ್ ಮಾದರಿಯಲ್ಲಿ 6 ಕಿಶೋರಿ ಕೇಂದ್ರಗಳನ್ನು ಆರಂಭಿಸಲಾಗುತ್ತಿದೆ ಎಂದು ಜಿಪಂ ಸಿಇಒ ಈಶ್ವರ ಕಾಂದೂ ತಿಳಿಸಿದರು.

ನಗರದಜಿಪಂಸಭಾಂಗಣದಲ್ಲಿಏರ್ಪಡಿಸಿದ್ದ ಗ್ರಾಪಂ ಅಭಿವೃದ್ಧಿ ಅಧಿಕಾರಿಗಳ ಮಾಸಿಕ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಾಮಾಜಿಕ ಪೀಡುಗು ಆಗಿರುವ ಬಾಲ್ಯ ವಿವಾಹದಿಂದ ಆಗುವ ದುಷ್ಪರಿಣಾಮ ಕುರಿತು ಜಾಗೃತಿ ಮೂಡಿಸುವುದು, ದೈಹಿಕ ಸದೃಢತೆಗೆ ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು, ಶಿಕ್ಷಣದ ಮಹತ್ವ ತಿಳಿಸಲಾಗಿವುದು ಎಂದರು.

ಮುಟ್ಟಿನ ನಿರ್ವಹಣೆ ಕುರಿತು ಅರಿವು ಮೂಡಿಸಲು ಜಿಲ್ಲಾದ್ಯಂತ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಹಕಾರದಲ್ಲಿ 6 ಕಿಶೋರಿ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಈ ಕೇಂದ್ರಗಳಲ್ಲಿ ಮಾನಸಿಕ ರೋಗ ತಜ್ಞರು, ಸ್ತ್ರೀರೋಗ ತಜ್ಞರು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು ಬಾಲ್ಯ ವಿವಾಹದಿಂದ ಆಗುವ ದುಷ್ಪರಿಣಾಮ ಕುರಿತು ಮಾಹಿತಿ ಒದಗಿಸಲಿದ್ದಾರೆ ಎಂದು ತಿಳಿಸಿದರು.

ಜಿಲ್ಲೆಯಾದ್ಯಂತ ಬಾಲ್ಯ ವಿವಾಹ, ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಹಲವಾರು ಕ್ರಮಗಳನ್ನು ಕೈಗೊಂಡರೂ ಸಹ ಪ್ರಕರಣಗಳು ವರದಿಯಾಗುತ್ತಿವೆ ಎಂದರು.

ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ಕಾರ್ಯಕ್ರಮ ಕುರಿತು ವ್ಯಾಪಕ ಪ್ರಚಾರ ಕೈಗೊಳ್ಳಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಪೋಸ್ಟರ್ ಅಂಟಿಸಬೇಕು. ಚುನಾವಣಾ ಆಯೋಗದ ಮಹತ್ವದ ಕಾರ್ಯವನ್ನು ಯಶಸ್ವಿಗೊಳಿಸಬೇಕು. ಚುನಾವಣಾ ಆಯೋಗದ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಅಭಿಯಾನದ ಪೋಸ್ಟರ್ ಮತ್ತು ಜಿಲ್ಲಾ ಪಂಚಾಯತಿಯಲ್ಲಿ ಸ್ಥಾಪಿಸಿದ ಸಾರ್ವಜನಿಕ ಅವಹಾಲು ಸ್ವೀಕಾರದ ವೆಬ್ ಸೈಟ್‌ಗೆ ಚಾಲನೆ ನೀಡಿದರು.

ಮಸ್ಕಿ ತಾಲೂಕಿನ ಹಿರೇದಿನ್ನಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ಲಕ್ಷ್ಮಣ, ರಾಯಚೂರು ತಾಲೂಕಿನ ಕಲ್ಮಲಾ ಗ್ರಾಪಂ ಅಭಿವೃದ್ಧಿ ಅಧಿಕಾರಿ ಮಧ್ವರಾಜ ಅವರಿಗೆ ಜಿಪಂ ಸಿಇಒ ಈಶ್ವರ ಕಾಂದೂ ಉತ್ತಮ ಗ್ರಾಪಂ ಅಭಿವೃದ್ಧಿ ಅಧಿಕಾರಿ ಪ್ರಶಸ್ತಿ ಪ್ರದಾನ ಮಾಡಿದರು.

ಜಿಪಂ ಉಪಕಾರ್ಯದರ್ಶಿ ಹಾಲಸಿದ್ದಪ್ಪ ಪೂಜೇರಿ, ಯೋಜನಾ ನಿರ್ದೇಶಕ ಶರಣಬಸವರಾಜ, ಮುಖ್ಯ ಲೆಕ್ಕಧಿಕಾರಿ ವಿಜಯಶಂಕರ, ಮುಖ್ಯ ಯೋಜನಾಧಿಕಾರಿ ಡಾ.ಟಿ.ರೋಣಿ ಸೇರಿದಂತೆ ಇತರರಿದ್ದರು.



## ಗುತ್ತಿಗೆ ಆಧಾರಿತ ನೇಮಕಗೊಂಡ ವೈದ್ಯರಿಗೆ ನೇಮಕಾತಿ ಪತ್ರ ವಿತರಣೆ

**ಕಲಬುರಗಿ:** ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧೀನದ ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ 13 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಮತ್ತು 5 ತುರ್ತು ಚಿಕಿತ್ಸಾ ಮತ್ತು ಹಿರಿಯ ವೈದ್ಯಾಧಿಕಾರಿಗಳಿಗೆ ಡಿಸಿ ಇಕ್ರಮ್ ಶರೀಫ್ ನೇಮಕಾತಿ ಪತ್ರ ವಿತರಿಸಿದರು.

ಜಿಲ್ಲೆಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿನ 16 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳಿಗೆ ವಾಕ್-ಇನ್-ಇಂಟರವ್ಯೂವ್ ಮೂಲಕ ಹಾಜರಾದ 13 ಅಭ್ಯರ್ಥಿಗಳಿಗೆ ಮತ್ತು ಸ.ಸಾ.ಆಸ್ಪತ್ರೆ ಹಾಗೂ ಸ.ಆ.ಕೇಂದ್ರಗಳಲ್ಲಿ ಖಾಲಿ ಇರುವ 6ತುರ್ತು ಚಿಕಿತ್ಸಾ ಮತ್ತು ಹಿರಿಯ ವೈದ್ಯಾಧಿಕಾರಿಗಳ ಹುದ್ದೆಗಳಲ್ಲಿ 5 ಜನ ಅಭ್ಯರ್ಥಿಗಳು ಆಯ್ಕೆಗೊಂಡಿದ್ದು, ಇಂದಿಲ್ಲಿ ನೇಮಕಾತಿ ಆದೇಶ ನೀಡಲಾಯಿತು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ಶರಣಬಸಪ್ಪ ಕ್ಯಾತನಾಳ, ಜಿಲ್ಲಾ ಆರ್‌ಸಿಎಚ್ ಅಧಿಕಾರಿ ಡಾ.ಸಿದ್ರಾಮ ಪಾಟೀಲ ಉಪಸ್ಥಿತರಿದ್ದರು.



ಇನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 2 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಮತ್ತು ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ 2 ವೈದ್ಯಾಧಿಕಾರಿಗಳ ಹುದ್ದೆ ಖಾಲಿ ಇದ್ದು, ಇಚ್ಛೆಯುಳ್ಳ ಅಭ್ಯರ್ಥಿಗಳು ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ ಅರ್ಜಿಯನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಗೆ ಸಲ್ಲಿಸಬಹುದಾಗಿದೆ.

## ಐದು ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸಿ

**ಸಿಂಧನೂರು:** ಜೂ.28ರಂದು ರಾಷ್ಟ್ರಾದ್ಯಂತ ಪಲ್ಸ್ ಪೋಲಿಯೋ ಲಸಿಕೆ ಕಾರ್ಯಕ್ರಮದ ಅಭಿಯಾನ ನಡೆಯಲಿದೆ. ಆ ಸಮಯದಲ್ಲಿ 5 ವರ್ಷದ ಒಳಗಿನ ಎಲ್ಲ ಮಕ್ಕಳಿಗೆ ಎರಡು ಹನಿ ಪೋಲಿಯೋ ಲಸಿಕೆ ಹಾಕಿಸುವ ಮೂಲಕ ಭವಿಷ್ಯದ ಜೀವನದಲ್ಲಿ ಅಂಗವಿಕಲತೆ ತಪ್ಪಿಸುವಂತೆ ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ಗೀತಾ ಹಿರೇಮಠ ಮನವಿ ಮಾಡಿದರು.

ಪಲ್ಸ್ ಪೋಲಿಯೋ ಅಭಿಯಾನದ ಅಂಗವಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ತಾಲೂಕು ಆರೋಗ್ಯಾಧಿಕಾರಿಗಳ ಕಾರ್ಯಾಲಯದಿಂದ ಮಂಗಳವಾರ ಆದರ್ಶ ಕಾಲೊನಿಯ ವೆಂಚರ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಪಲ್ಸ್ ಪೋಲಿಯೊ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪೋಲಿಯೋ ಲಸಿಕೆ ಹಾಕಿಸದಿದ್ದರೆ ಪೋಲಿಯೋ ವೈರಸ್‌ನಿಂದ ಉಂಟಾಗುವ ನರ ರೋಗವು ಮಕ್ಕಳ ನರ ಮಂಡಲದ ಮೇಲೆ ಪರಿಣಾಮ ಬೀರಿ ಜೀವಿತಾವಧಿ ಅಂಗವಿಕಲತೆಗೆ ಕಾರಣವಾಗಬಹುದು ಎಂದು ಅವರು ವಿವರಿಸಿದರು.

ಪ್ರಾಥಮಿಕ ಆರೋಗ್ಯ, ಅಂಗನವಾಡಿ ಕೇಂದ್ರಗಳು, ಬಸ್ ನಿಲ್ದಾಣ, ವಿಶೇಷ ಪೋಲಿಯೊ ಬೂತ್‌ಗಳಲ್ಲಿ ಲಸಿಕೆ ಹಾಕಲಾಗುತ್ತದೆ ಎಂದು ಹಿರೇಮಠ ತಿಳಿಸಿದರು.

ಆರೋಗ್ಯ ಇಲಾಖೆಯ ಕಮಲಾ, ಹನುಮಂತ, ವೆಂಚರ್ ಶಾಲೆಯ ಮುಖ್ಯ ಶಿಕ್ಷಕ ಅಬುಲೇಶ ನಾಯಕ, ಶಾಫಿನ್ ಬೇಗಂ, ಶಿಕ್ಷಕಿಯರಾದ ಅಮೃತಾ, ಯಶೋದಾ ಮತ್ತು ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.



## ಮೊಹರಂ ಹಿಂದು-ಮುಸ್ಲಿಂ ಭಾವೈಕ್ಯತೆಯ ಹಬ್ಬ

ಹುಸೇನಸಾಬ ಕಟಗಿ

**ಹನುಮಸಾಗರ:** ಸಮೀಪದ ಹೂಲಗೇರಿ, ಹೊಸಹಳ್ಳಿ, ಹಾಗೂ ಪಟ್ಟಣದಲ್ಲಿ ಹಿಂದು-ಮುಸ್ಲಿಂ ಭಾವೈಕ್ಯತೆ, ಸೌಹಾರ್ದತೆ ಹಾಗೂ ಸಾಮರಸ್ಯದ ಸಂಕೇತವಾಗಿ ಆಚರಿಸಲಾಗುವ ಮೊಹರಂ ಹಬ್ಬವು ಹನುಮಸಾಗರ ಪಟ್ಟಣ ಸೇರಿದಂತೆ ಸುತ್ತಲಿನ ಹೂಲಗೇರಿ, ಹೊಸಹಳ್ಳಿ , ಹುಲಸಗೇರಿ, ಅಡಿವಿಭಾವಿ, ಕುಲಾಲ್ ಬಂಡಿ, ಮಾವಿನ ಇಟಗಿ, ಗುಡದೂರಕಲ್ಲ, ನೀರಲಕೊಪ್ಪ, ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆಯುತ್ತಿದೆ. ಹತ್ತು ದಿನಗಳ ಕಾಲ ನಡೆಯುವ ಈ ಹಬ್ಬದಲ್ಲಿ ವಿವಿಧ ಸಮುದಾಯಗಳ ಜನರು ಜಾತಿ-ಧರ್ಮ ಭೇದ ಮರೆತು ಪಾಲ್ಗೊಳ್ಳುವ ಮೂಲಕ ಸಹಬಾಳ್ವೆಯ ಸಂದೇಶ ಸಾರುತ್ತಿದ್ದಾರೆ.

ಮೊಹರಂ ಹಬ್ಬವು ಕರ್ಬಲಾದ ಐತಿಹಾಸಿಕ ಘಟನೆಯನ್ನು ಸ್ಮರಿಸುವ ಶೋಕಾಚರಣೆಯ ಹಬ್ಬವಾಗಿದ್ದರೂ, ಉತ್ತರ ಕರ್ನಾಟಕ ಭಾಗದಲ್ಲಿ ಇದು ಒಂದು ಭಾವೈಕ್ಯತೆಯ ಹಬ್ಬವಾಗಿ ರೂಪುಗೊಂಡಿದೆ. ಹಬ್ಬದ ಆರಂಭದಲ್ಲಿ ಮಸೀದಿಗಳ ಮುಂಭಾಗದಲ್ಲಿ ಅಲಾಯಿ (ಅಲಾವಿ) ಕುಣಿ ತೋಡಿ ''ಗುದ್ದಲಿ ಹಾಕುವ'' ಸಂಪ್ರದಾಯದ ಮೂಲಕ ಆಚರಣೆಗಳಿಗೆ ಚಾಲನೆ ನೀಡಲಾಗುತ್ತದೆ.

ಹೂಲಗೇರಿ ಗ್ರಾಮದಲ್ಲಿ ಪೀರಾ (ಅಲಾಯಿ) ದೇವರುಗಳನ್ನು ಪ್ರತಿಷ್ಠಾಪಿಸಿ ವಿಶೇಷ ಪೂಜೆ ಹಾಗೂ ಧಾರ್ಮಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಗ್ರಾಮಸ್ಥರು ಒಗ್ಗಟ್ಟಿನಿಂದ ಹಬ್ಬದ ಸಿದ್ಧತೆಯಲ್ಲಿ ತೊಡಗಿಕೊಂಡಿದ್ದು,



ದೂರದ ಊರುಗಳಲ್ಲಿ ಉದ್ಯೋಗದಲ್ಲಿರುವವರೂ ಸಹ ಹಬ್ಬದಲ್ಲಿ ಪಾಲ್ಗೊಳ್ಳಲು ಗ್ರಾಮಕ್ಕೆ ಆಗಮಿಸಿದ್ದಾರೆ.

ಮೊಹರಂ ಅಂಗವಾಗಿ ಹೆಜ್ಜೆ ಕುಣಿತ, ಗೆಜ್ಜೆ ಕುಣಿತ, ಹಲಗೆ ವಾದನ, ರಿವಾಯತ್ ಪದಗಳ ಗಾಯನ, ಹುಲಿ ಕುಣಿತ ಸೇರಿದಂತೆ ವಿವಿಧ ಜಾನಪದ ಕಲಾಪ್ರದರ್ಶನಗಳು ಜರುಗುತ್ತಿವೆ. ಕಳ್ಳಿ ಹಾಗೂ ಫಕೀರರ ವೇಷಧಾರಿಗಳು ಮನೆಮನೆಗೆ ತೆರಳಿ ಸಂಪ್ರದಾಯದಂತೆ ಕಾಣಿಕೆ ಸಂಗ್ರಹಿಸುತ್ತಿದ್ದು, ಮಕ್ಕಳು ''ಅಳ್ಳಳ್ಳಿ ಬಾವಾ'' ಎಂದು ಕೂಗುತ್ತಾ ಸಂಭ್ರಮಿಸುತ್ತಿರುವ ದೃಶ್ಯಗಳು ಕಂಡುಬರುತ್ತಿವೆ.

ಹನುಮಸಾಗರ ಪಟ್ಟಣದಲ್ಲಿ ಇಮಾಂ ಕಾಸೀಂ (ಸಾಬರ) ಅಲಾಯಿ, ಸಣ್ಣ ಲಾಲಸಾಬ (ಒಂಟಿ) ಅಲಾಯಿ, ದೊಡ್ಡ ಲಾಲಸಾಬ (ಗಂಧದ) ಅಲಾಯಿ, ಹುಸೇನ್‌ಬಾಷಾ (ಗುಡ್ಡದ) ಅಲಾಯಿ, ಹುನಗುಂದ ಲಾಲಸಾಬ (ಬಳಿಗಾರ ರಾಜಪ್ಪನ) ಅಲಾಯಿ, ಕೊರವರ ದುರುಗಪ್ಪನ ಅಲಾಯಿ ಹಾಗೂ ಪತ್ತಾರ (ಗಿಲಗಿಲಿ) ಅಲಾಯಿ ಸೇರಿದಂತೆ ವಿವಿಧ ಪೀರಾ ದೇವರುಗಳನ್ನು ಪ್ರತಿಷ್ಠಾಪಿಸಲಾಗಿದ್ದು, ಭಕ್ತರು ಸಕ್ಕರೆ ಉದುರಿಸುವ ಮೂಲಕ ಭಕ್ತಿ ಸಮರ್ಪಿಸುತ್ತಿದ್ದಾರೆ.

## ಜೋಳದ ಹಣ ಜಮೆಗೆ ಮನವಿ

ಮಾನ್ವಿ: ಹಿಂಗಾರು ಜೋಳದ ಹಣವನ್ನು ಜಮಾ ಮಾಡುವಂತೆ ಆಗ್ರಹಿಸಿ ತಾಲೂಕಿನ ಜೋಳ ಬೆಳೆಗಾರರ ಒಕ್ಕೂಟದ ವತಿಯಿಂದ ಜಿಲ್ಲಾಧಿಕಾರಿಗೆ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ಅವರ ಮೂಲಕ ಮನವಿ ಸಲ್ಲಿಸಲಾಯಿತು. ತಾಲೂಕಿನ ಜೋಳ ಬೆಳೆಗಾರರ ಒಕ್ಕೂಟದ ಸಂಚಾಲಕ ದುರುಗಪ್ಪ ತಡಕಲ್ ಮಾತನಾಡಿ, ತಾಲೂಕಿನಲ್ಲಿ ರೈತರು ಹಿಂಗಾರಿನಲ್ಲಿ ಜೋಳವನ್ನು ಬೆಳೆದು ಖರೀದಿ ಕೇಂದ್ರಗಳ ಮೂಲಕ ಜೋಳವನ್ನು ಮಾರಾಟಮಾಡಿ ಮೂರು ತಿಂಗಳು ಕಳೆದರು ಕೂಡ ಇದುವರೆಗೂ ರೈತರ ಖಾತೆಗೆ ಹಣ ಜಮೆಯಾಗದೆ ಇರುವುದರಿಂದ ರೈತರು ತೀವ್ರವಾದ ಆರ್ಥಿಕ ಸಂಕಷ್ಟವನ್ನು ಎದುರಿಸುತ್ತಿದು. ಕೃಷಿ ಚಟುವಟಿಕೆಗಳು ಕೂಡ ಸಂಪೂರ್ಣವಾಗಿ ಸ್ಥಗಿತ ಗೊಂಡಿವೆ. ಆದ್ದರಿಂದ ಕೂಡಲೇ ರೈತರ ಹಣವನ್ನು ಅವರ ಖಾತೆಗೆ ಜಮಾ ಮಾಡಬೇಕು. ಹಾಗೂ ವಿದ್ಯುತ್ ಖಾಸಗಿಕರಣ ಕಾಯ್ದೆಯನ್ನು ರದ್ದು ಪಡಿಸಬೇಕು. ಇಲ್ಲದೆ ಇದ್ದಲ್ಲಿ ಮುಂದಿನ ದಿನಗಳಲ್ಲಿ ರಸ್ತೆ ತಡೆ ನಡೆಸಿ ಪ್ರತಿಭಟನೆಯನ್ನು ನಡೆಸಲಾಗುವುದು ಎಂದು ತಿಳಿಸಿದರು. ಮಹಾದೇವ ಯಾದವ್ ತಡಕಲ್, ದೇವಪ್ಪ, ವೆಂಕೋಬ, ಗೋವಿಂದರೆಡ್ಡಿ, ಯಂಕಟರೆಡ್ಡಿ, ದೇವಪ್ಪ, ಹನುಮಂತ, ಬಸವರಾಜು, ಮಲ್ಲಯ್ಯ, ಅಯ್ಯಣ್ಣ, ಚನ್ನಬಸವ, ಶ್ರೀನಿವಾಸ ಯಾದವ್ ತಡಕಲ್ ಇತರರಿದ್ದರು.



## ಅಂದಾನಪ್ಪ ರಿವಾಯತ್ ಹಾಡಿಗೆ ಜನತೆ ಫಿದಾ

ಶಿವಮೂರ್ತಿ ಇಟಗಿ

**ಯಲಬುರ್ಗಾ:** ಇಂದಿನ ಆಧುನಿಕ ಯುಗದಲ್ಲಿ ಮೊಬೈಲ್ ಬಳಕೆ, ಕಂಪ್ಯೂಟರ್, ಯೂಟ್ಯೂಬ್, ಫೇಸ್‌ಬುಕ್ ಬಳಕೆ ವೇಗದಲ್ಲಿ ಸಾಗುತಿದ್ದು, ಮೌಖಿಕವಾಗಿ ಬಂದಿರುವ ಜಾನಪದ ಕಲೆಗಳನ್ನು ಕರಗತ ಮಾಡಿಕೊಂಡು ಸಕ್ರಿಯವಾಗಿ ರಿವಾಯತ್ ಹಾಗೂ ಭಜನೆ ಹಾಡಿನಲ್ಲಿ ಹೆಸರು ವಾಸಿಯಾಗಿದ್ದಾರೆ.

ಸಮೀಪದ ನೆಲಜೇರಿ ಗ್ರಾಮದ ನಿವಾಸಿ ಅಂದಾನಪ್ಪ ಕಲ್ಲಭಾವಿ. ಸೈಕಲ್ ಸವಾರಿ ಕಲಾವಿದ ಅಂದಾನಪ್ಪಗೆ ಬರೋಬ್ಬರಿ 89 ವರ್ಷ ಇಂತಹ ಇಳಿವಯಸ್ಸಲ್ಲೂ ಬಿಡುವಿಲ್ಲದೆ ಸೈಕಲ್ ಮೇಲೆ ಪ್ರಯಣ ಮಾಡುತ್ತಾ ಗ್ರಾಮದಿಂದ ಗ್ರಾಮಗಳಿಗೆ ಭೇಟಿ ನೀಡಿ ಹಾಡು ಹಾಡುತ್ತಾ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಗ್ರಾಮವಲ್ಲದೇ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಜರುಗುವ ಕಾರ್ಯಕ್ರಮದಲ್ಲಿ ಭಾಗಿಯಾಗಿ ಹಾಡನ್ನು ಉಣ ಬಡಿಸುತ್ತಾರೆ. ಅವರು ಕೈ ಎರಡುಗಳು ಊನವಾಗಿದೆ. ವಿಶಿಷ್ಟಚೇತರಾಗಿದ್ದು, ನೋಡಲು ಯಾವಗಲೂ ತಲೆಗೆ ರುಂಮಾಲು ಸುತ್ತಿಕೊಂಡು ಸೈಕಲ್ ಸವಾರಿ ಮೂಲಕ ಹೋಗುವುದು ಬರುವುದು ಇಂದಿಗೂ ಅವರ ಕಾಯಕ.

**ಮೊಹರಂ ಹಬ್ಬದಲ್ಲಿ ಭಾಗಿ:** ಗ್ರಾಮೀಣ ಪ್ರದೇಶದಲ್ಲಿ ಪೂರ್ವಜರ ಕಾಲದಿಂದಲೂ ಆಚರಿಸಿಕೊಂಡು ಬಂದಿರುವ ಮೊಹರಂ ಹಬ್ಬದಲ್ಲಿ ರಿವಾಯತ್, ಅಲಾಯಿ ಹಾಡು, ಭಜನೆ ಹಾಡವುದು, ಜಾತ್ರೆ ಮಹೋತ್ಸವದಲ್ಲಿ, ಅಮಾವಾಸ್ಯೆ, ಉರುಸು ಜರುಗುವ ಕಾರ್ಯಕ್ರಮದಲ್ಲಿ ಹಾಡು ಹಾಡುವ ಮೂಲಕ ಗಮನ ಸೆಳೆದಿದ್ದಾರೆ. ಗ್ರಾಮದ ಸುತ್ತಲಿನ ಹಳ್ಳಿಗಳಲ್ಲಿ ಜರುಗುವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುತ್ತಾರೆ.



**ಅಚ್ಚುಮೆಚ್ಚಿನ ಕಲಾವಿದ:** ಹಿರಿಯ ಕಲಾವಿದ ಅಂದಾನಪ್ಪ ಕಲಬಾವಿ ಅವರು ಮೂಲತಃ ಬಳುವಳಿಯಾಗಿ ಬಂದಿರುವ ಹಾಡುಗಾರಿಕೆ ಹಾಡುವ ರೂಢಿಸಿಕೊಂಡಿದ್ದಾರೆ. ಗ್ರಾಮದ ನಾಗಯ್ಯ ಮಸ್ಕಿ ಅವರಿಂದ ಪದಗಳನ್ನು ಹಾಡವುದನ್ನು ಕಲಿತುಕೊಂಡರು. ಗ್ರಾಮವಲ್ಲದೇ ಕೊಪ್ಪಳ, ಯಲಬುರ್ಗಾ, ಗಂಗಾವತಿ, ಕುಷ್ಟಗಿ, ಕುದರಿಮೋತಿ, ಮಂಗಳೂರು, ಕನಕಗಿರಿ ಸೇರಿದಂತೆ ವಿವಿಧೆಡೆ ನಡೆದ ಕಾರ್ಯಕ್ರಮದಲ್ಲಿ ಸವಾಲು, ರಿವಾಯುತ್, ಭಜನೆ ಹಾಡು ಹಾಡುತ್ತಾರೆ.

> ಮೊಹರಂ ಹಬ್ಬದಲ್ಲಿ ರಿವಾಯತ್, ಅಲಾಯಿ ದೇವರು ಹಾಡವುದು ವಾಡಿಕೆ. ಗ್ರಾಮೀಣ ಪ್ರದೇಶದ ಇಂತಹ ಅನೇಕ ಕಲಾವಿದರನ್ನು ಗುರುತಿಸುವ ಕಾರ್ಯವಾಗಬೇಕು.
>
> ■ ಚನಬಸನಗೌಡ ಮಾಲಿಮಾಟೀಲ, ಶರಣಬಸವೇಶ್ವರ ಭಜನಾ ಸಂಘದ ಕಾರ್ಯದರ್ಶಿ

## ಕಿರುಸುದ್ದಿ

### ಎಮ್ಮೆಲ್ಸಿ ಕಮಕನೂರಿಗೆ ಸಚಿವ ಸ್ಥಾನ ನೀಡಲು ಒತ್ತಾಯ



◆ **ಕುರುಗೋಡು:** ಸತತ ಮೂರು ಬಾರಿ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾಗಿರುವ ಗಂಗಾಮತ ಸಮಾಜದ ತಿಪ್ಪಣ್ಣಪ್ಪ ಕಮಕನೂರು ಅವರಿಗೆ ಕಾಂಗ್ರೆಸ್ ವರಿಷ್ಠರು ಸಚಿವ ಸ್ಥಾನ ನೀಡಬೇಕೆಂದು ಎಮ್ಮಿಗನೂರು ಗಂಗಾಪರಮೇಶ್ವರಿ ಸೇವಾ ಸಮಿತಿ ಅಧ್ಯಕ್ಷ ಕಾಗಿ ಈರಣ್ಣ ಒತ್ತಾಯಿಸಿದರು.

ಗ್ರಾಮದ ಗಂಗಾಮತ ಸಮಾಜದ ಗಂಗಾದೇವಿ ದೇವಸ್ಥಾನದಲ್ಲಿ ಆವರಣದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ರಾಜ್ಯದಲ್ಲಿ ಸುಮಾರು 40 ಲಕ್ಷಕ್ಕೂ ಹೆಚ್ಚು ಗಂಗಾಮತ (ಬೆಸ್ತರ) ಜನಸಂಖ್ಯೆ ಇದ್ದಾರೆ. ಈ ಸಮಾಜವು ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ಹಿಂದುಳಿದಿದೆ. ಇಂದಿಗೂ ತಳಮಟ್ಟದಲ್ಲಿರುವ ಈ ಬಲಿಷ್ಠ ಸಮಾಜವು ಪ್ರಗತಿಯ ಪಥದತ್ತ ಮುನ್ನುಗ್ಗಲು, ಸಮಾಜದ ಧ್ವನಿಯಾಗಿ ರಾಜ್ಯ ಮಟ್ಟದಲ್ಲಿ ಕೆಲಸ ನಿರ್ವಹಿಸಲು ರಾಜಕೀಯ ಚತುರನ ಅವಶ್ಯಕತೆ ಇದೆ. ಆದ್ದರಿಂದ ಎಂಎಲ್ಸಿ ತಿಪ್ಪಣ್ಣಪ್ಪ ಕಮಕನೂರುಗೆ ಸಚಿವ ಸ್ಥಾನ ನೀಡಲೇಬೇಕು ಎಂದು ಆಗ್ರಹಿಸಿದರು. ಉಪಾಧ್ಯಕ್ಷ ಗುಂಡ್ರಾಣಿ ಜಡೆಪ್ಪ, ಕಾರ್ಯದರ್ಶಿ ಲಬೇದ್ ಜಡೆಪ್ಪ, ಖಜಾಂಚಿ ಬಿ.ಈರಣ್ಣ, ಸಂಚಾಲಕ ಡಿ.ಹುಲುಗಪ್ಪ, ಸದಸ್ಯರಾದ ಬಿ.ವೆಂಕಟೇಶ, ಸಣ್ಣ ಜಡೆಪ್ಪ, ಕೆ.ದುರ್ಮಣ್ಣ, ಜಗನಪ್ಪ, ಎಸ್.ಮಾರೆಪ್ಪ, ಎಚ್.ರಾಮಾಂಜಿನಿ, ಯು.ನಾಗಪ್ಪ, ಎಸ್.ಮಹೇಶ, ಎ.ಬಾಸ್ಕರ, ಬಿ.ಎಂ.ರೇಣುಕಾನಂದ ಇತರರಿದ್ದರು.

### ಗಂಗಾಮತಸ್ಥರಿಗೆ ಸಚಿವ ಸ್ಥಾನ ನೀಡಲು ಒತ್ತಾಯ



◆ **ಸಿರುಗುಪ್ಪ:** ಕಾಂಗ್ರೆಸ್ ಅಧಿಕಾರಕ್ಕೆ ಬರುವಲ್ಲಿ ರಾಜ್ಯದ ಗಂಗಾಮತಸ್ಥ ಬೆಸ್ತರು ಬಹುತೇಕ ಕಡೆ ನಿರ್ಣಾಯಕ ಪಾತ್ರ ವಹಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಗಂಗಾಮತಸ್ಥ ಸಮುದಾಯದವರೆಗೆ ಸಚಿವ ಸ್ಥಾನ ನೀಡಬೇಕು ಎಂದು ಗಂಗಾಮತಸ್ಥ ಸಂಘದ ರಾಜ್ಯ ಮಾಜಿ ಉಪಾಧ್ಯಕ್ಷ ಕೆ.ಮಂಜುನಾಥ ಒತ್ತಾಯಿಸಿದರು. ನಗರದ ಗಂಗಾಮತಸ್ಥ ಸಂಘದ ಕಚೇರಿಯಲ್ಲಿ ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು. ತಾಲೂಕು ಅಧ್ಯಕ್ಷ ಕೆ.ಹನುಮೇಶಪ್ಪ ಮಾತನಾಡಿ, ಗಂಗಾಮತಸ್ಥ ಬೆಸ್ತ ಸಮುದಾಯದ ತಿಪ್ಪಣ್ಣಪ್ಪ ಕಮಾಕನೂರು ಅವರಿಗೆ ಸರ್ಕಾರದಲ್ಲಿ ಸೂಕ್ತ ಸ್ಥಾನಮಾನ ಹಾಗೂ ಸಚಿವ ಸಂಪುಟದಲ್ಲಿ ಪ್ರತಿನಿಧಿ ನೀಡಬೇಕು ಎಂದರು. ಶಿವಗಂಗೆ ಸೇವಾ ಟ್ರಸ್ಟ್ ಅಧ್ಯಕ್ಷ ಬಿ.ಮಾರಣ್ಣ, ನಗರ ಗಂಗಾಮತ ಸಮಾಜದ ಅಧ್ಯಕ್ಷ ಎಸ್.ರಾಘವೇಂದ್ರ, ತಾಲೂಕು ಗಂಗಾಮತ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ವೆಂಕೋಬಣ್ಣ, ಗೌರವಾಧ್ಯಕ್ಷ ರಾರಾವಿ ನಾಗರಾಜ, ಕಾಪು ಷಣ್ಮುಖಿ, ಮುದುಕಪ್ಪ, ಟಿ.ಅಮಜಪ್ಪ, ತಾಲೂಕು ಕಾರ್ಯದರ್ಶಿ ಎಸ್.ಭೀಮಣ್ಣ, ತಾಲೂಕು ಉಪಾಧ್ಯಕ್ಷ ರಾರಾವಿ ರಾಮಣ್ಣ, ದೇಶನೂರು ಗ್ರಾಮದ ಅಧ್ಯಕ್ಷ ಹಚ್ಚೋಳ್ಳಿ ಮಂಜುನಾಥ, ಸದಸ್ಯರಾದ ಗುಗುರಿ ರಾಮಣ್ಣ, ಜಿ.ಈರಣ್ಣ, ಕೆ.ಸುಂಕಪ್ಪ, ಟಿ.ನರಸಿಂಹಲು, ಸಿದ್ದಪ್ಪ, ಸುರೇಶ, ನಂದಪ್ಪ, ಬೆಳಕಲ್ ಬಸವರಾಜ ಇದ್ದರು.



**ಕೊಟ್ಟೂರು: ಮೊಹರಂ ಹಬ್ಬದ ಪ್ರಯುಕ್ತ ಪೀರಲ ದೇವರಿಗೆ ಹರಕೆ ಹೊತ್ತ ಭಕ್ತಾದಿಗಳು ಹುಲಿ ವೇಷಧಾರಿಗಳಾಗಿ ಪಟ್ಟಣದ ಪೇಟೆ ಬೀದಿಯಲ್ಲಿ ಪ್ರತಿ ಅಂಗಡಿಗಳ ಮುಂದೆ ತೆರಳಿ ಹಲಗೆ ವಾದ್ಯಕ್ಕೆ ನೃತ್ಯ ಮಾಡುತ್ತಾ ತಾವು ಹೊತ್ತ ಹರಕೆ ತೀರಿಸಿದರು.**

### ಚಿಲಗೋಡು ಲಲಿತಮ್ಮ ನಿಧನ

◆ **ಹಗರಿಬೊಮ್ಮನಹಳ್ಳಿ:** ತಾಲೂಕಿನ ಚಿಲುಗೋಡು ಗ್ರಾಮದ ಕಲ್ಲಮ್ಮನವರ ಲಲಿತಮ್ಮ (70) ಗುರುವಾರ ನಿಧನರಾಗಿದ್ದಾರೆ. ಮೃತರು ಪತಿ, ಐವರು ಮಕ್ಕಳು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಶುಕ್ರವಾರ ಸ್ವಗ್ರಾಮ ಚಿಲಗೋಡಿನಲ್ಲಿ ಅಂತ್ಯಕ್ರಿಯ ನೆರವೇರಿಸಲಾಗುವುದು.





ಕರೂರು: ಸಮೀಪದ ಉತ್ತನೂರು ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಮತ್ತು ಉತ್ತನೂರು ಗ್ರಾಮ ಪಂಚಾಯಿತಿಯಲ್ಲಿ ನಶಾ ಮುಕ್ತ ಭಾರತ ಅಭಿಯಾನ ನಡೆಸಿ ಮಾದಕ ವಸ್ತುಗಳ ಬಗ್ಗೆ ಜಾಗೃತಿ ಮಾಡಿಸಲಾಯಿತು.

## ಯೋಗದಿಂದ ಮಕ್ಕಳ ಜ್ಞಾಪಕ ಶಕ್ತಿ ವೃದ್ಧಿ

◆ **ಬಳ್ಳಾರಿ:** ಬಳ್ಳಾರಿ: ಕೇಂದ್ರ ಸರ್ಕಾರದ ಮೇರಾ ಯುವ ಭಾರತ ಬಳ್ಳಾರಿ, ಜಿಲ್ಲಾ ಪತಂಜಲಿ ಯೋಗ ಸಮಿತಿ ಹಾಗೂ ಕರುಣ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಆಶ್ರಯದಲ್ಲಿ ನಗರದ ಅಂಬೇಡ್ಕರ್ ಮತ್ತು ಬಿಸಿಎಂ ವಸತಿ ನಿಲಯದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.

ಪತಂಜಲಿ ಯೋಗ ಪೀಠದ ರಾಜ್ಯ ಸಮಿತಿ ಸದಸ್ಯ ಇಸ್ವಿ ಪಂಪಾಪತಿ, ವಿದ್ಯಾರ್ಥಿಗಳಿಗೆ ಯೋಗದ ಮಹತ್ವ, ಅದರಿಂದಾಗುವ ಲಾಭದ ಕುರಿತು ತಿಳಿಸಿ, ಧ್ಯಾನ, ಆಸನ ಹಾಗೂ ಪ್ರಾಣಾಯಾಮಗಳನ್ನು ಮಾಡಿಸುವುದರ ಜೊತೆಗೆ ಅವುಗಳ ಮಹತ್ವವನ್ನು ಮನವರಿಕೆ ಮಾಡಿಕೊಟ್ಟರು. ನಂತರ ಮಾತನಾಡಿ, ಯೋಗ ಅಭ್ಯಾಸದಿಂದ ಮನಸ್ಸಿಗೆ ಶಾಂತಿ ಮತ್ತು ನೆಮ್ಮದಿ ದೊರೆಯುತ್ತದೆ. ಉತ್ತಮ ಸಂಸ್ಕಾರ, ಸಂಸ್ಕೃತಿ, ಒಳ್ಳೆಯ ನಡತೆ ಹಾಗೂ ಜ್ಞಾಪಕಶಕ್ತಿ ವೃದ್ಧಿಸುವುದರ ಜೊತೆಗೆ ಆರೋಗ್ಯಕರ ಜೀವನ ಮತ್ತು ಆತ್ಮಸ್ಥೈರ್ಯ ವೃದ್ಧಿಯಾಗುತ್ತದೆ. ಹಾಗಾಗಿ ವಿದ್ಯಾರ್ಥಿಗಳು ನಿತ್ಯವೂ ಯೋಗಾಭ್ಯಾಸದಲ್ಲಿ ತೊಡಗಿಸಿಕೊಳ್ಳಬೇಕೆಂದು ಕರೆ ನೀಡಿದರು. ಜಿಲ್ಲಾ ಪತಂಜಲಿ ಯೋಗ ಸಮಿತಿಯ ಉಪಾಧ್ಯಕ್ಷ ಕೆ.ಪ್ರಕಾಶ್ ಅವರು ವಿವಿಧ ಯೋಗಾಸನಗಳ ಪ್ರದರ್ಶನ ನೀಡಿ, ಅವುಗಳಿಂದಾಗುವ ಉಪಯುಕ್ತತೆಗಳ ಬಗ್ಗೆ ಮಾಹಿತಿ ನೀಡಿದರು. ಬಿಸಿಎಂ ವಸತಿ ನಿಲಯದ ವಾರ್ಡನ್ ದುರ್ಗಪ್ಪ, ಮಾಜಿ ಸೈನಿಕರಾದ ಈಶ್ವರ ರೆಡ್ಡಿ ಸೇರಿದಂತೆ ವಸತಿ ನಿಲಯದ ನೂರಾರು ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ ಯೋಗಾಭ್ಯಾಸ ನಡೆಸಿದರು.



**ಬಳ್ಳಾರಿ: ಕೇಂದ್ರ ಸರ್ಕಾರದ ಮೇರಾ ಯುವ ಭಾರತ ಬಳ್ಳಾರಿ, ಜಿಲ್ಲಾ ಪತಂಜಲಿ ಯೋಗ ಸಮಿತಿ ಹಾಗೂ ಕರುಣ ರೂರಲ್ ಡೆವಲಪ್‌ಮೆಂಟ್ ಸೊಸೈಟಿ ಆಶ್ರಯದಲ್ಲಿ ನಗರದ ಅಂಬೇಡ್ಕರ್ ಮತ್ತು ಬಿಸಿಎಂ ವಸತಿ ನಿಲಯದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಆಚರಿಸಲಾಯಿತು.**

## ತುಂಗಭದ್ರಾ ಡ್ಯಾಂನ ನೂತನ ಕ್ರಸ್ಟ್ ಗೇಟ್‌ಗಳ ಲೋಕಾರ್ಪಣೆ
# ಮೂರು ರಾಜ್ಯಗಳ ಸಿಎಂ ಸಂಗಮ ಐತಿಹಾಸಿಕ

◆ **ವಿಜಯನಗರ:** ಹೊಸಪೇಟೆ ಸಮೀಪದ ತುಂಗಭದ್ರಾ ಜಲಾಶಯದ 33 ಕ್ರಸ್ಟ್ ಗೇಟ್‌ಗಳನ್ನು ಕರ್ನಾಟಕ, ಆಂಧ್ರ ಪ್ರದೇಶ ಹಾಗೂ ತೆಲಂಗಾಣ ಮುಖ್ಯಮಂತ್ರಿಗಳ ಸಮಾಗಮದೊಂದಿಗೆ ಉದ್ಘಾಟನೆಗೊಳ್ಳುವ ಮೂಲಕ ಐತಿಹಾಸಿಕ ಕ್ಷಣಕ್ಕೆ ಗುರುವಾರ ತುಂಗಭದ್ರ ಜಲಾಶಯ ವೇದಿಕೆಯಾಯಿತು.

ಕರ್ನಾಟಕ ಸಿಎಂ ಡಿ.ಕೆ.ಶಿವಕುಮಾರ್, ಆಂಧ್ರ ಪ್ರದೇಶದ ಸಿಎಂ ಎನ್.ಚಂದ್ರಬಾಬು ನಾಯ್ಡು ಹಾಗೂ ತೆಲಂಗಾಣ ಸಿಎಂ ರೇವಂತ ರೆಡ್ಡಿ ಹಾಗೂ ಕೇಂದ್ರ ಜಲ ಶಕ್ತಿ ಸಚಿವ ಸಿ.ಆರ್.ಪಾಟೀಲ ಅವರು ಕ್ರಮವಾಗಿ ಗೇಟ್ ನಂ.17, 18, 19 ಮತ್ತು 20ನೇ ಕ್ರಸ್ಟ್ ಗೇಟ್‌ಗಳ ವಿದ್ಯುನ್ಮಾನ ಗುಂಡಿಯನ್ನು ಒತ್ತುವ ಮೂಲಕ ಕ್ರಸ್ಟ್ ಗೇಟ್‌ಗಳನ್ನು ಲೋಕಾರ್ಪಣೆಗೊಳಿಸಿದರು.

ಅದಕ್ಕೂ ಮುನ್ನ ತಾಯಿ ಗಂಗಾಮಾತೆ ಹಾಗೂ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಆರಾಧ್ಯ ದೈವ ಗಂಗಾಧರ ಸ್ವಾಮೀ ಅವರ ಭಾವಚಿತ್ರಕ್ಕೆ ಪೂಜೆ ನೆರವೇರಿಸಲಾಯಿತು.

ಕರ್ನಾಟಕ ವಿಧಾನ ಪರಿಷತ್ ಸಭಾಪತಿ ಬಸವರಾಜ್ ಎಸ್.ಹೊರಟ್ಟಿ, ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹಮದ್, ಮಾಜಿ ಸಚಿವರು ಹಾಗೂ ಶಾಸಕರಾದ ಎಚ್.ಕೆ.ಪಾಟೀಲ, ಶಿವರಾಜ್ ತಂಗಡಗಿ, ಎನ್.ಎಸ್.ಬೋಸರಾಜು, ಆಂಧ್ರಪ್ರದೇಶದ ಜಲಸಂಪನ್ಮೂಲ ಸಚಿವರಾದ ನಿಮ್ಮಲ ರಾಮನಾಯ್ಡು, ನವದೆಹಲಿಯ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿಗಳಾದ ಟಿ.ಬಿ.ಜಯಚಂದ್ರ, ರಾಜ್ಯ ಗ್ಯಾರಂಟಿ ಅನುಷ್ಠಾನ ಸಮಿತಿ ರಾಜ್ಯಾಧ್ಯಕ್ಷ ಎಚ್.ಎಂ.ರೇವಣ್ಣ, ಬಳ್ಳಾರಿ ಸಂಸದರಾದ ಈ.ತುಕಾರಾಂ, ದಾವಣಗೆರೆ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ, ಕೊಪ್ಪಳ ಸಂಸದ ರಾಜಶೇಖರ್ ಹಿಟ್ನಾಳ್, ಶಾಸಕರಾದ ರಾಘವೇಂದ್ರ, ಬಿ. ಹಿಟ್ನಾಳ್, ಎಚ್.ಆರ್.ಗವಿಯಪ್ಪ, ಲತಾ ಮಲ್ಲಿಕಾರ್ಜುನ, ಡಾ.ಎನ್.ಟಿ.ಶ್ರೀನಿವಾಸ್, ಜೆ.ಎನ್.ಗಣೇಶ್, ಬಿ.ಎಂ.ನಾಗರಾಜ್, ಬಸನಗೌಡ ದದ್ದಲ್, ಜಲಾಶಯಗಳ ಗೇಟ್ ಪರಿಣಿತ ತಜ್ಞ ಕನ್ನಯ್ಯ ನಾಯ್ಡು, ತುಂಗಭದ್ರಾ ಜಲಾಶಯ ಮಂಡಳಿಯ ಅಧ್ಯಕ್ಷ ಎಸ್.ಎನ್.ಪಾಂಡೆ, ಕಾರ್ಯದರ್ಶಿ ಓ.ಆರ್.ಕೆ.ರೆಡ್ಡಿ ಸೇರಿದಂತೆ ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ರಾಜ್ಯದ ಜಲಸಂಪನ್ಮೂಲ ಇಲಾಖೆ ಅಧಿಕಾರಿಗಳು, ಹಾಗೂ ವಿವಿಧ ಇಲಾಖೆಯ ಹಿರಿಯ ಅಧಿಕಾರಿಗಳು ಹಾಗೂ ತಾಂತ್ರಿಕ ತಜ್ಞರು ಉಪಸ್ಥಿತರಿದ್ದರು.




**ಒಂದೇ ಕಾರಿನಲ್ಲಿ ಸಿಎಂಗಳ ಆಗಮನ**

ತುಂಗಭದ್ರಾ ಜಲಾಶಯದ ಕ್ರಸ್ಟ್ ಗೇಟ್‌ಗಳ ಸ್ಪಿಲ್ ವೇಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಮುನಿರಾಬಾದ್‌ನ ಐಆರ್‌ಬಿ ಪೊಲೀಸ್ ಮೈದಾನದ ಹೆಲಿಪ್ಯಾಡ್‌ಗೆ ಬಂದಿಳಿದ ಕರ್ನಾಟಕ, ಆಂಧ್ರಪ್ರದೇಶ ಹಾಗೂ ತೆಲಂಗಾಣ ಮುಖ್ಯಮಂತ್ರಿಗಳು ಅಲ್ಲಿಂದ ಟಿಬಿ ಡ್ಯಾಂ ಗೆ ಒಂದೇ ಕಾರಿನಲ್ಲಿ ಆಗಮಿಸಿದರು. ಮುಂಭಾಗದ ಸೀಟ್‌ನಲ್ಲಿ ಎನ್.ಚಂದ್ರಬಾಬು ನಾಯ್ಡು, ಹಿಂಭಾಗದ ಸೀಟಿನಲ್ಲಿ ಕರ್ನಾಟಕ ಸಿಎಂ ಡಿ.ಕೆ.ಶಿವಕುಮಾರ್ ಹಾಗೂ ತೆಲಂಗಾಣ ಸಿಎಂ ರೇವಂತರೆಡ್ಡಿ ಪ್ರಯಾಣಿಸಿದರು. ಈ ಮೂಲಕ ನೆರೆಹೊರೆಯ ಮುಖ್ಯಮಂತ್ರಿಗಳ ನಡುವಿನ ಆಡಳಿತಾತ್ಮಕದ ಸಾಮರಸ್ಯ ಜೊತೆಗೆ ಸ್ನೇಹಪರತೆಯನ್ನೂ ಸಾರಿದರು. ಆನಂತರ ಜಲಾಯಶದ ಮೇಲ್ಭಾಗದ ಧ್ವಾರದಿಂದ ಗೇಟ್‌ಗಳ ವರೆಗೆ ಬ್ಯಾಟರಿ ಚಾಲಿತ ವಾಹನದಲ್ಲಿ ಸಾಗಿದರು.

## ವಿಶೇಷ ಔಟ್‌ರೀಚ್ ನ್ಯೂ ಇನ್‌ಕಮ್ ಟ್ಯಾಕ್ಸ್ ಆಕ್ಟ್-2025ರ ಕಾರ್ಯಾಗಾರ

◆ **ಬಳ್ಳಾರಿ:** ನಗರದ ಬಿಡಿಸಿಸಿಐನ ಸಭಾಂಗಣದಲ್ಲಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಮತ್ತು ಕೇಂದ್ರ ಸರ್ಕಾರದ ಆದಾಯ ತೆರಿಗೆ ಇಲಾಖೆಯ ಜಂಟಿ ಆಶ್ರಯದಲ್ಲಿ 'ವಿಶೇಷ ಔಟ್‌ರೀಚ್ ನ್ಯೂ ಇನ್‌ಕಮ್ ಟ್ಯಾಕ್ಸ್ ಆಕ್ಟ್-2025'ರ ಕಾರ್ಯಾಗಾರವನ್ನು ಬುಧವಾರ ಹಮ್ಮಿಕೊಳ್ಳಲಾಗಿತ್ತು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ, ಅವ್ವಾರು ಮಂಜುನಾಥ್ ಅವರು ಚಾಲನೆ ನೀಡಿದರು.

ಬಳ್ಳಾರಿ ವೃತ್ತ 1ರ ಸಹಾಯಕ ಆದಾಯ ತೆರಿಗೆ ಆಯುಕ್ತ (ಎಸಿಐಟಿ) ಎಂ. ಶಿವಶಂಕರ ನಾಯಕ್ ಅವರು ಕಾರ್ಯಾಗಾರದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಂಪನ್ಮೂಲ ವ್ಯಕ್ತಿ, ಆದಾಯ ತೆರಿಗೆ ಅಧಿಕಾರಿಗಳಾದ (ಐಟಿಒ) ಬಿ. ಮಲ್ಲಿಕಾರ್ಜುನ, ಬಿ.ವಿ.ವಿ.ಸತ್ಯನಾರಾಯಣ ಅವರು, 'ವಿಶೇಷ ಔಟ್‌ರೀಚ್ ನ್ಯೂ ಇನ್ ಕಮ್ ಟ್ಯಾಕ್ಸ್ ಆಕ್ಟ್-2025'ರ ಕುರಿತು ಸಮಗ್ರವಾಗಿ ವಿವರಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿರುವ ಆದಾಯ ತೆರಿಗೆ ಅಧಿಕಾರಿ ಬಿ.ವಿ.ವಿ. ಸತ್ಯನಾರಾಯಣ ಅವರು ಟಿಡಿಎಸ್ ಸಂಬಂಧಿತ ಪ್ರಮುಖ ಅಂಶಗಳ ಕುರಿತು ವಿವರವಾಗಿ ಮಾಹಿತಿ ನೀಡಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಟ್ಯಾಕ್ಸೇಶನ್ ಕಮಿಟಿ ಚೇರ್ಮನ್ ಆಗಿರುವ ಸಿಎ ಕೆ.ರಾಜಶೇಖರ್ ಅವರು ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು. ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಗೌರವ ಕಾರ್ಯದರ್ಶಿ ಕೆ.ಸಿ. ಸುರೇಶಬಾಬು ಅವರು ವಂದಿಸಿದರು.

ಬಳ್ಳಾರಿ ಜಿಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಹಿರಿಯ ಉಪಾಧ್ಯಕ್ಷ ಎಸ್. ದೊಡ್ಡನಗೌಡ, ಉಪಾಧ್ಯಕ್ಷ ಸೊಂತ ಗಿರಿಧರ್, ಜಂಟಿ ಕಾರ್ಯದರ್ಶಿಗಳಾದ ಡಾ. ಮರ್ಚೇಡ್ ಮಲ್ಲಿಕಾರ್ಜುನಗೌಡ ಹಾಗೂ ವಿ.ರಾಮಚಂದ್ರ, ಇವೆಂಟ್ಸ್ ಕಮಿಟಿ ಚೇರ್ಮನ್, ನೇಕಾರ ನಾಗರಾಜ್, ಐಟಿ ಕಮಿಟಿ ಚೇರ್ಮನ್ ಪಿ.ವೇಣುಗೋಪಾಲ್ ಗುಪ್ತ ಕಾರ್ಯಕಾರಿ ಸಮಿತಿ ಸದಸ್ಯರು, ವಿವಿಧ ಕಮಿಟಿಗಳ ಚೇರ್ಮನ್‌ಗಳು, ವಿಶೇಷ ಆಹ್ವಾನಿತರು, ವಿಶೇಷ ಸಮನ್ವಯ ಸಮಿತಿ ಸದಸ್ಯರು, ವಾಣಿಜ್ಯೋದ್ಯಮಿಗಳು, ಕೈಗಾರಿಕೋದ್ಯಮಿಗಳು ಇತರರು ಭಾಗವಹಿಸಿದ್ದರು.




## ಸಂಘ ಕ್ರಿಯಾಶೀಲತೆಯಿಂದ ಕೂಡಿರಲಿ

◆ **ಕೊಟ್ಟೂರು:** ರಾಜ್ಯದಲ್ಲಿರುವ ಸರ್ಕಾರಿ ನೌಕರರ ಸಂಘವು ತನ್ನ ಸದಸ್ಯರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸಲು ಉತ್ತಮ ಸಂಘಟನೆಯೊಂದಿಗೆ ಸದಾ ಕ್ರಿಯಾಶೀಲತೆ ರೂಢಿಸಿಕೊಂಡು ಇತರ ಸಂಘಗಳಿಗೆ ಮಾದರಿಯಾಗಿರಲಿ ಎಂದು ತಹಶೀಲ್ದಾರ್ ಜಿ.ಕೆ.ಅರಮೇಶ ಹೇಳಿದರು.

ಪಟ್ಟಣದ ಶ್ರೀರೇಣುಕಾ ಸಭಾಂಗಣದಲ್ಲಿ ನಡೆದ ತಾಲೂಕು ಸರ್ಕಾರಿ ನೌಕರರ ಸಂಘದ ಮಹಾಸಭೆ, ಪ್ರತಿಭಾ ಪ್ರೋತ್ಸಾಹ ಪುರಸ್ಕಾರ, ಸೇವಾ ರತ್ನ ಪ್ರಶಸ್ತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಬುಧವಾರ ಮಾತನಾಡಿದರು.

ಸರಕಾರಿ ನೌಕರರು ಒಗ್ಗಟ್ಟಾಗಿದ್ದಲ್ಲಿ ಎಲ್ಲ ಸಮಸ್ಯೆಗಳು ಸುಲಭದಲ್ಲಿ ಪರಿಹಾರವಾಗುತ್ತವೆ. ಸಂಘಕ್ಕೆ ನಡೆವ ಚುನಾವಣೆ ನಂತರ ಎಲ್ಲರೂ ಒಂದೇ ಆಗಿರಬೇಕು. ಎಲ್ಲ ನೌಕರರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಘವನ್ನು ಬಲ ಪಡಿಸಬೇಕು. ಯಾವುದೇ ವರ್ಗದ ಸರಕಾರಿ ನೌಕರನ ಶ್ರೇಯೋಭಿವೃದ್ಧಿಗೆ ಸಂಘ ಶ್ರಮಿಸಬೇಕು ಎಂದರು.

ತಾಲೂಕು ಕ್ಷೇತ್ರ ಶಿಕ್ಷಣಾಧಿಕಾರಿ ಮೈಲೇಶ್ ಬೇವೂರು ಮಾತನಾಡಿ, ಇಂದಿನ ದಿನಗಳಲ್ಲಿ ಹಲವಾರು ಕಾರಣಗಳಿಂದ ಸರಕಾರಿ ನೌಕರರು ಒತ್ತಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ನೌಕರರು ಸರ್ಕಾರ ಮತ್ತು ಸಾರ್ವಜನಿಕ ಸೇವೆಯಲ್ಲಿ ನಿಷ್ಠೆ ಹಾಗೂ ಪ್ರಾಮಾಣಿಕತೆಯಿಂದ ಕಾರ್ಯನಿರ್ವಹಿಸಬೇಕು. ಸ್ಪರ್ಧಾತ್ಮಕ ದಿನಗಳಲ್ಲಿ ಹೆಚ್ಚು ಓದಲೇಬೇಕಾದ ಅನಿವಾರ್ಯತೆ ವಿದ್ಯಾರ್ಥಿಗಳಿಗಿರುವುದರಿಂದ ಅವರು ಸಹ ಒತ್ತಡದಲ್ಲಿದ್ದಾರೆ. ಹೆಚ್ಚು ಅಂಕ ಗಳಿಸಿದ ಸರಕಾರಿ ನೌಕರರ ಮಕ್ಕಳನ್ನು ಪುರಸ್ಕರಿಸುತ್ತಿರುವುದು, ಉತ್ತಮ ಸೇವೆ ಸಲ್ಲಿಸಿದ ನೌಕರರಿಗೆ ಸೇವಾ ರತ್ನ ಪ್ರಶಸ್ತಿ ನೀಡಿ ಗೌರವಿಸುತ್ತಿರುವುದು ಪ್ರೇರಣದಾಯಕ ಹಾಗೂ ಸಂಘದ ಘನತೆ ಹೆಚ್ಚಲು ಕಾರಣವಾಗಿದೆ ಎಂದರು.

ಸಂಘದ ಅಧ್ಯಕ್ಷ ಯೋಗೀಶ್ವರ ದಿನ್ನೆ ಮಾತನಾಡಿ, ನೌಕರರ ಪರವಾಗಿ ಸಂಘ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದೆ. ನೌಕರರ ಮಕ್ಕಳನ್ನು ಪ್ರೋತ್ಸಾಹಿಸಲು, ನೌಕರರು ಹೆಚ್ಚಿನ ಶ್ರದ್ಧೆಯಿಂದ ಕಾರ್ಯ ನಿರ್ವಹಿಸಲು ಸಂಘದಿಂದ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ ಎಂದರು.

ತಾಪಂ ಇಒ ಡಾ.ಬಿ.ಆನಂದಕುಮಾರ್, ಪಶುವೈದ್ಯಾಧಿಕಾರಿ ಡಾ.ಚಂದ್ರನಾಯ್ಕ ಮಾತನಾಡಿದರು. ಎಸ್‌ಎಸ್‌ಎಲ್‌ಸಿ, ಪಿಯುಸಿನಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ 28 ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ, 32 ಸರ್ಕಾರಿ ನೌಕರರಿಗೆ ಸೇವಾ ರತ್ನ ಪುರಸ್ಕಾರ ನೀಡಲಾಯಿತು. ನೌಕರರ ಸಂಘದ ಹೇಮಚಂದ್ರ, ಬಿ.ಟಿ.ಮಂಜುನಾಥ, ಸಿಮ ಗುರುಬಸವರಾಜ ನಿರ್ವಹಿಸಿದರು.



## ರಸ್ತೆಯ ಮೇಲೆ ತ್ಯಾಜ್ಯ ನೀರು: ಸೊಳ್ಳೆಗಳ ಉಪಟಳಕ್ಕೆ ಬೇಸತ್ತ ಜನತೆ

◆ **ಬಳ್ಳಾರಿ:** ತಾಲೂಕು ಶಿಡಗಿನಮೊಳ ಗ್ರಾಮ ಪಂಚಾಯತಿ ವ್ಯಾಪ್ತಿಯ ಕೆ.ವೀರಾಪುರ ಗ್ರಾಮದಲ್ಲಿ ಎಲ್ಲೆಂದರಲ್ಲಿ ಚರಂಡಿ ತ್ಯಾಜ್ಯ ನೀರು ಸಂಗ್ರಹವಾಗಿದ್ದು, ಗ್ರಾಮದಲ್ಲಿ ಸ್ವಚ್ಛತೆ ಮಾಯವಾಗಿದೆ. ಇದರಿಂದ ಸೊಳ್ಳೆಗಳ ಉಪಟಳ ಹೆಚ್ಚಳವಾಗಿದ್ದು, ವಿವಿಧ ರೋಗಗಳ ಭೀತಿ ಎದುರಾಗಿದೆ. ಕೂಡಲೇ ಸಂಬಂಧಿಸಿದ ಇಲಾಖೆ ಮೇಲಧಿಕಾರಿಗಳು ಗಮನಹರಿಸಿ, ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಗ್ರಾಮದ ರೈಲ್ವೆ ಸ್ಟೇಷನ್ ಗೆ ತೆರಳುವ ರಸ್ತೆ, ಕುಂಬಾರ ಮನೆಯ ಎದುರು ತ್ಯಾಜ್ಯ ನೀರು ಸಂಗ್ರಹವಾಗಿ ಸುಮಾರು ದಿನ ಕಳೆದಿದ್ದು, ದುರ್ವಾಸನೆ ಹರಡಿದೆ. ಸೊಳ್ಳೆಗಳ ಉಪಟಳ ಹೆಚ್ಚಾಗಿ ಡೈಂಗ್ಯೂ, ಮಲೇರಿಯಾ, ಸೇರಿ ನಾನಾ ರೋಗಗಳಿಗೆ ಒಳಗಾಗುವ ಭೀತಿಯಲ್ಲಿ ಜನರು ದಿನಗಳನ್ನು ಕಳೆಯುವಂತಾಗಿದೆ. ಇದೇ ರಸ್ತೆಯಲ್ಲಿ ನಿತ್ಯ ಶಾಲಾ ಮಕ್ಕಳು, ನಾಗರಿಕರು ಹೆಚ್ಚು ಸಂಚರಿಸುತ್ತಿದ್ದು, ತ್ಯಾಜ್ಯ ನೀರಲ್ಲಿ ಎದ್ದು, ಬಿದ್ದು, ದೃಶ್ಯಗಳು ಸಾಮಾನ್ಯವಾಗಿವೆ. ಈ ಕುರಿತು ಸ್ಥಳೀಯ ಗ್ರಾಮ ಪಂಚಾಯಿತಿ ಆಡಳಿತ ವರ್ಗದ ಗಮನಕ್ಕಿದ್ದರೂ ಇದಕ್ಕೂ ನಮಗೂ ಯಾವುದೇ ರೀತಿಯ ಸಂಬಂಧ ಇಲ್ಲ ಎನ್ನುವ ರೀತಿಯಲ್ಲಿ ಕೈಕಟ್ಟಿ ಕುಳಿತಿದ್ದಾರೆ. ಇದೇ ಸ್ಥಳದಲ್ಲೇ ಗ್ರಾಮಕ್ಕೆ ಸರಬರಾಜು ಮಾಡುವ ಪೈಪ್‌ಲೈನ್‌ಗಳಿದ್ದು, ಇದು ಒಡೆದಿದೆ. ಈ ತ್ಯಾಜ್ಯ ನೀರು ಗ್ರಾಮದ ನಾಗರಿಕರಿಗೆ ಸರಬರಾಜು ಆದರೆ, ದೇವರೇ ಗತಿ ಎನ್ನುವಂತಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದರು.



## ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ಜಾಗೃತಿ ಜಾಥಾ

◆ **ಸಿರುಗುಪ್ಪ:** ತಾಲೂಕಿನಲ್ಲಿ ಜೂ.28ರಿಂದ ಜು.1ರವರೆಗೆ ನಡೆಯುವ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮದ ಹಿನ್ನೆಲೆಯಲ್ಲಿ ನಗರಸಭೆ, ಆರೋಗ್ಯ ಇಲಾಖೆ, ಮಹಿಳಾ ಮತ್ತು ಶಿಶು ಅಭಿವೃದ್ಧಿ ಇಲಾಖೆಗಳ ಸಹಕಾರದೊಂದಿಗೆ ಜಾಗೃತಿ ಜಾಥಾ ಗುರುವಾರ ನಡೆಯಿತು.

ನಗರದ ನಗರಸಭೆಯ ಆವರಣದಲ್ಲಿ ಜಾಗೃತಿ ಜಾಥಾಕ್ಕೆ ಪೌರಾಯುಕ್ತ ಗಂಗಾಧರ ಚಾಲನೆ ನೀಡಿದರು.

ಜೀವಕ್ಕಾಗಿ ಎರಡು ಹನಿ ಪೋಲಿಯೋ ಹನಿ ಹಾಕಿಸಿ ಅಂಗ ವಿಕಲತೆ ತಪ್ಪಿಸಿ' ಮುಂತಾದ ಘೋಷಣೆಗಳನ್ನು ಕೂಗುತ್ತಾ ಘನ ತ್ಯಾಜ್ಯ ವಿಲೇವಾರಿ ವಾಹನದಲ್ಲಿ ಪೋಲಿಯೋ ಆಡಿಯೋ ಜಿಂಗಲ್ಸ್‌ಗಳನ್ನು ಹಾಕಿ ಅಂಬೇಡ್ಕರ್ ವೃತ್ತದಿಂದ ಮಹಾತ್ಮ ಗಾಂಧಿ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಡಾಕ್ಟರ್ ವಿದ್ಯಾಶ್ರೀ ಅವರು ಪ್ರತಿ ಮಗುವು ಲಸಿಕೆಯಿಂದ ವಂಚಿತವಾಗದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಆರ್.ಬಿ.ಎಸ್.ಕೆ.ವೈದ್ಯಾಧಿಕಾರಿ ಡಾ.ಮಲ್ಲಿಕಾರ್ಜುನ್ ರೆಡ್ಡಿ ತಾಲೂಕು ಆರೋಗ್ಯ ನಿರೀಕ್ಷಣಾಧಿಕಾರಿ ಭೀಮರಾಜ ರೆಡ್ಡಿ ಹಿರಿಯ ಆರೋಗ್ಯ ನಿರೀಕ್ಷ ಶ್ರೀನಿವಾಸ್ ಜಿ., ಕಿರಿಯ ಆರೋಗ್ಯ ನಿರೀಕ್ಷಕ ಹಿಮಂತ್ ರಾಜ್ ಬಾಗ್ಲಿ ಹಾಗೂ ಕಂದಾಯ ನಿರೀಕ್ಷಕ ವೆಂಕೋಬ, ಕಾರ್ಯಕ್ರಮ ನಿರ್ವಾಹಕ ಮಲೇಶ, ಸಮುದಾಯ ಸಂಚಾಲಕರು, ಸ್ವಚ್ಛತಾ, ಆರೋಗ್ಯ ಇಲಾಖೆಯ ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತೆಯರು ಮತ್ತು ಆಶಾ ಕಾರ್ಯಕರ್ತೆಯರು ಇದ್ದರು.



## 6 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿಗೆ ಕಾಮಗಾರಿಗೆ ಚಾಲನೆ

◆ **ಹಗರಿಬೊಮ್ಮನಹಳ್ಳಿ:** ಯಾವುದೇ ನಿರೀಕ್ಷೆ ಇಲ್ಲದೇ ಮತ ನೀಡಿ ಗೆಲ್ಲಿಸಿದ ಜನರ ಸೇವೆ ಮಾಡುವ ನಿಟ್ಟಿನಲ್ಲಿ ತಾಲೂಕಿನಲ್ಲಿ ಹದಗೆಟ್ಟಿರುವ ರಸ್ತೆಗಳನ್ನು 90 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಗೊಳಿಸುವ ಕಾರ್ಯ ಕೈಗೊಂಡಿದ್ದು, ಇಂದು 6 ಕೋಟಿ ವೆಚ್ಚದ ರಸ್ತೆ ಅಭಿವೃದ್ಧಿ ಚರಂಡಿ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಶಾಸಕ ಕೆ.ನೇಮಿರಾಜ್ ನಾಯ್ಕ ತಿಳಿಸಿದರು.

ಗುರುವಾರ 2025-26 ಸಾಲಿನ ಮೈಕ್ರೋ ಯೋಜನೆ ಅಡಿ ಸ.ಸು 2 ಕೋಟಿ ವೆಚ್ಚದಲ್ಲಿ ಹಗರಿಬೊಮ್ಮನಹಳ್ಳಿ ತೇರು ಬೀದಿ ಬದಿ ರಸ್ತೆಯಿಂದ ಗುರುಭವನದ ವರಗೆ ಸಿಸಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗೆ ಗುರು ಭವನದ ಬಳಿ ಭೂಮಿಪೂಜೆ ಹಾಗೂ ಕೆಕೆಆರ್‌ಡಿಬಿ ಯೋಜನೆ ಅಡಿಯಲ್ಲಿ 4 ಕೋಟಿ ವೆಚ್ಚದಲ್ಲಿ ಮೇವಿನಕಣಿ-ನಾಗತಿ ಬಸಾಪುರ ರಾಜ್ಯ ಹೆದ್ದಾರಿ 215 ರಸ್ತೆ ಕಿ.ಮೀ.68 ರಿಂದ ಕಿ.ಮೀ.74 ವರಗೆ ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿಪಡಿಸುವ ಕಾಮಗಾರಿಗೆ ಕೆಚ್ಚಿನಬಂಡಿ ಕ್ರಾಸ್ ಬಳಿ ಭೂಮಿಪೂಜೆ ನೆರವೇರಿಸಿ ಮಾತನಾಡಿದರು.

ಕೆಚ್ಚಿನ ಬಂಡಿ ಗ್ರಾಮದಲ್ಲಿ 50 ಲಕ್ಷ ವೆಚ್ಚದ ಸಿಸಿ ರಸ್ತೆ ಮಾಡಲಾಗುತ್ತದೆ ಹಾಗೂ ಕೆಚ್ಚಿನ ಬಂಡಿ ಗ್ರಾಮದ ಜನರು ಆರು ಶಾಲಾ ಕೊಠಡಿಗಳನ್ನು ನಿರ್ಮಿಸುವಂತೆ ಕೋರಿದ್ದರು ಇದರನ್ವಯ ಎರಡು ಶಾಲಾ ಕೊಠಡಿಗಳನ್ನು ನಿರ್ಮಿಸಿದ್ದು ವರ್ಷದೊಳಗಾಗಿ ಸಾಧ್ಯವಾದಷ್ಟು ಶಾಲಾ ಕೊಠಡಿಗಳನ್ನು ನಿರ್ಮಿಸಲಾಗುವುದು ಎಂದರು.

ಪುರಸಭೆ ಸದಸ್ಯ ನವೀನ್‌ಕುಮಾರ್, ಜೆಡಿಎಸ್ ಪಕ್ಷದ ಜಿಲ್ಲಾ ಉಪಾಧ್ಯಕ್ಷ ಕೃಷ್ಣಮೂರ್ತಿ ಶೆಟ್ರು, ತಾಲೂಕು ಅಧ್ಯಕ್ಷ ವೈ.ಮಲ್ಲಿಕಾರ್ಜುನ, ಕಾರ್ಯದರ್ಶಿ ಪಾಂಡುರಂಗ ನಾಯಕ್, ಮುಖಂಡರಾದ ಕನ್ನಿಹಳ್ಳಿ ಚಂದ್ರಶೇಖರ್, ಗಂಗಾವತಿ ವಿಜೇತ್, ಹೋಟೆಲ್ ಸಿದ್ದರಾಜು, ವಿಜಯೇಂದ್ರ, ಉಮಾಪತಿನಾಯ್ಕ ರಾಹುಲ್ ನಾಯ್ಕ, ಟಿ.ರಮೇಶ್, ಸಂತೋಷ್, ಪ್ರದೀಪ್, ದುರ್ಗಪ್ಪ, ಅಜ್ಜಪ್ಪ, ಲೋಕೋಪಯೋಗಿ ಇಲಾಖೆಯ ಸತೀಶ್ ನಾಯ್ಕ, ಕೆಕೆಆರ್‌ಡಿಬಿ ಜಯನಾಯ್ಕ, ಆಪ್ತ ಸಹಾಯಕ ಬ್ಯಾಟಿ ನಾಗರಾಜ ಇತರರಿದ್ದರು.



> **ವಿದ್ಯುತ್ ಖಾಸಗೀಕರಣದಿಂದ ರೈತರ ಬದುಕು ಬೀದಿಗೆ ಬರುತ್ತದೆ. ದುಬಾರಿ ದುಡ್ಡು ಕಟ್ಟಿ ಪಂಪ್ ಸೆಟ್, ಮನೆಗಳಿಗೆ ಆರ್‌ಆರ್ ನಂಬರ್ ಪಡೆಯುವುದು ರೈತರಿಗೆ ಬಡವರಿಗೆ ಕೂಲಿ ಕಾರ್ಮಿಕರಿಗೆ ಕಷ್ಟವಾಗುತ್ತದೆ. ಅಧಿಕಾರಿಗಳಿಗೆ ಸಿಬ್ಬಂದಿಗೆ ಸಮಸ್ಯೆ ಆಗುತ್ತದೆ. ಸರ್ಕಾರ ಸಾಧಕ ಬಾಧಕಗಳನ್ನು ಯೋಚಿಸಿ ತೀರ್ಮಾನಿಸಲಿ.**
> ■ **ಕೆ.ನೇಮಿರಾಜ್ ನಾಯ್ಕ, ಶಾಸಕ**

## ಕುಡಿಯುವ ನೀರು ಸರಬರಾಜಿಗೆ ಕ್ರಮ ಕೈಗೊಳ್ಳಿ: ಡಿಸಿ

◆ **ಯಾದಗಿರಿ:** ನಗರದ ನಾಗರಿಕರಿಗೆ ಮೂಲಸೌಲಭ್ಯಗಳಾದ ಕುಡಿಯುವ ನೀರು ಪೂರೈಕೆ, ಸ್ವಚ್ಛತೆ, ಘನತ್ಯಾಜ್ಯಗಳ ತಕ್ಷಣ ವಿಲೇವಾರಿ, ವಿವಿಧ ತೆರಿಗೆ ವಸೂಲಾತಿಯಲ್ಲಿ ಶೇ.ನೂರರಷ್ಟು ಸಾಧನೆ ಮಾಡುವಂತೆ ನಗರಸಭೆ ಆಡಳಿತಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿ ರಾಹುಲ್ ತುಕಾರಾಮ ಪಾಂಡ್ವೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.

ನಗರಸಭೆ ಕಚೇರಿಗೆ ಭೇಟಿ ನೀಡಿ, ನಗರಸಭೆ ವ್ಯಾಪ್ತಿಯಲ್ಲಿನ ವಿವಿಧ ಅಭಿವೃದ್ಧಿ ಯೋಜನೆಗಳ ಹಾಗೂ ಕೈಗೊಂಡ ಕ್ರಮಗಳ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಸಿ ಅವರು ಮಾತನಾಡಿ, ಯಾದಗಿರಿ ನಗರಕ್ಕೆ ಶುದ್ಧ ಕುಡಿಯುವ ನೀರನ್ನು ಬೆಳಿಗ್ಗೆ 7 ರಿಂದ 7.30 ರವರೆಗೆ ಪ್ರತಿ ಬಡಾವಣೆಗೆ ಸರಬರಾಜು ಆಗುವಂತೆ ನೋಡಿಕೊಳ್ಳಬೇಕು. ಯಾದಗಿರಿ ನಗರದಲ್ಲಿನ ಹಸಿ ಹಾಗೂ ಒಣ ಕಸವನ್ನು ಸಮಯಕ್ಕೆ ಸರಿಯಾಗಿ ಕಸ ಸಂಗ್ರಹಣೆ ಮಾಡಿ, ತಕ್ಷಣ ಶೇ. ನೂರರಷ್ಟು ವಿಲೇವಾರಿ ಮಾಡಿ, ಕಸ ಸಂಗ್ರಹಣಾ ಘಟಕಕ್ಕೆ ಸರಬರಾಜು ಮಾಡುವಂತೆ ನೈರ್ಮಲ್ಯ ಶಾಖೆಯ ಸಿಬ್ಬಂದಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಾರ್ವಜನಿಕರಿಗೆ ತೊಂದರೆಯಾಗದಂತೆ ಎಲ್ಲ ಅಧಿಕಾರಿ, ಸಿಬ್ಬಂದಿಗಳು ಕಚೇರಿಯಲ್ಲಿ ಸಮಯಕ್ಕೆ ಸರಿಯಾಗಿ ಹಾಜರಾಗಿ ಕಾರ್ಯನಿರ್ವಹಿಸಬೇಕು, ಎಲ್ಲಾ ಕಿರಿಯ ಆರೋಗ್ಯ ನಿರೀಕ್ಷಕರು, ಸಹಾಯಕ ಅಭಿಯಂತರರು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಹಾಗೂ ಇತರೇ ಸಿಬ್ಬಂದಿ ದಿನನಿತ್ಯದ ನೀರು ಸರಬರಾಜು, ಕಸವಿಲೇವಾರಿ ಹಾಗೂ ರಸ್ತೆ, ಚರಂಡಿಯ ಸ್ವಚ್ಛತೆ ಮತ್ತು ಇತರೆ ಕೆಲಸಗಳ ಬಗ್ಗೆ ಸರಿಯಾಗಿ ಮೇಲ್ವಿಚಾರಣೆಯನ್ನು ಮಾಡಲು ಕಟ್ಟುನಿಟ್ಟಿನ ನಿರ್ದೇಶನ ನೀಡಿದರು.

ಯಾದಗಿರಿ ನಗರಸಭೆ ವ್ಯಾಪ್ತಿಯಲ್ಲಿ ಬರುವ ಕುಡಿಯುವ ನೀರಿನ ಶುದ್ಧೀಕರಣ ಘಟಕದಿಂದ 2 ಗಂಟೆಗೊಮ್ಮೆ ಪರಿವೀಕ್ಷಣೆ ಮಾಡಬೇಕು. ನೀರಿನ ಓಎಚ್‌ಡಿ ಟ್ಯಾಂಕಗಳನ್ನು ಮೂರು ತಿಂಗಳಗೊಮ್ಮೆ ಸ್ವಚ್ಛತೆ ಮಾಡಿಸಬೇಕು. ಬೋರವೇಲ್ ಮೂಲಕ ನೀರು ಸರಬರಾಜು ಮಾಡುವುದು, 17 ಆರ್‌ಒ ಪ್ಲಾಂಟ್‌ಗಳ ನೀರು ಶುದ್ಧೀಕರಣ, ಸ್ವಚ್ಛತೆಯ ಬಗ್ಗೆ ಪರಿವೀಕ್ಷಣೆ ಮಾಡಲು ಸಭೆಯಲ್ಲಿ ಎಂದರು.

ನಗರಸಭೆ ಪೌರಾಯುಕ್ತ ಉಮೇಶ್ ಚವ್ಹಾಣ ಇತರರು ಉಪಸ್ಥಿತರಿದ್ದರು.



> **ಯಾದಗಿರಿ ನಗರಸಭೆ ವ್ಯಾಪ್ತಿಯಲ್ಲಿ ಬರುವ ದಿನ ನಿತ್ಯ ಉತ್ಪತ್ತಿಯಾಗುತ್ತಿರುವ ಚಿಕನ್ ವೇಸ್ಟ್, ಮಟನ್ ವೇಸ್ಟ, ಮೀನು ಸಾಕಾಣಿಕೆಗಾಗಿ ಏಜೇನ್ಸಿದಾರರ ವಾಹನ ಮುಖಾಂತರ ತೆಗೆದುಕೊಂಡು ಹೋಗುವ ಬಗ್ಗೆ ಮೇಲ್ವಿಚಾರಣೆ ಹಾಗೂ ಈ ಚಿಕನ್ ವೇಸ್ಟ್, ಮಟ್ಟನ್ ವೇಸ್ಟ್‌ನ್ನು ಎಲ್ಲೆಂದರಲ್ಲಿ ಎಸೆಯದಂತೆ ಅಂಗಡಿಯ ಮಾಲೀಕರಿಗೆ ಕಟ್ಟುನಿಟ್ಟಾಗಿ ಸೂಚಿಸಿ.**
> ■ **ರಾಹುಲ್ ತುಕಾರಾಮ್ ಪಾಂಡ್ವೆ, ಡಿಸಿ**